ನಾಲ್ಕು ಮಾತು

ಶಿಕ್ಷಣ ವೃತ್ತಿಯನ್ನು ಕೈಕೊಂಡ ಮೇಲೆ [illegible] ನಾವು ಅಭ್ಯಾಸವು ಅವಶ್ಯಕವೆಂದು [illegible] ಬೆಳೆಸಿ, [illegible] ಬಳಿಕ, ಮಕ್ಕಳಿಗೆ [illegible] ಕರ್ತವ್ಯವೆಂದೇ ಹೇಳಬಹುದು. ಪ್ರಸ್ತುತ [illegible] ಈ ಸಂಗತಿಗಳು ಘಟಿಸಲಾಗಿ, [illegible] ಸಂಸ್ಥೆಗಳಲ್ಲಿ [illegible] ಹೊತ್ತಿಗೆಗಳನ್ನು ಬರೆದಾಯಿತು. [illegible] ಯನ್ನು ಹೊರಗೆಡಹುವ [illegible]

ಮಕ್ಕಳಲ್ಲಿ ಸ್ವದೇಶಾಭಿಮಾನ, [illegible] ವದಕ್ಕೆ ಇತಿಹಾಸದ ಸಂಗತಿಗಳು [illegible] ಮಕ್ಕಳಲ್ಲಿ ಬಿತ್ತುವ [illegible]

[illegible]

[illegible] ಶ್ರೀ [illegible]

ಎಚ್. ಎಸ್. ದೊಡ್ಡಿಹಳ್ಳಿ

ಭಾರತೀಯ

ಇತಿಹಾಸ ದರ್ಶನ.

೧. ವಿಷಯ ಪ್ರವೇಶ.

ಈ ನಮ್ಮ ಭಾರತದಲ್ಲಿ [illegible] ಹುಟ್ಟಿದಾಗಲೇ ಭಾರತ [illegible] ಉತ್ಪತ್ತಿ [illegible] ಭಾರತದ ಉತ್ಪತ್ತಿಯು [illegible] ಗಳಲ್ಲಿ ಈ ನಮ್ಮ ಸೃಷ್ಟಿಯು [illegible] ಮಾತನ್ನು ಉಲ್ಲೇಖಿಸಿದೆ ಪುರಾಣಗಳ [illegible] ಕಮಲದಲ್ಲಿ ಬ್ರಹ್ಮನು ಜನಿಸಿದನು. ಆ ಕಮಲ ನಾಭಿಯೇ ಭಾರತದ ಸ್ಥಾನವಾಗಿದೆಯೆಂದು ಹೇಳುವರು. ಏನಿದ್ದರೂ ಮನುಷ್ಯನಿಗೆ ನಾಭಿಯು ಆಯುಕಟ್ಟಿನ ಮತ್ತು ಕೇಂದ್ರವಾದ ಸ್ಥಾನವಾಗಿದ್ದಂತೆ, ದೇಶಗಳ ಮಾಲಿಕೆಯಲ್ಲಿ ಭಾರತವು ಅಷ್ಟೊಂದು ಆಯುಕಟ್ಟಿನ ಸ್ಥಳದಲ್ಲಿ ನೆಲೆಸಿದೆಯೆಂದು ಇಟ್ಟುಕೊಳ್ಳಬಹುದು. ಆದ್ದರಿಂದಲೇ ಭಾರತಕ್ಕೆ 'ಅಜನಾಭ' ಎಂದು ಹೆಸರಿದ್ದರೆ ಆಶ್ಚರ್ಯವೇನು ? ಜಂಬುದ್ವೀಪವೆಂಬುದು ಪುರಾಣಗಳು ಉಲ್ಲೇಖಿಸುವ ಇನ್ನೊಂದು ಹೆಸರು.

ನೀರು ನೆಲಗಳು ಪೃಥ್ವಿಯ ಮೇಲೆ ರೂಪಿಸಿಕೊಂಡಾಗ ಭಾರತವು ಪಡುಗಡ್ಡೆಯಾಗಿದ್ದಿತು. ಆಗ ಅದರ ಆಕಾರವು ಒಂದು ನೇರಲ ಹಣ್ಣಿನ ಬೀಜವನ್ನು ಹೋಲಿತು. ಆದ್ದರಿಂದ ಜಂಬುದ್ವೀಪವೆಂಬ ಹೆಸರು ಪ್ರಚಾರದಲ್ಲಿ ಬಂದಿತು. ಕಾಲವು ಕಳೆದಂತೆ ಈ ದ್ವೀಪದ ಮೇಲೆ ಜನವಸತಿಯಾಯಿತು. ಅಂದಿನಿಂದ ಇಂದಿನ ವರೆಗೆ ಜನರ ಬರ-ಹೋಗುಗಳು ನಡೆದೇ ಇವೆ. ಹೀಗೆ ಬಂದವರಲ್ಲಿ ಆರ್ಯರೂ ಒಂದು ತಂಡದವರು. ಅವರು ನಮ್ಮ ದೇಶಕ್ಕೆ ಬರುವಷ್ಟರಲ್ಲಿ ಉತ್ತರ ಹಿಂದುಸ್ಥಾನವು ರೂಪುಗೊಂಡು, ಈಗಿನ ಪಂಜಾಬ ಪ್ರಾಂತವು ಇವರಿಗೆ ಅನುವು ಕೊಟ್ಟಿತು. ಆರ್ಯರಿಗೂ ಭಾರತದ ಮೂಲ ನಿವಾಸಿಗಳಿಗೂ ನಡೆದ ತಿಕ್ಕಾಟವು ಮುಗಿದ ಬಳಿಕ "ದಾಶ ರಾಜ್ಞ ಯುದ್ಧ" ವೆಂಬುದು ಜರುಗಿತು. ಇದರಲ್ಲಿ ಭರತನ ಕುಲದವರು ಜಯಶೀಲರಾಗಿ ದೇಶದಲ್ಲೆಲ್ಲ ಹರಡಿದರು. ಭರತಖಂಡ, ಭಾರತವರ್ಷ, ಭರತಭೂಮಿಗಳೆಂಬ ಹೆಸರುಗಳು ಇದೇ ಕಾರಣದಿಂದ ಪ್ರಸಾರ ಹೊಂದಿದವು. ನಂತರ ಆರ್ಯ ಸಂಸ್ಕೃತಿಯ ಶಿಖರಪ್ರಾಯವಾದ ರಾಮಾಯಣ ಮಹಾಭಾರತ ಕಾಲಗಳು ಮುಗಿದು ಹೋದವು. ಬುದ್ಧದೇವನ ಕಾಲ ಮೊದಲಾಯಿತು. ಇವನ ಅನುಯಾಯಿಗಳು ದೂರ ದೂರ ದೇಶಗಳಿಗೆ ಹೋಗಿ ಬುದ್ಧ ತತ್ವಗಳನ್ನು ಹರಡಿದರಷ್ಟೆ ? ಅವುಗಳಲ್ಲಿ ಚೀನವು ಮುಖ್ಯವೆನಿಸಿದೆ. ಚೀನಕ್ಕೂ ಭಾರತಕ್ಕೂ ಇದ್ದ ಸಂಬಂಧವು ನಿಖಿಲ್ಲೆಂದರೂ ಇಂದಿಗೆ ೨೦೦೦ ವರ್ಷಗಳ ಹಿಂದಿನದು. ಆದರೆ ಬೌದ್ಧಧರ್ಮವು ಚೀನದಲ್ಲಿ ಪ್ರಸಾರ ಹೊಂದಿದ ಬಳಿಕ, ಬಳಕೆಯು ಹೆಚ್ಚಾಯಿತೆಂದು ಹೇಳಬಹುದು. ಚೀನವು ಮೊದಲು ಭಾರತವನ್ನು "ಪಶ್ಚಿಮದ ಸ್ವರ್ಗ" (ತ್ಸೀನ-ಟು) ಎಂದು ಕರೆದಿತು. ಇನ್-ತು ಎಂಬುದು ಹುಯೆನ್ ತ್ಸಾಂಗನು ಭಾರತಕ್ಕೆ ಇಟ್ಟ ಹೆಸರು. ಚೀನಿ ಭಾಷೆಯಲ್ಲಿ ಇದರ ಅರ್ಥವು "ಚಂದ್ರ" ಎಂದಾಗುತ್ತದೆ. ಭಾರತದ ಧರ್ಮಬೋಧಕರು ಜಗತ್ತಿಗೆ ಬೆಳಗುವರೆಂದು ಇದರ ಅರ್ಥ. ಧಾರ್ಮಿಕ ಅಥವಾ ಇತರ ಪವಿತ್ರ [illegible]ಗಳಿಂದ ಚೀನವು ಭಾರತವನ್ನು ಫೊ-ಕೊ-ಹೊ ಎಂದರೆ ಬುದ್ಧನ [illegible] ಎಂದು ಕರೆದಿತು ಹುಯೆನ್ ತ್ಸಾಂಗನ ನಂತರ ಬಂದ ಚೀನಿ [illegible]ನು ಭಾರತವನ್ನು 'ಆರ್ಯ ದೇಶ' ವೆಂದು ಕರೆದನು. ಇಲ್ಲಿ [illegible]. ಅಥವಾ [illegible] ಎಂದು [illegible].

ಸೂಚಿಸುತ್ತದೆ. 'ಮಧ್ಯ ದೇಶ' ವೆಂಬುದು ಇಂಗ್ಲೆಂಡನ್ನು ಸೂಚಿಸಿದ ಎರಡನೆಯ ಹೆಸರು. ನೂರು ದೇಶಗಳಲ್ಲಿ ಮಧ್ಯವರ್ತಿಯಾಗಿದ್ದುದು ಎಂದು ಇದರ ಅರ್ಥ. ಚೀನೀ ಭಾಷೆಯಲ್ಲಿದ್ದ ಬೌದ್ಧ ಧರ್ಮಗ್ರಂಥಗಳು "ಇಂದು ಕಲಾ" ಅಥವಾ "ಇಂಡಿಕಾ" ಎಂಬ ಹೆಸರುಗಳನ್ನು ಉಪಯೋಗಿಸುತ್ತವೆ. ಎಷ್ಟೋ ಸಲ ಚೀನೀಯರು ಭಾರತವನ್ನು "ಚಂದ್ರಭವನ" ಅಥವಾ "ಚಂದ್ರ ವರ್ಷ" ಎಂದು ಕರೆದಿದ್ದಾರೆ. ಹೀಗಿರುವಾಗ, ಭಾರತವು "ಬ್ರಾಹ್ಮಣರ ದೇಶ" ಎಂಬ ಹೆಸರಿನಿಂದಲೂ ಚೀನದಲ್ಲಿ ಪ್ರಸಿದ್ಧವಿದೆ.

ಪಶ್ಚಿಮ ದೇಶಗಳಾದ ಗ್ರೀಸ, ಅಫಗಾನಿಸ್ತಾನ, ಪರ್ಷಿಯಾ ಮುಂತಾದ ದೇಶಗಳು ಭಾರತವನ್ನು ಸಿಂಧು ನದಿಯ ಹೆಸರಿನಿಂದ ಕರೆದವು. ಸಿಂಧು ನದಿಯ ನೆರೆಯ ಪ್ರದೇಶಕ್ಕೆ ಅವರಿಟ್ಟ ಹೆಸರು 'ಹಿಂದ' ಎಂಬುದು. 'ಸಿಂಧೂ' ನದಿಯ ಪ್ರದೇಶವು ಮಹಮ್ಮದೀಯರ ಬಾಯಿಯಲ್ಲಿ 'ಹಿಂದೂಸ್ತಾನ' ಎಂದು ಬದಲಾಯಿತು. ಇದರ ನಂತರ ಬಂದ ಇಂಗ್ಲಿಷರು 'ಹಿಂದ' ಇದರಿಂದ "ಇಂಡಿಯಾ" ಎಂಬ ಶಬ್ದವನ್ನು ಹುಟ್ಟಿಸಿಕೊಂಡರು. "ಇಂಡಿಕಾ" ಎಂಬ ಹೆಸರನ್ನು ಚೀನೀಯರು ಮೊದಲು ಉಪಯೋಗಿಸಿದರಷ್ಟೆ ? ಅದರಂತೆಯೇ ಗ್ರೀಕರು ಭಾರತವನ್ನು ಪ್ರವೇಶಿಸಿದಾಗ, ಗ್ರೀಕರ ರಾಯಭಾರಿ ಮೆಗಾಸ್ತನೀಸ ಎಂಬವನು "ಇಂಡಿಕಾ" ಎಂಬ ಹೆಸರಿನ ಪುಸ್ತಕ ಬರೆದನೆಂದು ಹೇಳಲಾಗುವುದುಂಟು. ಇಂಗ್ಲಿಷರು ಹೊರಗಾದ ಬಳಿಕ ಭಾರತೀಯರೆಲ್ಲ ಒಂದುಗೂಡಿ ನಮ್ಮ ದೇಶಕ್ಕೆ ಭಾರತವೆಂಬ ಹೆಸರು ಯೋಗ್ಯವೆಂದು ತೀರ್ಮಾನಿಸಿದ್ದಾರೆ. ನಮ್ಮ ದೇಶ ಭಾರತ; ನಾವು ಭಾರತೀಯರು.

ಹೆಸರುಗಳು ? ಪ್ರಾಚೀನ ಕಾಲದಿಂದ ಇಂದಿನ ವರೆಗೆ ಅಜನಾಭ, ಜಂಬುದ್ವೀಪ, ಇಂಡಿಕಾ, ಆರ್ಯದೇಶ, ಮಧ್ಯದೇಶ, ಹಿಂದೂಸ್ಥಾನ, ಇಂಡಿಯಾ, ಹಿಂದುಸ್ತಾನ, ಭಾರತಗಳೆಂಬ ಹೆಸರಿನಿಂದ ಕರೆಯಲ್ಪಡುವ ನಮ್ಮ ದೇಶವು ಜಗತ್ತಿನ ಚರಿತ್ರೆಯಲ್ಲಿ ಕಂಗೊಳಿಸುವ ಹಿರಿಯದ ಜಗದ ಪ್ರಾಚೀನವಾದ ಇತರ, ಪಾಶ್ಚಾತ್ಯ ದೇಶಗಳಿಗೆ ಮಾರ್ಗದರ್ಶಿಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಕಾಲಗತಿಯಲ್ಲಿ ಮಾನವನ ಸಂಸ್ಕೃತಿ ಎಂಬುದು ಬೆಳೆದುಬಂದುದನ್ನು ಖಂಡಿತವಾಗಿ ಹೇಳುವುದು ಬಹು ಕಠಿಣವಾದ ಕೆಲಸ. ಆದರೆ ಅಲ್ಲಲ್ಲಿ ಸಿಗುವ ಕೆಲವು ಪ್ರಾಚೀನ ಅವಶೇಷಗಳ ಮೂಲಕ ಮಡಕೆ, ಮರ, ಶಸ್ತ್ರಗಳೂ, ಒಂದಿಷ್ಟರಮಟ್ಟಿಗೆ ಆದಿ ಮಾನವನ ಜೀವನದ ರೀತಿನೀತಿಗಳನ್ನು ತಿಳಿಸಿಕೊಡಬಹುದು. ಇಂಥ ಅವಶೇಷಗಳಲ್ಲಿ "ಹರಪ್ಪಾ" ಮತ್ತು "ಮೊಹೆಂಜೊದಾರೊ" ನಗರದ ಅವಶೇಷಗಳು ಮುಖ್ಯವಾದುವಾಗಿವೆ. ಆ ಕಾಲದಲ್ಲಿ ಮಾನವನ ಮೇಲೆ ನಾಗರಿಕತೆ ... ಬೃಹದಾಕಾರದಾಗಿತ್ತು.

ಈ ಅವಶೇಷಗಳ ಕಾಲವನ್ನು ಅವಲೋಕಿಸಿದಂತೆ ಪ್ರಕೃತಿಯ ಮೇಲೆ ಎಷ್ಟೋ ಸಂಸ್ಕೃತಿಗಳು ನಶಿಸಿ ಹೋಗಿರುವುದಂತೂ ಸತ್ಯವೇ ಆಗಿರುತ್ತದೆ. ಈ ಕಾಲದಲ್ಲಿ ವಾಸಿಸಿದ ಜನರು ತಮ್ಮದೇ ಆದ ಧರ್ಮಗಳನ್ನು ಬೆಳೆಸಿಕೊಂಡು ಬಂದರು. ಅಂದಿನಿಂದ ಜೀವನದ ಶಿಲ್ಪಕಲೆಯು ಗಮನಕ್ಕೆ ಬರಬಹುದು.

ಬಹು ಪ್ರಾಚೀನ ಕಾಲದಿಂದ ನಡೆದು ಬಂದ ಧರ್ಮಗ್ರಂಥಗಳಲ್ಲಿ ಒಂದು ಮಹತ್ತ್ವದ ಉಲ್ಲೇಖವೆಂದರೆ, ಪ್ರಲಯ ಮತ್ತು ಪ್ರಲಯ ಕಾಲದ ಘಟನೆಗಳು. ವೈದಿಕ ಧರ್ಮಗ್ರಂಥಗಳೆನಿಸಿದ ಪುರಾಣಶಾಸ್ತ್ರಗಳಲ್ಲಿ ಪ್ರಲಯದ ಉಲ್ಲೇಖವಿದೆ. ಒಂದು ಮೀನವು ಮನು ಎಂಬ ರಾಜನಿಗೆ ಈ ಮಾತು ಹೇಳಿತಂತೆ. ಮುಂದೆ ಎಲ್ಲ ಪ್ರಾಣಿಗಳಿಂದ ದೋಣಿಯನ್ನು ಕಟ್ಟು, ಅದರಲ್ಲಿ ಕುಳಿತು ನೀನು ಪ್ರಲಯದಿಂದ ಪಾರಾಗುವೆಯೆಂದು ಬರೆದಿದೆ. ಕ್ರಿಶ್ಚನ್ ಧರ್ಮಗ್ರಂಥವಾದ ಬೈಬಲ್ಲಿನಲ್ಲಿ ಕೂಡ ಪ್ರಲಯದ ಉಲ್ಲೇಖವಿದೆ. ಒಂದು ಬಾರಿ ಭೂಮಿಯ ಮೇಲಿನ ಸಮಸ್ತ ಜೀವರಾಶಿ ಪ್ರಲಯವಾಗಿದ್ದಿತು. ಆಗ ಪ್ರವಾದಿ ನೋವಾ ಪ್ರಾಣಿಪಕ್ಷಿ ಸಂಕುಲದ ಜೊತೆ ಒಂದು ದೋಣಿಯಲ್ಲಿ ಪ್ರಯಾಣ ಮಾಡಿದನು. ಒಂದೊಂದು ಜೋಡಿಯನ್ನು ಇಟ್ಟುಕೊಂಡು ಹೋದನು ಎಂಬುದನ್ನು ಕಾಣಬಹುದು. ಕೆಲ ದಿನಗಳ ನಂತರ ನೀರಿಳಿದು ನೆಲವು ಕಾಣಿಸಿತೆಂದು ಬೈಬಲಿನಲ್ಲಿ ಬರೆದಿದೆ. ಅತಿ ಪ್ರಾಚೀನ ಸಂಸ್ಕೃತಿಗಳೆನಿಸಿದ ಬಾಬಿಲೋನಿಯಾ, ಸುಮೇರಿಯಾ ನಾಗರಿಕತೆಗಳ [illegible] ಕಥೆಗಳು ಸಿಕ್ಕಿಕೊಂಡಿವೆ.

[illegible] ಶಕ್ತಿ ತನ್ನ [illegible] ಮಾನವನ [illegible] [illegible]

[illegible]

[illegible]


[illegible]

ಹೀಗೆ ತನ್ನ [illegible], ಸ್ತ್ರೀಯು ತನ್ನ [illegible] [illegible]









[illegible]

[illegible] ಪ್ರಾಚೀನ ಗಂಗಾ ಸಿಂಧೂ ನದಿಗಳು [illegible] ಭಾರತದಲ್ಲಿ ಇದರ ಪ್ರಾಚೀನತ್ವವಾಗಿ ಕಂಡು ಬರುವ ಸಂಸ್ಕೃತಿಯು [illegible] ಬೆಟ್ಟಗಳಿಂದ [illegible] ಪಂಗಡಗಳ ಲಕ್ಷಣಗಳು [illegible] ದಕ್ಷಿಣಾಸ್ಯದ [illegible]-ಅಂಗ-[illegible] ಮತ್ತು [illegible] ನದಿಗಳ ಬಯಲುಗಳಿಂದ [illegible] ಊಹಿಸಬಹುದು. ಆದರೆ ಇದರ ಮೂಲಸ್ಥಾನದ ಬಗ್ಗೆ ಪಂಡಿತರಲ್ಲಿ ತೀವ್ರವಾದ ವಾದವಿದೆ.

[illegible] ಚರಿತ್ರಾಂಶಗಳನ್ನು [illegible] ದೇಶದ ಇತಿಹಾಸವನ್ನು ರೂಪಿಸುವ ಕೆಲಸದಲ್ಲಿ 'ದ್ರಾವಿಡ' ಎಂಬ ಆದಿವಾಸಿಗಳು [illegible] ಸಹಾಯಕಾರಿಯಾಗಿದ್ದರು ?
[illegible]
[illegible]

ಸತ್ತು, ಶಿಲೆಗಳ ಪದರುಗಳಲ್ಲಿ ಅಚ್ಚೊತ್ತಿದಂತೆ ಕಾಣಿಸಿಕೊಳ್ಳುವವು. ಉತ್ಖನನದಲ್ಲಿ ಅಥವಾ ನೆಲವನ್ನು ಅಗೆಯುವಾಗ ಆಕಸ್ಮಾತ್ ಸಿಗುವ ಈ ಫಾಸಿಲ್ಲುಗಳು ಒಂದಾನೊಂದು ಕಾಲಕ್ಕೆ ಜೀವಿಸಿದ ಪ್ರಾಣಿಗಳ ಯಥಾರ್ಥ ಚಿತ್ರವನ್ನು ಕೊಡುವವು. ಈ ರೀತಿ ಪ್ರಾಣಿಗಳ ಎಲುಬಿನ ಹಂದರವೂ, *ತಲೆಬುರುಡೆಗಳೂ ನಮಗೆ ಪ್ರಾಚೀನ ಇತಿಹಾಸದ ಯಥಾರ್ಥ ಕಲ್ಪನೆಯನ್ನು ತಂದು ಕೊಡುವವು. ಭೂಗತ ಪಟ್ಟಣಗಳ ಉತ್ಖನನವು ಪ್ರಾಚೀನ ಇತಿಹಾಸದ ಮೇಲೆ ಹೆಚ್ಚಿಗೆ ಬೆಳಕನ್ನು ಕೆಡಹುತ್ತದೆ. ಇದೇ ರೀತಿಯಾಗಿ ಶಿಲಾಲೇಖಗಳೂ ಸ್ತಂಭಗಳೂ ತಾಮ್ರ ಪಟಗಳೂ ಪ್ರಾಚೀನ ಕಾಲದ ನಾಣ್ಯಗಳೂ ಇತಿಹಾಸ ಸಂಶೋಧನೆಯ ಆಧಾರಗಳಾಗಿವೆ. ಪ್ರಾಚೀನ ವಾಙ್ಮಯವೂ ನಮಗೆ ಈ ಮಾರ್ಗದಲ್ಲಿ ಸಹಾಯ ಮಾಡುತ್ತದೆ. ಇತರ ಉಪಯೋಗಿಸುವ ಶಸ್ತ್ರ, ಢಾಲು, ಪುರಾತನ ಶಿಲ್ಪದ ಮಂದಿರಗಳ ನೆರವಂತೂ ಇದ್ದೇ ಇದೆ. ಇವುಗಳು ಕೊಡುವ ಜ್ಞಾನವು ಯಥಾರ್ಥವಾದದ್ದೆಂದು ತಿಳಿಸಿ ಕೊಡಲು ನೆರವಾಗಬೇಕೆಂದು ಇಂದಿನ ಸರಕಾರದವರು ನಡೆಸಿದ ಪ್ರಾಚ್ಯ ವಸ್ತು ಸಂಶೋಧನ ಶಾಖೆಯೂ ಈ ವಿಷಯದಲ್ಲಿ ಒಳ್ಳೇ ಪ್ರಯೋಜನಕಾರಿಯೂ, ಸಹಾಯಕವೂ ಆಗಿದೆ.

ಅಭ್ಯಾಸಗಳು:—

(೧) ಕೆಳಗಿನ ವಾಕ್ಯಗಳು ತಪ್ಪು, ಒಪ್ಪು ಎಂಬುದನ್ನು ಅವುಗಳ ಮುಂದೆ ಬರೆಯಿರಿ.

(ಅ) ಅಜಂತಾ, ಹಾಳುಬಿದ್ದಿರುವ ಮಂದಿರಗಳು ಭಾರತದ ಪ್ರಾಚೀನ ಶೋಧಗಳು.
(ಆ) ಪ್ರಪಂಚದ ಕಥೆ ಯಾವ ಗ್ರಂಥಗಳಲ್ಲಿಯೂ ಸಿಕ್ಕಿಲ್ಲ.
(ಇ) ಪ್ರಾಚೀನ ತಲೆಬುರುಡೆ, ಫಾಸಿಲ್ಲುಗಳು ಮನುಷ್ಯ ಜೀವನದ ಕಲ್ಪನೆಯನ್ನು ಕೊಡುವವು.
(ಈ) ಪಟ್ಟಣಗಳ ಉತ್ಖನನ ಇತಿಹಾಸದ ಮೇಲೆ ಹೊಸದಾದ ಬೆಳಕನ್ನು ಚೆಲ್ಲಲು ಸಹಕರಿಸಿತು.

ಆಸ್ಟ್ರಿಕ್ ಭಾಷೆಯ ಸಂಸ್ಕೃತ [illegible] [illegible] [illegible] ಗಂಗಾ [illegible] [illegible] ಆಸ್ಟ್ರಿಕ್ [illegible] [illegible] [illegible] ಆರ್ಯ ಸಂಸ್ಕೃತಿ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]

[illegible] ಸಂಸ್ಕೃತಿ [illegible] [illegible] [illegible] [illegible] ಸಂಸ್ಕೃತಿಗೆ [illegible] [illegible] [illegible]

[illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]

[illegible] ಹಳ್ಳಿ, ಪಟ್ಟಿ ಪಟ್ಟಣಗಳ [illegible] [illegible] [illegible] ಗಳು, ಅಚ್ಚುಕಟ್ಟಾದ ಚರಂಡಿಯ ವ್ಯವಸ್ಥೆ, [illegible] [illegible] [illegible] ಚಿನ್ನ, ಬೆಳ್ಳಿ, ತಾಮ್ರಗಳ ವಸ್ತುಗಳು, ಅಲಂಕಾರಯುಕ್ತವಾದ [illegible] ಸಾಮಾನುಗಳು, ಆಭರಣಗಳು, [illegible] ೪,೦೦೦ ವರ್ಷ

[illegible]

[illegible]

[illegible]

ತಾವು ಉಪಯೋಗಿಸುತ್ತಿದ್ದ ಹಾಲು, ಬೆಣ್ಣೆ, ಸೋಮರಸ ಮುಂತಾದ ಪದಾರ್ಥಗಳನ್ನು ಹೋಮವೆಂದು ಅರ್ಪಿಸುತ್ತಿದ್ದರು. ದ್ರಾವಿಡರು ಎತ್ತು-ಬಂಡಿಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದರು. ಒಕ್ಕಲತನವೂ, ಹೊನ್ನ-ಗಾರಿಕೆಯೂ ಅವರ ವ್ಯವಸಾಯ. ತಮ್ಮ ದೇವತೆಗಳನ್ನು ಗಂಧ-ಪುಷ್ಪಗಳಿಂದ ಪೂಜಿಸಿದರು. ಇಂದೂ ಧರ್ಮದಲ್ಲಿ ಬಳಕೆಯಲ್ಲಿ ಬಂದ ಪೂಜಾ ಪದ್ಧತಿಯು ವಿಶೇಷವಾಗಿ ದ್ರಾವಿಡರದು. ಆರ್ಯರ ಸಮಾಜರಚನೆಯು ಮೊದಲಿನಿಂದಲೂ ಪಿತೃಪ್ರಧಾನವಿದ್ದು, ದ್ರಾವಿಡರದು ಮಾತೃಪ್ರಧಾನವಾಗಿತ್ತೆಂದು ತಿಳಿಯುವದು. ಸಧ್ಯಕ್ಕೆ ಭಾರತದಲ್ಲಿ ಪ್ರಚಲಿತವಿರುವ ತಮಿಳು, ಕನ್ನಡ, ತೆಲಗು ಮುಂತಾದ ಭಾಷೆಗಳು, ಮತ್ತು ತುಳು, ಬಡಗ, ಗೊಂಡ, ಕುರುಖ ಮುಂತಾದ ಉಪಭಾಷೆಗಳೂ ದ್ರಾವಿಡ ಭಾಷಾವರ್ಗಕ್ಕೆ ಸೇರಿರುತ್ತವೆ. ಅವುಗಳನ್ನು ಮಾತನಾಡುವವರು ಮುಖ್ಯವಾಗಿ ದಕ್ಷಿಣಭಾಗದಲ್ಲು, ಮಧ್ಯ ಹಾಗೂ ಪೂರ್ವಕ್ಕೆ ಕೆಲವು ಕಡೆಗಳಲ್ಲಿಯೂ ವಾಸವಾಗಿದ್ದಾರೆ. ಬಲೂಚಿಸ್ತಾನದಲ್ಲಿಯ ಬ್ರಾಹುಇ ಭಾಷೆಯು ಇದೇ ವರ್ಗಕ್ಕೆ ಸಂಬಂಧಿಸಿರುತ್ತದೆ. ಆರ್ಯರು ಈ ದೇಶದಲ್ಲಿ ನೆಲೆಸುತ್ತ ಬಂದಂತೆ ದ್ರಾವಿಡರು ದಕ್ಷಿಣಕ್ಕೆ ಸರಿದರೆಂಬೂ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಈ ಘರ್ಷಣೆಯಲ್ಲಿ ಭಾರತೀಯ ಸಂಸ್ಕೃತಿಯು ಉಗಮವಾಯಿತೆಂದು ಹೇಳಬಹುದು. ಇಂದು ಭಾರತೀಯ ಸಂಸ್ಕೃತಿಯಲ್ಲಿ ಆರ್ಯ ಸಂಸ್ಕೃತಿಯ ಲಕ್ಷಣಗಳೇ ಹೆಚ್ಚಾಗಿ ಕಂಡುಬರುತ್ತವೆ. ಆದರೂ ಮೂಲದಲ್ಲಿ ಆಸ್ಟ್ರಿಕ್ ಜನರ ಸಂಸ್ಕೃತಿ ಮತ್ತು ದ್ರಾವಿಡರ ಸಂಸ್ಕೃತಿಗಳು ನೆಲೆಸಿವೆಯೆಂದು ಹೇಳಬಹುದು.

ದ್ರಾವಿಡರೆಂದೆನಿಸಿಕೊಳ್ಳುವ ವೃತ್ರ, ಅಸುರ ಮುಂತಾದ ಜನಾಂಗಗಳನ್ನು ಆರ್ಯರು ಎದುರಿಸಬೇಕಾಯಿತು. ಮಧ್ಯ ಏಶಿಯದಲ್ಲಿ ನಡೆದು ಹೋದ ಅಸೀರಿಯನ್ ಸಂಸ್ಕೃತಿಯ ಅವಲೋಕನದಿಂದ ಅಸುರರು ಅಸೀರಿಯನ್ ಜನಾಂಗಕ್ಕೆ ಸೇರಿದವರೆಂದು ತಿಳಿಯುತ್ತದೆ. ಯುಫ್ರೆಟಿಸ್ ಟೈಗ್ರಿಸ್ ನದಿಗಳ ದಂಡೆಗಳ ಮೇಲೆ ನಡೆದು ಹೋದ ಇನ್ನೊಂದು ಮಹತ್ವದ ಸಂಸ್ಕೃತಿಯೆಂದರೆ, ಸುಮೇರಿಯನ್ ಸಂಸ್ಕೃತಿ. ಸುಮೇರಿಯನ್ ಜನರು ಸಂಸ್ಕೃತಿಯ ಉಚ್ಚ ಮಟ್ಟಕ್ಕೆ ಮುಟ್ಟಿದವರಾಗಿದ್ದು, ಅವರು ಭಾರತದೊಡನೆ ಸಂಪರ್ಕ

[illegible] ಯುತ್ತದೆ. ಮಧ್ಯ ಏಶಿಯದಲ್ಲಿ ಆಗಿ ಹೋದ "[illegible]" ಎಂಬ [illegible] ಅವಶೇಷಗಳೂ, ಇತ್ತೀಚೆಗೆ "ಜಾರ್ಡ್ಮೊ" ಎಂಬಲ್ಲಿ [illegible] ಅವಶೇಷಗಳೂ ದಕ್ಷಿಣ ಭಾರತದಲ್ಲಿಯ ಜನರ [illegible] ಹೋಲುತ್ತವೆಯಂತೆ. ದಕ್ಷಿಣ ಹಿಂದುಸ್ತಾನದ ದ್ರಾವಿಡರು, [illegible] ಆಗಮಿಸುವುದಕ್ಕಿಂತ ಮೊದಲು, ವೈಭವಪೂರ್ಣ ರಾಜ್ಯಗಳನ್ನು ಸ್ಥಾಪಿಸಿದರು. [illegible] ಕಡಲುಯಾನದಿಂದ ಸಂಪರ್ಕವಿಟ್ಟು [illegible].

ಆರ್ಯರು:

ಆರ್ಯರು ಹಿಂದುಸ್ತಾನಕ್ಕೆ ಬಂದದ್ದು ಕ್ರಿ. ಪೂ. ೨೪೦೦-೧೫೦೦ ವರ್ಷಗಳಲ್ಲಿ ಎಂದು ಬಹುಜನ ಅನುಮಾನಿಸುವರು. ಕ್ರಿ. ಪೂ. ೨೦೦೦ ವರ್ಷಗಳ ಕಾಲಕ್ಕೆ ಎಂದು ನಾವು ಇಟ್ಟುಕೊಳ್ಳಬಹುದು. ಇವರು ಮಧ್ಯ ಏಶಿಯದ ಕ್ಷಾಮ ಪ್ರದೇಶಗಳಿಂದ ಹೊರಬಿದ್ದು ದೇಶಪ್ರದೇಶಗಳನ್ನು ಆಕ್ರಮಿಸುತ್ತ ಮುಂದೆ ಸಾಗಿದರು. ಮೊದಲು ಇವರು ಓಮದಸ್ತ್ಯಾಂತದಲ್ಲಿ ನೆಲೆಸಿ ನಂತರ ಅಫಘಾನಿಸ್ತಾನದ ಬಯಲನ್ನು ಸೇರಿದರು. ಬಳಿಕ ಇವರು ಸಿಂಧು ನದಿಯ ಪ್ರಾಂತಕ್ಕೆ ಬಂದರೆಂದು ಹೇಳಿಕೆಯಿದೆ. ಬರಬರುತ್ತ ಇವರು ಪಂಜಾಬ ಪ್ರಾಂತದಿಂದ ಪೂರ್ವಾಭಿಮುಖವಾಗಿ ಹೊರಟು ಮೊದಲು ಬ್ರಹ್ಮಾವರ್ತದಲ್ಲಿ ನೆಲೆಸಿದರು. ನಂತರ ಇವರು ನೆಲೆಸಿದ ಪ್ರದೇಶಗಳಿಗೆ ಆರ್ಯಾವರ್ತ ಮತ್ತು ಮಧ್ಯಪ್ರದೇಶಗಳೆಂಬ ಹೆಸರುಗಳು. ಉತ್ತರ ಹಿಂದುಸ್ತಾನದಲ್ಲಿ ಕ್ರಮಶಃ ಬೇರೂರಿ ನಿಂತ ಬಳಿಕ ಆರ್ಯರು ದಕ್ಷಿಣದ ಕಡೆಗೂ ಕಾಲುಚಾಚಿದರು. ಎಲ್ಲೆಡೆಗಳಂತೆ ದಕ್ಷಿಣದ ಮೂಲನಿವಾಸಿಗಳ ಕೂಡ ಆರ್ಯರು ಹೋರಾಡಿ ಅವರನ್ನು ಜಯಿಸಿ ಅವರ ಮೇಲೆ ತಮ್ಮ ಪ್ರಭಾವವನ್ನು ಬೀರಿದರು. ಅವರೊಡನೆ ಬೆರೆತು ಬಾಳಿದರಲ್ಲದೆ, ಆರ್ಯರು ಎಲ್ಲಿಯೂ ಮೂಲನಿವಾಸಿಗಳನ್ನು ನಿರ್ಮೂಲ ಮಾಡಲಿಲ್ಲ.

ವೇದ ವಾಙ್ಮಯ:—

ಆರ್ಯರ ಧರ್ಮಗ್ರಂಥಗಳು 'ವೇದ'ಗಳೆಂಬ ಹೆಸರಿನಲ್ಲಿ ಮೆರೆಯುತ್ತವೆ.

ಇವುಗಳಲ್ಲಿ ಯಜ್ಞದ ಮಂತ್ರಗಳು ಇಷ್ಟದೇವತೆಯ ಸ್ತುತಿಪರ ಶ್ಲೋಕಗಳು ಇರುತ್ತವೆ. ಯಜ್ಞಗಳ ತಿಳುವಳಿಕೆಯನ್ನು ಸ್ಪಷ್ಟಮಾಡಲು ಬ್ರಾಹ್ಮಣ ಆರಣ್ಯಕಗಳೆಂಬ ಗ್ರಂಥಗಳು ಕಾಲಗತಿಯಲ್ಲಿ ಹುಟ್ಟಿದವು. ಯಜ್ಞ ಯಾಗಾದಿಗಳಿಂದ ಇಷ್ಟವು ಪ್ರಾಪ್ತಿಯಾಗದ್ದರಿಂದ ನಿರಾಕಾರ ಪರಬ್ರಹ್ಮನ ಸ್ವರೂಪದರ್ಶನವು ನೋಡಲಾಯಿತು. ಈ ತರದ ಆತ್ಮಜ್ಞಾನವೂ ಬ್ರಹ್ಮಜ್ಞಾನವೂ ನಂತರದ ಜನ್ಮವೆತ್ತಿದ ಉಪನಿಷತ್ತುಗಳೆಂಬ ಗ್ರಂಥಗಳಲ್ಲಿ ಇವೆ. ಮುಂದೆ ಸೂತ್ರಕಾಲದಲ್ಲಿ ಶ್ರುತಿ ಸ್ಮೃತಿ, ಪುರಾಣಗಳು ತಲೆದೋರಿದವು. ಪುರಾಣಗಳ ಇದ್ದು, ರಾಮಾಯಣಮಹಾಭಾರತಗಳು ಇತಿಹಾಸಗಳೆನಿಸಿವೆ.

ವೇದಕಾಲದ ಸಾಮಾಜಿಕ ಮತ್ತು ಧಾರ್ಮಿಕ ಜೀವನ:

ಕ್ರಿ. ಪೂ. ಉತ್ತರಮಾನದಲ್ಲಿ "ವೇದಕಾಲ" ವೆಂಬುದು ಕೊನೆಗೊಂಡ ಮೇಲೆ, ಆರ್ಯರು ದಕ್ಷಿಣಕ್ಕೂ ಪೂರ್ವಕ್ಕೂ ಹರಡಿದ್ದರು. ಮೊದಲು ಪಂಜಾಬ ಪ್ರಾಂತವನ್ನು ಆಕ್ರಮಿಸಿದರು. ಋಗ್ವೇದದ ರಚನೆಯ ಸಮಯದ ಹೊತ್ತಿನಲ್ಲಿ ಗಂಗಾ ಯಮುನಾ ನದಿಗಳ ದಂಡೆಗಳ ಗುಂಟ ಹರಡುತ್ತ ಮಧ್ಯದೇಶವನ್ನು ಆಕ್ರಮಿಸಿದರು. ಈ ಕಾಲದಲ್ಲಿ ರಚಿತವಾದ ಮಂತ್ರಗಳಲ್ಲಿ ಹಿಮಾಲಯದ ವರ್ಣನೆಯಿದೆ. ಸಮುದ್ರವನ್ನು ಕೂಡ ಆರ್ಯರು ಕಂಡಿರಲಿಲ್ಲವೆಂದು ತೋರುವದು. ಆರ್ಯರು ಮುಖ್ಯವಾಗಿ ದನಗಾಹಿಗಳೂ, ಬೇಟೆಗಾರರೂ ಆಗಿದ್ದು, ತುಸುಮಟ್ಟಿಗೆ ಸಾಗುವಳಿಯನ್ನು ಬಲ್ಲವರಾಗಿದ್ದರು. ಅವರಲ್ಲಿ ದನಗಳ ಜೊತೆ ಒಂಟೆಗಳೂ, ಕುರಿ, ಆಡು, ಕತ್ತೆಗಳ ಜೊತೆ ಗುಂಪುಗಳೂ ಇದ್ದವು. ಮೇಲಾಗಿ ಆರ್ಯರು ಕುದುರೆ ಸಾಕುವದು, ಮತ್ತು ಅವುಗಳ ಹೇರಿಗೆಯನ್ನು ಬಳಸುವವರಾಗಿದ್ದರು. ಅವರು ರಥವನ್ನು ಉಪಯೋಗಿಸಿದರು. ಮತ್ತು ರಥಕ್ಕೆ ಎತ್ತುಗಳನ್ನು ಹೂಡಿದರು. ಆಸಕ್ತಿ ಮಾಡಿ ಪದ್ಧತಿಯಿಂದ ಒಕ್ಕಲುತನ, ಎರಡು ಮುದ್ದೆಗಳಿಂದ ನೆಲಕ್ಕೆ ಬೀಜವನ್ನು ಬೀಸಿ ಬಿಟ್ಟುಕೊಡುವುದನ್ನು ಇವರು ಬಲ್ಲರು. ಜವೆಗೋಧಿ ಮತ್ತು ಗೋಧಿಗಳ ರೊಟ್ಟಿಯನ್ನು ಇವರು ಆಹಾರದಲ್ಲಿ ಉಪಯೋಗಿಸಿದರು. ಹಾಲು ಮೊಸರು ಬೆಣ್ಣೆ ಮತ್ತು ಕ್ಷೀರದ ಇತರ ಸಾಮಾನುಗಳೂ ಅರಣ್ಯದಲ್ಲಿ ಸಿಕ್ಕುವ ಕೆಂದ ಫಲಗಳೂ ಇವರ ಆಹಾರವೆನಿಸಿದವು. ಜೇನಿಯಿಂದ ಮೊಟ್ಟೆಹೊರೆದ

ಕೊಲ್ಲುವುದು [illegible] ಪ್ರಚಾರದಲ್ಲಿತ್ತು. ಆದರೆ ಮೊದಮೊದಲು ಕೆಲವು ಧರ್ಮಗ್ರಂಥಗಳು [illegible] ಪ್ರತಿಬಂಧವಿತ್ತು. ಗೋಮಾಂಸವನ್ನು [illegible] ಪ್ರಚಾರದಲ್ಲಿತ್ತು. ಸೋಮರಸ ಮತ್ತು [illegible] ಆಗಿನವರ ಪೇಯಗಳೆನಿಸಿವೆ. [illegible] ಮಾಡಬೇಕೆಂಬ ಭಾವನೆಯಿತ್ತು.

[illegible] ಕಾಲದಲ್ಲಿ [illegible] [illegible] ಅವರ ಮೊದಮೊದಲಿನ [illegible] [illegible] ಪ್ರತಿಮಾನಗಳಾದವು. ಇವೆಲ್ಲ ಆ- [illegible]. [illegible] ಹೊಸ ಶಸ್ತ್ರಾಸ್ತ್ರಗಳ ಅವುಗಳಿಗೆ ಕಬ್ಬಿಣವು [illegible] ಕಬ್ಬಿಣದ ಉಪಯೋಗವನ್ನು [illegible] ಕೆಲಸಗಳಲ್ಲಿ ಮಾಡುತ್ತಿರಲಿಲ್ಲ, ಆದರೆ ಮಂತ್ರ, ಮಾಟ [illegible]ಗಳಿಗೆ ಬಳಸಲಾಗಿರಬಹುದು. ಹಲಕೆಲವು ಕಡೆಗಳು ಆರ್ಯರ [illegible] ಮುಟ್ಟಿದವು. [illegible] ಹತ್ತಿ [illegible]ಗಳನ್ನೂ, ರಕ್ಷಣೆ ಕವಚವನ್ನು ಹಾಕಿಕೊಂಡು ಯುದ್ಧ ನಡೆಸಿದರು. ಅವರ [illegible] ಆಯುಧಗಳೆಂದರೆ, ಬಿಲ್ಲು, ಬಾಣ, ಗದೆ ಕೊಡಲಿ, (ಚಕ್ಕಟಿ ಕೊಡಲಿ) ಖಡ್ಗ, ಬಲ್ಲೆಗಳಾಗಿದ್ದವು. ಕಮ್ಮಾರರು ತಮ್ಮ ಕಾರ್ಖಾನೆಯಲ್ಲಿ ಬೆಂಕಿಹೊತ್ತಿಸಲು, ಗರಿಗಳಿಂದ ತಯಾರಾದ ಬೀಸಣಿಗೆಯನ್ನು ಬಳಸಿದರು. ಬಡಿಗರ ಉಲ್ಲೇಖವು [illegible]ಗಳಲ್ಲಿ ಬರುತ್ತದೆ. [illegible] "[illegible]"ವನ್ನು ಉಪಯೋಗಿಸುವ ಸಾಧನವೂ ಆ ಕಾಲದ ಉದ್ದಿ [illegible]ದಲ್ಲಿ [illegible].

ಕುಲಸ್ಥರು ಒಟ್ಟಾಗಿ ಸಮಿತಿಗೂಡಿ [illegible]
ನಿರ್ಣಯಿಸಿದರು. ಯುದ್ಧ ಸಮಯದಲ್ಲಿ 'ಸಮಿತಿ' ನೆರೆದು ಯುದ್ಧ ನಡೆಸಬೇಕೋ ಕೊನೆಗಾಣಿಸಬೇಕೊ ನಿರ್ಣಯವಾಗುತ್ತಿತ್ತು. ಕುಲಸ್ಥರು ನೆರೆಯು ತಕ್ಕ ಇತರ ಕೂಟಗಳೂ ಇದ್ದವು. ವ್ಯಾಜ್ಯಪರಿಹಾರ, ಯುದ್ಧಯಾಗಾದಿ

ಗಳನ್ನು ನಡೆಸುವದು, ತತ್ತ್ವವಿಚಾರ ವಾದವಿವಾದ ನಡೆಸುವದು ಇಂತಹವುಗಳಿಗಾಗಿ ಸಭೆ ಸೇರುತ್ತಿದ್ದರು. ಇಂಥ ಕೂಟಗಳಿಗೆ ಸಭೆ ಅಥವಾ ವಿದಥಾ ಎನ್ನುತ್ತಿದ್ದರು.

ಕುಟುಂಬದ ಮುಖ್ಯಸ್ಥನು ತಂದೆಯಾಗಿದ್ದನು. ಕುಟುಂಬವು ಕುಲದ ಮೂಲ ಘಟಕವಾಗಿದ್ದಿತು. ಯುದ್ಧಕಾಲದಲ್ಲಿ ಕುಟುಂಬಗಳು ಒಂದುಗೂಡಿದವು. ಒಂದೊಂದು ಬಣಕ್ಕೆ ಒಬ್ಬೊಬ್ಬ ಯಜಮಾನನ ಹೆಸರು ಕೊಡುವ ಪರಿಪಾಠವು ಬಂದಿತು. ವೈರಿಗಳಿಂದ ತುಂಬಿದ ಅಪರಿಚಿತವಾದ ದೇಶದಲ್ಲಿ ಮೇಲಿಂದ ಮೇಲೆ ಯುದ್ಧ ಪ್ರಸಂಗಗಳು ಬರುತ್ತಿದ್ದದರಿಂದ ಕುಲಗಳು ಒಟ್ಟುಗೂಡಿ ರಾಜ್ಯ ಕಟ್ಟಿಕೊಂಡವು. ರಾಜ್ಯಗಳಲ್ಲಿ ರಾಜರು ತಲೆಯೆತ್ತಿದರು. ಆದರೆ ಕುಲದಲ್ಲಿಯ ಅಂತಃಕಲಹಗಳು ಆಗಾಗ ನಡೆದವು. ಆರ್ಯರು ಇವುಗಳನ್ನು ತಡೆದುಕೊಂಡರಲ್ಲದೆ, ವೈರಿಗಳಕೂಡ ಹೋರಾಟ ನಡಿಸಿ ಅವರನ್ನು ಗೆದ್ದುಕೊಂಡರು.

ಗ್ರಾಮಗಳ ಸುತ್ತಲೂ ಗೋಡೆಗಳನ್ನು ಕಟ್ಟಿ ಹಿಂಸ್ರಪಶು ಮತ್ತು ವೈರಿಗಳನ್ನು ಆರ್ಯರು ತಡೆಗಟ್ಟಿದರು. ಕುಲಕ್ಕೆಲ್ಲ ಮುಖ್ಯನಾದವನಿಗೆ ಪುರೋಹಿತನೆಂಬ ಹೆಸರು ಬಂದಿತು. ಜಗಳಗಳನ್ನು ಬಗೆಹರಿಸಲು ಒಬ್ಬ ಪಂಚನಿದ್ದನು. ಭೂಮಿಯು—ಮುಖ್ಯವಾಗಿ ಹುಲ್ಲುಗಾವಲಿನ ಪ್ರದೇಶವೆಲ್ಲ—ಇಡೀ ಕುಲಕ್ಕೆ ಆಧೀನವಾಗಿದ್ದಿತು. ಆದರೆ ಸಾಗುವಳಿ ಆದ ಭೂಮಿಯೂ ಮತ್ತು ಮನೆಗಳು ಕುಟುಂಬದ ಮತ್ತು ಒಂದೇ ವ್ಯಕ್ತಿಯ ಸ್ವಾಮಿತ್ವಕ್ಕೆ ಒಳಪಟ್ಟದ್ದವು. ಕುಲವೆಲ್ಲ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸರಿದು ಹೋಗುವಂತಹದಿರುತ್ತಿದ್ದಿತು.

ಗ್ರಾಮಗ್ರಾಮಗಳಲ್ಲಿ ಸಾರಿಗೆ ಮಾರ್ಗ(ರಸ್ತೆ)ಗಳಿದ್ದವು. ವ್ಯಾಪಾರವು ವಿನಿಮಯ ಪದ್ಧತಿಯದಾಗಿದ್ದಿತು. ಆದರೆ ಆಕಳುಗಳು ಬೆಲೆನಿರ್ಣಯದಲ್ಲಿ ಹೆಚ್ಚು ಉಪಯೋಗಬಿದ್ದವು. ಎಷ್ಟೋ ಸಲ ಆಭರಣಗಳು ಬೆಲೆನಿರ್ಣಯದ ಮೂಲವಾದವು. 'ನಿಷ್ಕ' ವೆಂಬ ಒಂದು ಕೊರಳ ಆಭರಣವು ಪದಾರ್ಥಗಳ ಬೆಲೆ ನಿರ್ಣಯಿಸಲು ಉಪಯೋಗಪಟ್ಟಿತು. ಪರದೇಶದ ವ್ಯಾಪಾರವು

ಮೊದಮೊದಲು ಗೊತ್ತಿರಲಿಲ್ಲವೆಂದಲ್ಲ.

ಸಮಾಜದಲ್ಲಿ ಮೊದಲಿನಿಂದ ವಿಭಾಗಗಳಿದ್ದವು. ಆದರೆ 'ಆನುವಂಶಿಕ ಪದ್ಧತಿಯು' ಮಾತ್ರ ಋಗ್ವೇದಕಾಲದಿಂದ ಬಂದಂತೆ ಕಾಣುತ್ತದೆ. ಈ ವಿಭಾಗಗಳ ಮೂಲಕಾರಣವು 'ಉದ್ಯೋಗವಿದ್ದಿರಬಹುದು.' ಮೊದಮೊದಲು ಕ್ಷತ್ರಿಯರು, ಪುರೋಹಿತರು, ವ್ಯಾಪಾರಿಗಳೆಂಬ ಭಾಗಗಳಿದ್ದವು. ಬರೆ ಬರುತ್ತ ಇದು ವರ್ಣಗಳ ಪದ್ಧತಿಗೆ ಇಳಿಯಿತು. ಯಜುರ್ವೇದ ಕಾಲದಲ್ಲಿ ಇದು ಆನುವಂಶಿಕವಾಯಿತು. ಮೊದಲಿನ ಮೂರು ವರ್ಣಗಳಲ್ಲಿ ಆರ್ಯರಿದ್ದುದರಿಂದ ಅಷ್ಟೊಂದು ಬಂಧನಗಳು ಇದ್ದಿಲ್ಲ. ಆದರೆ ಶೂದ್ರರಿಗೆ ಮಾತ್ರ ಬಹಳ ನಿರ್ಬಂಧಗಳಿದ್ದವು. ಇವರಿಗೆ ವೇದಾಧಿಕಾರವಿಲ್ಲ. ಸೋಮರಸಪಾನವಿಲ್ಲ. ಅವರು ವ್ಯಾಪಾರಮಾಡಬಹುದಿತ್ತು. ಆದರೆ ಬ್ರಾಹ್ಮಣ ಮತ್ತು ಕ್ಷತ್ರಿಯ ವೃತ್ತಿಗಳನ್ನು ಮಾತ್ರ ಎಂದಿಗೂ ವಹಿಸಲಾರರು.

ಮೊದಲಿನ ಪುರೋಹಿತರೆಂದರೆ ಋಷಿಗಳೇ ಆಗಿದ್ದರು. ಇವರು 'ಅಮರರು'. ಇವರು ಕಲಿಸಿದ ಪಾಠಗಳು ತಲೆಯಿಂದ ತಲೆಗೆ ನಡೆದು ಬಂದವು. ಯಜ್ಞ ನಡಿಸುವದರಲ್ಲಿ, ಯುದ್ಧಕಾಲದಲ್ಲಿ ರಾಜನಿಗೆ ಮಂಗಲ ಕೋರುವಾಗ ಇವನೇ ಮುಖ್ಯನು. ಪುರೋಹಿತ ವರ್ಗವು ಕಾಲಗತಿಯಲ್ಲಿ ಕ್ರಮಬದ್ಧವಾಯಿತು. ಮಾನವ ಸ್ವಭಾವ ದೋಷಗಳು ಬ್ರಾಹ್ಮಣರಲ್ಲಿ ಕಂಡುಬಂದರೂ, ಬ್ರಾಹ್ಮಣ ವರ್ಗದ ಆದರ್ಶಗಳು ಉಚ್ಚವಾಗಿದ್ದವು ಅವರು ಜನಸಾಮಾನ್ಯರನ್ನು ಉದ್ಧರಿಸಲು ಜನ್ಮವೆತ್ತಿದರೆಂಬ ಭಾವನೆಯಿದ್ದಿತು.

ಮಿಷ್ಟಾನ್ನಭೋಜನ ಭೂರಿದಕ್ಷಿಣೆಗಳಿಂದ ಸಂತುಷ್ಟರಾದ ಬ್ರಾಹ್ಮಣರು ಸಮಾಜದ ಸಂಸ್ಕೃತಿ ಮತ್ತು ಸಾಹಿತ್ಯಗಳನ್ನು ನಡೆಸಿಕೊಂಡು ಬಂದರು. ಆರ್ಯರು ಪ್ರಕೃತಿಯನ್ನೇ ಪೂಜಿಸಿದರು. ಸೃಷ್ಟಿಯ ಅದ್ಭುತ ವ್ಯಾಪಾರಗಳಲ್ಲಿ ಅವರು ದೇವತೆಗಳನ್ನು ಕಂಡರು. ಇಂದ್ರ, ವರುಣ, ಅಗ್ನಿ, ಉಷಸ್ ಮುಂತಾದ ದೇವತೆಗಳು ಆರ್ಯರಿಂದ ಪೂಜೆಗೊಂಡವು. ಆದರೆ, ಆಗ ದೇವಸ್ಥಾನ

ಗಳಾಗಲೀ ಮೂರ್ತಿಯಾಗಲೀ ಇರಲಿಲ್ಲ.

ಆರ್ಯರ ಸಮಾಜದಲ್ಲಿ ಸ್ತ್ರೀಯರ ಅಧಿಕಾರವು ಪುರುಷರ ಅಧಿಕಾರದಷ್ಟೆ ಸಮಾನವಾಗಿತ್ತು. ಸ್ತ್ರೀಯರು ಯುದ್ಧರಂಗ, [illegible], ಬ್ರಹ್ಮಚರ್ಯ, ವಿದ್ಯಾರ್ಜನೆಗಳಲ್ಲಿ ಪುರುಷರನ್ನು ಸರಿಗಟ್ಟಿದರೂ [illegible] ಲಿಲ್ಲ. ಸ್ವಪತಿ ಸ್ವೀಕಾರಕ್ಕೆ ಅತಂಕವೂ ಇರಲಿಲ್ಲ. ಸ್ತ್ರೀಯರು [illegible] ಶಿಕ್ಷಕರಾಗಿರುತ್ತಿದ್ದರು. ಆದರೆ ಅವರನ್ನು ಯಾರೂ ಅಧಮರೆಂದಾಗಲೀ [illegible] ರೆಂದಾಗಲೀ ಎಣಿಸಲಿಲ್ಲ.

ಮಾನವನ ಜೀವನವನ್ನು ನಾಲ್ಕು ಭಾಗಗಳನ್ನು ಕಂಡುಹಿಡಿದು, ಅದರಿಂದ ಮೋಕ್ಷ ಲಕ್ಷ್ಯ ಯೋಗ್ಯತೆ [illegible] ಸಾಧಿಸಲು ಆರ್ಯರು ನಾಲ್ಕು ಆಶ್ರಮಗಳನ್ನು ಕಲ್ಪಿಸಿದರು. ಅವೆಂದರೆ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಗಳು

[illegible] ಪ್ರಾರಂಭವಾಯಿತು. [illegible] ಕೃತಿ [illegible] ಸಮಾಜದ ಸ್ಮೃತಿ ಕೃತಿ ಗೃಹ್ಯಸೂತ್ರಗಳಿಂದ ತಿಳಿಸಿತು. ಪ್ರತಿ ಹಿಂದುವು ಕೈಕೊಳ್ಳುವ ಷೋಡಶ ಸಂಸ್ಕಾರಗಳು ಈ ಸೂತ್ರಗಳಲ್ಲಿ ದೊರೆವೆ. ಧರ್ಮಸೂತ್ರಗಳು ಹಿಂದೂಗಳ ನೀತಿ, ರೀತಿ, ನಡವಳಿ, ವಂಶಗತ ಹಕ್ಕು ಬಾಧ್ಯತೆಗಳನ್ನು ತಿಳಿಸಿದವು. ಚಾತುರ್ವರ್ಣ್ಯವು ಹಿಂದುತ್ವದ ವ್ಯವಸ್ಥೆಗೆ ಆಧಾರವಾಯಿತು. ಚಾತುರ್ವರ್ಣ್ಯವು ದಿನದಿನದ ಬಳಕೆಯಲ್ಲಿ ಅಷ್ಟೊಂದು ಬಾಧಕವಿರಲಿಲ್ಲ. ಜನಕ ವಿಶ್ವಾಮಿತ್ರರಂಥ ಕ್ಷತ್ರಿಯರು ಬ್ರಹ್ಮಜ್ಞಾನವನ್ನಿಂತು ಬ್ರಾಹ್ಮಣರೆನಿಸಿದರು. ಒಂದು ಕಾಲದಲ್ಲಿ ಈ ಜ್ಞಾನಕ್ಕಾಗಿ ಬ್ರಾಹ್ಮಣ-ಕ್ಷತ್ರಿಯರಲ್ಲಿ ಸ್ಪರ್ಧೆಯೆ ನಡೆಯಿತು. ಅನಾರ್ಯರನ್ನು ವರ್ಣಪದ್ಧತಿಯಲ್ಲಿ ಸೇರಿಸಿಕೊಳ್ಳದ ವಿನಾ ಗತ್ಯಂತರವಿಲ್ಲವೆಂಬ ಮಾತು ನಿಶ್ಚಿತವಾದ ಬಳಿಕ ಅವರನ್ನು ಉಚ್ಚವರ್ಗಗಳಲ್ಲಿ ಸೇರಿಸಿಕೊಂಡ ಉದಾಹರಣೆಗಳಿವೆ. ಬಳಿಕ ಚಾತುರ್ವರ್ಣ್ಯಪದ್ಧತಿಯು ದೂರ ದೂರ ಹಬ್ಬಿ ಇಂಡೋನೇಶಿಯಾ,

ಚಂಪಾ, ಅನ್ನಂ ಮುಂತಾದ ಪ್ರದೇಶಗಳಲ್ಲಿ ಪ್ರಸಾರ ಹೊಂದಿತು. ಬಲಿ ದ್ವೀಪದಲ್ಲಿ ಇಂದಿಗೂ ಚಾತುರ್ವರ್ಣ್ಯದ ಪದ್ಧತಿಯಿದ್ದುದು ಕಂಡುಬರುತ್ತದೆ. ಭಾರತದ ಮಲಬಾರದಲ್ಲಿರುವ ಅಳಿಯ ಸಂತಾನದ ಪದ್ಧತಿಯು, ಉಚ್ಚ ವರ್ಣದವರನ್ನು ಸ್ತ್ರೀಯರು ಗಂಡುಗಳಲ್ಲಿ ಸೇರಿಸಿಕೊಂಡ ಉದಾಹರಣೆಗಳನ್ನು ಬಹುದೆ ? ಆರ್ಯರು ದ್ರಾವಿಡರನ್ನು ಸೇರುವಲ್ಲೆಲ್ಲ ಅರಸೊತ್ತಿಗೆಯು ವಂಶಗತವಾಗಿ ನಡೆದು ಬಂದಿತು. ಆದ್ದರಿಂದ ಧರ್ಮಸೂತ್ರಗಳಲ್ಲಿ ರಾಜ ಧರ್ಮದ ಬಗೆ ಬರೆಯಲಾಯಿತು. ಮೀಮಾಂಸೆಯಲ್ಲಿ ಸೂತ್ರಗಳು ಹೊರಗೆ ಬಂದವಲ್ಲ ? ಈ ಕಾಲದಲ್ಲಿ ವೇದಾಧ್ಯಯನದ ಜೊತೆಗೆ ನ್ಯಾಯ, ತರ್ಕ, ವ್ಯಾಕರಣ ಮುಂತಾದ ವಿಷಯಗಳ ಅಭ್ಯಾಸವೂ ನಡೆಯಿತು.

ಈ ತೆರನಾಗಿ ವಿಸ್ತಾರವಾದ ರಾಜ್ಯಗಳಲ್ಲಿ ಜನರ ಯೋಗ್ಯತೆಗಳೂ ಬಹು ಮುಖವಾದವು.

ವೇದಕಾಲದ ಕೊನೆಯ ಕಾಲಕ್ಕೂ ಮೊದಲಿನ ಕಾಲಕ್ಕೂ ಇದ್ದ ವ್ಯತ್ಯಾಸವನ್ನು ರಾಮಾಯಣ ಮಹಾಭಾರತಗಳಲ್ಲಿ ವರ್ಣಿತವಾದ ಸಮಾಜದ ರಚನೆಯ ಹೋಲಿಕೆಯಿಂದ ತಿಳಿದುಕೊಳ್ಳಬಹುದು. ರಾಮಾಯಣವು ಉತ್ತರಭಾರತದಲ್ಲಿ ನೆಲೆಸಿದ್ದ ಸಂಸ್ಕೃತಿಯನ್ನು ಮಾತ್ರ ವರ್ಣಿಸುತ್ತದೆ. ದಕ್ಷಿಣದಲ್ಲಿ ದಂಡಕವೆಂಬ ಅರಣ್ಯವಿತ್ತು. ಅಲ್ಲಲ್ಲಿ ಆರ್ಯಋಷಿಗಳು ತಪಸ್ಸು ನಡೆಸಿದ್ದರು. ಈಗಿನ ಬಳ್ಳಾರಿ ಜಿಲ್ಲೆಯಲ್ಲಿದ್ದ ಹಂಪೆಯವರೆಗೆ ಬರುವತನಕ ನಗರದಲ್ಲಿ ವಾಸಿಸಿದ ಸಮಾಜಗಳು ನೋಡಲು ಸಿಗಲಿಲ್ಲ. ನರ್ಮದೆಯ ಮುಖದಲ್ಲಿ ನಾವಿಕ ಕೆಲವು ಅಂಬಿಗರು ವಾಸವಾಗಿದ್ದರು. ಆದ್ದರಿಂದ ರಾಮಾಯಣವು ಒಂದು ಸಾಹಸ ಕಥೆಯಾಗಿದೆ. ಈ ಕಾಲದಲ್ಲಿ ಚಾತುರ್ವರ್ಣ್ಯವು ಬಹು ಬಿಗಿಯಾಗಿದ್ದಿತು.

ಮಹಾಭಾರತದ ಕಾಲಕ್ಕೆ ಭಾರತದೇಶವೆಲ್ಲ ಒಂದುಗೂಡಿದ್ದಿತು. ಉತ್ತರ ದಕ್ಷಿಣ ಪೂರ್ವಪಶ್ಚಿಮದಲ್ಲಿ ಇದ್ದ ರಾಜ್ಯಗಳು ಒಂದನ್ನೊಂದು ಅರಿತಿದ್ದವು. ರಾಜಕಾರಣ, ಕರ್ತವ್ಯಪಾಲನೆ, ಲೋಕಸಂಗ್ರಹ, ಧರ್ಮ ಇವು ಕೃಷ್ಣನ ಕಾಲದ ಹೆಗ್ಗುರುತುಗಳಾಗಿದ್ದವು. ಮಹಾಭಾರತದ ಕಾಲದಲ್ಲಿ

ಹಿಮವತ್ಪ್ರಾಂತದ ಶ್ರೇಷ್ಠ ಆಂಗಿರಸ ವೇದಗಳೂ ರಚಿತವಾದವು. ಚಾತುರ್ವರ್ಣ್ಯ ಈ ಕಾಲದಲ್ಲಿ ಸಡಿಲಾಗಿತ್ತು. ದಾಸಿಪುತ್ರನಾದ ವಿದುರನು ಧೃತರಾಷ್ಟ್ರನ ಮಾರ್ಗದರ್ಶಕನು. ಎಷ್ಟೋ ಅರಸರು ನಾಮಮಾತ್ರದಲ್ಲಿ ಕ್ಷತ್ರಿಯರು. ಸುಶರ್ಮ, ಭಗದತ್ತ, ಶಲ್ಯರೆಂಬ ಎಷ್ಟೋ ರಾಜರು ಅನಾರ್ಯರಿದ್ದರು. ಪಾಂಡುರಾಜನ ಮಕ್ಕಳು ಮೂಲನಿವಾಸಿಗಳೆನಿಸುವ ರಾಕ್ಷಸಿಯರನ್ನು ಮದುವೆಯಾದರು. ಬ್ರಾಹ್ಮಣರು ಯೋಧರಾದದ್ದು (ದ್ರೋಣ, ಕೃಪ, ಅಶ್ವತ್ಥಾಮ) ಆಗಿನ ಕಾಲದಲ್ಲಿ ಆದ ಚಾತುರ್ವರ್ಣ್ಯದ ಸಡಿಲುತನವನ್ನು ತೋರಿಸುತ್ತದೆ.

ರಾಮನಕಾಲ ಕೃಷ್ಣನಕಾಲಗಳ ಮಧ್ಯಂತರದಲ್ಲಿ ಹಿಂದೂ ಸಮಾಜವು ಮೂರ್ತಸ್ವರೂಪವನ್ನು ತಳೆದಂತೆ ತೋರುತ್ತದೆ. ದಕ್ಷಿಣದಲ್ಲಿಯ ಋಷಿಗಳ ಆಶ್ರಮಗಳಿಂದ ಆರ್ಯಧರ್ಮವು ಹೊರಹೊಮ್ಮಿರಬಹುದು. ಕ್ರಮೇಣ ಅರಣ್ಯವೆಲ್ಲ ಮಾಯವಾಗಿ, ಸಾಗುವಳಿಯು ತಲೆಯೆತ್ತಿತೇನೋ? ಅರಣ್ಯವಾಸಿಗಳು ಪಟ್ಟಣವಾಸಿಗಳಾಗಿರಬಹುದು.

ಅಭ್ಯಸನಗಳು:—

೧. ಕೆಳಗಿನ ವಾಕ್ಯಗಳಲ್ಲಿ ಕಂಸದಲ್ಲಿ ಬರೆದ ಶಬ್ದಗಳ ಗುಂಪಿನಲ್ಲಿ ಸರಿಯಾದುದನ್ನು ಇಟ್ಟು ಮಿಕ್ಕವುಗಳನ್ನು ಕಾಟು ಹೊಡೆಯಿರಿ:

ಅ. ದ್ರಾವಿಡರ ಭಾಷೆಗಳು (ಹಿಂದಿ, ಇಂಗ್ಲಿಷ, ಕನ್ನಡ, ಮರಾಠಿ, ತೆಲಗು, ತಮಿಳು) ಗಳಾಗಿದ್ದವು.

ಬ. ದ್ರಾವಿಡರ ಪ್ರದೇಶಗಳು (ಆರ್ಯಾವರ್ತ, ಬ್ರಹ್ಮಾವರ್ತ, ಮೊಹೆಂಜೊದಾರೋ, ಹರಪ್ಪಾ) ಗಳಾಗಿದ್ದವು.

ಕ. ದ್ರಾವಿಡರ ಸಮಾಜವು (ಪಿತೃಪ್ರಧಾನ, ಮಾತೃಪ್ರಧಾನ, ಭ್ರಾತೃ-ಪ್ರಧಾನ) ವಾಗಿದ್ದಿತು.

ಡ. ಆರ್ಯರು (ದಕ್ಷಿಣ, ಪೂರ್ವ, ವಾಯುವ್ಯ) ದಿಕ್ಕಿನಿಂದ ಭಾರತವನ್ನು ಪ್ರವೇಶಿಸಿದರು.

(೨) [illegible] ಹೊಂದಿಸಿರಿ:—

ಆರ್ಯರ ಸಮಾಜದಲ್ಲಿ . . . . . ವರ್ಣಗಳು,
,, [illegible]ದಲ್ಲಿ ... . ಆಶ್ರಮಗಳು,
,, [illegible]ಗಳು . . . . ವೇದಗಳು,
[illegible],
[illegible] . . . ಮಹಾಕಾವ್ಯಗಳಾಗಿದ್ದವು.
[illegible]ದಲ್ಲಿ ಸ್ತ್ರೀಯರಿಗೆ . . . . ಸ್ವಾತಂತ್ರ್ಯವಿದ್ದಿತು.
[illegible] . . . . ಬರಹಮಾಡಿಕೊಂಡರು.
[illegible]ಗಳು .. . . ಹೇಳಿದವು.

೩. ಕೆಳಗಿನ ವಾಕ್ಯಗಳ ಕೊನೆಯಲ್ಲಿ ಸರಿಯಾದ ಶಬ್ದಗಳನ್ನಿಟ್ಟು ವಾಕ್ಯವುಗಳನ್ನು ಕಾಪಿ ಬರೆಯಿರಿ.

ವೇದಯುಗ ಕಾಲದಲ್ಲಿ ಜಾತಿವರ್ಗಗಳ ಬಿಗುವು ಇತ್ತು ! ಇಲ್ಲ.
ರಾಮಾಯಣ ಕಾಲದಲ್ಲಿ ದಕ್ಷಿಣದಲ್ಲಿ ದೊಡ್ಡ ರಾಜ್ಯಗಳು ಇದ್ದವು! ಇದ್ದಿಲ್ಲ
ಮಹಾಭಾರತ ಕಾಲಕ್ಕೆ ಭಾರತ ದೇಶವು ಒಂದುಗೂಡಿತ್ತು! ಗೂಡಿದ್ದಿಲ್ಲ
ಮಹಾಭಾರತ ಕಾಲದ ರಾಜರು ರಾಕ್ಷಸಿಯರನ್ನು ಮದುವೆಯಾದರು! ಹಾಗಲ್ಲ

---

೩. ಬುದ್ಧ ಮಹಾವೀರರು.

ಕ್ರಿ. ಪೂ. ೬ನೆಯ ಶತಕವು ಜಗತ್ತಿನ ವಿಚಾರತರಂಗಗಳಲ್ಲಿ ಒಂದು ಕ್ರಾಂತಿಯ ಕಾಲ. ಬಹುತರ ಮಾನವಕೋಟಿಗೆ ಮಹದುಪಕಾರ ಸಲ್ಲಿಸಿದ ಮಹದ್ವಿಭೂತಿಗಳೂ, ಮಹದಾಚಾರಗಳೂ ಈಗ ಬೆಳೆದು ಬಂದವು. ಗ್ರೀಸದ ತತ್ತ್ವಜ್ಞಾನಿಗಳೆನಿಸಿದ ಸಾಕ್ರೆಟಿಸ್, ಅರಿಸ್ಟಾಟಲ್, ಪ್ಲೇಟೋ ಮುಂತಾದವರು

ಇದೇ ಕಾಲದವರು. ಇತ್ತ ಚೀನದೇಶದಲ್ಲಿ ಅಸಭ್ಯ ಜನಾಂಗಗಳನ್ನು ಸಂಸ್ಕೃತಿಯತ್ತ ಹೊರಳಿಸಿ ತತ್ತ್ವಬೋಧನೆಮಾಡಿದ ಕುಂಗ-ಫ್ಯೂಟ್ಸೆ ಎಂಬಾತನು ಇದೇ ಕಾಲದಲ್ಲಿ ಜೀವಿಸಿದನು. ಕುಂಗ-ಫ್ಯೂಟ್ಸೆಯು ಚೀನದ ದಕ್ಷಿಣದಲ್ಲಿ ಬೋಧಿಸುತ್ತಿರುವಾಗ ಆ ದೇಶದ ಉತ್ತರದಲ್ಲಿ ಲಾ-ಓ ಎಂಬಾತನು ಹೆಸರುವೆತ್ತ ತತ್ತ್ವಜ್ಞಾನಿಯೆನಿಸಿದನು. ಭಾರತವನ್ನು ನಾಶಿಸುವ ಪಾರಸಿಕ ಜನಾಂಗದ ಧರ್ಮಗುರುವೆನಿಸಿದ ಝೊರೊಸ್ಟರ ಅಥವಾ ಜರಥುಷ್ಟ್ರ ಎಂಬಾತನೂ ಇದೇ ಕಾಲದವನು. ಪರ್ಶಿಯಾ ದೇಶದಲ್ಲಿ ತತ್ತ್ವಬೋಧೆ ನಡೆಸಿದನು. ಭಾರತದಲ್ಲಿಯೂ ಬುದ್ಧನು ಮಹಾವೀರರು ಇದೇ ಮಾಲಿಕೆಯವರು. ಅತೀವ ವಿಸ್ತಾರವನ್ನು ಹೊಂದಿ ಹೆಸ್ರನ್ನು ಪಡೆದ ಸಾಮ್ರಾಜ್ಯಗಳೆಂದರೂ ಈ ಕಾಲದಲ್ಲಿ ತಲೆಯೆತ್ತಿ ಮೆರೆದವು. ಬಹುಪ್ರಸಿದ್ಧಿಪಡೆದ ಇರಾಣಿ ಸಾಮ್ರಾಜ್ಯವು ಈಗ ಬೆಳಗಿತು. ಏಶಿಯಾದಲ್ಲಿಯ ಇನ್ನೊಂದು ಮಹಾಸಾಮ್ರಾಜ್ಯವೆಂದರೆ, ಚೀನ ದೇಶವು. ಉಪಖಂಡವೆನಿಸಿದ ಭಾರತದಲ್ಲಿ ಮಗಧ ಸಾಮ್ರಾಜ್ಯವಾದರೂ ಈಗ ಬೆಳಗಹತ್ತಿತು. ಯುರೋಪದಲ್ಲಿ ಗ್ರೀಸ ದೇಶವು, ಸಂಸ್ಕೃತಿಯ ಹಾಗೂ ರಾಜಕಾರಣದ ತತ್ತ್ವಗಳ ಉನ್ನತ ಶಿಖರವನ್ನು ಈಗ ಮುಟ್ಟಿತು.

ಕ್ರಿ. ಪೂ. ಏಳನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಹೊಸ ಹೊಸ ರಾಜ್ಯಗಳು ತಲೆಯೆತ್ತಿದವು. ಇತ್ತ ಮೂಲನಿವಾಸಿಗಳ ಪ್ರಜಾಪ್ರಭುತ್ವದ ಸ್ವತಂತ್ರ ಜನಾಂಗಗಳೂ ಇದ್ದವು. ಆದ್ದರಿಂದ ಪಟ್ಟಣಗಳು ಮಹತ್ವ ಪಡೆಯ ಹತ್ತಿದವು. ಇವುಗಳ ಮೂಲಕ ವ್ಯಾಪಾರವು ಕುದುಂಬವಾಯಿತು. ಹೀಗಾಗಿ ಭಾರತದ ಇತಿಹಾಸದಲ್ಲಿ ಈ ಕಾಲಖಂಡವು ಬಹು ಮಹತ್ವದ್ದು. ಯಾಕಂದರೆ ಈ ಕಾಲದಲ್ಲಿ ಬುದ್ಧ ಮಹಾವೀರರು ಜೀವಿಸಿದರು. ಇದೇ ಕಾಲಕ್ಕೆ ಉತ್ತರದಲ್ಲಿಯ ಮಗಧವೆಂಬ ರಾಜ್ಯವು ಪ್ರಖ್ಯಾತಿ ಪಡೆಯಿತಲ್ಲ ? ಅದರ ಕೂಡ ಬುದ್ಧನು ಸಂಬಂಧಪಟ್ಟುಕೊಂಡಿದ್ದನು. ರಾಜಗೃಹವು ಮಗಧದ ರಾಜಧಾನಿಯೆನಿಸಿತು. ಅದರ ಸಾಮಾನ್ಯ ಜನತೆಯಲ್ಲಿ ತೀವ್ರವಾದ ಅಸಂತೋಷವು ಹರಡಿಕೊಂಡಿತೆಂಬುದು ನೆನಪಿಡತಕ್ಕಮಾತಾಗಿದೆ. ವೇದಗಳಲ್ಲಿ ಯಜ್ಞಯಾಗಾದಿಗಳಿಗೆ ಜನರು ಬೇಸತ್ತಿದ್ದರು. ವೇದಗಳಲ್ಲಿ ಹೇಳಿದ ದೇವತೆಗಳು ಮಾನವನ ಆಧ್ಯಾತ್ಮವನ್ನು ತೃಪ್ತಿಪಡಿಸಲಾರವೆಂದು ಅವರಿಗೆ ಎನಿಸ

ಕೊಟ್ಟರು. ಉಪನಿಷತ್ತುಗಳಲ್ಲಿ ಹೇಳಿದ ಬ್ರಹ್ಮಜ್ಞಾನವು ಕೇವಲ ಕೆಲವೇ ಜನರಿಗೆ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]

ಬೌದ್ಧ ಧರ್ಮ:—

[illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಬುದ್ಧ [illegible] [illegible] [illegible] [illegible] ಹೋಗಿಬಿಟ್ಟನು. [illegible] ತನ್ನ ತತ್ವಗಳನ್ನು [illegible] [illegible] [illegible]. ಇವನ್ನು [illegible] ಇವನ ಸೋಗಿನ ಗುರುಗಳು [illegible] ತನ್ನ ಶಿಷ್ಯರಿಗೆ ಇವನು ತನ್ನ ತತ್ವಗಳನ್ನು ಬೋಧಿಸಲು ಆರಂಭಿಸಿದನು [illegible] ಎಂಬಲ್ಲಿ.

ಬುದ್ಧಬೋಧೆಯು ತಿಳಿಸೆಂದರೆ, " ಸುವರ್ಣಮಧ್ಯ ಮಾರ್ಗ"(ಬಂಗಾರದಂಥ ನಡುವಿನ ಮಾರ್ಗವನ್ನು ಹಿಡಿ)ದಿಂದ ನಡೆಯುಂಬುದು. ಈ ಮಾರ್ಗವು ನಾಲ್ಕು ಮುಖ್ಯ ತತ್ವಗಳನ್ನು ಅವಲಂಬಿಸಿದೆ. ಅವೆಂದರೆ—ದುಃಖದ ಅರಿ

ವು, (ಜನನ ಮರಣ ವಾರ್ಧಕ್ಯಮುಂತಾದವು.) ದುಃಖಕಾರಣದ ಅರಿವು. (ತೃಷ್ಣಾ.) ದುಃಖನಿವಾರಣೆ. (ತೃಷ್ಣೆಯ ತ್ಯಾಗದಿಂದ.) ದುಃಖನಿವಾರಣೆಯ ಸಾಧನಗಳು. (ಷಟ್ ಸ್ಥಾನಮಾರ್ಗ) ಮುಂತಾದವುಗಳಾಗಿರುವವು.

ಲೋಕದ ವ್ಯವಹಾರಗಳಲ್ಲಿ ಕಂಡುಬರುವ ಸಮಸ್ತ ದುಃಖಗಳ ನಿರ್ಮೂಲನವು ಎರಡು 'ಅತಿ' ಗಳನ್ನು ಬಿಟ್ಟು ಮಧ್ಯಮಾರ್ಗವನ್ನು ಅವಲಂಬಿಸುವದರಲ್ಲಿ ನೆಲೆಸಿದೆ. ಆದ್ದರಿಂದ ಯಾವಾಗಲೂ ಸದಾಚಾರದಿಂದಲೇ ನಡೆಯಿರೆಂದು ಜನರಿಗೆ ಇವನು ಬೋಧಿಸಿದನು. ದುಃಖ ಸಂಕಟಗಳಿಂದ ಪಾರಾಗಲು ಅಹಂಕಾರವನ್ನೂ ಆಶೆಯನ್ನೂ ಬಿಡಬೇಕಲ್ಲದೆ, ದೇಹದಂಡನೆಯನ್ನೂ ಮಾಡಬಾರದೆಂದು ಇವನು ಬೋಧಿಸಿದನು. ದೇಹದಂಡನೆ ಅಥವಾ ವಿಜೃಂಭಣೆಯ ಯಜ್ಞಗಳಿಂದ ಮೋಕ್ಷಸಾಧಿಸಲಾರದೆಂದು ಇವನ ತಿಳುವಳಿಕೆ. ಯಜ್ಞಗಳನ್ನು ಖಂಡಿಸುತ್ತ ಇವನು ಅಹಿಂಸಾತತ್ವವನ್ನೂ ನೀತಿಪ್ರಧಾನವಾದ ಆಚಾರವನ್ನೂ ಬೋಧಿಸಿದನು. ಬುದ್ಧದೇವನು ತನ್ನ ಎಂಬತ್ತನೆಯ ವರ್ಷದವರೆಗೆ ತತ್ವಬೋಧೆ ನಡೆಸಿದನು. ಇವನ ಬೋಧೆ ಕೆಳದರ್ಜೆಯ ಜನರಲ್ಲಿಯೂ ಅಜ್ಞರಲ್ಲಿಯೂ ಬೇರೂರಿತು. ಯಾಕಂದರೆ ಇವನು ಅವರಿಗೆ ತಿಳಿಯುವ ಪಾಲಿಭಾಷೆಯಲ್ಲಿಯೇ ಬೋಧಿಸಿದನು. ಇವನು ಹೊಸದೊಂದು ಧರ್ಮವನ್ನು ಹುಟ್ಟಿಸಲು ಯತ್ನಿಸಲಿಲ್ಲ. ತನಗೆ ಹೊಳೆದ ಹೊಸತತ್ವಗಳನ್ನು ಇವನು ಜನರೆದುರಿಗೆ ಇಟ್ಟನು. ಈ ಕಾರಣದಿಂದ ಇವನ ತತ್ವಗಳು ದೊರೆ, ವ್ಯಾಪಾರಿ, ಇತರ ಧರ್ಮಗುರುಗಳ ಒಪ್ಪಿಗೆ ಪಡೆದವು. ಪ್ರೇಮಲ ಹೃದಯದಿಂದ ಕೂಡಿದ ಬುದ್ಧನ ದಯಾಮಯ ಮೂರ್ತಿಯು ಬಹುತರ ಎಲ್ಲ ಜನರನ್ನೂ ತನ್ನ ಕಡೆಗೆ ಎಳೆದುಕೊಂಡಿತು. ರಾಜಗೃಹದ ಬಿಂಬಸಾರ, ಕೋಸಲದ ಪ್ರಸೇನಜಿತ, ಶಾಕ್ಯ ಪಂಡಿತರು ಇವನ ತತ್ವಗಳನ್ನೊಪ್ಪಿಕೊಂಡರಲ್ಲದೆ, ಸ್ವತಃ ಇವನ ಹೆಂಡತಿಯೂ, ಇವನ ತಂದೆಯೂ ಅನುಯಾಯಿಗಳಾದರು. ಮಧ್ಯಮ ವರ್ಗದವರಿಗೂ ಬುದ್ಧನ ಬೋಧೆಗಳು ರುಚಿಸಿದವು. ಯಾಕಂದರೆ ಮಧ್ಯಮ ವರ್ಗದವನು ಶ್ರಮ ಮತ್ತು ಹಣವನ್ನು ವೆಚ್ಚ ಮಾಡಿ ಯಜ್ಞ ನಡೆಸಬೇಕಾಗಿಲ್ಲ. ತಿಳಿಯದ ಮಂತ್ರಗಳ ಪಠಣವಿಲ್ಲ. [illegible]ಗಳಂಥ ಗಹನವಾದ ಗ್ರಂಥಗಳ ಅಭ್ಯಾಸ ಬೇಕಿಲ್ಲ. ಆದ್ದರಿಂದ

ಉಚ್ಚರಿಂದ ನೀಚರ ವರೆಗೆ ಬುದ್ಧನ ತತ್ವಗಳು ಬೇರೂರಿದುವು. ಬುದ್ಧನು ವಿಹಾರಗಳನ್ನೂ, ಚೈತ್ಯಾಲಯಗಳನ್ನೂ ಕಟ್ಟಿಸಿದನು. ಇಲ್ಲಿ ಬುದ್ಧಭಿಕ್ಷು ಗಳನ್ನು ತರಬೇತುಗೊಳಿಸಿ ಧರ್ಮಪ್ರಸಾರಕ್ಕಾಗಿ ದೂರ ದೂರ ದೇಶಗಳಿಗೆ ಕಳಿಸಲಾಯಿತು. ಇವುಗಳಲ್ಲಿ ಬುದ್ಧ ಭಿಕ್ಷುಣಿಯರು ಪ್ರವೇಶಪಡೆದುದರಿಂದ ಬುದ್ಧ ಧರ್ಮವು ಆಗಿನ ಸಮಾಜದಲ್ಲಿ ಒಂದು ಕ್ರಾಂತಿಯನ್ನೇ ಮಾಡಿತೆನ್ನ ಬಹುದು. ಮೊದಮೊದಲು ಬುದ್ಧನು ನಾರಿಯರಿಗೆ (ಧರ್ಮಬೋಧಕರ ಸ್ಥಾನ) ಭಿಕ್ಷುಣಿಯರಾಗಲು ಅಪ್ಪಣೆ ಕೊಡಲಿಲ್ಲ. ಆದರೆ ಬುದ್ಧನ ಶಿಷ್ಯೆ ಯು ಭಿಕ್ಷುಣಿಯರಾಗಲು ಒಲಿವಂತೆ ಮಾಡಿದಳು. ಕಾಲಗತಿಯಲ್ಲಿ ಬೌದ್ಧ ಧರ್ಮದಲ್ಲಿ ಹೀನಯಾನ ಮಹಾಯಾನಗಳೆಂಬ ಎರಡು ಪಂಥಗಳಾದುವು. ಕ್ರಿ. ಪೂ. ೪೮೩ರಲ್ಲಿ ಬುದ್ಧನು ಪರಿನಿರ್ವಾಣವನ್ನು ಪಡೆಯಲು ಆತನ ಅವ ಶೇಷಗಳನ್ನು ಪಡೆಯಲು ಅನೇಕ ಅರಸರು ಆಶೆಬಟ್ಟುದನ್ನು ಕಂಡರೆ, ಆತನ ಮೇಲಿಟ್ಟ ಜನರ ಪ್ರೇಮಾದರಗಳು ವ್ಯಕ್ತವಾಗುತ್ತವೆ.

ಮಹಾವೀರನು: (ಕ್ರಿ. ಪೂ. ೫೯೮– ೫೨೮)

ಮಹಾವೀರನು* ಬುದ್ಧನ ಸಮಕಾಲೀನನು. ಇವನು ಸ್ಥಾಪಿಸಿದ ಮತಕ್ಕೆ ಜೈನಮತವೆಂಬ ಹೆಸರು. ಇವನು ಜೈನಮತಕ್ಕೆ ಒಂದು ಪೂರ್ಣ ಸ್ವರೂಪವನ್ನು ತಂದುಕೊಟ್ಟನು. ಈಗಿನ ಬಿಹಾರದ ಉತ್ತರದ ಭಾಗದಲ್ಲಿ ಆಗಿನ ಕುಂಡಗ್ರಾಮವೆಂಬ ನಗರದಲ್ಲಿ ಮಹಾವೀರನು ಕ್ರಿ. ಪೂ. ೫೯೮ರಲ್ಲಿ ಜನ್ಮವೆತ್ತಿದನು. ತಂದೆ, ಸಿದ್ಧಾರ್ಥನು. ತಾಯಿ, ತ್ರಿಶಲಾ. ಹೆಂಡತಿ, ಯಶೋದೆ. ಕೆಲಕಾಲ ಬಾಳ್ವೆ ನಡೆಸಿದನು.

ಬೆಳೆದು ದೊಡ್ಡವನಾದಂತೆ ಆತನು ಜಗತ್ತಿನ ಮುಂದೆ ಅವನು

* ಮಹಾವೀರನ ಕುರಿತು [illegible] ದೇವತೆ ಆತನ ಸತ್ತ್ವವನ್ನು ಪರೀಕ್ಷಿಸಲೆಂದು ಆತನಿಗೆ [illegible] ಗಳೊಂದು ಕೂಡಿದಿಗೆ ಬರುತ್ತಿದ್ದಲ್ಲಿಗೆ ಬಂದು [illegible] ದೊಡ್ಡ ಹಾವು [illegible] ಆತನು ಕಟ್ಟದ ಮರವನ್ನು ಅದರಲು [illegible] ವರ್ಧಮಾನನು ಅದರ ಬೆಟ್ಟದ ಮೇಲೆ [illegible] ಹಾಗಾಗಿ ಅವನಿಗೆ ಮಹಾವೀರನೆಂಬ ಹೆಸರು ಬಂದಿತೆಂದು ಹೇಳುವರು. ವಿಜಯದವನಂತೆ ಅದಕ್ಕೆ ಬದನೆಕ್ಕಿ ಕಣ್ಣು ಮಹಾವೀರನೆಂ ಬಂಗಾರದಂತೆ ಅದಕ್ಕೆ ಬಡನಂತೆ !

ನಾಯ್ತು. ಬಂದ ಪೂರ್ವ ಜನ್ಮಗಳ ನೆನಪು [illegible] ಅಸಂಖ್ಯಾತವಾದ ಮನುಷ್ಯ-ಸ್ವರ್ಗ ಕಥೆ ನೆನೆದಿದ್ದನ್ನು [illegible], ವರ್ಧಮಾನನಿಗೆ* ತತ್ತ್ವಾಸಕ್ತಿಯುಂಟಾಯಿತು. ಆತ್ಮ ಬೇರೆ, ದೇಹ ಬೇರೆ. ಕರ್ಮನಿಮಿತ್ತವಾಗಿಯೆ ಆತ್ಮನು ಬಂಧನದಲ್ಲಿ ಸಿಲುಕುತ್ತದೆ. ಆತ್ಮಕ್ಕೆ ಆತ್ಮವೇ ಏನಾದರೆ ಸಹಾಯವಿಲ್ಲ. ಕರ್ಮವನ್ನು ತೀರ ಹಿಂಗಿಸದೆ ಬಿಟ್ಟಿಲ್ಲದೆ, ಮೋಕ್ಷ ಲಭಿಸದು -ಎಂದು ಆವನು ತಿಳಿಯಹತ್ತಿದನು. ಆತನು ಒಳಗೆಯೇ ಆಲೋಚನಾಪರನಾಗಿ-- ಸಂಸಾರವು ಅನಿತ್ಯ, ಆತ್ಮವೇ ಏಕಮಾತ್ರವಾದ ಸಂಶ್ರಯ, ಲೋಕಕ್ಕೆ ಆದಿಯಿಲ್ಲ, ಇದರ ರೀತಿಯೇ ತೀರ ಕುಟಿಲ, ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ಚಾರಿತ್ರ್ಯಗಳೇ ಸದ್ಧರ್ಮ---ಎಂದು ಆತನು ಏಕಚಿತ್ತದಿಂದ ಧ್ಯಾನಿಸಿದನು. ಸಮ್ಯಗ್‌ಜ್ಞಾನದ ಪ್ರಾಪ್ತಿಗಾಗಿ ಮನೆಬಿಟ್ಟು ಹೊರಹೊರಡಬೇಕೆಂದು ಇವನು ನಿಶ್ಚಯಿಸಿದನು. ಮತ್ತು ತನ್ನ ವಯಸ್ಸಿನ ೩೦ನೆಯ ವರ್ಷ ಅಭಿನಿಷ್ಕ್ರಮಣಕ್ಕೆ ತಾಯಿ ತಂದೆಗಳಿಂದ ಅನುಮತಿ ಪಡೆದನು. ಮನೆಯಿಂದ ಹೊರಹೊರಟ ಮಹಾವೀರನು ತನ್ನ ಆಭರಣಗಳನ್ನೆಲ್ಲ ಒಂದೊಂದಾಗಿ ಕಳಚಿಬಿಟ್ಟು, ವಸ್ತ್ರಗಳನ್ನು ಕಿತ್ತೊಗೆದು, ತೀರ ನಗ್ನಾವಸ್ಥೆಯನ್ನಪ್ಪಿಕೊಂಡು, ತಪೋನಿರತನಾಗಿ ಆರು ತಿಂಗಳುಗಳನ್ನು ಕಳೆದನು. ನೆರೆಹೊರೆಯ ರಾಜರು ಇವನನ್ನು ಆದರಿಸಿ ಉಣಬಡಿಸಿದಾಗ ಮಹಾವೀರನು ಬೊಗಸೆಯನ್ನೇ ಬಟ್ಟಲಾಗಿಟ್ಟುಕೊಂಡು ಬಡಿಸಿದುದನ್ನು ಉಂಡನು. ಈ ರೀತಿ ನಾಡಿನಿಂದ ನಾಡಿಗೆ ಕಾಡಿನಿಂದ ಕಾಡಿಗೆ ತೊಳಲಿ ಹೋಗುತ್ತಿದ್ದಾಗಲೂ ಧ್ಯಾನವನ್ನು ಮರೆಯಲೂ ಇಲ್ಲ, ತಪಶ್ಚರ್ಯೆಯನ್ನು ತೊರೆಯಲೂ ಇಲ್ಲ. ಮುಂದೆ ಉಜ್ಜಯಿನಿಯ ಸ್ಮಶಾನದಲ್ಲಿ ತಪಸ್ಸನ್ನಾಚರಿಸಿ ಮನಃಪರ್ಯಾಯಜ್ಞಾನ (ಪರರ ಇಂಗಿತವನ್ನು ತಿಳಿದುಕೊಳ್ಳುವ ಜ್ಞಾನ) ವನ್ನು ಪಡೆದನು. ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನಗಳು ಮಹಾವೀರನಿಗೆ ಮೊದಲೇ ಲಭಿಸಿದ್ದವು. ಈಗ ಮನಃಪರ್ಯಾಯಜ್ಞಾನ ಲಭಿಸಿತು. ಇನ್ನು ಲಭಿಸಬೇಕಾದ್ದು ಕೇವಲಜ್ಞಾನವೊಂದೇ. ಒಮ್ಮೆ ಜೃಂಭಕ ಎಂಬ ಗ್ರಾಮದಲ್ಲಿ

* ಮಹಾವೀರನು ಜನ್ಮಿಸಿದಾರಭ್ಯ ಕುಲದ ಸಂಪತ್ತು ಹೆಚ್ಚಾಗಹತ್ತಿದ್ದರಿಂದ ಇವನಿಗೆ ವರ್ಧಮಾನನೆಂದು ಹೆಸರಿಟ್ಟರು.

ಮಹಾವೀರ ಸ್ವಾಮಿಯು ತಂಗಿದಾಗ ಅನಂತಜ್ಞಾನ, ಅನಂತದರ್ಶನ, ಅನಂತ ವಿದ್ಯೆ, ಅನಂತ ಸುಖಗಳನ್ನು ಪಡೆದಾಗ ಕೇವಲ ಜ್ಞಾನವು ಪ್ರಾಪ್ತ-ವಾಯಿತು.

ಮಹಾವೀರನು ಊರಿಂದ ಊರಿಗೆ ಹೋಗುತ್ತ, ಧರ್ಮೋಪದೇಶ ನಡೆಸುತ್ತ ಕಾಲಕಳೆದನು. ಆಗಿನ ಕಾಲದಲ್ಲಿ ಪ್ರಸಿದ್ಧಿ ಪಡೆದ ಅಂಗದೇಶ, ವಿದೇಹ, ಮಗಧ, ಕೌಶಾಂಬಿ, ಶ್ರಾವಸ್ತಿ, ವೈಶಾಲಿಗಳಲ್ಲಿ ಸುತ್ತಾಡಿ ಅಲ್ಲಲ್ಲಿಯ ಅರಸರೆನಿಸಿದ ಬಿಂಬಿಸಾರ, (ಈತನ ಮಗ) ಅಜಾತಶತ್ರು, ಚೇಟಕ, ಶತಾನಿಕ, ವಾಸಿಷ್ಟ್ಸೇಣ, ಜೀವಂಧರ, ಅಭಯ, ಕುಮಾರ ಮೊದಲಾದವರಿಗೆ ಧರ್ಮ-ವನ್ನು ಉಪದೇಶಿಸುತ್ತ, ಮುಂದೆ ೩೦ ವರ್ಷ ಕಾಲಕಳೆದನು. ತನ್ನ ೭೨ನೆಯ ವರ್ಷ ಮಹಾವೀರ ಸ್ವಾಮಿಗೆ ಪಾವಾಪುರಿ ಎಂಬಲ್ಲಿ ತಂಗಿದಾಗ ನಿರ್ವಾಣಕ್ಕೆ ಸಂದನು.

ಸೃಷ್ಟಿಯ ನಿರ್ಮಾಣಕ್ಕೆ ಪ್ರಕೃತಿ, ಪುರುಷ ಎಂಬ ಎರಡು ತತ್ವಗಳು ಬೇಕು. ಜಗತ್ತು ದೇವರೊಬ್ಬನಿಂದ ನಿರ್ಮಾಣವಾಗಿಲ್ಲ. ಕರ್ಮಬಲದಿಂದ ಆತ್ಮವು ಪ್ರಕೃತಿಯಲ್ಲಿ ಬಂಧಿತವಾಗಿ ಜನ್ಮಾಂತರಗಳನ್ನು ತಾಳುವದು. ಈ ಬಂಧನದಿಂದ ಪಾರಾಗುವದೇ ಮೋಕ್ಷ.

ಜಗತ್ತಿನಲ್ಲಿ ಕಲ್ಲು, ಗಿಡ, ಮರ, ನೀರುಗಳಿಗೂ ಪ್ರಾಣವಿದೆ. ಕೈವಲ್ಯ ಸಾಧಕನು ಅಹಿಂಸೆಯಿಂದ ಕರ್ಮ ಮಾಡಬೇಕಲ್ಲದೆ, ಶ್ರದ್ಧೆ, ಭಕ್ತಿ, ಸತ್ಯಗಳಿಗೆ ಅಂಟಿಕೊಂಡು, ನಿಜವಾದ ಜ್ಞಾನ ಪಡೆಯಬೇಕು. ಅಂತಃಕರಣ ಶುದ್ಧಿಯಿಲ್ಲದೆ, ಮೋಕ್ಷ ಸಾಧಿಸದು. ತಪಸ್ಸು ನಡಿಸುತ್ತ ಅನ್ನನೀರುಗಳನ್ನು ಬಿಟ್ಟು ದೇಹ ಬಿಡುವದು ಯತಿಗಳಿಗೆ ಯೋಗ್ಯ.—ಮುಂತಾದವು ಜಿನ ಬೋಧೆಯ ಮುಖ್ಯಾಂಶಗಳಾಗಿದ್ದವು.

ಬೌದ್ಧ, ಜೈನ ಮತಗಳ ಎರಡು ಮುಖ್ಯ ಲಕ್ಷಣಗಳು ಒಡೆದುಕಾಣು ತಂತಹವಾಗಿವೆ. ಅವೆಂದರೆ:—

(೧) "ಸಂಘ"ಗಳ ನಿರ್ಮಾಣ.

(೨) ಎರಡೂ ಮತಗಳೂ ಆರ್ಯರ ವೇದ ಧರ್ಮದಿಂದ ಬೇರೆಯಾಗಿ ಹೋಗಿ ಬರುವಿಕೆ.

ಎರಡೂ ಮತಗಳು ಪ್ರಾರಂಭಗಳಲ್ಲಿ ವೈದಿಕ ಧರ್ಮದ ಪರಂಪರೆಯನ್ನು ತಮ್ಮ ರೀತಿಯಲ್ಲಿ ನಡೆಸಿಕೊಂಡು ಹಿಂದೂ ಬ್ರಹ್ಮ, ಶಿವ, ಮತ್ತು ಇತರ ವೈದಿಕ ದೇವತೆಗಳಿಗೂ ತಮ್ಮಲ್ಲಿ ಸ್ಥಾನ ಕೊಟ್ಟವು.

ಈ ಕಾಲಕ್ಕೆ ಬೇರೆ ಬೇರೆ ಮತಗಳನ್ನು ಪ್ರಚಾರ ಮಾಡುವ ಎಷ್ಟೋ ಸಂನ್ಯಾಸಿಗಳಿದ್ದರು. 'ಮಸ್ಕರಿ ಗೋಸಾಲ'ನೆಂಬ ಮುಂದಾಳುವಿನ ನೇತೃತ್ವದಲ್ಲಿ ಆಜೀವಿಕರೆಂಬ ಕಠಿಣ ಸಂನ್ಯಾಸಿಗಳು ತತ್ತ್ವೋಪದೇಶ ಮಾಡುತ್ತಿದ್ದರು. ಪೂರ್ಣವಾದಿಗಳೆಂಬ ನಾಸ್ತಿಕರ ತಂಡವು ಅಲ್ಲಲ್ಲಿ ಸಂಚರಿಸುತ್ತಿತ್ತು. ಪೂರ್ಣ ಕಾಶ್ಯಪನೆಂಬ ಬೋಧಕನು ಕರ್ಮಕ್ಕೆ ಗುಣ ದೋಷಗಳಿಲ್ಲವೆಂದು ವಾದಿಸಿದನು. ಎಷ್ಟೋ! ವೈದಿಕ ಮತಕ್ಕೆ ವಿರೋಧ ಮತಗಳು ಆಗಿನ ಕಾಲಕ್ಕೆ ಒತ್ತಿಕ್ಕೆ ಒಳಪಟ್ಟಿದ್ದವು!

ಅನೇಕ ಪಂಗಡಗಳ ತತ್ತ್ವೋಪದೇಶಕ್ಕೆ ಈಡಾದ ಆ ಕಾಲದ ಭಾರತೀಯರು ಆಧ್ಯಾತ್ಮದಲ್ಲಿ ಅನ್ವೇಷಣ ಬುದ್ಧಿಯುಳ್ಳವರಾಗಿದ್ದರೂ ಸುಖ ಸಂತೋಷಗಳಿಂದ ಕೂಡಿದ್ದರು.

ಈ ಕಾಲದಲ್ಲಿ ಮಗಧದ ಅರಸನಾದ ಅಜಾತ ಶತ್ರುವು ಬೌದ್ಧ ಮತವನ್ನು ಸ್ವೀಕರಿಸಿದನಷ್ಟೇ! ಅವನೇ ಪಾಟಲಿಪುತ್ರವೆಂಬ ಪಟ್ಟಣದ ನಿರ್ಮಾಪಕನು. ಇದು ಈ ನಂತರದ ಕಾಲದಲ್ಲಿ ಉತ್ತರದಲ್ಲಿ ಪ್ರಸಿದ್ಧ ಪಟ್ಟಣವಾಗಿ ಎಷ್ಟೋ ಕಾಲ ಮೆರೆಯಿತು. ಅಜಾತಶತ್ರುವಿನ ತಂದೆ ಬಿಂಬಿಸಾರನ ಕಾಲಕ್ಕೆ ಮಗಧ ದೇಶದ ರಾಜಧಾನಿಯು ರಾಜಗೃಹವಾಗಿದ್ದಿತು. ಹೀಗೆ ಬೆಳೆದ ಮಗಧ ರಾಜ್ಯವು ಕಾಲಗತಿಯಲ್ಲಿ ನಂದ ಅರಸರಿಂದ ಆಳಲ್ಪಡಹತ್ತಿತೆಂಬುದು ನೆನಪಿಡಬೇಕಾದ ಮಾತು.

ಅಭ್ಯಾಸಗಳು:

೧. ಬಿಟ್ಟ ಸ್ಥಳ ತುಂಬಿರಿ:

(ಅ) ಬುದ್ಧನು .... ಧರ್ಮವನ್ನು ಸ್ಥಾಪಿಸಿದನು.

(ಆ) ಬೌದ್ಧ ಧರ್ಮದ ಮುಖ್ಯ ತತ್ವಗಳು .... [illegible].

(ಇ) ಬುದ್ಧನ ತತ್ವಗಳು ... . ಜನರಿಗೆ ಬೋಧಿಸಿದನು.

(ಈ) ಬೌದ್ಧ ಧರ್ಮದ ಪ್ರಚಾರಕ್ಕಾಗಿ .. .. [illegible].

೨. [illegible] ತಿಳಿಸಿರಿ:

(ಅ) ಬುದ್ಧನ ಕಾಲದ ಜನರಿಗೆ ವೈದಿಕಧರ್ಮದ [illegible].

(ಆ) ಬುದ್ಧನು ಸಾಮ್ರಾಜ್ಯ [illegible].

(ಇ) ಮಹಾವೀರನ ತತ್ವಗಳಲ್ಲಿ ಅನೇಕ ವೈದಿಕ [illegible].

(ಈ) ಆಗಿನ ಕಾಲದ ಅನೇಕ ಮತಪ್ರಚಾರಕರಲ್ಲಿ ಬುದ್ಧನು ಶ್ರೇಷ್ಠನು

---

೪. ಮಗಧ ಸಾಮ್ರಾಜ್ಯ.

ಕ್ರಿ. ಪೂ. ನಾಲ್ಕನೆ ಶತಕದ ಉತ್ತರಾರ್ಧದಲ್ಲಿ ಜಗತ್ತಿನ ಮುಖ್ಯ ಮೂರು ಸಾಮ್ರಾಜ್ಯಗಳಲ್ಲಿ ಮಹತ್ವದ ಬದಲಾವಣೆಗಳಾದವು. ಗ್ರೀಸ ದೇಶದ ನಗರ ರಾಜ್ಯಗಳ ಅವನತಿ, ಮಧ್ಯ ಪ್ರಾಚ್ಯದಲ್ಲಿ ಮಹೋನ್ನತಿಯನ್ನು ಪಡೆದ ಪರ್ಶಿಯನ ರಾಜ್ಯದ ಪತನ, ಈ ಕಾಲದವರೆಗೂ ಚಿಕ್ಕ ಸ್ವರೂಪದಲ್ಲಿದ್ದ ಮಕೆದೋನ ರಾಜ್ಯ ವಿಸ್ತಾರ ಹೊಂದುತ್ತ ನಡೆದದ್ದು, ಭಾರತದಲ್ಲಿ ಘನವಾದ ಮೌರ್ಯ ಸಾಮ್ರಾಜ್ಯದ ಸ್ಥಾಪನೆ, ಈ ಘಟನೆಗಳು ಒಟ್ಟಾರೆ ೫೦ ವರ್ಷ ಕಾಲಾವಧಿಯಲ್ಲಿ ಜರುಗಿದರೂ ಒಂದರ ಹಿಂದೊಂದು ತ್ವರಿತವಾಗಿ ನಡೆದು ಹೋದವು.

ಸಿಕಂದರ ಅಥವಾ ಅಲೆಕ್ಝಾಂಡರನೆಂಬ ಗ್ರೀಸದೇಶದ ಅರಸನೊಬ್ಬನು

ಭಾರತಕ್ಕೆ ದಾಳಿಯಿಟ್ಟನೆಂದು ಹೇಳುವ ಕಾಲವಾದರೂ ಇದೆ. ಭಾರತದ ಸಂಪತ್ತಿನ ಸುದ್ದಿಯನ್ನು ಕೇಳಿ ಶಿಕಂದರನು ಮುಂದುವರಿದಿದ್ದರೂ, ಭಾರತೀಯರನ್ನು ಎದುರಿಸಿ ಸೆದೆಬಡಿದು ತನ್ನ ರಾಜ್ಯ ಮತ್ತು ಮೇಲ್ಮೆಗಳನ್ನು ಸ್ಥಾಪಿಸಲು, ಅವನು ಎಳಸಿದನೊ ಇಲ್ಲವೋ ಹೇಳಲಾಗದು. ಯಾಕೆಂದರೆ ಗ್ರೀಸದ ನೆರೆಯ ಸಾಮ್ರಾಜ್ಯವಾದ ಪರ್ಶಿಯಾ ದೇಶವು ಅವನ ಕಣ್ಣಿನಲ್ಲಿ ಒತ್ತುತ್ತಿತ್ತು. ಅದನ್ನು ಗೆದ್ದ ನಂತರ, ಅದರ ಕಡೆಯ ಶೀಮೆಯಾದ ಪಂಜಾಬದ ವರೆಗೆ ತನ್ನ ಧ್ವಜವನ್ನು ಮೆರೆಯಿಸಬೇಕೆಂದು ಅವನು ಆಶೆಪಟ್ಟನೇ



ಕಾಬೂಲದ ನೆರೆಯಲ್ಲಿ ಸಿಕ್ಕ ಕ್ರಿ. ಪೂ. ೩ ನೆಯ ಶತಕದಲ್ಲಿಯ
ತಲೆಬುರುಡೆಯ ಆಧಾರದ ಮೇಲಿಂದ ಸ್ಪಷ್ಟಮಾಡಿದ ಮುಖ.

ವಿನಾ ಭಾರತದ ವಿಜಯಕ್ಕಾಗಿಯೇ ಅವನು ಪೂರ್ವಕ್ಕೆ ಬಂದವನಲ್ಲ. ಪಂಜಾಬವು ಪರ್ಶಿಯಾ ರಾಜ್ಯಕ್ಕೆ ಒಳಪಟ್ಟು ಒಂದು ಸತ್ರಪಿಯಾಗಿತ್ತು. ಅಲ್ಲಿ ತನ್ನ ಅಧಿಪತ್ಯವನ್ನು ಸ್ಥಾಪಿಸಲು ಸಿಕಂದರನು ಆಶೆಪಟ್ಟನು. ಭಾರತದ ಮೇಲೆ ಇವನು ದೊಡ್ಡ ದಂಡಯಾತ್ರೆಯನ್ನು ಕೈಕೊಂಡನೆಂದು ಇಷ್ಟರಿಂದಲೇ ಊಹಿಸಲಾಗದು. ಏನಿದ್ದರೂ ಇವನು ಬ್ಯಾಕ್ಟ್ರಿಯಾದ ವರೆಗೆ ಸಾಗಿ ಬಂದು, ಅಲ್ಲಿ ಭಾರತದ ವೈಭವದ ಸುದ್ದಿಗಳನ್ನು ಕೇಳಿ, ಅದನ್ನು ಜಯಿಸಲು ಮುನ್ನುಗ್ಗಿದನೆಂದು ಹೇಳುವದುಂಟು. ಈಗಿನ ಬಲೂಚಿಸ್ತಾನದಲ್ಲಿ ಸುತ್ತಾಡಿ ತಕ್ಷಶಿಲೆಯ ರಾಜನಾದ ಅಂಭಿಯಿಂದ ಔತನ ಮರ್ಯಾದೆ ಪಡೆದನು. ನಂತರ

ಪಂಜಾಬಕ್ಕೆ ನುಗ್ಗಿ 'ಪೋರಸ' ಅಥವಾ 'ಪುರು' ಎಂಬ ಅಕ್ಷಿಂಪ ಅರಸನನ್ನು ಸೋಲಿಸಿದನು. ನಂತರ ಸಮುದ್ರ ಮಾರ್ಗವಾಗಿ ಮತ್ತು ಭೂಮಾರ್ಗವಾಗಿ ಇವನು ತನ್ನ ದೇಶಕ್ಕೆ ಮರಳಿದನು. ಇವನ ಬಾಹ್ಯೋದ್ಯೋಗಗಳಿಂದ ಭಾರತದ ಚರಿತ್ರೆಯ ಮೇಲ್ಮೈಯ ಅಂಶಗಳಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಗಳಾಗಲಿಲ್ಲ. ಆಫ್ರಿಕೆಯಿಂದ ಭಾರತದವರೆಗೆ ಹಬ್ಬಿದ ಇವನ ರಾಜ್ಯವನ್ನು ಮೂವರು ಮಂತ್ರಿಗಳು ಇವನ ಮರಣದ ನಂತರ ಆಳಹತ್ತಿದನು. ಪೂರ್ವ ದೇಶಗಳನ್ನು ನೋಡಿಕೊಳ್ಳಲು ಇವನೇ ಸೆಲ್ಯೂಕಸನೆಂಬವನನ್ನು ನೇಮಿಸಿದ್ದನು. ಸೆಲ್ಯೂಕಸನೇ ಬಹುಕಾಲ ಪೂರ್ವದಲ್ಲಿ ರಾಜ್ಯಭಾರ ನಡೆಸಿದನು.

ಈ ಕಾಲದಲ್ಲಿ ಮಗಧದಲ್ಲಿ ದೊಡ್ಡದೊಂದು ಕ್ರಾಂತಿ ನಡೆದು, ಘನವಾದ ಸಾಮ್ರಾಜ್ಯವೊಂದು ತಲೆಯೆತ್ತಿತು. ಮಗಧದಲ್ಲಿ ಈ ಮೊದಲ ಆಳುತ್ತಿದ್ದ ನಂದ ವಂಶದವರನ್ನು ನಿರ್ಮೂಲಗೊಳಿಸಿ, ಮೌರ್ಯ ವಂಶವು ಸ್ಥಾಪಿತವಾಯಿತು.

ಮೌರ್ಯ ವಂಶದ ಮೂಲ ಪುರುಷನು ಚಂದ್ರಗುಪ್ತನೆಂದು ಹೇಳಲಾಗುತ್ತದೆ. ಇವನು ನಂದ ಅರಸನ ದಾಸಿ ಪುತ್ರ. ಅಲೆಕ್ಝಾಂಡರನ ಮರಣದ ನಂತರ ನಡೆದ ಕೆಲವು ಗೊಂದಲಗಳು, ಪರಿಸ್ಥಿತಿಗಳು ಇವನಿಗೆ ಅನುಕೂಲವಾದವು. ... ಸೇನೆಯಿಂದ ಗ್ರೀಕ ಪಡೆಗಳನ್ನು ಹೊರಗಟ್ಟುವದರಲ್ಲಿ ಇವನು ಸಾಹಸ ತೋರಿದನು. ಜಯ ಸಾಧಿಸಿದ ಬಳಿಕ ಚಂದ್ರಗುಪ್ತನು ಮಗಧದ ಕಡೆಗೆ ಹೊರಳಿದನು. ಅಲ್ಲಿ ಆಳುತ್ತಿದ್ದ ನಂದರನ್ನು ಸೋಲಿಸಿ ತಾನು ಪಟ್ಟವನ್ನೇರಿದನು. ಚಾಣಕ್ಯನೆಂಬ ಬಡವ ಗುರುವು ಇವನಿಗೆ ಈ ಕೆಲಸದಲ್ಲಿ ಅನೇಕ ರೀತಿಯಿಂದ ಸಹಾಯ ಮಾಡಿದನು. ಚಂದ್ರಗುಪ್ತನು ಪಟ್ಟವೇರಿದ ನಂತರ ಇವನೇ ಬಹುಕಾಲ ಮಂತ್ರಿಪದವನ್ನು ನಡೆಸಿದನು. ಸ್ವಲ್ಪೇ ದಿನಗಳಲ್ಲಿ ಚಂದ್ರಗುಪ್ತನ ರಾಜ್ಯವು ಹಿಮಾಲಯದಿಂದ ವಿಂಧ್ಯಾದ್ರಿಯ ವರೆಗೆ, ಸಿಂಧು ನದಿಯಿಂದ ಬ್ರಹ್ಮಪುತ್ರಾ ನದಿಯ ವರೆಗೆ ಹಬ್ಬಿತು. ಚಂದ್ರಗುಪ್ತನ ಪ್ರಾಬಲ್ಯವು ಅರಸನಾದ ಬಳಿಕ ಕೆಲವೇ ದಿನಗಳಲ್ಲಿ ಕಂಡುಬಂದಿತು. ಕ್ರಿ. ಪೂ. ೩೦೫ರಲ್ಲಿ ಶಿಕಂದರನ ಪೂರ್ವ ದೇಶಗಳಲ್ಲಿಯ ಉತ್ತರಾಧಿಕಾರಿ ಸೆಲ್ಯೂಕಸನು ತನ್ನ ಗಡಿಗಳನ್ನು ವಿಸ್ತರಿಸಲು ಯತ್ನಿಸಿದನು. ಆದರೆ ಈ ಸಲ

ಇವನನ್ನು ಎದುರಿಸಿದವನು ಒಬ್ಬ ಪಂಜಾಬಿನ ಇತಿಹಾಸದಲ್ಲಿನ ಸತ್ಯಸನ್ಧ. ಅವನ ಯುದ್ಧ ರಂಗದಲ್ಲಿ ಧೀರನಾದ ಸಾಮ್ರಾಟ್ ಚಂದ್ರಗುಪ್ತನು. ಇವನು ಸೇನಾಪತಿಯಾಗಿ ಸೆಲ್ಯೂಕಸನಿಗೆ ಎದುರಾದನು. ಕೊನೆಗೆ ಕಾಳಗದಲ್ಲಿ ಗ್ರೀಕರು ಸೋಲಬೇಕಾಯಿತು. ಸಮಾಧಾನವಾಗಿ ಸೆಲ್ಯೂಕಸನು ತನ್ನ ಮಗಳನ್ನು ಚಂದ್ರಗುಪ್ತನಿಗೆ ಮದುವೆ ಮಾಡಿಕೊಡಬೇಕಾಯಿತು. ಮತ್ತು ಸಿಂಧೂ ನದಿಯ ಪಶ್ಚಿಮಕ್ಕೆ ಕಾಬೂಲಿನ ವರೆಗಿನ ಪ್ರಾಂತವನ್ನು ಚಂದ್ರಗುಪ್ತನಿಗೆ ಬಿಟ್ಟುಕೊಡಬೇಕಾಯಿತು. ಚಂದ್ರಗುಪ್ತನು ೨೪ ವರ್ಷಗಳ ವರೆಗೆ ರಾಜ್ಯಭಾರ ನಡೆಸಿದನು. ಅವನು ಕ್ರಿ. ಪೂ. ೨೯೮ರಲ್ಲಿ ಕಾಲವಾದ ಬಳಿಕ ಅವನ ಮಗನಾದ ಬಿಂದುಸಾರನಿಗೆ ಪಟ್ಟವು ಸಿಕ್ಕಿತು. ಇವನ ಕಾಲದಲ್ಲಿಯೂ ಮಗಧ ರಾಜ್ಯದ ವೈಭವಕ್ಕೆ ಇನ್ನೂ ಹೆಚ್ಚು ಕಳೆಕಟ್ಟಿತು.

ಚಂದ್ರಗುಪ್ತನ ಕಾಲದ ಸಮಾಜಸ್ಥಿತಿ, ಆಡಳಿತ ವಿಧಾನಗಳು ನಮಗೆ ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದು ಬರುತ್ತವೆ

ಆಗಿನ ಕಾಲಕ್ಕೆ ಸಮಾಜವು ಸೇರಿದ ಜನರು ಸುಖದಿಂದ ಜೀವಿಸಿದರು. ಸರಕಾರವು ಹಲವು ವಿಭಾಗಗಳಲ್ಲಿ ವಿಂಗಡಿಸಲ್ಪಟ್ಟಿತ್ತು. ಕಂದಾಯ, ಗಣಿ, ಅರಮನೆ, ಒಕ್ಕಲುತನ, ವ್ಯಾಪಾರ, ಸಮುದ್ರಯಾನ, ಅಬಕಾರಿ ಮುಂತಾದವುಗಳಾಗಿದ್ದವು. ಸಂದರ್ಭಗಳಿಗೆ ಕೆಲವೊಂದು ಭಾಗಗಳನ್ನು ಒಂದುಗೂಡಿಸಲಾಗುತ್ತಿತ್ತು. ಗ್ರಾಮ ನಗರಗಳ ಜೊತೆಗೆ ಮಾರ್ಗಗಳನ್ನು ಲಕ್ಷ್ಯಪೂರ್ವಕವಾಗಿ ರಚಿಸಲಾಗುತ್ತಿತ್ತು. ಆಗ ರಚಿಸಿದ ಒಂದು ಹೆದ್ದಾರಿಯು ಗುಂಟೆ ಮೊಗ್ಗಾಸ್ಥಾನದಿಂದ ಗ್ರೀಕ ರಾಜಧಾನಿಯು ಪ್ರವಾಸ ನಡೆಸ ದಾರಿ ಗುಂಪಿ ಅಲ್ಲಲ್ಲಿ ಸಿಗುವ ಊರುಗಳ ಸೂಚನೆಗಳನ್ನು ಬರೆದು ನಿಲ್ಲಿಸಿದರು. ಇವರ ದುರಸ್ತಿ ಮಾಡುವ ಕೆಲಸಗಳನ್ನು, ಬೇರೆ ಕೆಲವು ಚಿಕ್ಕ ಪುಟ್ಟ ಹಾದಿಗಳನ್ನು ಸರಕಾರವೇ ನೋಡಿಕೊಂಡಿತು. ಸರಕಾರದ ವೆಚ್ಚವನ್ನು ನೀಗಿಸಲಿಕ್ಕೆ ಪ್ರಜೆಗಳು ಕರ ತೆರಬೇಕಿತ್ತು. ಭೂಕಂದಾಯ, ಪಟ್ಟಿಯು ವೇತನದ ಕರ, ಸುಂಕ, ಅಬಕಾರಿ ಮುಂತಾದವು ಸರಕಾರಕ್ಕೆ ಹೇರಳ

ಆದಾಯವನ್ನು ತಂದುಕೊಟ್ಟಿತು. ಒಟ್ಟಿನಲ್ಲಿ ಇಂದು ಕಾಣುವ ಕರ ಪದ್ಧತಿಯು ಅಂದಿನಿಂದ ಸಾಗಿ ಬಂದಿದೆಯೆಂದು ಹೇಳಿದರೆ ತಪ್ಪಾಗದು.

ಈ ಕಾಲದ ರಾಜ್ಯಭಾರದ ಮತ್ತೊಂದು ವೈಶಿಷ್ಟ್ಯವೆಂದರೆ, ಬೇಹು-ಗಾರ ಪದ್ಧತಿ. ಭಾರತದಲ್ಲಿ ವೇದಕಾಲದಿಂದಲೂ ನಡೆದುಬಂದ ಈ ಪದ್ಧತಿಯು ಚಂದ್ರಗುಪ್ತನ ಕಾಲದಲ್ಲಿ ಸರಕಾರದ ಮಹತ್ವದ ಅಂಗವಾಗಿ ಪರಿಣಮಿಸಿತು. ಈ ಬೇಹುಗಾರರು ಕಪಾಲಿಸಿ, ಬೈರಾಗಿ, ಶಕುನ ಹೇಳುವವ, ವ್ಯಾಪಾರಿ, ಅಥವಾ ಒಕ್ಕಲಿಗನಂತೆ ವೇಷ ಧರಿಸಿಕೊಂಡು ದೇಶದಲ್ಲಿ ಸುತ್ತಾಡುವರು. ದೇಶದಾದ್ಯಂತ ನಡೆದ ಸಂಗತಿಗಳ ಸುದ್ದಿಗಳನ್ನು ಇವರು ಅರಸನಿಗೆ ತಿಳಿಸಿ, ರಾಷ್ಟ್ರದ ಸ್ವಾಸ್ಥ್ಯ ಕಾಯ್ದರು. ರಾಜಧಾನಿಯಾದ ಪಾಟಲೀಪುತ್ರದ ವ್ಯವಸ್ಥೆ ನಡೆಸಲು ಒಂದು ಸಮಿತಿಯಿತ್ತು. ಅದು ವಿವಿಧ ಉಪಸಮಿತಿಗಳಲ್ಲಿ ಕೆಲಸ ನಡೆಸಿ, ನಗರದ ಸ್ವಾಸ್ಥ್ಯ, ಸ್ವಚ್ಛತೆ ಮುಂತಾದವುಗಳನ್ನು ಕಾಯಿತು.

ಚಂದ್ರಗುಪ್ತನು ೨೪ ವರ್ಷಗಳ ವರೆಗೆ ಈ ರೀತಿ ರಾಜ್ಯವಾಳಿದ ಬಳಿಕ ಅವನ ರಾಜ್ಯದಲ್ಲಿ ಒಮ್ಮೆ ಬರಗಾಲ ತಲೆದೋರಿತು. ಆದ್ದರಿಂದ ಜೈನ ಸಾಧುಗಳ ಸಂಗಡ, ಭದ್ರಬಾಹು ಎಂಬ ಜೈನ ಮುನಿಗಳ ನೇತೃತ್ವದಲ್ಲಿ, ಕರ್ನಾಟಕಕ್ಕೆ ಪ್ರಯಾಣ ಬೆಳೆಸಿದನು. ಅಲ್ಲಿ ಈಗಿನ ಮೈಸೂರ ಸೀಮೆಗೆ ಸೇರಿದ ಶ್ರವಣಬೆಳಗೊಳ ಎಂಬಲ್ಲಿ ೧೨ ವರ್ಷ ತಪಸ್ಸು ನಡೆಸಿ ಅಲ್ಲಿಯೇ ಮೃತಿಪಟ್ಟನು. ಈ ರೀತಿ ಚಂದ್ರಗುಪ್ತನು ರಾಜಧಾನಿಯಿಂದ ದೂರ ಹೊರಡುವಾಗ ತನ್ನ ಮಗನಾದ ಬಿಂದುಸಾರನಿಗೆ ಪಟ್ಟಗಟ್ಟಿದನು. ಇವನು ತನ್ನ ರಾಜ್ಯಾಧಿಕಾರವನ್ನು ದಕ್ಷಿಣಕ್ಕೆ ಹಬ್ಬಿಸಿದನು. ಇವನ ಕಾಲಾವಧಿಯಲ್ಲಿ ಕಲಿಂಗ ದೇಶದ ಹೊರತಾಗಿ ಸಮಸ್ತ ಭಾರತವೇ ಮೌರ್ಯರ ಆಧಿಪತ್ಯಕ್ಕೆ ಒಳಗಾಗಿತ್ತು. ಮೌರ್ಯ ಸೈನ್ಯಗಳು ತಮಿಳ ನಾಡನ್ನು ಮುತ್ತಿದ ಸಂಗತಿಗಳು ತಮಿಳ ಸಾಹಿತ್ಯದಲ್ಲಿ ಕಂಡುಬರುತ್ತವೆ. ಒಟ್ಟಿನಲ್ಲಿ ಹೇಳುವದಾದರೆ, ಆಗಿನ ಕಾಲದ ಕಾಂಬೋಜ ಪ್ರಾಂತದಿಂದ ಕರ್ನಾಟಕದ ವರೆಗೆ ಇವನು ತನ್ನ ರಾಜ್ಯವನ್ನು ಹಬ್ಬಿಸಿದನು ಚಾಣಕ್ಯನು ಬಿಂದು-

ಸಾರನ ಆಳಿಕೆಯಲ್ಲಿ ಕಾಲವಶನಾದನು. ಇವನ ಕಾಲದಲ್ಲಿ ಪಶ್ಚಿಮದ ಯವನ ರಾಷ್ಟ್ರಗಳ ಸಂಗಡ ರಾಯಭಾರವು ನಡೆಯಿತು. ಮೆಗಾಸ್ತನೀಸನ ಬದಲು ಇವನ ಆಳಿಕೆಯಲ್ಲಿ ಡೀಮೇಕಸ್ ಎಂಬಾತನು ರಾಯಭಾರಿಯಾಗಿ ಬಂದನು. ಈಜಿಪ್ತ, ದೇಶದ ರಾಜನಾದ ಟಾಲೆಮಿ ಫಿಲೆಡೆಲ್ಫಸ್ ಎಂಬಾತನು ಇವನಲ್ಲಿಗೆ ತನ್ನ ರಾಯಭಾರಿಯನ್ನು ಕಳುಹಿಸಿದನು. ಸಿರಿಯದ ಅರಸನಾದ ಅಂಟಿಯೋಕಸ ಎಂಬಾತನಿಂದ ಬಿಂದುಸಾರನು ಅಂಜೀರ ಹಣ್ಣುಗಳನ್ನೂ ದ್ರಾಕ್ಷಿ ಮಧು(ಮದ್ಯ)ವನ್ನೂ ಮತ್ತು ಒಬ್ಬ ಗ್ರೀಕ ದಾರ್ಶನಿಕನನ್ನೂ ಅಪೇಕ್ಷಿಸಿದನಂತೆ. ಮೊದಲಿನ ಎರಡು ಪದಾರ್ಥಗಳನ್ನು ಕಳಿಸಿದನು. ಆದರೆ, ಗ್ರೀಕ ದಾರ್ಶನಿಕನನ್ನು ಕಳಿಸಲು ಬರಲಾರದೆಂದನಂತೆ.

ಇವನ ಕಾಲದಲ್ಲಿ ಉತ್ತರಾಪಥದ ತಕ್ಷಶಿಲೆಯಲ್ಲಿ ಜನರು ದಂಗೆ ಎದ್ದರು. ಅವರನ್ನು ಶಮನ ಮಾಡುವದಕ್ಕೆ ಬಿಂದುಸಾರನು ತನ್ನ ಮಗನಾದ ಅಶೋಕನನ್ನು ಕಳಿಸಿಕೊಟ್ಟನು. ಅಶೋಕನು ಹತ್ತರ ಬಂದೊಡನೆ ನಗರದವರು ಸಿಂಗರಿಸಿದವರಾಗಿ ಸ್ವಾಗತವನ್ನಿತ್ತುಕೊಂಡುಗೂಡಿ ಇವನ ಮೊರೆಯೊಕ್ಕರು. ನಾವು ಅಶೋಕನಿಗೆ, ಬಿಂದುಸಾರನಿಗೆ, ಮೌರ್ಯರಾಜ್ಯಾಧಿಕಾರಕ್ಕೆ ದ್ರೋಹಿಗಳಾಗಿಲ್ಲ. ಆದರೆ, ಅಲ್ಲಿಯ ಸ್ಥಳೀಕ ಅಧಿಕಾರಿಗೆ ದ್ರೋಹಿಗಳಾಗಿದ್ದೇವೆಂದು ಹೇಳಲು ಆ ದಂಗೆಯನ್ನು ಅಶೋಕನು ರಕ್ತಪಾತವಿಲ್ಲದೆ ಮುರಿಬಡಿದನು. ಇನ್ನೊಂದು ಸಲ ಇದೇ ಕಾರ್ಯಕ್ಕಾಗಿ ಇವನು ಅಲ್ಲಿಗೆ ಹೋದಾಗ್ಗೆ, ಇತ್ತ ಬಿಂದುಸಾರನು ತೀರಿಕೊಂಡನು.

ಮೌರ್ಯ ರಾಜ್ಯದ ಉತ್ಕರ್ಷ ಕಾಲ:—

ಅಶೋಕನು. (ಕ್ರಿ. ಪೂ. ೨೭೩—ಕ್ರಿ. ಪೂ. ೨೩೨)

ಬಿಂದುಸಾರನಿಗೆ ಸುಸೀಮ, ಅಶೋಕ, ವೀತಶೋಕರೆಂಬ ಮೂರು ಮಂದಿ ಮಕ್ಕಳಿದ್ದರು. ಅವರಲ್ಲಿ ಅಶೋಕನು ಬಿಂದುಸಾರನ ನಂತರ ಪಟ್ಟವೇರಿದನು. ಅಣ್ಣನಾದ ಸುಸೀಮನು ಯುದ್ಧದಲ್ಲಿ ಮರಣ ಹೊಂದಿದನೋ, ಏನೋ ? ಅಥವಾ ಬಿಂದುಸಾರನು ಇವನನ್ನೇ ಉತ್ತರಾಧಿಕಾರಿಯೆಂದು

ಗೊತ್ತು ಪಡಿಸಿದ್ದನೋ ? ಅಶೋಕನು ಪಟ್ಟವೇರಿ ಭಾರತದ ಆದರ್ಶ ರಾಜ ನೆಂದೆನಿಸಿ, ಪ್ರಪಂಚದಲ್ಲಿಯೇ ಅನುಪಮ ಅರಸನೆಂದು ಹೆಸರು ಪಡೆದನು. ಚಿಕ್ಕಂದಿನಲ್ಲಿ ಇವನು ಪ್ರಚಂಡನೂ, ದರ್ಪದ ಸ್ವಭಾವದವನೂ ಆಗಿದ್ದನು. ಆ ಕಾಲಕ್ಕೆ ತಂದೆಯಾದ ಬಿಂದುಸಾರನು ಇವನಿಗೆ ಉಜ್ಜಯಿನಿ ಮತ್ತು ತಕ್ಷಶಿಲೆ ಯ ಪ್ರಾಂತಾಧಿಕಾರಿಯ ಜಾಗೆಯಲ್ಲಿ ನೇಮಿಸಿದ್ದನು. ಅಲ್ಲಿಯ ಬಂಡು ಗಳನ್ನು ಒಳ್ಳೇ ಯುಕ್ತಿಗಳಿಂದ ಮುರಿದದ್ದಕ್ಕಾಗಿ ಇವನಿಗೆ ಪಟ್ಟವು ಸಲ್ಲಿತೆಂದು ಕಾಣುತ್ತದೆ. ರಾಜನೆನಿಸಿ ೪ ವರ್ಷಗಳನಂತರ ಇವನು ಪಟ್ಟವೇರಿದನು. ನಂತರ ಕೆಲವು ವರ್ಷಗಳವರೆಗೆ ಶಾಂತಮಯ ಆಡಳಿತೆಯು ಸಾಗಿತು.

ಕಲಿಂಗದ ಯುದ್ಧ (ಕ್ರಿ. ಪೂ. ೨೬೦):—

ಪಟ್ಟವೇರಿದ ಮೇಲೆ ಎಂಟನೆಯ ವರ್ಷದಲ್ಲಿ ಅಶೋಕನು ಕಲಿಂಗ ದೇಶದ ಮೇಲೆ ದಾಳಿ ಮಾಡಿದನು. ಈ ಅಭಿಯೋಗದ ಕಾರಣಗಳು ಸ್ಪಷ್ಟ ವಾಗಿ ತಿಳಿಯಲಾರವು. ಆಗಿನ ಕಲಿಂಗ ದೇಶದಲ್ಲಿ (ಮಹಾನದಿ ಮತ್ತು ಕೃಷ್ಣೆಗಳ ನಡುವಿನ ಪ್ರದೇಶ) ಒಂದು ಪ್ರಬಲ ರಾಜ್ಯವಿದ್ದಿತು. ಅವರ ಸೈನ್ಯ ದಲ್ಲಿ ಅನೇಕ ಆನೆಗಳಿದ್ದವು. ಮತ್ತು ಆಗಿನ ಕಾಲಕ್ಕೆ ಶ್ರೇಷ್ಠವೆನಿಸುವ ಹಡಗುಪಡೆಯು ಕಲಿಂಗದೇಶದ ವಶದಲ್ಲಿದ್ದಿತು. ಒಮ್ಮೆ ಮಗಧದ ನಂದ ರಿಂದ ಆಕ್ರಮಣವಾದ ಕಲಿಂಗವು ಅಶೋಕನ ಕಾಲಕ್ಕೆ ಸ್ವತಂತ್ರವಾಗಿದ್ದಿತು. ದೂರ ದೂರದ ರಾಷ್ಟ್ರಗಳನ್ನು ಗೆದ್ದು ಪಾದಾಕ್ರಾಂತ ಮಾಡುವ ಮೌರ್ಯ ಅಶೋಕನು ಕಲಿಂಗವು ಸ್ವತಂತ್ರವೆಂದು ಮೆರೆಯುವದನ್ನು ಹೇಗೆ ಸಹನ ಮಾಡಬೇಕು ? ಬಿಂದುಸಾರನು ದಕ್ಷಿಣಕ್ಕೆ ಸಾಗಿಬಂದಿದ್ದರೂ ಕಲಿಂಗವನ್ನು ಕೆಣಕಿದ್ದಿಲ್ಲ. ಯಾಕೆಂದರೆ ದಕ್ಷಿಣಕ್ಕೆ ಹೋಗುವ ಮಾರ್ಗವೇ ಕಲಿಂಗ ದೇಶ ದೊಳಗಿಂದ ಹಾಯ್ದಿತ್ತು. ಸಮುದ್ರದ ಮೇಲಿಂದಲೂ ಮತ್ತು ಭೂಮಿಯ ಮೇಲಿಂದಲೂ ಮೌರ್ಯ ಸೇನೆಗಳು ಕಲಿಂಗವನ್ನು ಸುತ್ತುವರಿದರೂ, ಕಲಿಂಗರು ಮೌರ್ಯರ ಬಲವನ್ನು ಒಪ್ಪಿಕೊಳ್ಳದಾದರು. ಈ ರೀತಿ ಗಂಭೀರ ಪರಿಸ್ಥಿತಿ ಯುತ್ಪನ್ನವಾಗುತ್ತ ನಡೆದು ಕೊನೆಗೊಮ್ಮೆ ಯುದ್ಧವು ಅನಿವಾರ್ಯವಾಯಿತು. ಘೋರ ಕಾಳಗವು ನಡೆದು ಒಂದೂವರೆ ಲಕ್ಷ ಕಲಿಂಗ ದಂಡಾಳುಗಳು ಯುದ್ಧ

ಕೈದಿಗಳಾದರು. ೧ ಲಕ್ಷ ಸೈನಿಕರು ಗಾಯಗೊಂಡರು. ಮುಂದೆ ಕೆಲ ದಿನಗಳಲ್ಲಿ ಗಾಯಗೊಂಡವರಲ್ಲಿ ಹೆಚ್ಚು ಗಾಯಾಳುಗಳು ಮರಣ ಹೊಂದಿದರು.

ಕಲಿಂಗ ಯುದ್ಧದಲ್ಲಿ ನಡೆದ ಹತ್ಯಾಕಾಂಡದಿಂದ ಅಶೋಕನ ಮನಸ್ಸು ಶೋಕ ಪೀಡಿತವಾಯಿತು. "ಸಂಹಾರದಿಂದ ಗೆಲುವೆಂಬುದು ಸಂಭವಿಸುವದಿಲ್ಲ. ನಿಜವಾದ ಗೆಲುವು ಹೃದಯ ಪರಿವರ್ತನೆಯಿಂದ" ಎಂದು ಇವನಿಗೆ ಎನಿಸಹತ್ತಿತು. ಹತ್ಯಾಕಾಂಡದಿಂದ ಸಾಧಿಸುವ ವಿಜಯವನ್ನು ನಾನು ಇನ್ನೆಂದೂ ಸಂಪಾದಿಸೆನೆಂದು ಅವನು ನಿಶ್ಚಯಗೊಳಿಸುತ್ತಿದ್ದನು. ತನ್ನ ಮಕ್ಕಳಿಗೂ, ಅಧಿಕಾರಿಗಳಿಗೂ ಹೊಸದಾಗಿ ಅಭಿಯೋಗಗಳನ್ನು ನಡೆಸಕೂಡದೆಂದು ಆಜ್ಞಾಪಿಸಿದನು. ಒಂದುವೇಳೆ ನಡೆಯುವದೇ ಆದರೆ ಅದು ಅಲ್ಪದಂಡದಿಂದಲೇ ಸಾಧಿಸಲ್ಪಡಬೇಕಲ್ಲದೆ, ಧರ್ಮದಿಂದ ಸಾಧಿಸಿದ ವಿಜಯವೇ ಮೇಲಾದ ವಿಜಯವೆಂದು ಇವನು ಸಾರಿಹೇಳಿದನು.

ಈ ಕಾಲಕ್ಕೆ ಇವನ ರಾಜ್ಯದ ಪೂರ್ವಪಶ್ಚಿಮಗಳಲ್ಲಿ ಸುದೂರದಲ್ಲಿದ್ದ ಯವನ ರಾಜ ಮತ್ತು ಭಾರತದ ದಕ್ಷಿಣಾಗ್ರದ ತಮಿಳು ರಾಜ್ಯಗಳಿಗೆ ಇವನು ಹೊಸ ರಾಯಭಾರಿಗಳನ್ನು ಕಳಿಸಿ ತನ್ನಿಂದ ಇನ್ನುಮೇಲೆ ದಂಡಯಾತ್ರೆಯ ಭೀತಿಯನ್ನು ಅವರು ಬಿಡಬೇಕೆಂದು ಆದೇಶಿಸಿದನು. ಮತ್ತು ತನ್ನಲ್ಲಿ ನೆರೆಹೊರೆಯ ರಾಜರು ಸರಿಸಂಬ ವ್ಯವಹಾರ ಸಾಗಿಸಬಹುದೆಂಬ ಭರವಸೆಯನ್ನು ಅಶೋಕನು ಕೊಟ್ಟನು. ದೇವರಿಗೆ ಪ್ರಿಯನಾದ ಅಶೋಕನು ಇನ್ನು ಕೇವಲ ಉಪಕಾರವನ್ನೇ ಮಾಡುವನು. ಕ್ಷಮಾಶಾಂತಿಗಳು ಅವನ ಮುಖ್ಯ ಮಂತ್ರಗಳಾಗುವವೆಂದು ಅವನು ಸಾರಿದನು. ಈ ಮಂತ್ರಗಳ ಪ್ರಭಾವವು ಮೇಲ್ತರಗತಿಯದಾಗಿತ್ತು. ಆದ್ದರಿಂದ—ಹಿಂಸೆಯಿಂದ ದೂರ ನಿಲ್ಲಿರಿ. ವ್ಯರ್ಥ ಪ್ರಾಣಹಾನಿ ಮಾಡಬೇಡಿರಿ. ದೇವರ ಕಣ್ಣಲ್ಲಿ ಎಲ್ಲರೂ ಸಮಾನರು. ಆದ್ದರಿಂದ ಒಬ್ಬ ರಾಜನ ಸಲುವಾಗಿ ಎಷ್ಟೋ ಜನ ಗೃಹಸ್ಥರ ಜೀವಗಳನ್ನು ಹರಣಮಾಡುವದು ಸರ್ವಥಾ ಯೋಗ್ಯವಲ್ಲ—ಇಂತುಮುಂತಾಗಿ ಅವನು ಬೋಧಿಸಿದನು. ಆದ್ದರಿಂದ ಈ ಮೊದಲಿನ ಮೌರ್ಯ ಅರಸರು ದಂಡನೀತಿಯನ್ನು ಅನುಸರಿಸುತ್ತಿದ್ದ ಪ್ರಸಂಗಗಳಲ್ಲಿ ಅಶೋಕನು ಕ್ಷಮಾ ನೀತಿಯನ್ನು ಬೋಧಿಸಿ

ದನು. ಈ ರೀತಿ ಅಶೋಕನು ತನ್ನ ರಾಜ್ಯದಲ್ಲಿ ಅಹಿಂಸೆಯ ಪ್ರಸಾರಮಾಡಲು ಪ್ರಾರಂಭಿಸಿದನು.

ಬೌದ್ಧಧರ್ಮಬೋಧೆಗಿಂತ ಮೊದಲು ನಮ್ಮ ಸಮಾಜದ ಸಾಮಾನ್ಯ ಜನರಲ್ಲಿ ಹಿಂಸೆ, ಕ್ರೂರತನ, ಕರ್ಕಶತನಗಳು ಹೆಚ್ಚಾಗಿ ನಡೆದುಬಂದಿದ್ದವು. ಅಶೋಕನು ತನ್ನ ಪರಿವಾರದವರು, ಅಂತಃಪುರದ ಅಡುಗೆಮನೆಯ ಜನರು, ಸೇವಕರು ನಡೆಸುತ್ತಿದ್ದ ಹಿಂಸೆಗಳನ್ನು ಮೊದಲು ಬಂದು ಮಾಡಿದನು.

ಈ ಮೊದಲು ಕ್ಷತ್ರಿಯ ಅರಸರು ವಿಹಾರಾರ್ಥವಾಗಿ ಮಾಡುತ್ತಿದ್ದ ಸಂಚಾರವನ್ನು ನಿಲ್ಲಿಸಿ ಅಶೋಕನು ಧರ್ಮಯಾತ್ರೆಯನ್ನು ಪ್ರಾರಂಭಿಸಿದನು. ಅಶೋಕನು ತನ್ನ ಪ್ರಜರಲ್ಲಿ ಸಾಮಾನ್ಯಮನುಷ್ಯನನ್ನು ಬಹಳ ಆದರದಿಂದ ಕಂಡನು. ಹೀಗೆ ಮಾಡುವದರಿಂದ ರಾಜ್ಯದಲ್ಲಿ ಇತರ ಅಧಿಕಾರಿಗಳು ಸಾಮಾನ್ಯ ಪ್ರಜನನ್ನು ಹಿಂಸಿಸಲಾರರೆಂದು ಇವನು ನಂಬಿದನು.

ಅರಸನು [illegible]ಜನಹಿತದತ್ತನೆಂದು, [illegible]ನು ಸಂಬದ್ಧರಿಂದ ಪ್ರಜಾರಂಜನೆಯ ಕಾರ್ಯಗಳಿಗೆ ಹಣ [illegible]ರಿಯಬೇಕೆಂದು ಇವನು ಸಾರಿದನು. ಸ್ವತಃ [illegible] ಧರ್ಮವನ್ನು [illegible]ಸಿದರೂ ಅಶೋಕನು ಸರ್ವಧರ್ಮಗಳ ಅನುಯಾಯಿಗಳಲ್ಲಿ ಸಮಾನ ಸ್ನೇಹಯುಕ್ತನಾದನು. ಮತ್ತು ಸರ್ವರೂ ಪರಸ್ಪರರಲ್ಲಿ ಸ್ನೇಹಯುಕ್ತರಾಗಿರಬೇಕೆಂದು ಇವನು ಅಪೇಕ್ಷೆಪಟ್ಟನು. ಈ ಕಾರಣದಿಂದ ಜನಸಾಮಾನ್ಯರಲ್ಲಿಯು ಧರ್ಮಬುದ್ಧಿಯನ್ನು ಯಥಾಯೋಗ್ಯವಾಗಿ ಬೆಳೆಸುವದಕ್ಕೆ ಧರ್ಮಮಹಾತ್ಮರೆಂಬ ಅಧಿಕಾರಿಗಳನ್ನು ನೇಮಿಸಿದನು. ಕೈದಿ, ಫಾಸಿ, ಮತ್ತು ಇತರ ಉಗ್ರಶಿಕ್ಷೆಗಳನ್ನು ಇವನು ಅಲ್ಲಗಳೆದನು. ಅಶೋಕನ ಅಧೀನ ರಾಷ್ಟ್ರಗಳಲ್ಲಿ ಧರ್ಮಮಹಾತ್ಮರು ನೇಮಕಹೊಂದಿದರು. ದಯಾ, ದಾನ, ಸತ್ಯ ಪಾಪಭೀರುತ್ವ ಮತ್ತು ಉಪಕಾರಗಳು ಅಶೋಕನ ಕಲ್ಪನೆಯಲ್ಲಿ ಧರ್ಮದ ಮೂಲತತ್ವಗಳೆನಿಸಿದವು. ಮಧ್ಯಏಶಿಯದವರೆಗೆ ಅಶೋಕನು ಹಾದಿಹೋಕರಿಗೆ ನೀರು ನೆಳಲುಗಳನ್ನು, ವಿಶ್ರಾಂತಿಗಾಗಿ ಧರ್ಮಶಾಲೆಗಳನ್ನೂ ನಿರ್ಮಿಸಿದನು.

ಧರ್ಮವಿಜಯ:

ತನ್ನ ದೇಶದಲ್ಲಿ ಧರ್ಮದ ಅಭಿವೃದ್ಧಿಯಾದ ಬಳಿಕ ಅಶೋಕನು ಇತರ ದೇಶಗಳ ಕಡೆಗೆ ಲಕ್ಷ್ಯ ಕೊಟ್ಟನು. ಆಳಿಕೆಯ ೧೮ನೆಯ ವರ್ಷದಲ್ಲಿ ಅಶೋಕನು ಪಾಟಲೀಪುತ್ರ (ಪಾಟ್ನಾ) ಅಶೋಕಾರಾಮವೆಂಬ ವಿಹಾರದಲ್ಲಿ ಬೌದ್ಧ ಭಿಕ್ಷುಸಂಘದ ಮೂರನೆಯ ಮಹಾಸಭೆಯನ್ನು ನಡೆಸಿದನು. ಅಧ್ಯಕ್ಷಸ್ಥಾನವನ್ನು ಮೊಗ್ಗಲಿಪುತ್ತ ತಿಸ್ಸನೆಂಬ ಧರ್ಮಗುರುವು ವಹಿಸಿದ್ದನು. ಮಹಾಸಭೆಯು ಮುಗಿದ ಬಳಿಕ ದೂರ ದೇಶಗಳಿಗೆ ಬೌದ್ಧ ತತ್ತ್ವಗಳನ್ನು ಮುಟ್ಟಿಸಲು ತಿಸ್ಸನು ಒಂದು ಯೋಜನೆಯನ್ನು ಸಿದ್ಧಗೊಳಿಸಿದನು.

ಇದರನ್ವಯ ಈಜಿಪ್ತ, ಸಿರಿಯಾ, ಗ್ರೀಸ, ಪ್ಯಾಲೆಸ್ಟೈನ ಮುಂತಾದ ದೇಶಗಳಿಗೆ ಧರ್ಮದೂತರು ಪಯಣ ಬೆಳೆಸಿದರು. ಇಂಥವರಲ್ಲಿ ಸಿಂಹಳಕ್ಕೆ ಹೋದ ಮಹೇಂದ್ರನೂ ಸಂಘಮಿತ್ರೆಯೂ ಬಹಳ ಹೆಸರು ಪಡೆದರು. ಸಂಘಮಿತ್ರೆ ಬುದ್ಧಗಯೆಯ ಬೋಧಿವೃಕ್ಷದ ಒಂದು ಟೊಂಗೆಯನ್ನು ಒಯ್ದು ಸಿಂಹಳದಲ್ಲಿ ನೆಟ್ಟಳು. (ಅದು ಇಂದಿಗೂ ಅಲ್ಲಿ ಸುಸ್ಥಿತಿಯಲ್ಲಿದ್ದುದು ಕಂಡುಬರುವದಂತೆ.) ಸಿಂಹಳದ ರಾಜನು ಬೌದ್ಧತತ್ತ್ವಗಳನ್ನು ಒಪ್ಪಿಕೊಂಡು ಅಷ್ಟಾಂಗ ಸಾಧನಗಳಂತೆ ನಡೆಯಲು ಒಪ್ಪಿಗೆ

ಬೌದ್ಧ ಮತ್ತು ವೈದಿಕ ತತ್ತ್ವಗಳಲ್ಲಿ ಭೇದವಿಲ್ಲವೇನೋ ಎಂಬಂತೆ ಅಶೋಕನು ನಡೆದುಕೊಂಡನು. ಇವನ ದಾನಧರ್ಮಗಳು ಬ್ರಾಹ್ಮಣ, ಆರ್ಹತ, ಮತ್ತು ಬೌದ್ಧ ಭಿಕ್ಷುಗಳಿಗೆಲ್ಲರಿಗೂ ಸಲ್ಲಿದವು. "ದೇವಾನಾಂ ಪ್ರಿಯಃ" ಎಂದು ತನ್ನನ್ನು ಕರೆದುಕೊಳ್ಳುವದರಲ್ಲಿ ಯಾವ ದೇವತೆಗಳು ? ಎಂಬ ಪ್ರಶ್ನೆಯು ಹುಟ್ಟುವದು. ವೈದಿಕ ಅಥವಾ ಆರ್ಯ ಮತದ ದೇವತೆಗಳನ್ನೇ ಅಶೋಕನು ನೆನೆಯುತ್ತಿದ್ದನೆಂಬುದನ್ನು ಬೇರೆ ಹೇಳಬೇಕಿಲ್ಲ. ಇಂದಿಗೂ ಬುದ್ಧನು ವಿಷ್ಣುವಿನ ಒಂದು ಅವತಾರವೆಂದು ಹಿಂದುಗಳು ಬಲವಾಗಿ ನಂಬುವರು. ಇವೆಲ್ಲ ಕಾರಣಗಳಿಂದ ಅಶೋಕನಲ್ಲಿ ಬುದ್ಧಮತ ವೈದಿಕ ಮತಗಳು ಹಿತಕರವಾಗಿ ಸಂಮಿಶ್ರವಾಗಿದ್ದವೆಂದು ಬೇರೆ

ಹೇಳಬೇಕಾಗಿಲ್ಲ.

ಭಾರತೀಯ ಸಂಸ್ಕೃತಿಸಂವರ್ಧನೆಗೆ ಅಶೋಕನು ನೀಡಿದ ನೆರವು ಅಪಾರವಾಗಿದೆ. ಇವನು ತನ್ನ ರಾಜ್ಯದಾದ್ಯಂತ ಸ್ತೂಪ, ಸ್ತಂಭಲೇಖ, ಶಿಲಾಲೇಖಗಳನ್ನು ರಚಿಸಿ ಭಾರತೀಯಸಂಸ್ಕೃತಿಯ ಏಕತ್ವವನ್ನು ಸಾರಿದನು. ಇವನ ಲೇಖನಗಳು, ತತ್ತ್ವಬೋಧೆ, ಉಪದೇಶಗಳು, ನಿಯಮಗಳಿಂದ ಕೂಡಿದ್ದು, ಅವುಗಳ ಭಾಷೆಯು ಮೃದುಮಧುರವಾಗಿದೆ. ಹೊಸದೊಂದು ಬರಹದ ಶೈಲಿಯನ್ನೇ ಇವು ವಾಙ್ಮಯದಲ್ಲಿ ಹುಟ್ಟಿಸಿದವು. ವಿದೇಶಿಯ ಅರಸರು ಮತ್ತು ವಿತಸ್ತೀತೀಯ ಅರಸರ ಕೂಡ ಗೆಳೆತನದಿಂದ ನಡೆದು ಭಾರತೀಯರ ಸ್ನೇಹದ ಗುರುತನ್ನು ಅವರಿಗೆ ಮಾಡಿಕೊಟ್ಟನು. ಬೌದ್ಧಧರ್ಮವನ್ನಪ್ಪಿಕೊಂಡಮೇಲೆ ಸಿಂಹಲವು ಭಾರತದ ಒಂದು ಭಾಗವಾಯಿತೆಂದು ಬೇರೆ ಹೇಳಬೇಕಾಗಿಲ್ಲ.

ಅಶೋಕನ ರಾಜ್ಯವು ನಾಲ್ಕು ಪ್ರಾಂತಗಳಾಗಿ ಭಾಗವಾಗಿತ್ತು. ಕಲಿಂಗ, ಅವಂತಿ, ಉತ್ತರಾಪಥ, ಮಧ್ಯದೇಶವೆಂಬವೇ ಆ ಭಾಗಗಳು. ತೋಸಾಲಿ, ಉಜ್ಜಯನಿ, ತಕ್ಷಶಿಲಾ, ಸುವರ್ಣಗಿರಿಗಳು ಅನುಕ್ರಮವಾಗಿ ಪ್ರಾಂತಗಳ ರಾಜಧಾನಿಗಳಾಗಿದ್ದವು. ಮಗಧವೂ ಗಂಗಾನದೀ ಕೊಳ್ಳದ ಮತ್ತಿಷ್ಟು ಭಾಗವೂ ಕೇಂದ್ರಸರಕಾರದ ಕೈಯಲ್ಲಿದ್ದಿತು. ಪ್ರಾಂತಗಳು ಜಿಲ್ಹೆಗಳಿಂದ ಕೂಡಿದ್ದವು. ಜಿಲ್ಹೆಯ ಆಡಳಿತೆಯು ಜಿಲ್ಹಾಧಿಕಾರಿಯಿಂದ ಸಾಗಿತು.

ಅಶೋಕನ ಕೊನೆಯ ದಿನಗಳು ಕಷ್ಟಕರವಾಗಿ ಹೋದವು. ಯಾಕೆಂದರೆ ಇವನು ಇಳಿವಯಸ್ಸಿನಲ್ಲಿ ತಿಷ್ಯರಕ್ಷಿತಾ ಎಂಬ ಚಿಕ್ಕ ಹೆಂಡತಿಯೊಬ್ಬಳನ್ನು ಮದುವೆಮಾಡಿಕೊಂಡಂತೆ ತೋರುವದು. ಪರಿಣಾಮವಾಗಿ, ಕುನಾಲನೆಂಬ ತನ್ನ ಮಗನನ್ನು ಇವನು ಪೀಡಿಸಬೇಕಾಗಿ ಬಂದಿತು. ಅಂತಃಪುರದಲ್ಲಿ ಮತ್ತು ಪ್ರಾಣಿವಧೆ ತಲೆದೋರಿತ್ತಿತು. ಕೋಪಿಸಿಕೊಂಡ ತಿಷ್ಯರಕ್ಷಿತೆಯು ಅಶೋಕನು ನೆಟ್ಟ ಬೋಧಿವೃಕ್ಷಗಳನ್ನೆಲ್ಲ ನೆಲಕ್ಕುರುಳಿಸಹತ್ತಿದಳು. ಬುದ್ಧಭಿಕ್ಷುಗಳ ಹಿಂಸೆನಡೆಯಿತು. ಅಶೋಕನ ಮರಣಾನಂತರ ಇವನ

ಮಕ್ಕಳು ಪಟ್ಟವೇರಿದರು. ಆದರೆ ಸಾಮ್ರಾಜ್ಯವು ಇಬ್ಭಾಗವಾದಂತೆ ತೋರುವದು. ಆದರೂ ಸಾಮ್ರಾಜ್ಯವು ಮುಂದೆ ೫೦ ವರ್ಷಗಳ ವರೆಗೆ ಹಾಗೂ ಹೀಗೂ ಸಾಗಿತು. ಮೌರ್ಯವಂಶದ ಕೊನೆಯ ಅರಸನಾದ ಬೃಹದ್ರಥನನ್ನು ಅವನ ಸೇನಾಪತಿಯಾಗಿದ್ದ ಪುಷ್ಯಮಿತ್ರನು ಕೊಲೆಮಾಡಿದಾಗ ಈ ವಂಶವು ಮುಗಿಯಿತು. ಭಾರತದಲ್ಲಿ ಪ್ರಥಮದಿಂದ ಹೊರದೇಶಗಳಲ್ಲಿ ಶಾಂತಿಮಯ ರಾಜ್ಯಭಾರ ಮತ್ತು ಧರ್ಮಬುದ್ಧಿಯ ಸಂದೇಶವನ್ನು ಬೀರಿದ ಮಗಧ ಸಾಮ್ರಾಜ್ಯವು ಮಾಯವಾಯಿತು.

ಮೌರ್ಯಕಾಲದ ಜನಜೀವನ:

ಆ ಕಾಲದ ಧರ್ಮಸೂತ್ರಕಾರರಾದ ಮನು ಮುಂತಾದವರೂ, ಅರ್ಥಶಾಸ್ತ್ರಕಾರನಾದ ಚಾಣಕ್ಯನೂ ಆಗಿನ ಕಾಲದ ಜನಜೀವನವನ್ನು ಯಥಾರ್ಥವಾಗಿ ಚಿತ್ರಿಸಿದ್ದಾರೆ. ವಾತ್ಸ್ಯಾಯನನ ಕಾಮಸೂತ್ರಗಳು ಆಗಿನ ಕಾಲದ ಜನರ ಸಾಮಾಜಿಕ ಜೀವನದ ಮೇಲೆ ಬೆಳಕನ್ನು ಬೀರುವವು. ಆಡಳಿತವು ರಾಜನಲ್ಲಿ ಕೇಂದ್ರೀಕೃತವಾಗಿದ್ದು ಯಾವ ಅಧಿಕಾರವೂ ರಾಜನ ಮುಖಾಂತರದಿಂದಲೇ ಹೊರಡುತ್ತಿದ್ದವು. ಜನರು ತಮ್ಮ ಉದ್ಯೋಗಗಳಲ್ಲಿ ತೊಡಗಿರುತ್ತಿದ್ದು, ಉದ್ಯೋಗಸ್ಥರು ತಮ್ಮ ಕಸಬಿನವರೊಂದು ಸಂಘವನ್ನು ಕಟ್ಟಿಕೊಂಡಿರುತ್ತಿದ್ದರು.

ಕಸಬುದಾರರಿಗೆ ಸಮಾಜದಲ್ಲಿ ಉನ್ನತವಾದ ಸ್ಥಾನಮಾನಗಳಿದ್ದವು. ರಾಜಕೀಯ ಮತ್ತು ಆರ್ಥಿಕ ಗುರಿಗಳನ್ನು ಕಸಬುದಾರರು ತಮ್ಮ ಸಂಘಗಳ ಮೂಲಕ ಸಾಧಿಸಿದರು. ಪಾಟಲೀಪುತ್ರದಲ್ಲಿ ಸಹ ಈಗಿನ ಕಾಲದ ಬೇಂಕಿನ ಆರ್ಥಿಕ ಸಾಮರ್ಥ್ಯವನ್ನು ಹೋಲುವಂತಹ ಸಂಘವಿದ್ದಿತೆಂದು ಹೇಳುತ್ತಾರೆ. ಸಾಮಾಜಿಕ ಹಿತದ ಕೆಲಸಗಳನ್ನು ಕೈಕೊಳ್ಳುವಾಗ ಜಾತಿಪದ್ಧತಿ ಅಷ್ಟೊಂದು ನಿಷ್ಠೆಯಿಂದ ಆಚರಿಸಲ್ಪಡಲಿಲ್ಲ. ಬಡಗಾರ, ಸೋನಾರ, ಜಲ ಯಂತ್ರ ಪ್ರವರ್ತಕ, ಗಣಿಯ ಕೆಲಸಗಾರ, ಉಪ್ಪಾರ, ಬಡಿಗ, ಕಂಚುಗಾರ, ನಾವಿಕ, ವಾಸ್ತುಶಿಲ್ಪಿ ಮುಂತಾದವರು ಆಗಿನ ಮುಖ್ಯ ಹೋರೆಯುವರಾಗಿದ್ದರು. ಒಳನಾಡು ಹೊರನಾಡುಗಳಲ್ಲಿ ವ್ಯಾಪಾರವು ಅಪಾರವಾಗಿ

ಬೆಳೆದು ಸಂಪತ್ತು ರಾಶಿರಾಶಿಯಾಗಿ ಕೂಡಬಿದ್ದಿತು. ಈಗಿನ ಕಾಲದ ಕ್ಯಾಪಿಟಾಲಿಸ್ಟ ಜನರನ್ನು ಹೋಲುವಂಥ ಶ್ರೀಮಂತ ವ್ಯಾಪಾರಸ್ಥರು ಆಗಿನ ಕಾಲದಲ್ಲಿ ಕಂಡುಬಂದರು. ರಾಜಧಾನಿಯಾದ ಪಾಟಲಿಪುತ್ರವು ವಿದ್ಯಾ ಸಂಸ್ಕೃತಿಗಳ ಕೇಂದ್ರವಾಗಿದ್ದಿತು. ಇಂತಹ ಇನ್ನಿತರ ಪಟ್ಟಣಗಳ ವಾಸವನ್ನೇ ಶ್ರೀಮಂತ ಜನರು ಅಪೇಕ್ಷಿಸಿದರು. ವಾತ್ಸ್ಯಾಯನನು ಆಗಿನ ನಾಗರಿಕನ ರೀತಿ-ನೀತಿ, ನಡಾವಳಿ, ವಿಲಾಸಗಳನ್ನು ಅಂದವಾಗಿ ಬಣ್ಣಿಸಿದ್ದಾನೆ. ಪಟ್ಟಣದ ವಾಸದಬಗ್ಗೆ ವಾತ್ಸ್ಯಾಯನನೂ ಬೌಧ್ಧಾಯನನೂ ಭಿನ್ನ ಅಭಿಪ್ರಾಯಗಳನ್ನು ತಳೆದಿದ್ದಾರೆ. ಆಗಿನ ನಾಗರಿಕರ ಮನೆಗಳಲ್ಲಿ ಎರಡು ಭಾಗಗಳು ಕಂಡು ಬಂದವು ಅವುಗಳಲ್ಲಿ ಒಂದು ಹೆಂಗಸರಿಗಾಗಿಯೂ, ಮತ್ತೊಂದು ಗಂಡಸರಿಗಾಗಿಯೂ ಮೀಸಲಾಗಿದ್ದವು. ಯುವಕ ಯುವತಿಯರ ಕೋಣೆಗಳು ಅಂದವಾಗಿ ಸಿಂಗರಿಸಲ್ಪಟ್ಟಿದ್ದವು. ಸಂಗೀತ, ವಾದ್ಯಗಳನ್ನು ತಗಲಿಸಿಡಲಿಕ್ಕೆ ಹಸ್ತಿದಂತದ ಗೂಟಗಳಿದ್ದವು. ನೆಲವು ರತ್ನಗಂಬಳಿಗಳಿಂದಲೂ ಜಮಖಾನೆಗಳಿಂದಲೂ ಕೂಡಿರುತ್ತಿದ್ದಿತು. ಕೋಣೆಯೆಲ್ಲ ಪುಷ್ಪಗಂಧ ಸುಗಂಧನಾದ ಎಣ್ಣೆಗಳ ಪರಿಮಳದಿಂದ ಸೂಸುತ್ತಿದ್ದಿತು. ಜಗುಲಿಯ ಮೇಲೆ ಸಾಕು ಪ್ರಾಣಿಗಳು ಕಂಡುಬಂದವು.

ನಾಗರಿಕನು ಪ್ರತಿದಿನ ಸುಗಂಧ ದ್ರವ್ಯಗಳನ್ನು ಪೂಸಿ ಜಳಕ ಮಾಡುತ್ತಿದ್ದನು. ನಂತರದಲ್ಲಿಯೂ ಇವನು ದೇಹಕ್ಕೆ ಪರಿಮಳವನ್ನು ತೊಡೆವನು. ಕಣ್ಣಿಗೆ ಕಾಡಿಗೆಯಿದ್ದಿತು. ತುಟಿಗಳು ಬಣ್ಣದಿಂದ ಅಂದ ಕಾಣುತ್ತಿದ್ದವು. ವಸ್ತ್ರಗಳಾದರೂ ಮಂದವಾದ ಸುಗಂಧವನ್ನು ಬೀರುತ್ತಿದ್ದವು. ಉತ್ತರೀಯವೆಂಬುದೊಂದು ವಸ್ತ್ರವು ಟೊಂಕದಿಂದ ಮೇಲಿನ ಭಾಗವನ್ನು ಮುಚ್ಚುತ್ತಿತ್ತು. ಇದು ಬಹುಶಃ ಬಣ್ಣ ಬಣ್ಣದ ರೇಶ್ಮೆ ವಸ್ತ್ರದಿಂದ ತಯಾರಾಗುತ್ತಿತ್ತು. ದಿನವೊಂದಕ್ಕೆ ನಾಗರಿಕನು ಎರಡು ಸಾರೆ ಊಟ ಮಾಡಿದನು. ಅಕ್ಕಿ, ಗೋದಿ, ತೈಲ ಮುಂತಾದವುಗಳಲ್ಲದೆ ಮಾಂಸವೂ ಆಹಾರಗಳಲ್ಲಿ ಒಂದಾಗಿತ್ತು. ಆಸವ ಮಧುಗಳೂ ಊಟದ ಅಂಶಗಳಾಗಿದ್ದವು. ಇದೆಲ್ಲ ಉಂಡುಟ್ಟು ಸುಖದಿಂದಿದ್ದ ಜನರ ಜೀವನವಾಗಿದ್ದರೂ, ಒಕ್ಕಲಿಗರೂ ಹಳ್ಳಿಗರೂ ಸುಖ ಶಾಂತಿ ಸಮಾಧಾನಗಳಿಂದ ನೆಮ್ಮದಿಯಾಗಿದ್ದರು. ವಸಂತೋತ್ಸವ, ಗಿರಿಪೂಜೆ

ಗಳೇ ಮೊದಲಾದ ಹಬ್ಬಗಳನ್ನು ನಡಿಸಲೂ ಜನರು ಆನಂದದಿಂದ ನೆರೆಯುತ್ತಿದ್ದರು. ದೀಪಾವಳಿಯೂ ಮೊದಲಿನಿಂದ ನಡೆದುಬಂದ ಹಬ್ಬವಾಗಿದೆ.

ನರ್ತನವು ಸಾಮಾನ್ಯ ಮನುಷ್ಯನಿಗೆ ಬಹು ನಯನಮನೋಹರವಾಗಿದ್ದಿತು. ಜೂಜಾಟವೂ ಒಂದಿಲ್ಲೊಂದು ತರದಿಂದ ಹಳ್ಳಿ ಪಟ್ಟಣಗಳಲ್ಲಿ ಕಂಡು ಬಂದಿತು. ಕಂದುಕ ಕ್ರೀಡೆ (ಒಂದು ತರದ ಚೆಂಡಿನಾಟ) ಯೆಂಬ ಒಂದು ಆಟವು ಆಗಿನ ಜನರಿಗೆ ಬಹು ಪ್ರಿಯವಾಗಿದ್ದಿತು. ಮೃಗಯಾ, ನೌಕಾ ಕ್ರೀಡೆ, ಈಜುವದು, ಗುರಿಹೊಡೆಯುವದು ಮುಂತಾದವುಗಳೂ ಸಾಮಾನ್ಯ ಮನುಷ್ಯನ ಅಪೇಕ್ಷೆಯ ಕೆಲಸಗಳಾಗಿದ್ದವು.

ಶಿಕ್ಷಣವು ಸಾರ್ವತ್ರಿಕವಾಗಿ ಹಬ್ಬಿದ್ದಿತು. ಧರ್ಮಶಾಸ್ತ್ರ, ವ್ಯಾಕರಣ, ಅರ್ಥಶಾಸ್ತ್ರ ಮತ್ತು ವಾರ್ತಾ ಮುಂತಾದ ವಿಷಯಗಳು ಸಾಮಾನ್ಯವಾಗಿ ಅಭ್ಯಾಸ ಮಾಡಲ್ಪಡುತ್ತಿದ್ದವು. ಸ್ತ್ರೀ ಶಿಕ್ಷಣವು ಅಷ್ಟೊಂದು ಮಹತ್ವ ಪಡೆದಂತೆ ತೋರುವದಿಲ್ಲ. ಧರ್ಮ ಕಾರ್ಯಗಳಲ್ಲಿ ನಿರತರಾಗಲಿಕ್ಕೆ ಪರಿವ್ರಾಜಕರಾಗಲಿಕ್ಕೂ ಅಸ್ಪದವಿದ್ದದರಿಂದ ಸ್ತ್ರೀ ಸ್ವಾತಂತ್ರ್ಯವು ಸಾಕಷ್ಟಿತ್ತೆಂದು ಕಂಡು ಬರುವದು. ಸಾಮಾನ್ಯ ಸ್ತ್ರೀಯು ಸೀರೆಯನ್ನು ಎಂದಿನಿಂದ ಧರಿಸಹತ್ತಿದಳೆಂದು ಹೇಳಲು ಬಾರದಿದ್ದರೂ ದಕ್ಷಿಣದಲ್ಲಿಯ ಸ್ತ್ರೀಯು ಸೀರೆಯನ್ನು ಅತಿ ಪ್ರಾಚೀನ ಕಾಲದಿಂದಲೂ (ಕ್ರಿ. ಶ. ೧ನೆಯ ಶತಮಾನದಿಂದ) ಧರಿಸುತ್ತ ಬಂದಳೆಂಬುವದಕ್ಕೆ ಆಧಾರಗಳಿವೆ. 'ಸ್ಕಂದ' 'ಶಿವ' ಮತ್ತಿತರ ಪುರಾಣೋಕ್ತ ದೇವತೆಗಳು ಆಗಿನ ಕಾಲದಲ್ಲಿ ಪೂಜೆಗೊಂಡವು. ಈ ಕಾಲದಲ್ಲಿ ಸಂಸ್ಕೃತ, ಪಾಲೀ ಭಾಷೆಗಳು ರಾಜಭಾಷೆಗಳಾಗಿದ್ದು, ವಾಙ್ಮಯವು ಬಹುಮುಖವಾಗಿ ಬೆಳೆಯಿತು.

ಅಭ್ಯಸನಗಳು:

೧. ಕೆಳಗೆ ಕಾಣಿಸಿದ ಮಹಾವ್ಯಕ್ತಿಗಳು ಯಾವ ಮಹಾಕಾರ್ಯ ಮಾಡಿದರೆಂಬುದನ್ನು ಹೆಸರುಗಳ ಕೆಳಗೆ ಕೊಟ್ಟ ಗೆರೆಯ ಮೇಲೆ ಬರೆಯಿರಿ.

ಚಾಣಕ್ಯ - ಚಂದ್ರಗುಪ್ತ, ಅಶೋಕ

ಮೊಗ್ಗಲಿ ಪುತ್ರ ತಿಷ್ಯ   ಮೆಗ್ಯಾಸ್ಥನೀಸ   ಸಂಘಮಿತ್ರೆ

೨. ಕೆಳಗೆ ಕೆಲವು ಅಪೂರ್ಣ ವಾಕ್ಯಗಳನ್ನು ಕೊಟ್ಟಿದೆ. ಐತಿಹಾಸಿಕ ಸಂಗತಿಗಳಿಗೆ ಅವು ಸರಿಹೋಗುವಂತೆ ಪೂರ್ತಿಗೊಳಿಸಿರಿ.

ಅ. ಚಂದ್ರಗುಪ್ತನು ಮೌರ್ಯ ವಂಶವನ್ನು ಸ್ಥಾಪಿ ....

ಬ. ಬಿಂದುಸಾರನು ಕಲಿಂಗ ದೇಶವನ್ನು ಗೆ..... ...

ಕ. ಅಶೋಕನು ಬೌದ್ಧ ಧರ್ಮವನ್ನು ಅ.. . ..

ಡ. ಅಶೋಕನ ಕೊನೆಯ ದಿನಗಳು ಸುಖವಾಗಿ ಹೋ . .

೩. ಪುರು ಮತ್ತು ಅಲೆಕ್ಝಾಂಡರ ಇವರ ನಡುವೆ ನಡೆದ ಸಂಭಾಷಣೆಯನ್ನು ಕಲ್ಪನೆಯಿಂದ ಬರೆಯಿರಿ.

---

೫. ಮಗಧ ಸಾಮ್ರಾಜ್ಯ.
(ಮುಂದೆ ಸಾಗಿದ್ದು.)

ಮೌರ್ಯವಂಶದ ಕೊನೆಯ ಅರಸು ಬೃಹದ್ರಥನನ್ನು ಪುಷ್ಯಮಿತ್ರನೆಂಬ ಆವನ ಸೇನಾಪತಿಯು ಕೊಲೆಮಾಡಿದನಷ್ಟೆ ! ನಂತರ ಪುಷ್ಯಮಿತ್ರನೇ ರಾಜ್ಯದ ಒಡೆಯನೆಂದು ಸಾರಿದನು. ಆದರೆ ಇವನು ರಾಜಚಿನ್ಹಗಳನ್ನು ಧರಿಸಿದಂತೆ ಕಾಣಲಿಲ್ಲ. 'ಸೇನಾಪತಿ ಪುಷ್ಯಮಿತ್ರನು' ಒಂದು ಅಶ್ವಮೇಧ ಯಾಗವನ್ನುಮಾಡಿ ತನ್ನ ಮೇಲ್ಮೆಯನ್ನು ತೋರ್ಪಡಿಸಿದನು. ಇವನ ನಂತರ ಇವನ ಮಗನಾದ ಅಗ್ನಿಮಿತ್ರನು ಪಟ್ಟವೇರಿದನು. ಕವಿಚಕ್ರವರ್ತಿಯಾದ ಕಾಳಿದಾಸನು ಇವನ ಓಲಗವನ್ನು ಅಲಂಕರಿಸಿದನೆಂದು ಹೇಳುವದುಂಟು. ಅಗ್ನಿಮಿತ್ರನ ನಂತರ ಪಟ್ಟವೇರಿದ ಅರಸರು ಹಾಗೂ ಹೀಗೂ ತಮ್ಮ ರಾಜ್ಯ

ವನ್ನು ಉತ್ತರ ಭಾರತದಲ್ಲಿ ಗಂಗಾನದಿಯ ದಂಡೆಗಳಲ್ಲಿ ಕಾಯ್ದುಕೊಂಡರು. ಕ್ರಿ. ಪೂ. ೧೭೧ರಲ್ಲಿ ಕಲಿಂಗ ದೇಶದ ಅರಸು ಪಾಟಲಿಪುತ್ರಕ್ಕೆ ನುಗ್ಗಿದನು. ಆಗ ಮಗಧದಲ್ಲಿ ಅಗ್ನಿಮಿತ್ರನ ಮಗ ಬೃಹಸ್ಪತಿಮಿತ್ರನೆಂಬಾತನು ರಾಜ್ಯಭಾರ ಮಾಡುತ್ತಿದ್ದನು. ಇವನು ವೈದಿಕಮತವನ್ನು ಪುರಸ್ಕರಿಸಿದನು. ಶಿವನು ಇವನಿಗೆ ಆರಾಧ್ಯದೇವತೆಯೆನಿಸಿದನು. ಪುಷ್ಯಮಿತ್ರನು ಬೌದ್ಧಮತದವರನ್ನು ಹೆಚ್ಚಾಗಿ ಪೀಡಿಸಿದನೆಂದು ಹೇಳುವದುಂಟು. ಅನೇಕ ಬೌದ್ಧಮಠಗಳನ್ನೂ ಬೌದ್ಧಭಿಕ್ಷುಗಳನ್ನೂ ನಾಶಮಾಡಿದಂತೆ ತೋರುವದು. ದಕ್ಷಿಣದಲ್ಲಿ ನರ್ಮದೆಯವರೆಗೂ ಉತ್ತರದಲ್ಲಿ ಪಂಜಾಬದವರೆಗೂ ಇವನ ರಾಜ್ಯವು ಪಸರಿಸಿತು. ಪ್ರಸಿದ್ಧ ವೈಯಾಕರಣಿಯಾದ ಪಾತಂಜಲಿಯು ಇವನ ಸಮಕಾಲೀನನೆಂದು ಹೇಳುತ್ತಾರೆ. ಇವನು ಪಾತಂಜಲಿಯ ಯೋಗಸೂತ್ರಗಳೆಂಬ ಮಹತ್ವದ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲದಲ್ಲಿ ಕಾರ್ಲೆಗುಹೆಗಳು ರಚಿತವಾದವು. ಅಜಂತೆಯ ಗುಹೆಗಳ ರಚನೆಗೆ ಪ್ರಾರಂಭವಾಯಿತು.

ಈ ಕಾಲಕ್ಕೆ ಮಿಲಿಂದರ ಎಂಬ ಬೌದ್ಧಮತೀಯ ರಾಜನು ತನ್ನ ರಾಜ್ಯವಾದ ಪಂಜಾಬದಿಂದ (ರಾಜಧಾನಿ ಶಿಯಾಲಕೋಟದಿಂದ) ನುಗ್ಗಿ ಬಂದು ಪುಷ್ಯಮಿತ್ರನ ರಾಜ್ಯದಲ್ಲಿ ಅಯೋಧ್ಯೆಯ ಪರ್ಯಂತ ಭೂಮಿಯನ್ನು ಹಾಳುಗೆಡಹಿದನು. ಸಿಂಧ, ರಜಪುತಾನಾ ಮುಂತಾದ ಪ್ರಾಂತಗಳನ್ನು ಗೆದ್ದುಕೊಂಡನಲ್ಲದೆ ಮಗಧದಮೇಲೆ ದೌಡುಮಾಡುವ ಸಾಹಸ ಕಾರ್ಯಕ್ಕೆ ಕೈಹಾಕುವಂತೆ ಹವಣಿಸಹತ್ತಿದನು. ಇದನ್ನು ಕಂಡು ಪುಷ್ಯಮಿತ್ರನು ಅವನ ಮೇಲೆ ಏರಿಹೋಗಿ ಅವನನ್ನು ಓಡಿಸಿದನು. ಮಿಲಿಂದರನನ್ನು ಸೋಲಿಸಿದ ನಂತರ ಸಾರ್ವಭೌಮಚಿಹ್ನವೆಂದು ಅಶ್ವಮೇಧವನ್ನು ಪುಷ್ಯಮಿತ್ರನು ನಡೆಸಿದನು. ಇವನಿಂದ ಪ್ರಾರಂಭವಾದ ವಂಶಕ್ಕೆ ಶುಂಗವಂಶವೆನ್ನುತ್ತಾರೆ.

ಶುಂಗವಂಶದ ಕೊನೆಯ ಅರಸನಾದ ರಾಜಾ ದೇವಭೂಮಿಯೆಂಬವನು ಬಹಳ ದುರ್ವ್ಯಸನಿಯಿದ್ದದರಿಂದ ವಾಸುದೇವನೆಂಬ ಹೆಸರಿನ ಸೇನಾಪತಿಯು ದೇವಭೂಮಿಯ ಕೊಲೆಮಾಡಿ ತಾನು ಪಟ್ಟವೇರಿದನು. ವಾಸುದೇವನು ಸ್ಥಾಪಿಸಿದ ವಂಶಕ್ಕೆ ಕಣ್ವವಂಶವೆಂಬ ಹೆಸರು. ಈ ವಂಶದ ರಾಜರು

ಸುಮಾರು ನಾಲ್ವತ್ತೈದು ವರ್ಷಕಾಲ ರಾಜ್ಯ ನಡೆಸಿದರು. ಈ ಕಾಲದಲ್ಲಿ ರಾಜ್ಯದಲ್ಲಿ ಎಲ್ಲಕಡೆಗಗೆ ಗೊಂದಲಮಯ ಪರಿಸ್ಥಿತಿಯುಂಟಾಯಿತು.

ಮೌರ್ಯರಾಜ್ಯವು ಮುಳುಗಿ ಹೋಗುತ್ತಿದ್ದ ಕಾಲದಲ್ಲಿ ಮಧ್ಯಏಶಿಯದಲ್ಲಿ ಕೆಲಮಟ್ಟಿಗೆ ಗೊಂದಲಮಯ ಪರಿಸ್ಥಿತಿಯುಂಟಾಗಿತ್ತು. ಯಾಕೆಂದರೆ ಚೀನಾಚಕ್ರವರ್ತಿಯು ಚೀನದೇಶದ ಉತ್ತರದಲ್ಲಿ ದೊಡ್ಡಗೋಡೆಯನ್ನು ಕಟ್ಟಿಸಿದಾಗ ಮಂಗೋಲ ಕುಲಗಳು ಚೀನದ ಆಶೆಯನ್ನು ಬಿಟ್ಟು ಬೇರೆ ಕಡೆಗೆ ವಿಸ್ತಾರವನ್ನು ಪಡೆಯಬೇಕಾಯಿತು. ಮಂಗೋಲ ಕುಲಗಳು ಕ್ರಿ. ಪೂ. ೧೬೦ರಲ್ಲಿ ತಮ್ಮತಮ್ಮೊಳಗೆ ಕಾದಾಡಿ ಹೂಣರು ಯೂ-ಚಿ ಜನರಿದ್ದಲ್ಲಿಗೆ ಒತ್ತಿಬಂದರು. ಯೂಚಿ ಜನರು ಶಕರಿದ್ದಲ್ಲಿಗೆ ನುಗ್ಗಿಬಂದು ಅವರ ಹುಲ್ಲುಗಾವಲುಗಳನ್ನು ಹಿಡಿದುಕೊಂಡರು. ಶಕರು ತಮ್ಮ ನೆಲೆಗಾಗಿ ಬ್ಯಾಕ್ಟ್ರಿಯಾ, ಅಫಗಾನಿಸ್ತಾನ, ಪಂಜಾಬಗಳನ್ನು ಸೇರಿದರು. ಶಕರು ಹಿಂದುಸ್ತಾನದ ಆರ್ಯರಿಂದಲೂ ಗ್ರೀಕರಿಂದಲೂ ಸುಧಾರಣೆ ಪಡೆದರು. ಭಾರತದ ವಾಯುವ್ಯಪ್ರಾಂತದಲ್ಲಿ ಇವರು ರಾಜ್ಯಕಟ್ಟಿಕೊಂಡು 'ಉತ್ತರ ಸತ್ರಪ'ರೆಂಬ ಹೆಸರು ಪಡೆದರು. ಏಕೆಂದರೆ ಇಲ್ಲಿ ಆಳುವ ಶಕರು ಮೂಲ ಶಕಸ್ಥಾನದಲ್ಲಿ ಆಳುತ್ತಿದ್ದ ತಮ್ಮ ಸ್ವಾಮಿಯ ಪ್ರತಿನಿಧಿಯೆನಿಸಿಕೊಂಡರು. ಶಕರನ್ನು ಮೂಲಸ್ಥಾನದಿಂದ ಓಡಿಸಿದ ಯೂ-ಚಿ ಜನರ ತಂಡವೊಂದಕ್ಕೆ ಕುಶಿ ಅಥವಾ ಕುಶಾನ ಕುಲದವರೆಂಬ ಹೆಸರು. ಇವರು ಪುರುಷಪುರ(ಪೇಶಾವರ)ವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಇವರಲ್ಲಿ ಕನಿಷ್ಕನೆಂಬ ಅರಸು ಬಹಳ ಪ್ರಸಿದ್ಧಿ ಪಡೆದನು.

ಕುಶಾನರೂ ಗ್ರೀಕರೂ ಭಾರತವನ್ನು ಗೆದ್ದು ತಮ್ಮ ಪ್ರಭಾವವನ್ನು ಇಲ್ಲಿ ಬೀರಿದರೆಂದು ಹೇಳಲು ಆಸ್ಪದವಿಲ್ಲ. ಈ ಮೊದಲೆ ಅಫಗಾನಿಸ್ತಾನದಲ್ಲಿ ನೆಲೆಯೂರಿದ ಕುಶಾನರು ಪುರುಷಪುರದಲ್ಲಿ ತಮ್ಮ ರಾಜಧಾನಿಯನ್ನು ನೆಲೆಸಿದರು. ಕನಿಷ್ಕನು ಭಾರತದ ಧರ್ಮ- ಬೌದ್ಧ ಧರ್ಮ– ವನ್ನೇ ಸ್ವೀಕರಿಸಿದನು. ಇದೇ ಮೇರೆಗೆ ಶಿಕಂದರನ ನಂತರ ಯಾವ ಗ್ರೀಕರಾಜನೂ ಭಾರತದಲ್ಲಿ ಕಾಲಿಡಲು ಬಯಸಲಿಲ್ಲ. ಗ್ರೀಕಜನಾಂಗವು ಸಾಮೂಹಿಕವಾಗಿ

ಭಾರತದಲ್ಲಿ ನೆಲೆಯೂರಿದ ಉದಾಹರಣೆಗಳಿಲ್ಲ. ಭಾರತದಲ್ಲಿ ಮೌರ್ಯಸಾಮ್ರಾಜ್ಯವು ಅಳಿದ ಬಳಿಕ ಗ್ರೀಕರು ೨೦೦ವರ್ಷಗಳ ವರೆಗೆ ಆಧಿಪತ್ಯ ನಡೆಸಿದರೆಂದು ಹೇಳುವದುಂಟು ಆದರೆ ಅದು ನಿರಾಧಾರವೆನಿಸುವದು.

ಕುಶಾನ ಅರಸರಲ್ಲಿ ಕನಿಷ್ಕ ಹಾವಿಷ್ಕ ಮತ್ತು ವಾಸುದೇವನೆಂಬ ಮೂವರು ರಾಜರು ಪ್ರಸಿದ್ಧಿ ಪಡೆದರು. ಒಂದು ಕಾಲಕ್ಕೆ ಈಗಿನ ಅಲಹಾಬಾದದ ವರೆಗೆ ಅವರ ರಾಜ್ಯವಿಸ್ತಾರವಾದರೂ, ಅದು ಕೂಡಲೆ ಮಾಯವಾಯಿತು. ಯಾಕೆಂದರೆ ಮಧ್ಯಭಾರತದ ಯೋಧೇಯ, ಅರ್ಜುನಾಯನ ಮತ್ತು ಮಾಳವರೆಂಬವರು ಕುಶಾನರನ್ನು ಹಾರಲಿಗೊತ್ತಿದರು. ಇದೇ ವೇಳೆಗೆ ಭಾರಶಿವರೆಂಬ ರಾಜರು ಈಗಿನ ಬುಂದೇಲಖಂಡದಲ್ಲಿ ಪ್ರಸಿದ್ಧಿ ಪಡೆದರು. ಇವರಲ್ಲಿ ಹಲವು ಅರಸರು ಅಶ್ವ ಮೇಧಗಳನ್ನು ಮಾಡಿದರು. ಇವರಲ್ಲಿ ವೀರಸೇನನೆಂಬಾತನು ಬಹಳ ಪ್ರಸಿದ್ಧಿ ಪಡೆದನು. ಕ್ರಿ. ಶ. ೨೮೪ರಲ್ಲಿ ನೆಲಿಸಿದ ವಾಕಾಟಕ ರಾಜರ ಕೂಡ ಇವರು ಸಂಬಂಧ ಪಟ್ಟಿದ್ದರು. ಇವರು 'ನಂದಿವರ್ಧನ'ವೆಂಬಲ್ಲಿ ತಮ್ಮ ರಾಜಧಾನಿಯನ್ನು ಮಾಡಿಕೊಂಡು ಮಧ್ಯ ಭಾರತದಲ್ಲಿ ಅಳಿದು ಹೋಗಹತ್ತಿದ ಆರ್ಯ ಸಂಸ್ಕೃತಿಯನ್ನು ಕಾಯ್ದರು. ಇವರಲ್ಲಿ ಪ್ರವರಸೇನನೆಂಬವನು ಬಹಳ ಹೆಸರಾದ ಅರಸು. ಇವನ ಮಗನಾದ ಸರ್ವಸೇನನು ಕರ್ನಾಟಕದ ವರೆಗೆ ತನ್ನ ಕಾಲು ಚಾಚಿದನು. ಈ ಕಾಲದ ರಾಜರೂ ಪ್ರಜೆರೂ, ಸಂಸ್ಕೃತ ಸಾಹಿತ್ಯದ ಬೆಳವಣಿಗೆಗೆ ನೆರವು ನೀಡಿದ್ದರಿಂದ ಈ ನಂತರ ಬಂದ ಗುಪ್ತ ಅರಸರ ಕಾಲವು 'ಸುವರ್ಣ ಯುಗ'ವೆಂದು ಹೆಸರಾಯಿತು.

ಇದೇ ಕಾಲಕ್ಕೆ ದಕ್ಷಿಣದಲ್ಲಿ ಚಿಕ್ಕ ದೊಡ್ಡ ರಾಜ್ಯಗಳು ಉದಯ ಹೊಂದಿದವು. ಅವುಗಳಲ್ಲಿ ಆಂಧ್ರರ ರಾಜ್ಯವು ಬಹಳ ಪ್ರಬಲವಾಯಿತು. ಅಶೋಕನ ಕಾಲದಲ್ಲಿ ಶಾತವಾಹನ ಮನೆತನದ ಅರಸು ಆಂಧ್ರ ರಾಜ್ಯದ ಪಟ್ಟವೇರಿದ್ದನು. ಸಿಮುಖ ಮತ್ತು ಅವನ ಮಗ ಶಾತಕರ್ಣಿಯೆಂಬವರು ಸ್ಥಾಪಿಸಿದ ವಂಶಜರಾದ ರಾಜರಿಗೆ ಶಾಲಿವಾಹನ, ಶಾತವಾಹನ ಅಥವಾ ಆಂಧ್ರಭೃತ್ಯರೆಂದು ಕರೆದರು. ಇವರ ರಾಜ್ಯವು ಪಶ್ಚಿಮಕ್ಕೆ ಪೈಠಣ ನಾಸಿಕದವರೆಗೆ ಮತ್ತು ಪೂರ್ವಕ್ಕೆ ಬಂಗಾಲ ಉಪಸಾಗರದವರೆಗೆ ಪಸರಿಸಿತು.

ಇವರಲ್ಲಿ ನೇಮುಖನೆಂಬ ರಾಜನೇ ಕಣ್ವವಂಶವನ್ನು ಪರಾಭವಗೊಳಿಸಿ ಮಗಧರಾಜ್ಯವನ್ನು ಪಾದಾಕ್ರಾಂತ ಮಾಡಿಕೊಂಡನು. ಈ ವೇಳೆಗೆ ಹೊರಗಿನಿಂದ ದಾಳಿಮಾಡುತ್ತಿದ್ದ ಶಕ, ಹೂಣ, ಯೂ-ಚಿ ಸಂಗಡ ಆಂಧ್ರಭೃತ್ಯರ ಗೌತಮಿಪುತ್ರ ಶಾಲಿವಾಹನ ಎಂಬಾತನು ದೊಡ್ಡ ಪರಾಕ್ರಮವನ್ನು ತೋರಿಸಿದನು. (ಕ್ರಿ. ಶ. ೧೦೬-೧೩೦) ಅವನು ಶಕರನ್ನು ತಡೆದು ನಿಲ್ಲಿಸಿ ಅವರನ್ನು ದುರ್ದಶೆಗೊಳಿಸಿದನು. ಗೌತಮಿ ಪುತ್ರ ಶಾಲಿವಾಹನನ ನಂತರ ಅವನ ಮಗನಾದ ರಾಜಾ ಪುಲುಮಾಯಿ ಪಟ್ಟವೇರಿದನು. ಆಗ ಶಕರ ಅರಸನು ರುದ್ರದಾಮನ್ ಎಂಬಾತನಿದ್ದನು. ಇವನ ಮಗಳನ್ನು ರಾಜಾ ಪುಲುಮಾಯಿಯು ಮದುವೆ ಮಾಡಿಕೊಂಡಿದ್ದನು. ಆದರೂ ಶಕ ಮತ್ತು ಆಂಧ್ರಭೃತ್ಯರಲ್ಲಿಯ ಜಗಳವು ನಿಲ್ಲಲಿಲ್ಲ. ಒಂದು ಸಲ ರುದ್ರದಾಮನು ಸ್ವತಃ ಆಂಧ್ರಭೃತ್ಯರ ಮೇಲೆ ಏರಿಬಂದನು. ಪುಲುಮಾಯಿಯು ಅವನನ್ನು ಹೊಡೆದೋಡಿಸಿ, ತನ್ನ ರಾಜ್ಯವನ್ನು ಹಬ್ಬಿಸಿದನು. ಇವನ ಮರಣದ ನಂತರ ಅಲ್ಲಲ್ಲಿದ್ದ ಲಷ್ಕರೀ ಅಧಿಕಾರಿಗಳು ಸ್ವತಂತ್ರರಾದರು.

ಗುಪ್ತ ವಂಶ:

ಮಗಧದ ನೆರೆಯಲ್ಲಿ ಲಿಛವಿಯೆಂಬದೊಂದು ಗಣರಾಜ್ಯವು ಮೊದಲಿನಿಂದಲೂ ಬೆಳೆದುಬಂದಿದ್ದಿತು. ಮಗಧ ಮತ್ತು ಈ ಗಣರಾಜ್ಯವು ಸಮಯ ಸಾಧಿಸಿದಾಗ ಒಂದನ್ನೊಂದು ಆಕ್ರಮಿಸುವ ಪರಿಪಾಠವೂ ಇತ್ತು. ಇಷ್ಟು ಬಲಾಢ್ಯವಾದ ಗಣರಾಜ್ಯದ ಕೂಡ ಯಾವ ದೇಶವಾದರೂ ಸಂಬಂಧ ಬೆಳೆಸಬಹುದಲ್ಲವೆ ? ಓರ್ವ ಲಿಛವಿಯ ಕನ್ಯೆಯನ್ನು ಮಗಧ ರಾಜಮನೆತನಕ್ಕೆ ಮದುವೆಮಾಡಿ ಕೊಡಲಾಯಿತು. ಅಂದಿನಿಂದ ಇವೆರಡು ಒಂದುಗೂಡುವ ಲಕ್ಷಣಗಳು ತೋರಹತ್ತಿದವು.

(ಗಣರಾಜ್ಯವೆಂದರೆ ಪ್ರಜಾಧಿಪತ್ಯದ ರಾಜ್ಯ. ಗಣರಾಜ್ಯವೆನಿಸಿದ ಲಿಛವಿಯು ಒಂದು ಸಾವಿರ ವರುಷಗಳವರೆಗೆ ಬಾಳಿತು. ಅದೇಕೆ ? ಭಾರತದಲ್ಲಿ ಪುರಾಣಕಾಲದಿಂದಲೂ ಗಣರಾಜ್ಯಗಳು ನಡೆದುಬಂದಿವೆ. ಬರಬರುತ್ತ

ಇವು ಆಕ್ರಮಿಸಲ್ಪಟ್ಟವು.)

ಲಿಛವಿರಾಜನ ಅಳಿಯನಾಗುವ ಸಂದರ್ಭವು ಚಂದ್ರಗುಪ್ತನೆಂಬ ಅರಸನಿಗೆ ದೊರೆಯಿತು. ಇವನ ತಂದೆ ಘಟೋತ್ಕಚನೆಂಬಾತನು ಈಗಿನ ಬನಾರಸದ ಹತ್ತಿರ ಒಬ್ಬ ಜಹಗೀರದಾರನಾಗಿದ್ದನು. ಕಾಲಗತಿಯಲ್ಲಿ ಇವನು ಪಾಟಲೀಪುತ್ರವನ್ನು ಅಪಹಾರಮಾಡಿದನು. ಮತ್ತು ತಾನೇ ಮಗಧದ ರಾಜನೆಂದು ಸಾರಿದನು. ಪ್ರಜರಿಗೆ ಪೀಡಾದವನಾದ್ದರಿಂದ ಅವನು ಯುದ್ಧಕ್ಕೆ ಹೋದಾಗ ಜನರು ದಂಗೆಯೆದ್ದು ಸಭೆಯಲ್ಲಿ ಅವನು ಅಯೋಗ್ಯನೆಂದು ನಿಷ್ಕರ್ಷಿಸಿದರು. ಆದ್ದರಿಂದ ಅವನು ತನ್ನ ಮಗ ಸಮುದ್ರಗುಪ್ತನಿಗೆ 'ಇನ್ನು ನೀನೇ ರಾಜ್ಯವನ್ನು ರೂಪಿಸಿಕೊಳ್ಳು" ಎಂದು ಹೇಳಿ ತೀರಿಕೊಂಡನು

ಚಂದ್ರಗುಪ್ತನ ಮಗನಾದ ಸಮುದ್ರಗುಪ್ತನು ಮುಗಿಲಾದ ಖ್ಯಾತಿಯನ್ನು ಪಡೆದನು. ಮತ್ತು ಮಗಧವನ್ನು ಮೊದಲಿನ ಸ್ಥಿತಿಗೆ ಒಯ್ದು ಬಿಟ್ಟನು. ಇವನು ದಕ್ಷಿಣಾಪ್ಥ ದಂಡಯಾತ್ರೆ ಗೈದನು, ಅದಲ್ಲದೆ ಗೆದ್ದನಲ್ಲದೆ, ಉತ್ತರದ ಸಮಸ್ತ ರಾಜರುಗಳ ಒಡೆಯನೆನಿಸಿದನು. ದಕ್ಷಿಣಾಪಥದಲ್ಲಿಯ ತ್ರೈರಾಜ್ಯ(ಪಾಂಡ್ಯ, ಚೋಳ, ಕೇರಳ)ಗಳು, ಸೌರಾಷ್ಟ್ರದ ಪಶ್ಚಿಮ ಕರಾವಳಿಗಳು ಇವನ ವಶವಾಗಲಿಲ್ಲ. ಇವನ ದಿಗ್ವಿಜಯದ ವಿವರಗಳನ್ನು ಅಲಹಾಬಾದದ ಸ್ತಂಭಲೇಖದಲ್ಲಿ ಕಾಣಿಸಲಾಗಿದೆ. ಅವುಗಳಲ್ಲಿ ಕಂಚಿಯ ವಿಷ್ಣುಗೋಪ, ಪೀಠಪುರದ ಮಹೇಂದ್ರ, ಎಂಬ ಹೆಸರುಗಳು ಬರುವದರಿಂದ ಇವನ ದಂಡಯಾತ್ರೆಯ ಬಗ್ಗೆ ಯಾವ ಶಂಕೆಯೂ ಬರುವಂತಿಲ್ಲ. ಆದರೆ ವಾಕಾಟಕರ ಮೂಲಪ್ರದೇಶವಾದ ವಿಂಧ್ಯದ ಸೆರೆಯ ದೇಶಗಳನ್ನು ಸಮುದ್ರಗುಪ್ತನು ಜಯಿಸಲು ಪ್ರಯತ್ನಿಸಲಿಲ್ಲ. ಅಲ್ಲದೆ ಗುಪ್ತಮನೆತನ ಮತ್ತು ವಾಕಾಟಕ ಮನೆತನಗಳ ನಡುವೆ ಶರೀರಸಂಬಂಧಗಳಾಗುತ್ತಿದ್ದುದನ್ನು ಕಂಡು ಇವೆರಡು ಮನೆತನಗಳು ಸೌಹಾರ್ದದಿಂದಿದ್ದವೆಂದು ಬಗೆಯಬಹುದಾಗಿದೆ.

ಸಮುದ್ರಗುಪ್ತನ ರಾಜ್ಯದಲ್ಲಿ ಪ್ರಾಂತಗಳೂ, ಮಾಂಡಲೀಕರೂ, ಗಡಿನಾಡಿನಲ್ಲಿಯ ಜಹಗೀರುದಾರರೂ ಒಳಗೊಂಡಿದ್ದರು. ಅರಸರಲ್ಲೆಲ್ಲ ತಾನು ಸರ್ವಶ್ರೇಷ್ಠನೆಂದು ತೋರಿಸಲು ಇವನು ಒಂದು ಅಶ್ವಮೇಧಯಾಗವನ್ನು

ಮಾಡಿದನು. ಆ ವೇಳೆಗೆ ಚಲಾವಣೆಗೆ ಬಂದ ನಾಣ್ಯಗಳಲ್ಲಿ ಕುದುರೆಯ ಚಿತ್ರವಿದ್ದುದೇ ಸಾಕ್ಷಿ. ದಂಡಯಾತ್ರೆ ಮುಗಿಸಿದ ಬಳಿಕ ಸಮುದ್ರಗುಪ್ತನು ರೋಮಕ ಸಮ್ರಾಟರಂತೆ ಬಿರುದುಗಳನ್ನೂ ಘನತೆಯ ಚಿಹ್ನೆಗಳನ್ನೂ ಧರಿಸಿದನು.

ಸಮುದ್ರಗುಪ್ತನು ಪರಾಕ್ರಮಿಯಿದ್ದಂತೆ ಲಲಿತ ಕಲೆಗಳ ಪ್ರಿಯನೂ ಆಹುದು. ಅವನು ಸ್ವತಃ ಕವಿಯಾಗಿದ್ದನು. ಪಂಡಿತರನ್ನು ತುಂಬಾ ಸಂತೋಷದಲ್ಲಿಟ್ಟನು. ಸಂಗೀತದ ಮೇಲಿದ್ದ ಮಮತೆಯ ಕುರುಹೆಂದು ಇವನು ತನ್ನ ನಾಣ್ಯಗಳ ಮೇಲೆ ವೀಣೆಯ ಚಿತ್ರ ತೆಗೆಸಿದನು. ತನ್ನ ಹೆಂಡತಿ ದತ್ತಾದೇವಿಯ ಚಿತ್ರವು ಬೇರೆ ಕೆಲವು ನಾಣ್ಯಗಳ ಮೇಲಿದೆ. ಇವನು ಕ್ರಿ. ಶ. ೩೪೦ರಿಂದ ೩೭೫ರ ವರೆಗೆ ರಾಜ್ಯಭಾರವಹಿಸಿ ಮರಣಹೊಂದಿದನು.

ತರುವಾಯ ರಾಮಗುಪ್ತನೆಂಬಾತನು ಪಟ್ಟವೇರಿದನು. ಆ ಕಾಲಕ್ಕೆ ಭಾರತದ ವಾಯುವ್ಯದಲ್ಲಿ ಶಕರು ತೋರಿಕೊಂಡು ಅನಾಹುತಗಳನ್ನು ನಡೆಸಿದ್ದರು. ಧೈರ್ಯದಾರ್ಢ್ಯ ತೋರಿ ಅವರನ್ನು ತಡೆಯಲು ರಾಮಗುಪ್ತನು ಪ್ರಯತ್ನಿಸಿದನು. ಈ ತರದ ಧೈರ್ಯಗೇಡಿತನವು ರಾಜ್ಯಭಾರದಲ್ಲಿ ನಡೆದೀತೆ ? ಕಾಲಗತಿಯಲ್ಲಿ ರಾಮಗುಪ್ತನು ಪಟ್ಟವನ್ನೇ ಕಳೆದುಕೊಂಡನು. ಸಮುದ್ರ-ಗುಪ್ತನ ಇನ್ನೊಬ್ಬ ಮಗನಾದ (ದತ್ತಾದೇವಿಯಿಂದ ಜನಿಸಿದ) ೨ನೆಯ ಚಂದ್ರಗುಪ್ತನು ಪಟ್ಟವೇರಿದನು. ಇವನಿಗೆ ಶಕಾರಿ ವಿಕ್ರಮಾದಿತ್ಯನೆಂದೂ ಕರೆಯಲಾಗುತ್ತದೆ. ಇವನು ಶಕರನ್ನು ಹೊರಗಟ್ಟಿ ಶಕಾರಿ ಎಂಬ ಬಿರುದನ್ನು ಸಾರ್ಥಕಮಾಡಿಕೊಂಡನು. ಇವನ ರಾಜ್ಯವು ಗುಜರಾಥ ಕಾಠೇವಾಡಗಳನ್ನೊಳಗೊಂಡು ಉತ್ತರ ಭಾರತದಲ್ಲೆಲ್ಲ ಹಬ್ಬಿತ್ತು.

ಇವನು ವಿಂಧ್ಯದ ನೆರೆಯಲ್ಲಿ ರಾಜಕೆನಿಸಿದ ವಾಕಾಟಕರ ರಾಜಪುತ್ರಿಯನ್ನು ಲಗ್ನಮಾಡಿಕೊಂಡನು. ಮತ್ತು ತನ್ನ ಮಗಳಾದ ಪ್ರಭಾವತಿಯೆಂಬಾಕೆಯನ್ನು ರುದ್ರಸೇನನೆಂಬ ವಾಕಾಟಕ ರಾಜಕುಮಾರನಿಗೆ ಕೊಟ್ಟಿದ್ದನು. ಈ ರೀತಿ ಬಲಗೊಂಡ ಚಂದ್ರಗುಪ್ತನು ಶಕ ಮುಂತಾದ ದಾಳಿಗಾರರನ್ನು ತಡೆಗಟ್ಟಲು ಸಮರ್ಥನಾದನು. ಇವನು ಕಲೆಗಳಿಗೆ ಪ್ರೋತ್ಸಾಹನ ಕೊಟ್ಟಂತೆ

ಲ್ಲದೆ ವಿಷ್ಣುಭಕ್ತನಾಗಿ ಪರಮ ಭಾಗವತನೆನಿಸಿದನು. ಪ್ರಾಚೀನ ವೈದಿಕ ಮತವನ್ನು ಇವನು ಪುನರುಜ್ಜೀವನಗೊಳಿಸಿದನಲ್ಲದೆ ಬೌದ್ಧ ಮತವನ್ನೊಳಗೊಂಡ ಹೊಸ ಹಿಂದೂ ಧರ್ಮವು ತಲೆಯೆತ್ತುವಂತೆ ಮಾಡಿದನು. ಇವನ ಆಸ್ಥಾನದಲ್ಲಿ ನವರತ್ನಗಳೆನಿಸಿದ ಅಮರ ಕಾಳಿದಾಸ ಮುಂತಾದವರೂ ಶ್ರೇಷ್ಠ ಶಿಲ್ಪಿಗಳೂ ಇದ್ದರು. ಇವನು ಉಜ್ಜಯಿನಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಆದರ್ಶರಾಜನೆಂದು ಕರೆಯಿಸಿಕೊಂಡು ಕ್ರಿ. ಶ. ೪೧೩ರಲ್ಲಿ ಕಾಲವಾದನು.

೨ನೇಯ ಚಂದ್ರಗುಪ್ತನ ಮಗ ೧ನೆಯ ಕುಮಾರಗುಪ್ತನು ನಾಲ್ವತ್ತು ವರ್ಷಗಳವರೆಗೆ ರಾಜ್ಯಭಾರವಮಾಡಿದನು. ಆದರೆ ಈ ವೇಳೆಗೆ ವಾಯುವ್ಯದಲ್ಲಿ ಹೂಣರು ಒತ್ತಿಬರುತ್ತಿದ್ದರಿಂದ ರಾಜ್ಯದಲ್ಲಿ ನೆಮ್ಮದಿ ಉಳಿಯಲಿಲ್ಲ. ಇವನ ನಂತರ ಬಂದ ಸ್ಕಂದಗುಪ್ತನ ಕಾಲದಲ್ಲಿಯೂ ಹೂಣರು ಒಳನುಗ್ಗುತ್ತಲೇ ಇದ್ದರು. ಇದೇ ಕಾಲಕ್ಕೆ ಹೂಣರು (ಹನ್ಸ್) ರೋಮನರನ್ನೂ ಮಧ್ಯಯುರೋಪದ ಇತರ ಸಂಸ್ಕೃತಿಗಳನ್ನೂ ನೂಕಿಗೊಂಡರಷ್ಟೆ ! ಆದರೆ ಗುಪ್ತ ಅರಸರ ಸುಸಜ್ಜಿತ ರಾಜ್ಯಭಾರದ ಮುಂದೆ ಹೂಣರ ಆಟ ನಡೆಯಲಿಲ್ಲ. ಸ್ಕಂದಗುಪ್ತನು ಎಷ್ಟೋಸಲ ಮಲಗಲು ನೆಲಸಿಗದೆ ಹೋರಾಡಬೇಕಾಯಿತು. ಈ ಹೋರಾಟದಲ್ಲಿ ಸ್ಕಂದಗುಪ್ತನು ಯಶಸ್ಸು ಪಡೆದನು. ಆದ್ದರಿಂದ ಭಾರತದ ಗಡಿಗಳಲ್ಲಿ ಒಳನುಗ್ಗಲಾರದ ಹೂಣ ಜನರು ಯುರೋಪದ ಪೂರ್ವದ ದೇಶಗಳಲ್ಲಿ ಉಪಟಳ ನಡೆಸಿದರೊ ಏನೋ ? ಮುಂದೆ ನೂರಾರು ವರ್ಷ ಪ್ರಯತ್ನ ನಡೆಸಿ ಭಾರತದ ಪ್ರವೇಶ ಪಡೆಯುವವರೊಳಗೆ ಹೂಣರ ರಭಸವು ಕಡಿಮೆಯಾಗಿದ್ದಿತೆಂದು ಹೇಳಬಹುದು. ಆದ್ದರಿಂದ ತೋರಮಾನ ಮತ್ತು ಮಿಹಿರಗುಲರಂಥ ದುಷ್ಟ ಹೂಣರು ಮಾಡಿದ ಕೆಲವು ಅನಾಹುತಗಳು ನಮ್ಮ ರಾಷ್ಟ್ರದ ಇತಿಹಾಸಪ್ರವಾಹವನ್ನು ತಡೆಗಟ್ಟಲಾರವು.

ಹೊರಗಿನ ದಾಳಿಗಳಿಂದ ಪಾರಾದ ಗುಪ್ತ ಅರಸರು ಸ್ಕಂದಗುಪ್ತನ ನಂತರ ಹುಟ್ಟಿದ ಕಲಹಗಳಿಂದ ಪೀಡಿತರಾದರು. ಕೆಲಕಾಲ ಯಾದವೀ ಕಲಹಗಳು ನಡೆದ ಬಳಿಕ ಬುದ್ಧಗುಪ್ತನೆಂಬ ಅರಸನ ಕಾಲದಲ್ಲಿ ಸಾಮ್ರಾಜ್ಯ

ಮತ್ತೆ ರೂಪಿಸಿತು. ನಂತರ ಅಲ್ಲಲ್ಲಿ ಗುಪ್ತರ ಮಾಂಡಲಿಕರು ಸ್ವತಂತ್ರ ರಾದರು. ಇಪ್ಪತ್ತಿಗೆ ಅಂದರೆ ಕ್ರಿ. ಶ. ೫೦೦ ರ ಸುಮಾರಕ್ಕೆ ತೋರ ಮಾನನೆಂಬ ಹೂಣಾಧಿಪನು ಮಾಳವ ಪ್ರಾಂತದವರೆಗೆ ನುಗ್ಗಿ ಬಂದು ರಾಜ್ಯ ಕಟ್ಟಿಕೊಂಡಿದ್ದನು. ಬರಬರುತ್ತ ಗುಪ್ತ ಸಾಮ್ರಾಜ್ಯ ಮಾಯ ವಾಯಿತು.

ಗುಪ್ತ ಅರಸರ ಕಾಲದ ಸಾಮಾನ್ಯ ವಿವೇಚನೆ:

ಆಡಳಿತ:—

ಗುಪ್ತ ಸಮ್ರಾಟರ ಕಾಲವು ಒಂದೂ ವೈಭವದ ಶಿಖರ ಪ್ರಾಯವಾದು ದೆಂದು ಹೇಳಬಹುದು. ಸಾಹಿತ್ಯ, ಧರ್ಮ, ಕಲಾ, ಶಿಲ್ಪ, ವಾಣಿಜ್ಯ ಮೊದ ಲಾದುಗಳ ದೃಷ್ಟಿಯಿಂದ ಈ ಕಾಲವು ಮಹದುನ್ನತಿಯ ಕಾಲವೆಂದು ಹೇಳು ತ್ತಾರೆ.

ಆಡಳಿತೆಯ ಕ್ರಮವನ್ನು ಗುಪ್ತ ಅರಸರು ಮೌರ್ಯರಿಂದಲೆ ಬರಮಾಡಿ ಕೊಂಡರು. ಇಪ್ಪತ್ತಿಗೆ ಅಧಿಕಾರಗಳು ಆನುವಂಶಿಕವಾಗಿ ಪರಿಣಮಿಸಹತ್ತಿ ದ್ದವು. ಮೌರ್ಯರಿಂದ ಕಲ್ಪಿಸಿದ ಮಹಾಮಾತ್ರರೆಂಬ ಅಧಿಕಾರಿಗಳು ಈ ಕಾಲ ದಲ್ಲಿಯೂ ಅಧಿಕಾರ ನಡೆಸಿದರು. ಈ ಪದವು ಅಧಿಕಾರಿಗಳ ಶ್ರೇಣಿಯಲ್ಲಿ ಎಲ್ಲಕ್ಕೂ ಮೇಲಿನ ಹುದ್ದೆಯು. ಕುಮಾರಾಮಾತ್ಯರೆಂಬ ಇನ್ನೊಂದು ತರದ ಅಧಿಕಾರಿಗಳು ಆಗ ಕೆಲಸ ನೋಡುತ್ತಿದ್ದರು. ಗ್ರಾಮಿಕರೆಂಬವರು ಈಗಿನ ಗ್ರಾಮಸ್ಥರ ಅಧಿಕಾರವನ್ನು ನೋಡಿಕೊಂಡರು. ಪ್ರಾಂತಗಳ ಆಡಳಿತೆಯು ಉಪರಿಕರೆಂಬ ಅಧಿಕಾರಿಗಳ ವಶಕ್ಕಿದ್ದಿತು.

ಕೇಂದ್ರದ ಆಡಳಿತೆಯು ಅರಸನ ಸ್ವಂತ ಆಡಳಿತಕ್ಕೆ ಒಳಪಟ್ಟಿದ್ದಿತು. ಇವನಿಗೆ ಸಲಹೆ ಕೊಡಲು ಒಂದು ಮಂತ್ರಿಮಂಡಲವಿದ್ದಿತು. ಈ ಮಂಡಲಕ್ಕೆ ಮುಖ್ಯ ಮಂತ್ರಿಯು ಮುಂದಾಳುವೆನಿಸಿದನು.

ಸಂಸ್ಕೃತದಲ್ಲಿ ಉತ್ತಮ ತರಗತಿಯ ಗ್ರಂಥಗಳು ಈ ಕಾಲಕ್ಕೆ ಬೆಳಕಿಗೆ

ಬಂದವು. ಈ ಮೊದಲು [illegible] ಯಿಂದ [illegible] ಬರೆಯಲ್ಪಟ್ಟ [illegible] ಆದ್ದರಿಂದ ಈ ಕಾಲದಲ್ಲಿ ಜಯವೆಂಬ ಹೆಸರಿನ ವೇದವ್ಯಾಸರ ಸಣ್ಣ ಗ್ರಂಥವೊಂದು ಭಾರತ, ಮಹಾಭಾರತವೆಂಬ ಹೆಸರು ಪಡೆದು, ಅಪಾರವಾದ ವಾಙ್ಮಯವಾಗಿ ಬೆಳೆಯಿತು. ಇಂದು ಮಹಾಭಾರತವು ಕೇವಲ ಒಂದು ಕಥೆಯ ನಿರೂಪಣೆಯಲ್ಲ. ಭಾರತೀಯ ಸಂಸ್ಕೃತಿಯ ನಿಧಿಯಿರುವುದೇ ಮಹಾಭಾರತ ಪುರಾಣವೆಂದು ಹೇಳಿದರೆ, ತಪ್ಪಾಗದು. ನೀತಿ, ರೀತಿ, ಧಾರ್ಮಿಕ ಕರ್ಮ, ಕರ್ತವ್ಯಗಳು ಇವರಲ್ಲಿ ಭಾರತೀಯರ ದೃಷ್ಟಿಯಿಂದ ಕೂಲಂಕಷವಾಗಿ ವಿವೇಚಿಸಲಾಗಿದೆ. ಇದರಂತೆ, ಭಾಗವತ, ಸ್ಕಂದ, ಶಿವ, ಮತ್ಸ್ಯ, ವಾಯು, ಬ್ರಹ್ಮಾಂಡ ಪುರಾಣಗಳು ರಾಷ್ಟ್ರೀಯ ದೃಷ್ಟಿಯಿಂದ ಪುನಃ ಬರೆಯಲ್ಪಟ್ಟವು. ಬೌದ್ಧ ಧರ್ಮವನ್ನು ಜನರ ಮನಸಿನಿಂದ ಹೊಡೆದೋಡಿಸುವದೇ ಈ ರಾಷ್ಟ್ರೀಯ ದೃಷ್ಟಿಯ ಮುಖ್ಯ ಗುರಿಯಾಗಿದ್ದಿತು. ಬುದ್ಧ ಜಾತಕಗಳಲ್ಲಿ ಕಂಡುಬರುವ ಮನೋಹರ ಮತ್ತು ನೀತಿಬೋಧಕ ಕಥೆಗಳು ಪುರಾಣಗಳಲ್ಲಿಯೂ ಇವೆ, ಎಂದು ತೋರಿಸುವದು ಮತ್ತೊಂದು ಕಾರಣವೆನಿಸಿತು. (ಬೌದ್ಧ ಧರ್ಮದ ಕೆಲವು ಗ್ರಂಥಗಳೂ ಈ ಕಾಲದಲ್ಲಿ ಹೊರಬಿದ್ದವು.) ವಿದೇಶೀಯರ ಜೀವಿತ ಗುಣಗಳು ಭಾರತೀಯರಲ್ಲಿ ಬೇರೂರದಂತೆ ನೋಡಿಕೊಳ್ಳುವದಕ್ಕಾದರೂ ಪುರಾಣಗಳನ್ನು ಪುನಃ ಬರೆಯುವ ಕಾರಣವೆನಿಸಿತು. ಗಣಿತ, ಜ್ಯೋತಿಷ್ಯ, ಸಂಗೀತ, ವೈದ್ಯ, ಧರ್ಮಶಾಸ್ತ್ರಗಳಾದರೂ ಈ ಕಾಲದಲ್ಲಿ [illegible].

ಭಾರತೀಯರು ಪುರಾಣೋಕ್ತ ದೇವತೆಗಳನ್ನು ಪೂಜಿಸಿ ದಶಾವತಾರಗಳನ್ನು ವಿಷ್ಣು ಸರ್ವೋತ್ತಮ ತತ್ವವನ್ನು ಮನ್ನಿಸಹತ್ತಿದರು. ಶ್ರೀಕೃಷ್ಣನು ಅನಾದ್ಯನಂತನಾದ ಪರಬ್ರಹ್ಮನ ಅವತಾರವೆಂಬ ಕಲ್ಪನೆಯು ಕ್ರಿ. ಶ. ಗಣೆಯ

ದಕ್ಷಿಣ ದಿಕ್ಕಿಗೆ ಜನಪ್ರಿಯವಾಗಿ ಹರಡಿತು. ಸಮುದ್ರಗುಪ್ತ ಮತ್ತು ಎರಡನೆ ಚಂದ್ರಗುಪ್ತರು ವೈಷ್ಣವರೇ ಆಗಿದ್ದರೆಂಬುದು ಸ್ಪಷ್ಟವಿದೆ.

ಕ್ರಿ. ಶ. ೧ನೆಯ ಶತಕದಿಂದಲೂ ಸಾಗಿದ ಸಮುದ್ರ ಸಾರಿಗೆಯಿಂದ ಸಿಯಾಂ ಕಾಂಬೋಡಿಯಾ, ಶಾಂತಿಸಾಗರದ ಇತರ ನಡುಗಡ್ಡೆಗಳಲ್ಲಿ ಹಿಂದೂರಾಜ್ಯಗಳು ಸ್ಥಾಪಿತವಾದವು. ಸಮುದ್ರ ಸಾರಿಗೆಯು ಕ್ರಿ. ಪೂ. ಬಹು ಶತಮಾನಗಳಿಂದಲೂ ನಡೆದುಬಂದರೂ ಭಾರತೀಯರು ಗುಳೆಹೋದ ಪ್ರಸಂಗಗಳು ಕ್ರಿ. ಶ. ೧ನೆಯ ಶತಕದಿಂದ ಕಂಡುಬರುತ್ತವೆ.

ಫಾ-ಹಿಯೇನ(ಫಾ-ಶಿಎನ್):—

ಇವನು ಎರಡನೆಯ ಚಂದ್ರಗುಪ್ತನ ಕಾಲಕ್ಕೆ ಭಾರತದ ಪ್ರವಾಸವನ್ನು ಕೈಕೊಂಡನು. ಫಾಹಿಯೇನನು ಉತ್ತರ ಚೀನದವನು. ಚಿಕ್ಕತನದಲ್ಲಿಯೆ ತಂದೆತಾಯಿಗಳು ಇವನನ್ನು ಒಂದು ಬೌದ್ಧ ಮಠಕ್ಕೆ ಒಪ್ಪಿಸಿ ಬಿಟ್ಟಿದ್ದರು. ದೊಡ್ಡವನಾದ ಮೇಲೆ ಭಿಕ್ಷುವಾದನು. ಇವನ ಕಾಲದಲ್ಲಿ ಚೀನದ ಮಠಗಳಲ್ಲಿಯ ಜೀವನವು ಅಷ್ಟು ನಿಯಮಬದ್ಧವಾಗಿದ್ದಿಲ್ಲ. ಫಾಹಿಯೇನನು ಭಾರತೀಯ ಭಿಕ್ಷುಗಳಂತೆ, ಭಾರತದ ಬೌದ್ಧ ಮಠಗಳಲ್ಲಿ 'ವಿನಯ'ವನ್ನನುಸರಿಸಿ ನಡೆಸಿದ ನಿಯಮಬದ್ಧ ಜೀವನದ ರೀತಿಯನ್ನು ತಿಳಿದುಕೊಂಡು ಅದರೊಡನೆ ಚೀನದ ಮಠಗಳಲ್ಲಿಯ ಜೀವನವನ್ನು ಹೋಲಿಸಿರಬಹುದು. ಇದರಿಂದ ಎಷ್ಟು ಕಂಡ ಕೊರತೆಗಳನ್ನು ಹೋಗಲಾಡಿಸಲು ಫಾಹಿಯೇನನು ಭಾರತಕ್ಕೆ ಬಂದು ಇಲ್ಲಿಯ ಮಠದ ಜೀವನದ ರೀತಿ ನೀತಿಗಳನ್ನು ಕಣ್ಣಾರೆ ಕಾಣಬೇಕೆಂದು ತವಕಿಸುತ್ತಿದ್ದನು. ಅವನ ಉದ್ದೇಶವು ವಿನಯವನ್ನು ಅಂದರೆ ಭಿಕ್ಷುಗಳು ಅನುಸರಿಸಬೇಕಾದ ನಿಯಮಾವಲಿಗಳನ್ನು ಮತ್ತು ಅವರ ವ್ಯವಹಾರವನ್ನು (ಬಳಕೆ) ಕಲಿಯುವದಿತ್ತು. ತನ್ನ ಗುರಿಯನ್ನು ಮುಟ್ಟಲು ತಾನು ಎಷ್ಟು ಕಷ್ಟಪಡಬೇಕಾಯಿತೆಂಬುದನ್ನು ಕೂಡ ಲೆಕ್ಕಿಸಲಿಲ್ಲ. ಕ್ರಿ. ಶ. ೪೦೦ರಲ್ಲಿ ನಿಜವಾಗಿ ಏಶಿಯದ ಇತಿಹಾಸದಲ್ಲಿ ಒಂದು ದೊಡ್ಡ ಕಾಲವು. ಯಾಕೆಂದರೆ, ವಿದ್ಯೆ ಹಾಗೂ ಸಂಸ್ಕೃತಿಗಳ ಕೇಂದ್ರವಾದ ಭಾರತಕ್ಕೆ ಚೀನದ ಯುವಕರ ತಂಡವೊಂದು ಹೊರಟಿತು. ಈ ಸಂಕ್ರಾಂತಿಯ ಮುಂದಾಳು ಫಾಹಿಯಾನ

ನಾಗಿದ್ದನು. ಇವನು ಕ್ರಿ. ಶ. ೩೯೯ರಲ್ಲಿ ಚೀನದಿಂದ ಹೊರಟು ೧೫ ವರ್ಷಗಳವರೆಗೆ ಪರದೇಶಗಳ ಸಂಚಾರ ಮಾಡಿ ಕ್ರಿ. ಶ. ೪೧೪ರಲ್ಲಿ ತಿರುಗಿ ಚೀನಕ್ಕೆ ಹೋದನು.

ಚೀನದ ಈ ಮಹಾಯಾತ್ರಿಕನು ಹೇಳಕೂಡದಷ್ಟು ಕಷ್ಟಗಳನ್ನನುಭವಿಸುತ್ತ ಗೋಬಿಯ ಉಸುಕಿನ ಬಯಲನ್ನು ದಾಟಿ ತುರ್ಕಸ್ತಾನ ದೇಶಕ್ಕೆ ಬಂದು ಮುಟ್ಟಿದನು. ವ್ಯಾಪಾರಸ್ಥರ ತಂಡದ ದಾರಿ ಕಾಯುತ್ತ ಅವನು ಕೆಲ ದಿನ ಅಲ್ಲಿರಬೇಕಾಯಿತು. ಮತ್ತೆ ೩೫ ದಿನಗಳವರೆಗೆ ಸಂಕಟಮಯವಾದ ಪ್ರವಾಸ ಮಾಡಿ ತಕ್ಲಾಮಕಾನದ ಉಸುಕಿನ ಬಯಲನ್ನು ದಾಟಿ ಖೋತಾನ ಪಟ್ಟಣಕ್ಕೆ ಬಂದನು. ಫಾ-ಹಿಯೇನನು ಜಲಮಾರ್ಗವನ್ನು ಬಿಟ್ಟು ಭೂಮಾರ್ಗ ಪ್ರವಾಸವನ್ನೇ ಯಾಕೆ ಕೈಕೊಂಡನೆಂಬ ಪ್ರಶ್ನೆಗೆ ನಾವು ಉತ್ತರ ಕೊಡಬೇಕಾಗುತ್ತದೆ. ಇವನ ಕಾಲದಲ್ಲಿ ಭಾರತ ಮತ್ತು ಚೀನ ದೇಶಗಳ ನಡುವೆ ಸಮುದ್ರ ಮಾರ್ಗವಾಗಿ ವ್ಯಾಪಾರವು ಸಾಕಷ್ಟು ಬೆಳೆದಿದ್ದಿಲ್ಲವೆಂದು ತೋರಿ ಹೇಳಿದೆ. ಇದಲ್ಲದೆ ಚೀನದ ಕಾನ್-ಸೂ ಪ್ರಾಂತದಿಂದ ಭಾರತದ ಉತ್ತರ ಸೀಮೆಯವರೆಗೆ ಭಾರತೀಯರು ಎಷ್ಟೋ ಕಡೆಗಳಲ್ಲಿ ಒಕ್ಕಲಾಗಿದ್ದರು. ಈಗ ಇದನ್ನು ನಾವು "ಬೃಹದ್ಭಾರತ" (ವಿಶಾಲಭಾರತ) ಎನ್ನುತ್ತೇವೆ. ಈ ಕಡೆಗಳಲ್ಲಿ ಬೌದ್ಧ ಧರ್ಮವು ಬಹಳವಾಗಿ ಹಬ್ಬಿತ್ತು. ಈ ಊರುಗಳೆಲ್ಲ ೮ನೆಯ ಶತಕದವರೆಗೆ ಪೂರ್ಣವಾಗಿ ಭಾರತೀಯ ದೇಶಗಳಾಗಿದ್ದವು. ಕನಿಷ್ಕನು ಖೋತಾನದ ರಾಜನಾದ ವಿಜಯಸಿಂಹನ ಮಗನಾದ ವಿಜಯಕೀರ್ತಿಯನ್ನು ಕೂಡಿಕೊಂಡು ಭಾರತ ವರ್ಷದ ಮೇಲೆ ದಂಡೆತ್ತಿ ಬಂದನು. ಅನುಶ್ರುತಿಯ ಮತದಂತೆ ಮೊತ್ತ ಮೊದಲು ಸಾಮ್ರಾಟನಾದ ಅಶೋಕನ ಕಾಲದಲ್ಲಿ ಭಾರತೀಯರ ಒಂದು ಸಂಗಡವು ಖೋತಾನದಲ್ಲಿ ಬಂದು ನೆಲೆಸಿತು. ಅಂದರೆ ಕನಿಷ್ಕನಕ್ಕಿಂತ ೩೦೦ ವರ್ಷ ಮೊದಲು ಈ ಸಂಗತಿ ನಡೆದು ಹೋಯಿತು. ಆದುದರಿಂದ ಭಾರತ ಚೀನಗಳ ನಡುವೆ ಇದೇ ವ್ಯಾಪಾರದ ಹೆದ್ದಾರಿಯಾಯಿತು. ಈ ದಾರಿ ಚೀನದ ವಾಯುವ್ಯದಲ್ಲಿರುವ ಕಾನ್-ಸೂ ಪ್ರಾಂತದಿಂದ ಕೂಚಾ ಖೋತಾನ ಮುಂತಾದ ಭಾರತೀಯ ವಸತಿಗಳ ಸೀಮೆಯವರೆಗೆ ಆಗ ಹೋಗಿ ಮುಟ್ಟಿತ್ತು. ಅಂತೆಯೆ ಆ ದಿಕ್ಕಿನಲ್ಲಿ ಇದೇ ದಾರಿಯ

ಚೀನಕ್ಕೆ ಹೋಗುವ ಭಾರತದ ಹೆದ್ದಾರಿಯಾಗಿತ್ತು.

ಈ ಕಾಲದಲ್ಲಿ ಭಾರತೀಯ ವಿದ್ಯೆ ಮತ್ತು ಸಂಸ್ಕೃತಿಗಳ ದೊಡ್ಡ ಕೇಂದ್ರವಾದ ಕೂಚಾ ಪಟ್ಟಣವು ಫಾಹಿಯೇನನಿಗೆ ದಾರಿಯಲ್ಲಿ ಸಿಕ್ಕಿತು. ಚೀನ ತುರ್ಕಸ್ಥಾನದ ಉತ್ತರದಲ್ಲಿರುವ ತರಿಮ್ ಎಂಬ ಹೆಸರಿನ ತಪ್ಪಲಿಕ್ಕೆ ಕೂಚಾ ಎಂಬ ಹೆಸರಿತ್ತು. ಪುರಾಣಗಳಲ್ಲಿ ಬಹುಶಃ ಕುಶದ್ವೀಪವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ವರಾಹಮಿಹಿರಾಚಾರ್ಯರು ಕುಚಿಕಜಾತಿಯ ಉಲ್ಲೇಖಮಾಡಿದ್ದಾರೆ. ಅಶೋಕನ ಕಾಲದ ಚೀನಿಭಾಷೆಯಲ್ಲಾದ ಅನುವಾದಗಳಲ್ಲಿ ಕೂಚಾ ಪ್ರಾಂತವು ಅಶೋಕನ ರಾಜ್ಯದ ಒಂದು ಭಾಗವಾಗಿತ್ತೆಂದು ಹೇಳಿದೆ. ಮೂರನೆಯ ಶತಕದಲ್ಲಿ ಕೂಚಾ ಪಟ್ಟಣವು ಬೌದ್ಧಧರ್ಮದ ಒಂದು ದೊಡ್ಡ ಕೇಂದ್ರವಾಗಿದ್ದಿತು. ಅಲ್ಲಿ ಆಗ ೧೦೦೦ ಮಂದಿರಗಳೂ ವಿಹಾರಗಳೂ ಇದ್ದವು. ಅಲ್ಲಿಯ ವಿದ್ಯಾರ್ಥಿಗಳು ವಿದ್ಯಾರ್ಜನೆಗೆಂದು ಭಾರತಕ್ಕೆ ಬಂದುಹೋಗುತ್ತಿದ್ದರು. ಕೂಚಾ ಪ್ರಾಂತದಲ್ಲಿದ್ದ ಸಂಗೀತ ಪದ್ಧತಿಯು ಭಾರತದಿಂದ ಬಂದಿತೆಂದು ಚೀನಿ ಲೇಖಕರ ಮತವಿದೆ. ಅಲ್ಲಿಯವರು ಸಂಸ್ಕೃತವನ್ನು ಬಲ್ಲರೆಂದು ಫಾಹಿಯೇನನು ಹೇಳುವನು. ಆಗ ಅಲ್ಲಿ ಹೀನಯಾನದ ೪೦೦೦ ಭಿಕ್ಷುಕರಿದ್ದರು. ಕೂಚಾ ಪ್ರಾಂತದಲ್ಲಿ ಪ್ರಚಲಿತವಿದ್ದ ಲಿಪಿಯೂ ಸರಾಸರಿ ಸಂಸ್ಕೃತ ಲಿಪಿಯನ್ನು ಹೋಲುತ್ತದೆ. ಚೀನ ಹಾಗೂ ಭಾರತದೇಶಗಳ ನಡುವಿರುವ ದೇಶಗಳಲ್ಲಿ ಚೀನದೇಶದ ರೇಷಿಮೆ ವ್ಯಾಪಾರದ ಪೇಟೆಗಳಾಗಿದ್ದವು. ನಿಜವಾಗಿ ಈ ದೇಶಗಳು ಚೀನದ ರಾಜಕೀಯ ಹಾಗೂ ಆರ್ಥಿಕ ಬಂಧನಕ್ಕೊಳಗಾದುದರಿಂದ ಇದೇ ಹಾದಿ ಫಾಹಿಯೇನನಿಗೆ ರಾಜಮಾರ್ಗವೆನಿಸಿತು. ಇವನು ಫರ್ಗಾನದಿಂದ ಕಾಶ್ಮೀರಕ್ಕೆ ಬಂದು ಅಲ್ಲಿಂದ ಮುಂದೆ ಸಿಂಧೂದ ಆಚಿನ ಗುಡ್ಡ ದಾಟಿ ಪಂಜಾಬವನ್ನು ಮುಟ್ಟಿದನು. ಭಾರತದಲ್ಲಿ ಆಗ ಪ್ರಸಿದ್ಧವಿದ್ದ ಸ್ಥಾನಗಳಲ್ಲಿಯೂ ವಿದ್ಯಾಪೀಠಗಳಲ್ಲಿಯೂ ಅಂದರೆ ಘಟಿಕಾಸ್ಥಾನಗಳಲ್ಲಿಯೂ ಸಂಚರಿಸಿದನು. ಅವನ ಕಾಲದವರೆಗೆ ಬೌದ್ಧಧರ್ಮದ ಅನೇಕ ನಿಕಾಯಗಳು (ಸಾಂಪ್ರದಾಯಗಳು) ಆಗಿಹೋಗಿದ್ದವು. ಅವುಗಳ ವಿನಯಗಳಲ್ಲಿಯೂ (ಭಿಕ್ಷು ನಿಯಮಗ್ರಂಥ) ಸಾಕಷ್ಟು ಭಿನ್ನಭಿನ್ನ ಸಂಘಗಳಾಗಿದ್ದವು. ಆದುದರಿಂದ ಅವನು ಅನೇಕ ವಿಹಾರಗಳಲ್ಲಿದ್ದುಕೊಂಡು ಬೇರೆ ಬೇರೆ

ನಿಕಾಯ ವಿಷಯಗಳ ಅಭ್ಯಾಸಮಾಡಿದನು. ಅಧ್ಯಯನ ಹಾಗು ಮುಂದಲ್ಲಿಯ ಜೀವನದ ನಿರೀಕ್ಷಣೆಗಳ ಸಂಗಡ ಗ್ರಂಥಸಂಗ್ರಹವೂ ನಡೆಯಿತು.

ಹೀಗೆ ಭಾರತದಲ್ಲಿ ಕೆಲವು ವರ್ಷ ಇದ್ದು ಫಾ-ಹಿಯೆನನು ತಾಮ್ರಲಿಪ್ತಿಯೆಂಬ ರೇವಿನಲ್ಲಿ ಹಡಗವನ್ನೇರಿ (ಸು. ಕ್ರಿ. ಶ. ೪೧೧) ಲಂಕೆಗೆ ಹೋದನು. ಆಗ ಲಂಕೆಯು ಸ್ಥವಿರವಾದಿ ಹಾಗು ಮಹಾಸಾಂಘಿಕ ಪಂಥದವರ ತವರೂರಾಗಿತ್ತು. ನಿಜವಾಗಿ ಅವನ ಭಾರತಯಾತ್ರೆ, ಲಂಕಾಯಾತ್ರೆಯನ್ನು ಬಿಟ್ಟಿದ್ದರೆ ಪೂರ್ಣವಾಗುತ್ತಿರಲಿಲ್ಲ. ಇಲ್ಲಿಯೂ ಎರಡು [illegible] ಅಧ್ಯಯನವನ್ನು ಸಾಗಿಸುತ್ತ ಗ್ರಂಥಸಂಗ್ರಹವನ್ನು ಮಾಡುತ್ತಿದ್ದನು. ಮುಂದೆ ಹಡಗನ್ನೇರಿ ಲಂಕೆಯಿಂದ ಹೊರಟು ಹತ್ತಿರದ ಜಾವೆ (ಜ ವಾ) ದ್ವೀಪವನ್ನು ಸೇರಿದನು. ಅಲ್ಲಿ ಸಾಕಷ್ಟು ಭಾರತೀಯರು ನೆಲೆಸಿದ್ದರು. ಬ್ರಾಹ್ಮಣ ಮತದ ಹಿಂದು ಅರಸನು ಅಲ್ಲಿ ಆಗ ಆಳುತ್ತಿದ್ದನು. ಅಲ್ಲಿಯ ಜನ ಹೆಚ್ಚಾಗಿ ಬ್ರಾಹ್ಮಣಧರ್ಮವನ್ನು ಅನುಸರಿಸುತ್ತಿದ್ದರೆಂದು ಫಾ-ಹಿಯೆನನು ಹೇಳುತ್ತಾನೆ. ಬೌದ್ಧಧರ್ಮವು ಅಷ್ಟು ಪ್ರಸಾರವಾಗಿರಲಿಲ್ಲ. ಅಲ್ಲಿಂದ ಕ್ರಿ. ಶ. ೪೧೪ರಲ್ಲಿ ಒಂದು ಹಡಗದಿಂದ ಹೊರಟು ಕ್ಯಾಂಟನ್ನನ್ನು ತಲ್ಪಿದನು. ಅವನು ಪ್ರವಾಸಮಾಡುತ್ತಿದ್ದ ಹಡಗದಲ್ಲಿ ಸುಮಾರು ೨೦೦ ಭಾರತೀಯ ವ್ಯಾಪಾರಸ್ಥರಿದ್ದರು.

ಎಷ್ಟೋ ಅಲಭ್ಯ ಗ್ರಂಥಗಳನ್ನು ತೆಗೆದುಕೊಂಡು ಭಾರತೀಯ ವ್ಯಾಪಾರಿಗಳ ಹಡಗದಲ್ಲಿ ಫಾ-ಹಿಯೆನನು ಲಂಕೆಯಿಂದ ಹೊರಟಾಗ ಒಂದು ಬಿರುದೊಡ್ಡ ಸುಳಿಗಾಳಿ ಎದ್ದಿತು. ಫಾ-ಹಿಯೆನನು ಬಹು ವರ್ಷ ಕಷ್ಟಪಟ್ಟು ದುಡಿದು ಸಂಗ್ರಹಿಸಿದ ಅಮೂಲ್ಯ ಗ್ರಂಥಗಳೇ ಈ ಸುಳಿಗಾಳಿಗೆ ಕಾರಣವೆಂದು ತಿಳಿದು ಹಡಗದಲ್ಲಿಯ ಜನರು ಅವುಗಳನ್ನು ಸಮುದ್ರದಲ್ಲಿ ಒಗೆದುಬಿಡಬೇಕೆಂದು ನಿಶ್ಚಯಿಸಿದರು. ಸುದೈವದಿಂದ ಸ್ವಲ್ಪದರಲ್ಲಿಯೇ ಸುಳಿಗಾಳಿ ನಿಂತಿತು. ಆಗ ಫಾ-ಹಿಯೆನನ ಮನಸ್ಸಿನಲ್ಲಿ ಹುಟ್ಟಿದ ಭಾವನೆಗಳನ್ನು ನಾವು ಇಂದು ಕಲ್ಪಿಸಬಲ್ಲೆವೇ ? ಅವನು ಲಂಕೆಯಲ್ಲಿ ಎರಡು ವರ್ಷಗಳವರೆಗೆ ಇದ್ದನು. ಆ ದ್ವೀಪದ ವರ್ಣನೆಯನ್ನು ಅವನು ಹೀಗೆ ಮಾಡಿದ್ದಾನೆ. " ಮೊದಲು ಲಂಕೆಯಲ್ಲಿ ಜನವಸತಿ ಇದ್ದಿಲ್ಲ. ರಾಕ್ಷಸರಿರುತ್ತಿದ್ದರು. ಆ ಮೇಲೆ ಬೇರೆ ಬೇರೆ ದೇಶಗಳ ಜನರು ವ್ಯಾಪಾರಕ್ಕಾಗಿ ಇಲ್ಲಿಗೆ

ಬರಹತ್ತಿದ ಮೇಲೆ ಜನರು ಬಂದು ನೆಲೆಸಹತ್ತಿದರು" ಎಂದು ಫಾ-ಹಿಯಾನನು ಬರೆಯುತ್ತಾನೆ. ಮಹಾನಾಮನೆಂಬವನು ಲಂಕೆಯನ್ನು ಆಳುತ್ತಿದ್ದನು.

ಅಭಯಗಿರಿಯಲ್ಲಿ ಸಂಸ್ಥಾಪಿತವಾದ ಭಗವಾನ ಬುದ್ಧದೇವನ ದಂತ ಧಾತುವಿನ ಜಾತ್ರೆಯನ್ನು ಫಾ-ಹಿಯಾನನು ನೋಡಿರಬೇಕು. ಬಹಳ ಮಾಡಿ ಭಾರತೀಯ ಉಪದೇಶಕನಾದ ಕುಮಾರ ಕಾಶ್ಯಪನು ಆಗ ಲಂಕೆಯಲ್ಲಿದ್ದಿರಬೇಕು. ಫಾ-ಹಿಯಾನನು ಅಭಯಗಿರಿ ವಿಹಾರದಿಂದ ಸಂಯುಕ್ತಾಗಮ, ಮತ್ತು ಅಭಿಧರ್ಮ ಪ್ರಕರಣಾದಿ ಇವುಗಳ ಒಂದೊಂದು ಪ್ರತಿಯನ್ನು ತೆಗೆದುಕೊಂಡು ಹೋದನು.

ಫಾ-ಹಿಯಾನನ ಲಂಕಾಯಾತ್ರೆಗೆ ಧಾರ್ಮಿಕದೃಷ್ಟಿಯಿಂದಷ್ಟೆ ಮಹತ್ವ ಬಂದಿದೆಯೆಂದು ತಿಳಿಯಬಾರದು. ಇದೇ ಕಾಲದಲ್ಲಿ ಚೀನದ ಕೂಡ ರಾಜಕೀಯ ಸಂಬಂಧವು ನೆಲೆಯೂರಿತು. ಮಹಾನಾಮನೂ ಹಾಗೂ ಲಂಕೆಯ ಉಳಿದ ಅರಸರೂ ಚೀನದ ಸಮ್ರಾಟನ ಓಲಗಕ್ಕೆ ತಮ್ಮ ರಾಜ-ದೂತರನ್ನು ಕಳಿಸಿದ್ದರು. ಚೀನದವರು ತಮ್ಮ ದೇಶದಲ್ಲಿ ಭಿಕ್ಷುಣಿ ಸಂಘವನ್ನು ಸ್ಥಿರಗೊಳಿಸುವ ವಿಚಾರದಲ್ಲಿದ್ದಾಗ ಲಂಕೆಯ ಧರ್ಮಗುಪ್ತನಿಕಾಯದ ಭಿಕ್ಷುಣಿಯರು ಚೀನಕ್ಕೆ ಹೋಗಿ ಅವರಿಗೆ ನೆರವಾದರು.

ಅಭ್ಯಸನಗಳು:

೧. ಈ ವರೆಗೆ ಮಗಧದಲ್ಲಿ ಆಳಿದ ರಾಜವಂಶಗಳನ್ನು ಅನುಕ್ರಮವಾಗಿ ಬರೆಯಿರಿ.

೨. ಸಮುದ್ರಗುಪ್ತನು ಗೈದ ದಂಡಯಾತ್ರೆಯನ್ನು ಭಾರತದ ಬಾಹ್ಯರೇಖೆಯ ನಕ್ಷೆಯಲ್ಲಿ ರೂಪಿಸಿರಿ.

೩. ಗುಪ್ತ ವಂಶದ ಕಾಲವು ಸುವರ್ಣಕಾಲ ಎಂಬುದನ್ನು ಸಕಾರಣ ವಿವರಿಸಿರಿ.

೪. ಶಕರನ್ನು ಓಡಿಸಿದ ಶಾಲಿವಾಹನನು ತನ್ನ ಜನರನ್ನು ಹುರುಪುಗೊಳಿಸಲು ಮಾಡಿದ ಭಾಷಣವನ್ನು ಕಲ್ಪನೆಯಿಂದ ಬರೆಯಿರಿ.

೬. ಶ್ರೀಹರ್ಷ ಪುಲಕೇಶಿಯರು.

ಗುಪ್ತವಂಶದ ಕೊನೆಯ ಅರಸರು ದುರ್ಬಲರಾಗಿದ್ದರಷ್ಟೆ ? ಅದ್ದರಿಂದ ರೂಕ್ಷ ಕುಲಗಳು ಭಾರತದೊಳಕ್ಕೆ ಪ್ರವೇಶಿಸಲು ಅನುಕೂಲವಾಗಿ ಹೂಣರ ತೋರಮಾನ ಮತ್ತು ಅವನ ಮಗ ಮಿಹಿರಗುಲ ಎಂಬವರು ಮಾಳವದ ವರೆಗೂ ನುಗ್ಗಿ ರಾಜ್ಯ ಕಟ್ಟಿಕೊಂಡರೆಂಬುದನ್ನು ಬಲ್ಲೆವು. ಇವರು ಮಹಾ ಕ್ರೂರ ಸ್ವಭಾವದವರಾಗಿದ್ದರು. ಬೌದ್ಧ ಸನ್ಯಾಸಿಗಳ ಬೇಟೆಯಾಡುವದೂ, ಆನೆಗಳನ್ನು ಕೋಡಗಲ್ಲಿನಿಂದ ಕಂದರದಲ್ಲಿ ತಳ್ಳುವದೂ ಇವರ ಆಟಗಳಾಗಿದ್ದವು. ಇವರು ಶಾಕಲನಗರ ಅಥವಾ ಈಗಿನ ಶಿಯಾಲಕೋಟೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಇವರಿಗೆ ಎದುರಾಗಿ ಬಾಲಾದಿತ್ಯ ಗುಪ್ತನೂ, ಮಗಧದ ಯಶೋಧರ್ಮನೂ ಯುದ್ಧ ಹೂಡಿ ಮಿಹಿರಗುಲನನ್ನು ಸೋಲಿಸಿದರು. ಮುಂದೆ ಮಿಹಿರಗುಲನು ಎಲ್ಲಿಯೋ ಅಡವಿಯಲ್ಲಿ ಅಸುನೀಗಿದನು. ಮಿಹಿರಗುಲನ ಕಾಲಕ್ಕೆ ಹೂಣರು ಹಿಂದುಗಳಾಗಿ ಪರಿಣಮಿಸಿದ್ದರು. ಇವರು ಕಂಟಕರಾಗಿದ್ದ ಕಾಲದಲ್ಲಿ ಅವರಿಂದ ಅನಾಹುತಗಳೇ ಸಂಭವಿಸಿದವು.

ಈ ಕಾಲಕ್ಕೆ ಕನೋಜದಲ್ಲಿ ಮೌಖರಿ ಕುಲದವರ ಸಾಮ್ರಾಜ್ಯವೂ ತಲೆದೋರಿ ಹೋಯಿತು. ಇದು ಮಗಧದ ಗುಪ್ತ ರಾಜ್ಯಕ್ಕೆ ಸಮಾನವಾದ ವೈಭವವನ್ನು ಪಡೆಯಿತು. ಮುಂದೆ ದಿಲ್ಲಿಯ ಉತ್ತರಕ್ಕೆ ಸ್ಥಾನೇಶ್ವರ ಎಂಬಲ್ಲಿ ವರ್ಧನ ಮನೆತನವೆಂಬ ರಾಜ್ಯಪದವಿಯು ಉದಯ ಹೊಂದುವದರಲ್ಲಿತ್ತು. ಈ ಮನೆತನದಲ್ಲಿ ಶ್ರೀ ಹರ್ಷನು ಜನ್ಮವೆತ್ತಿದನು. ವಿಂಧ್ಯಪ್ರದೇಶದಲ್ಲಿ ವಾಕಾಟಕರು ರಾಜ್ಯ ನಡೆಸಿದ್ದರು. ಕರ್ಣಸುವರ್ಣನೆಂಬವನು ಮಗಧದ ಹೊರೆಯ ರಾಜನಾಗಿದ್ದನು.

ಈ ರೀತಿ ಉತ್ತರ ಭಾರತವು ಕ್ರಿ. ಶ. ೬ನೆಯ ಶತಕದಲ್ಲಿ ಚಿಕ್ಕ ಚಿಕ್ಕ ರಾಜ್ಯಗಳಿಂದ ಕೂಡಿದ್ದು, ಅವು ತಮ್ಮವೇ ಆದ ಸಾಮ್ರಾಜ್ಯ ಶ್ರೇಣಿಯನ್ನು

ನಡೆಸಿಕೊಂಡು ಬಂದವು. ಮಗಧದ ರಾಜ್ಯವು ಇಳಿಮುಖವಾದ್ದರಿಂದ, ಒಂದು ಸರ್ವಶ್ರೇಷ್ಠ, ಮಧ್ಯವರ್ತಿ, ಬಲವಾದ ಸರಕಾರದ ಅಭಾವವು ಕಂಡು ಬಂದಿತೆ ವಿನಾ, ಅರಾಜಕತೆ ಇರಲಿಲ್ಲ. ಜನತೆಯಲ್ಲಿ ಸುಖ ಶಾಂತಿ ಸಮಾಧಾನಗಳು ಬೇರೂರಿ ಪ್ರಗತಿಯು ಮೊದಲಾಯಿತು. ಗುಡಿ ಗುಂಡಾರಗಳ ಬೆಳವಣಿಗೆಯೂ, ನಾಲಂದ ವಿಶ್ವವಿದ್ಯಾಲಯದ ಪ್ರಗತಿಯೂ, ಭಾರವಿ, ದಂಡಿ ವಿಶಾಖದತ್ತ ಮುಂತಾದವರ ಬರವಣಿಗೆಗಳೂ ಇದಕ್ಕೆ ನಿದರ್ಶನಗಳಾಗಿವೆ. ಇದಲ್ಲದೆ ಗಣಿತ, ಜ್ಯೋತಿಷ್ಯ ಶಾಸ್ತ್ರಗಳಲ್ಲಿ ವರಾಹಮಿರ ಮತ್ತು ಆರ್ಯಭಟ್ಟ ಮುಂತಾದವರ ಕೃತಿಗಳು ಈ ಶತಮಾನವು ಕೊಟ್ಟ ಫಲಗಳು.

ಶ್ರೀ ಹರ್ಷನು ಕ್ರಿ. ಶ. ೬೦೬ ರಿಂದ ೬೪೭ ರ ವರೆಗೆ ರಾಜ್ಯಭಾರ ನಡೆಸಿದನು. ಇವನ ಕಾಲದ ಸಂಗತಿಗಳನ್ನು ಬಾಣ ಕವಿಯ ಹರ್ಷ ಚರಿತೆಯಿಂದಲೂ ಹುವೆನ್ ಸ್ಯಾಂಗನೆಂಬ ಚೀನಿ ಪ್ರವಾಸಿಯ ಬರಹಗಳಿಂದಲೂ ತಿಳಿಯಬಹುದು.

ಹರ್ಷನ ಅಜ್ಜ ಆದಿತ್ಯವರ್ಧನನೆಂಬವನು ಠಾಣೇಶ್ವರದಲ್ಲಿ ಚಿಕ್ಕ ಜಹಗೀರುದಾರನಾಗಿ ರಾಜ್ಯಭಾರನಡೆಸಿದ್ದನು. ಆದಿತ್ಯವರ್ಧನನ ಮಗ ಪ್ರಭಾಕರವರ್ಧನನೆಂಬವನು ತನ್ನ ರಾಜ್ಯವನ್ನು ಬಲಪಡಿಸಿ ಆಗ ದಾಳಿ ಮಾಡುತ್ತಿದ್ದ ಹೂಣರನ್ನು ಹಿಮ್ಮೆಟ್ಟಿಸಲು ಅಣಿಯಾದನು. ಪ್ರಭಾಕರ ವರ್ಧನನ ಮರಣಾನಂತರ ಅವನ ಹಿರಿಯ ಮಗ ರಾಜ್ಯವರ್ಧನನೆಂಬವನು ಪಟ್ಟವೇರಿದನು. ಇವನು ಗೌಡದೇಶದ ಶಶಾಂಕನೆಂಬವನ ಕೂಡ ಯೋರಾಡುವಾಗ ಮರಣ ಹೊಂದಿದನು. ರಾಜ್ಯವರ್ಧನನ ತಮ್ಮನಾದ ಹರ್ಷವರ್ಧನನು ಠಾಣೇಶ್ವರದ ಪಟ್ಟವೇರಿದನು. ತದನಂತರ ಇಡೀ ಉತ್ತರ ಭಾರತವನ್ನು ಶಕ್ತಿ ಯುಕ್ತಿಗಳಿಂದ ತನ್ನ ಅಧೀನ ಮಾಡಿಕೊಂಡನು.

ತನ್ನ ಅಧಿಕಾರವನ್ನು ಉತ್ತರ ಭಾರತದಲ್ಲೆಲ್ಲ ಸ್ಥಾಪಿಸಿ ಹರ್ಷವರ್ಧನನು ದಕ್ಷಿಣಕ್ಕೆ ಕಾಲುಚಾಚಲು ಪ್ರಯತ್ನಿಸಿದನು. ದಕ್ಷಿಣದಲ್ಲಿ ಆ ಕಾಲಕ್ಕೆ ಆಳುತ್ತಿದ್ದ ಚಾಲುಕ್ಯರ ಎರಡನೆಯ ಪುಲಕೇಶಿಯೆಂಬ ಬಲಾಢ್ಯ ಅರಸನು ನರ್ಮದೆಯ ದಡದಲ್ಲಿ ಇವನನ್ನು ಎದುರಿಸಿ ಸೋಲಿಸಿದನು † ನಂತರ ಹರ್ಷನು

† ಈ ಯುದ್ಧದ ಫಲಿತಾಂಶದ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

ಯುದ್ಧ ಪ್ರವೃತ್ತಿಯನ್ನು [illegible] ಇವನಿಗೆ [illegible] ತೋರುತ್ತದೆ. ಇತ್ತ ಪ್ರತಿಕೇಶಿಯು [illegible] [illegible] ಅವನ [illegible] ಕೊಟ್ಟನು. ಅವನ [illegible] ಸ್ಥಂಗನ. ಇವನ ರಾಜ್ಯದಲ್ಲಿ [illegible].

ಹರ್ಷನು [illegible] ಅವನ [illegible] ರಾಜ್ಯ [illegible] ಧರ್ಮಗಳನ್ನು [illegible] ಇವನು [illegible] ಮುಂದೆ [illegible] ದಿಲ್ಲ. ತನ್ನ ರಾಜ್ಯದಲ್ಲಿ ಹಿಂಸೆಯನ್ನು ನಿಷೇಧಿಸಿದನು. ದೊಡ್ಡ ದಾರಿಗಳನ್ನು ಕಟ್ಟಿಸಿ ಅನ್ನಗಳಿಗೆ [illegible] ಗಳನ್ನು [illegible]. ಪ್ರಯಾಗದಲ್ಲಿ ಒಂದು ಧರ್ಮ ಪರಿಷತ್ತನ್ನು ಸೇರಿಸಿದನು. ಮುಂದೆ ಐದು ವರ್ಷಗಳಿಗೊಮ್ಮೆ ಇಂಥ ಪರಿಷತ್ತನ್ನು ಸೇರಿಸಿ ದೊಡ್ಡದೊಂದು ಸರ್ವ ಸಂಗ್ರಹವನ್ನು ದಾನ ಮಾಡುತ್ತಿದ್ದನು. [illegible] ಗಳಲ್ಲಿ ವಿಶ್ವವಿದ್ಯಾಲಯಗಳು ಬೆಳೆದು ಬರಲು ಅನುವುಗೊಳಿಸಿದನು

ಶ್ರೀ ಹರ್ಷನು ಕ್ರಿ. ಶ. ೬೪೭ರಲ್ಲಿ ಕಾಲವಶನಾದನು. ಇವನಷ್ಟೇ ಯೋಗ್ಯತೆಯ ಅರಸರು ದಕ್ಷಿಣದಲ್ಲಿ ಆಳಿದರು. ಅವರಲ್ಲಿ ಬಾದಾಮಿಯ ಚಾಲುಕ್ಯರು ಬಹಳ ಹೆಸರು ಪಡೆದರು.

ಚಾಲುಕ್ಯರು: —

ಆರನೆಯ ಶತಮಾನದ ಆದಿಯಲ್ಲಿ ಜಯಸಿಂಹನೆಂಬ ಚಾಲುಕ್ಯ ಕುಲಸ್ಥನು ಪಲ್ಲವರನ್ನು ಸೋಲಿಸಿ ರಾಜ್ಯ ಕಟ್ಟಿಕೊಂಡನು. ಇವನ ತರುವಾಯ ಒಂದನೇ ಪುಲಕೇಶಿಯು ಬಾದಾಮಿ(ವಾತಾಪಿಪುರ)ಯಲ್ಲಿ ಆಳಿದನು. ಅವನು ಸತ್ಯಾಶ್ರಯ, ಪೃಥಿವೀವಲ್ಲಭ, ಪರಮೇಶ್ವರ ಮುಂತಾದ ಬಿರುದುಗಳನ್ನು ಧರಿಸಿದನು. ಈ ರಾಜವಂಶದಲ್ಲಿ ಅಧಿಕನೆಂದು ಹೆಸರು ಪಡೆದ ಎರಡನೆಯ ಪುಲಕೇಶಿಯು ಕ್ರಿ. ಶ. ೬೦೯ ರಲ್ಲಿ ಪಟ್ಟವೇರಿದನು. ಇವನು ನರ್ಮದೆಯಿಂದ ಕಾವೇರಿಯವರೆಗೆ ಎಲ್ಲ ಭಾಗಗಳನ್ನು ಸ್ವಸಾಮರ್ಥ್ಯದಿಂದ ಗೆದ್ದು, ಪಶ್ಚಿಮದಲ್ಲಿ ತನ್ನ ಒಡೆತನವನ್ನು ನಡೆಸಿದನು. ಆದ್ದರಿಂದ ಇವನನ್ನು ದಕ್ಷಿಣಾಪಥೇಶ್ವರನೆಂದೂ ಕರೆದಾಗಿದೆ. ಇವನೇ ಹರ್ಷನನ್ನು ಎದುರಿಸಿದವನು. ಚಾಲುಕ್ಯರು ಇತರ ಹಿಂದೂ ಅರಸರಂತೆ ವೈದಿಕ ಮತದಲ್ಲಿ ನಂಬಿಕೆಯಿಟ್ಟರು. ಆದರೆ, ಇತರ ಮತಗಳಾದ ಜೈನ ಬೌದ್ಧ ಸಂಪ್ರದಾಯಗಳನ್ನು ಕಡೆಗಣಿಸಲಿಲ್ಲ. ಚಾಲುಕ್ಯರು ದಕ್ಷಿಣಾಪಥಕ್ಕೆಲ್ಲ ಒಡೆಯರಾಗಿದ್ದರು. ಪಶ್ಚಿಮ ಕರಾವಳಿಯ ಬಂದರಗಳೆಲ್ಲ ಚಾಲುಕ್ಯರ ಕೈಯಲ್ಲಿದ್ದುದರಿಂದ ಆಗ ನಡೆಯುವ ಎಲ್ಲ ಪರದೇಶದ ವ್ಯಾಪಾರವು ಇವರ ಕೈಯಲ್ಲಿದ್ದಿತು. ಆದ್ದರಿಂದ ಇವರ ರಾಜ್ಯದಲ್ಲಿ ಧನ ಕನಕ ಸಂಪತ್ತು ಹೇರಳವಾಗಿ ಹರಿಯಿತು.

ಈ ಅರಸರು ಚಿತ್ರಕಲೆಗೂ ಶಿಲ್ಪಕಲೆಗೂ ಹೆಚ್ಚಾಗಿ ಪ್ರೋತ್ಸಾಹನವನ್ನು ಕೊಟ್ಟರು. ಬಾದಾಮಿಯ ಬಸದಿಗಳೂ, ಅಜಂತೆಯ ಚಿತ್ರಗಳೂ, ಎಲಿಫೆಂಟಾದ ಗುಹೆಗಳೂ ಇವರ ಕಾಲದಲ್ಲಿಯೇ ಒಡಮೂಡಿದವು. ಪುಲಕೇಶಿಯು [illegible] ಕಳಿಸಿದ್ದನು. ಚಾಲುಕ್ಯರು ಕನ್ನಡ ನುಡಿಯನ್ನೇ ಬಳಸಿದರು. ಇವರ ಕಾಲದ ಶಾಸನಗಳೂ ಇದೇ ನುಡಿಯಲ್ಲಿವೆ.

ಹರ್ಷವರ್ಧನನು ಮರಣ ಹೊಂದಿದ ನಂತರ ಉತ್ತರ ಭಾರತದಲ್ಲಿ ಸರ್ವ ಪ್ರಸಿದ್ಧವಾದ ರಾಜ್ಯಸಮೂಹವು ನಾಶವಾಯಿತು. ಕನೋಜವು ಹಾಗೂ ಹೀಗೂ ತಲೆಯೆತ್ತಿಕೊಂಡು ನಿಂತಿತು. ಇಲ್ಲಿ ಆಳಿದ ಯಶೋ-

ವರ್ಮನೆಂಬ ಅರಸನು ಬಹಳ ಪ್ರಯತ್ನ ಪಟ್ಟು ಇದರ ಸ್ಥಿತಿಯನ್ನು ಕಾಯ್ದನು. ಯಶೋವರ್ಮನು ಭವಭೂತಿಯೆಂಬ ಸಂಸ್ಕೃತ ಕವಿಗೂ ವಾಕ್ಪತಿರಾಜನೆಂಬ ಪ್ರಾಕೃತ ಕವಿಗೂ ಆಶ್ರಯ ಕೊಟ್ಟಿದ್ದನು. ಯಶೋವರ್ಮನ ಮಗನ ಕಾಲದಲ್ಲಿ ಪಶ್ಚಿಮ ಭಾರತದಲ್ಲಿಯ ರಾಷ್ಟ್ರಕೂಟರಲ್ಲಿ ಧ್ರುವನೆಂಬ ಅರಸನು ಗಂಗಾ ಯಮುನಾ ನದಿಗಳ ಭಾಗಕ್ಕೆ ದಾಳಿಯಿಟ್ಟು ಅದನ್ನು ಗೆದ್ದುಕೊಂಡನು. ಇತ್ತ ಸಿಂಧ ಪ್ರಾಂತದ ಸೆರೆಯಲ್ಲಿ ಮಹಮ್ಮದೀಯರು ಒಳನುಗ್ಗಿ ಮಾಳವದ ವರೆಗೆ ತಲುಪಿದರು. ಮಹಮ್ಮದೀಯರು ಮೇಲಿಂದ ಮೇಲೆ ಗುಜರಾಥದ ದಂಡೆಗೆ ದಾಳಿಯಿಡುತ್ತಿದ್ದರಿಂದ ಇಲ್ಲಿಯ ನಾಗಭಟ್ಟನೆಂಬ ಶೂರನು ದಂಡು ಕೂಡಿಸಿ ಇವರನ್ನು ಎದುರಿಸುತ್ತಿದನು. ಈ ಕಾರಣದಿಂದ ನಾಗಭಟ್ಟನ ಅಧಿಕಾರವು ಗುಜರಾಥದಲ್ಲಿ ನೆಲಸಿ ಗ್ವಾಲೇರದ ವರೆಗೂ ಹಬ್ಬಿತು. ಕಾಲಗತಿಯಲ್ಲಿ ನಾಗಭಟ್ಟನ ವಂಶಜರಿಗೆ ಪ್ರತಿಹಾರಿಗಳೆಂದು ಹೆಸರು ಬಂದಿತು. ಇತ್ತ ರಾಷ್ಟ್ರಕೂಟರೂ ಒಳಗೊಳ್ಳುತ್ತ ಸಾಗಿದ್ದರು. ಆದರೆ ಇವರು ಪ್ರತಿಹಾರಿಗಳನ್ನು ಸದೆಬಡೆಯಲು ಪ್ರಯತ್ನ ಮಾಡದ್ದರಿಂದ ಪ್ರತಿಹಾರಿಗಳಲ್ಲಿಯ ವತ್ಸರಾಜನೆಂಬಾತನು ಕ್ರಿ. ಶ. ೭೮೩ರಲ್ಲಿ ಕನೋಜದ ಅರಸರನ್ನು ಜಯಿಸಿ, ಬಂಗಾಲದ ವರೆಗೆ ತನ್ನ ಅಮಲನ್ನು ಸ್ಥಾಪಿಸಿದನು. ಇವನು ಗುರ್ಜರಾಧೀಶನೆಂದು ಹೆಸರುವಾಸಿಯಾದನು.

[illegible] ನಾಗಭಟ್ಟನ ನಂತರ ಎರಡನೆಯ ನಾಗಭಟ್ಟನು ಪಟ್ಟವೇರಿದನು. ಇವನು ಬಂಗಾಲದ ಪಾಲ ಮನೆತನದ ಧರ್ಮಪಾಲನೆಂಬಾತನೊಡನೆ [illegible]ಡಿಕೊಂಡ. ಉತ್ತರ ಭಾರತದ ಅಧಿಪತ್ಯವನ್ನು ಪಾಲುಮಾಡಿಕೊಂಡಂತೆ ಮಾಡಿದರು. ಆದರೆ ಕನೋಜವನ್ನು ಎರಡನೆಯ ನಾಗಭಟ್ಟನು ನುಂಗಲಪೇಕ್ಷಿಸಿದನು. ಇದಕ್ಕೆ ಧರ್ಮಪಾಲನು ಒಪ್ಪಲಿಲ್ಲ. ಪರಿಣಾಮವಾಗಿ ಯುದ್ಧ ನಡೆಸಗಿ, ಉತ್ತರ ಭಾರತವು ಇಬ್ಭಾಗವಾಯಿತು. ಈಗ ಪ್ರತಿಹಾರಿ ಅರಸರು ಕನೋಜದಲ್ಲಿ ನೆಲಸಿ, ಪಂಜಾಬ, ರಜಪೂತಾನಾ, ಮಾಳವಾ, ಗುಜರಾಥ ಮತ್ತು ಮಗಧದ ವರೆಗಿನ ಎಲ್ಲ ಪ್ರದೇಶಗಳ ಒಡೆಯರಾದರು.

ಕಾಲಗತಿಯಲ್ಲಿ ಬಂಗಾಲದ ದೇವಪಾಲನೂ, ಗುಜರಾಥದ ಜಹಗೀರದಾರರೂ ಇವನ್ನು ವಿರೋಧಿಸುತ್ತಿದರು. ಕ್ರಿ. ಶ. ೮೩೬ರಲ್ಲಿ ಕನೋಜ

ನಲ್ಲಿ ಆಳುತ್ತಿದ್ದ ಪ್ರತಿಹಾರಿ ಮನೆತನದ ಮಿಹಿರಭೋಜನೆಂಬಾತನು ಇದನ್ನೆಲ್ಲ ಎದುರಿಸಿ ತಡೆದುಕೊಂಡನು. ಈ ಕಾಲಕ್ಕೆ ಉತ್ತರಭಾರತದಲ್ಲಿ ಮೂರು ದೊಡ್ಡ ರಾಜ್ಯಗಳು ತಲೆಯೆತ್ತಿ ಮೆರೆದವು. ಅವೆಂದರೆ—ಬಂಗಾಳವು ಪಾಲ ಅರಸರ ಅಂಕಿತದಲ್ಲಿ ಒಳ್ಳೆ ಶ್ರೇಷ್ಠ ಪದವಿಗೆ ಮುಟ್ಟಿದ್ದಿತು. ಇದರ ದೊರೆಗಳು ಮಗಧವನ್ನೊಳಗೊಂಡು, ಪೂರ್ವಹಿಂದುಸ್ಥಾನದಲ್ಲೆಲ್ಲ ಹಬ್ಬಿದ್ದವು. ಎರಡನೆಯದಾಗಿ, ಕನೋಜವು ಉತ್ತರ ಭಾರತದ ಪಶ್ಚಿಮ ಭಾಗವನ್ನು ವಿಂಧ್ಯದ ವರೆಗೆ ನೋಡಿಕೊಂಡಿತು. ರಾಷ್ಟ್ರಕೂಟರು ವಿಂಧ್ಯದ ದಕ್ಷಿಣಕ್ಕೆ ಮಾನ್ಯಖೇಟ ಅಥವಾ ಮಳಖೇಡದಲ್ಲಿ ರಾಜಧಾನಿಯನ್ನು ಕಟ್ಟಿಕೊಂಡಿದ್ದರು. ಇವರಲ್ಲಿ ಅಮೋಘವರ್ಷನೆಂಬವನು ಶ್ರೇಷ್ಠನೆನಿಸಿದನು. ಗಜ ತುರಗ ಸೇನಾಬಲದಿಂದ ಕೂಡಿದವನಾಗಿ ಇವನು, ದೂರ ದೂರದ ರಾಷ್ಟ್ರಗಳ ಸಂಗಡ ವ್ಯವಹಾರ ನಡೆಸಿದನು. ಕಾಲಗತಿಯಲ್ಲಿ ಇವರೆಲ್ಲರಿಗೆ ಕನೋಜದ ಪ್ರತಿಹಾರಿ ಮನೆತನದವರೇ ಶ್ರೇಷ್ಠರೆನಿಸಿದರು. ಈ ಮನೆತನದ ಕಡೆಯ ಅರಸು ಮಹೇಂದ್ರಪಾಲನೆಂಬವನ ನಂತರ ರಾಜ್ಯವು ಇಳಿಮುಖವಾಯಿತು.

ಗುರ್ಜರ ರಾಜಕೀಯ ರಂಗದಲ್ಲಿ ೫ ಬೇರೆ ಬೇರೆ ಮನೆತನಗಳು ಸಂಘ ಕಟ್ಟಿಕೊಂಡಿದ್ದವು. ಅವೆಂದರೆ— ಪ್ರತಿಹಾರಿಗಳು, ಪಾರಮಾರರು, ಚವ್ಹಾಣರು, ಚಾಲುಕ್ಯರು, ಗಹದವಾಲರು. ಇವರಿಂದಲೇ ಇಂದಿನ ರಜಪೂತರು ಜನ್ಮಿಸಿದರೆಂದು ಹೇಳುತ್ತಾರೆ.

ಇದೇ ಕಾಲಾವಧಿಯಲ್ಲಿ ದಕ್ಷಿಣದಲ್ಲಿ ತಲೆಯೆತ್ತಿ ಮೆರೆದ ರಾಜ್ಯಗಳ ಅವಲೋಕನವೂ ಉತ್ತರದ ರಾಜ್ಯಗಳ ಅವಲೋಕನದಷ್ಟೇ ಮಹತ್ವದ್ದಾಗಿದೆ. ಅತಿ ಪ್ರಾಚೀನ ಕಾಲದಿಂದ ಮೊನ್ನೆಮೊನ್ನೆಯವರೆಗೆ ನಡೆದು ಬಂದ ತೀರ ದಕ್ಷಿಣಕ್ಕಿದ್ದ ತೊಂಡಮಂಡಲ, ಪಾಂಡ್ಯಮಂಡಲ ಮತ್ತು ಕೇರಳಗಳು ತಲೆಯೆತ್ತಿ ಮೆರೆದವು. ತೊಂಡಮಂಡಲವೆಂಬುದು ಪಲ್ಲವರ ರಾಜ್ಯ. ಕಂಚಿಯಲ್ಲಿ ರಾಜಧಾನಿ ಮಾಡಿಕೊಂಡು ಪಲ್ಲವರು ನಮ್ಮ ದೇಶದ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದರು, ಕಂಚಿಯಲ್ಲಿ ವಿದ್ಯಾಕೇಂದ್ರಗಳಿದ್ದುದರಿಂದ

ಮತ್ತು ಪಲ್ಲವರ ಅಧಿಕಾರವು ನೆರೆಯ ರಾಜ್ಯಗಳ ಮೇಲೆ ನಡೆದು [illegible] ಕಂಚಿಯು ಸರ್ವಶ್ರೇಷ್ಠ ನಗರವಾಗಿ ಪರಿಣಮಿಸಿತು. ಕ್ರಿ. ಶ. [illegible] ಕಂಚಿಯ ಪಲ್ಲವರು ಬದಾಮಿಯ ಚಾಲುಕ್ಯರ [illegible] ನಡೆಸಿದರು. ಕ್ರಿ. ಶ. ೬೪೨ರಲ್ಲಿ ಪಲ್ಲವರ ರಾಜನಾದ ನರಸಿಂಹವರ್ಮನು ಚಾಲುಕ್ಯರ ಮೇಲೆ ದಾಳಿ ಮಾಡಿ ಅವರನ್ನು ಸೋಲಿಸಿ ಬಾದಾಮಿ [illegible] ಪಡೆದುಕೊಂಡನು. ಈ ಯುದ್ಧದಲ್ಲಿ ಚಾಲುಕ್ಯರಾಜ [illegible] ಪುಲಕೇಶಿಯು ಸೋತು ಮಡಿದನು. ಈ ವೇಳೆಗೆ ಪಲ್ಲವರ ಶಿಬಿರವನ್ನು [illegible] ರಾಜ್ಯವನ್ನು ರಾಷ್ಟ್ರಕೂಟರ ಕೃಷ್ಣನೆಂಬ ರಾಜನು [illegible].

ಚಾಲುಕ್ಯರ ಅಧಿಕಾರದ ಬಗ್ಗೆ ನಾವು ಈ ಹಿಂದೆಯೇ ಓದಿ ತಿಳಿದಿದ್ದೇವೆ.

ಪಲ್ಲವ ಮತ್ತು ಚಾಲುಕ್ಯ ರಾಜ್ಯಗಳೆರಡೂ [illegible] ಹೆಸರು ಪಡೆದವು.

ಇದಲ್ಲದೆ ಮಹಾರಾಷ್ಟ್ರದಲ್ಲಿ ರಾಷ್ಟ್ರಕೂಟರು ಪ್ರಬಲರಾಗಿದ್ದರು. ಅವರಲ್ಲಿ ದಂತಿದುರ್ಗನ ಮಗನಾದ ಕೃಷ್ಣರಾಜನು ಬಹಳ [illegible] ದನು. ಇವನು ಎಲ್ಲೋರದ ಕೈಲಾಸ ಗುಹೆಯನ್ನು ಕೊರೆಯಿಸಿದನು. ಕೃಷ್ಣನ ನಂತರ ಬಂದ ರಾಜರೂ ಮೂರನೆಯ ಗೋವಿಂದ ಮತ್ತು ಅಮೋಘವರ್ಷರೆಂಬ ರಾಜರ ಶಾಸನದಲ್ಲಿ ಹೆಸರು ಪಡೆದರು. ನಂತರ ರಾಷ್ಟ್ರಕೂಟರನ್ನು ಸೋಲಿಸಿದ ಚಾಲುಕ್ಯರು ಮತ್ತೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ಕೇರಳವೆಂಬುದು ತೀರ ದಕ್ಷಿಣಕ್ಕೆ ಮಲಬಾರ ಕರಾವಳಿಯಿಂದ ಕನ್ಯಾಕುಮಾರಿಯ ವರೆಗೆ ಹಬ್ಬಿದೆಯೆಂದು ಹೇಳಬಹುದು. ಈ ಭೂಭಾಗವು ಪೂರ್ವ ಕಾಲದಿಂದಲೂ ಪರದೇಶದ ವ್ಯಾಪಾರಕ್ಕಾಗಿ ಹೆಸರಾಗಿದೆ. ಇಲ್ಲಿ ನಡೆದ ಒಂದು ಮಹತ್ವದ ಸಂಗತಿಯೆಂದರೆ ಕ್ರಿಸ್ತನ ಅನುಯಾಯಿಯಾದ ಸೇಂಟ್ ಥಾಮಸ್ ಎಂಬುವನು ಇಲ್ಲಿಗೆ ಬಂದಿದ್ದನು. ಎರಡನೆಯದಾಗಿ ೯ನೆಯ ಶತಕದಲ್ಲಿ ಸಿರಿಯಾ ದೇಶದ ವ್ಯಾಪಾರಿಯೊಬ್ಬನು ಇಲ್ಲಿಗೆ ಬಂದಿದ್ದನು.

೭ನೆಯ ಶತಮಾನದಷ್ಟುತ್ತಿಗೆ ಭಾರತೀಯರು ದೂರದೂರ ದೇಶಗಳ ವರೆಗೆ ಹಬ್ಬಿ ಅಲ್ಲಿ ರಾಜ್ಯಗಳನ್ನು ಕಟ್ಟಿದರು. ಅವುಗಳಲ್ಲಿ ಕಂಬುಜ (ಕಾಂಬೋಡಿಯಾ) ಚಂಪಾ (ಅನಾಮ), ಶ್ರೀವಿಜಯ (ಸುಮಾತ್ರಾ)ಗಳೆಂಬವು ಹೆಸರು ಪಡೆದವು.

ಕಾಂಬುಜದ [illegible]

ಚಂಪಾ [illegible] ಸಂಸ್ಕೃತ [illegible]

ಶ್ರೀವಿಜಯ [illegible] ರಾಜ್ಯ. [illegible]

ವಿಶ್ವವಿದ್ಯಾಲಯಗಳು:—

ಹರ್ಷವರ್ಧನನ ಕಾಲದಲ್ಲಿ ನಾಲಂದ ವಿಶ್ವವಿದ್ಯಾಲಯವು ಉನ್ನತಿಯ ಶಿಖರಕ್ಕೆ ಮುಟ್ಟಿತು. ಅಭ್ಯಾಸದ ವ್ಯಾಪ್ತಿ, ಅಂತರಂಗದ ವಿಶಾಲತ್ವದಿಂದ, ಇದು ಅಂತರ್‌ರಾಷ್ಟ್ರೀಯ ವಿದ್ಯಾಲಯವಾಗಿತ್ತೆಂದು ಹೇಳಬಹುದು. ಬೌದ್ಧ ಸಂಘಾರಾಮವೆಂದು ಮೊದಲು ಸ್ಥಾಪಿಸಿಯಾದ ನಾಲಂದ ವಿಶ್ವವಿದ್ಯಾಲಯವು, ಭಾರತದ ಅರಸರಿಂದಲೂ ಭಾರತೀಯ [illegible] ಮತಗಳ ಅರಸರಿಂದಲೂ ದತ್ತಿಯನ್ನು ಪಡೆದು ತನ್ನ ಅಂತರ್‌ರಾಷ್ಟ್ರೀಯತ್ವವನ್ನು ಬೆಳೆಸಿಕೊಂಡಿತು. ಇದಲ್ಲದೆ ವಿಕ್ರಮಶಿಲಾ, ತಕ್ಷಶಿಲಾ, ಉಜ್ಜಯಿನಿಗಳಲ್ಲಿ ವಿಶ್ವವಿದ್ಯಾಲಯಗಳಿದ್ದವು. ಈಗಿನ ಕಾಠೇವಾಡದಲ್ಲಿ ಒಂದು ವಿಶ್ವವಿದ್ಯಾಲಯವು

ಮತ್ತು ಪಲ್ಲವರ ಅಧಿಕಾರವು ನೆರೆಯ ರಾಜ್ಯಗಳ ಮೇಲೆ ನಡೆವಂತೆ ಕಂಚಿಯು ಸರ್ವಶ್ರೇಷ್ಠನಗರವಾಗಿ ಪರಿಣಮಿಸಿತು. ಕ್ರಿ. ಶ. ೫೫೦ರಷ್ಟೊತ್ತಿಗೆ ಕಂಚಿಯ ಪಲ್ಲವರು ಬದಾಮಿಯ ಚಾಲುಕ್ಯರ ಕೂಡ ಹೋರಾಟ ನಡೆಸಿದರು. ಕ್ರಿ. ಶ. ೬೪೨ರಲ್ಲಿ ಪಲ್ಲವರ ರಾಜನಾದ ನರಸಿಂಹವರ್ಮನು ಚಾಲುಕ್ಯರ ಮೇಲೆ ಏರಿಹೋಗಿ ಅವರನ್ನು ಸೋಲಿಸಿ ಬಾದಾಮಿಯನ್ನು ಹಿಡಿದುಕೊಂಡನು. ಈ ಯುದ್ಧದಲ್ಲಿ ಹರ್ಷಜೇತಾ ೨ನೆಯ ಪುಲಿಕೇಶಿಯು ಸೋತು ಮಡಿದನು. ಈ ಮೇರೆಗೆ ವೈಭವದ ಶಿಖರವನ್ನು ಮುಟ್ಟಿದ ಪಲ್ಲವ ರಾಜ್ಯವನ್ನು ರಾಷ್ಟ್ರಕೂಟರ ಕೃಷ್ಣನೆಂಬ ರಾಜನು ಹಾಳುಗೆಡಹಿದನು.

ಚಾಲುಕ್ಯರ ಅಧಿಕಾರದ ಬಗ್ಗೆ ನಾವು ಈ ಮೊದಲೇ ಓದಿ ತಿಳಿದೆವು.

ಪಲ್ಲವ ಮತ್ತು ಚಾಲುಕ್ಯ ರಾಜ್ಯಗಳೆರಡೂ ನಾಟ್ಯ ವೃತ್ತಿಯಲ್ಲಿ ಹೆಸರು ಪಡೆದವು.

ಇದಲ್ಲದೆ ಮಳಖೇಡದಲ್ಲಿ ರಾಷ್ಟ್ರಕೂಟರು ತಲೆಯೆತ್ತ ತೊಡಗಿದ್ದರು. ಅವರಲ್ಲಿ ದಂತಿದುರ್ಗನ ಮಗನಾದ ಕೃಷ್ಣರಾಜನು ಚಾಲುಕ್ಯರನ್ನು ಸದೆಬಡಿದನು. ಇವನು ಎಲ್ಲೋರದ ಕೈಲಾಸ ಗುಹೆಯನ್ನು ಕೊರೆಯಿಸಿದನು. ಕೃಷ್ಣನ ನಂತರ ಬಂದ ರಾಜರೂ ೩ನೆಯ ಗೋವಿಂದ ಮತ್ತು ಅಮೋಘವರ್ಷರೆಂಬ ರಾಜರೂ ಶೂರತನದಲ್ಲಿ ಹೆಸರು ಪಡೆದರು. ನಂತರ ರಾಷ್ಟ್ರಕೂಟರನ್ನು ಸದೆಬಡಿದು ಚಾಲುಕ್ಯರು ಮತ್ತೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ಕೇರಳವೆಂಬುದು ತೀರ ದಕ್ಷಿಣಕ್ಕೆ ಮಲಬಾರ ಕರಾವಳಿಯಿಂದ ಕನ್ಯಾಕುಮಾರಿಯ ವರೆಗೆ ಹಬ್ಬಿದೆಯೆಂದು ಹೇಳಬಹುದು. ಈ ಭೂಭಾಗವು ಪೂರ್ವ ಕಾಲದಿಂದಲೂ ಪರದೇಶದ ವ್ಯಾಪಾರಕ್ಕಾಗಿ ಹೆಸರಾಗಿದೆ. ಇಲ್ಲಿ ನಡೆದ ಒಂದು ಮಹತ್ವದ ಸಂಗತಿಯೆಂದರೆ ಕ್ರೈಸ್ತನ ಅನುಯಾಯಿಯಾದ ಸೆಂಟ ಥಾಮಸ್ ಎಂಬವನು ಇಲ್ಲಿಗೆ ಬಂದಿದ್ದನು. ಎರಡನೆಯದಾಗಿ ೫ನೆಯ ಶತಕದಲ್ಲಿ ಸಿರಿಯಾ ದೇಶದ ವ್ಯಾಪಾರಿಯೊಬ್ಬನು ಇಲ್ಲಿಗೆ ಬಂದಿದ್ದನು.

೬ನೆಯ ಶತಮಾನದ ಹೊತ್ತಿಗೆ ಭಾರತೀಯರು ದೂರದೂರ ದೇಶಗಳ ವರೆಗೆ ಹರಡಿದ್ದು, ಅಲ್ಲಿ ರಾಜ್ಯಗಳನ್ನು ಕಟ್ಟಿದರು. ಅವುಗಳಲ್ಲಿ ಕಂಬುಜ (ಕಾಂಬೋಡಿಯಾ) ಚಂಪಾ (ಸಿಯಾಮು), ಶ್ರೀವಿಜಯ (ಸುಮಾತ್ರ)ಗಳೆಂಬವು ಹೆಸರು ಪಡೆದವು.

[illegible]

ಚಂಪಾ [illegible] ಸಂಸ್ಕೃತ [illegible] ದಕ್ಷಿಣ ಭಾರತ [illegible]

ಶ್ರೀವಿಜಯ [illegible] ರಾಜ್ಯ. [illegible]

ವಿಶ್ವವಿದ್ಯಾಲಯಗಳು:—

ಹರ್ಷವರ್ಧನನ ಕಾಲದಲ್ಲಿ ನಾಲಂದ ವಿಶ್ವವಿದ್ಯಾಲಯವು ಉನ್ನತಿಯ ಶಿಖರಕ್ಕೆ ಮುಟ್ಟಿತು. ಅಭ್ಯಾಸದ ಪದ್ಧತಿ, ಅಂತರಂಗದ ವಿಶಾಲತ್ವದಿಂದ, ಇದು ಅಂತರ ರಾಷ್ಟ್ರೀಯ ವಿದ್ಯಾಲಯವಾಗಿತ್ತೆಂದು ಹೇಳಬಹುದು. ಬೌದ್ಧ ಸಂಘಾರಾಮವೆಂದು ಮೊದಲು ಸ್ಥಾಪನೆಯಾದ ನಾಲಂದ ವಿಶ್ವವಿದ್ಯಾಲಯವು, ಭಾರತದ ಅರಸರಿಂದಲೂ ಭಾರತೀಯ ವಸಾಹತುಗಳ ಅರಸರಿಂದಲೂ ದತ್ತಿಯನ್ನು ಪಡೆದು ತನ್ನ ಅಂತರರಾಷ್ಟ್ರೀಯತ್ವವನ್ನು ಬೆಳೆಸಿಕೊಂಡಿತು. ಇದಲ್ಲದೆ ವಿಕ್ರಮಶಿಲಾ, ತಕ್ಷಶಿಲಾ, ಉಜ್ಜಯಿನಿಗಳಲ್ಲಿ ವಿಶ್ವವಿದ್ಯಾಲಯಗಳಿದ್ದವು. ಈಗಿನ ಕಾಠಿಯಾವಾಡದಲ್ಲಿ ಒಂದು ವಿಶ್ವವಿದ್ಯಾಲಯವು

ತಲೆದೋರಿ ಅದು ವಲ್ಲಭಿ ವಿಶ್ವವಿದ್ಯಾಲಯವೆಂದು ಹೆಸರಾಯಿತು.

ದಕ್ಷಿಣದ ಕಂಚಿಯಲ್ಲಿ ಒಂದು ಹೆಸರಾದ ವಿಶ್ವವಿದ್ಯಾಲಯವಿತ್ತು.

ಅಭ್ಯಸನಗಳು:

೧. ಶ್ರೀಹರ್ಷನು ಮೇಲಾದ ಕವಿ, ಆಡಳಿತಗಾರನೆಂದು ಹೇಗೆ ಅನ್ನುವಿರಿ ?

೨. ೨ನೆಯ ಪುಲಕೇಶಿಯು ಹರ್ಷನಿಗೆ ಬರೆದ ಪತ್ರವನ್ನು ಕಲ್ಪನೆಯಿಂದ ಬರೆಯಿರಿ

೩. ಹರ್ಷನ ನಂತರ ಉತ್ತರ ಭಾರತದಲ್ಲಿ ಯಾವ ರಾಜ್ಯಗಳು ಬೆಳಗಿದವು ?

೪. ಹರ್ಷನ ನಂತರ ವಿಶಾಲ ಭಾರತದಲ್ಲಿ ಯಾವ ರಾಜ್ಯಗಳು ತಲೆಯೆತ್ತಿದವು ?

---

೭. ಹಿಂದೂ ಧರ್ಮದ ಪುನರುಜ್ಜೀವನ.



ಶ್ರೀಮತ್ ಶಂಕರ ಭಗವತ್ಪಾದರು

ಶ್ರೀಮತ್ ಶಂಕರಾಚಾರ್ಯರು:—

ಗುಪ್ತ ಅರಸರ ಆಳಿಕೆಯಲ್ಲಿ ಪುರಾಣಗಳೆಲ್ಲ ಮತ್ತೊಮ್ಮೆ ಬರೆಯಲ್ಪಟ್ಟವಷ್ಟೆ ! ಇದರ ಮುಖ್ಯ ಕಾರಣವೆಂದರೆ ಸಾಮಾನ್ಯ ಹಿಂದುವಿಗೆ ಶೌರ್ಯದಿಂದ

ಕೂಡಿದ ಕಥೆಗಳು ವ್ಯವಹಾರಿಕ ರೀತಿ ನೀತಿಗಳನ್ನು ಒದಗಿಸಿ ಕೊಡುವವದೇ ಆಗಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಈ ತೆರನಾಗಿ ಬೆಳೆದ ಹಿಂದೂ ಮತ ಗ್ರಂಥಗಳು ಪರಧರ್ಮೀಯರ ತತ್ವಗಳನ್ನು ಒಳಗೊಳ್ಳುವ ಪರಿಪಾಠವೂ ನಡೆದು ಬಂದಿತು. ಪುರಾಣೋಕ್ತ ಕಥೆಗಳಲ್ಲಿ ಬುದ್ಧನೂ ಸಹ ಸಾಕ್ಷಾತ್ ವಿಷ್ಣುವಿನ ಅವತಾರವೆಂದು ಬರೆಯುವ ಇಂಗಿತವಾದರೂ ಇದೇ ಆಗಿದೆ. ಮತ್ಸ್ಯ ಭಾಗ ವತ ಮತ್ತು ಬ್ರಹ್ಮಾಂಡ ಪುರಾಣಗಳು ಬುದ್ಧನು ಸಾಕ್ಷಾತ್ ಶ್ರೀ ವಿಷ್ಣು ಪುರುಷೋತ್ತಮನ ಅವತಾರವೆಂಬ ಮಾತನ್ನು ಎತ್ತಿ ತೋರಿಸುವವು. ದೇವರ ಅವತಾರವೆಂಬ ಕಲ್ಪನೆಯು ಹಿಂದುವಿನ ಮನಸ್ಸಿನಲ್ಲಿ ಒಂದು ತರದ ಭಯ ಭಕ್ತಿಗಳನ್ನು ಹುಟ್ಟಿಸುತ್ತದೆ. ಯಾಕೆಂದರೆ, ಈ ಅವತಾರಿಕ ಪುರುಷನು ಜನರ ಕಷ್ಟನಷ್ಟಗಳನ್ನು ನೀಗಿಸಿ ಸಮಾಜಕ್ಕೆ ಸ್ವಾಸ್ಥ್ಯವನ್ನು ಒದಗಿಸುವನೆಂದು ಅವನು ನಂಬಿದನು. ಅವತಾರಗಳು ಭಕ್ತರ ಅಥವಾ ಜನರ ಚಿತ್ತ ವೃತ್ತಿ ಗಳನ್ನು ನಿಯಂತ್ರಿಸಿ ಅವರ ಜೀವಿತದ ಗುರಿಗೆ ಒಂದು ರೂಪವನ್ನು ತಂದು ಕೊಡುತ್ತವೆ. ಗುರಿಸಾಧನೆಗೆ ಬೇಕಾಗುವ ಪ್ರಯತ್ನ ಸಾಹಸಗಳನ್ನು, ಅವ ತಾರಿಕ ಪುರುಷರ ಸಾಕ್ಷಾತ್ ಸ್ವರವನ್ನು ಕೇಳಿಯಾಗಲೀ, ಮೂರ್ತಿಯನ್ನು ಕಂಡಾಗಲಿ, ಭಕ್ತನು ಪಡೆಯುತ್ತಾನೆ. 'ನೇತಿ' 'ನೇತಿ' ಎಂದು ಉಸುರಿಳಿ ಯುವ ಶುಷ್ಕ ಬ್ರಹ್ಮ ತತ್ವಾನ್ವೇಷಣೆಗಿಂತ, ಸಾಕಾರನಾಗಿ ವೈಭವದಿಂದ ಭಕ್ತರ ಬೇಡಿಕೆಗಳನ್ನು ಪೂರೈಸುವ ದೇವನಾಗಲಿ ದೇವನ ಅವತಾರವಾಗಲಿ ಜನಸಾಮಾನ್ಯನಿಗೆ ಹೆಚ್ಚು ಮೆಚ್ಚಿಗೆಯವನಾದನು.

ಈ ರೀತಿಯಿಂದ ಭಗವದ್ಗೀತೆಯೂ ಮನ್ನಣೆ ಹೊಂದಹತ್ತಿತು. ಉಪ ನಿಷತ್ತುಗಳಲ್ಲಿಯ ತತ್ವಗಳೆಲ್ಲ ಇದರಲ್ಲಿ ಅಡಕವಾಗಿವೆ. ಇದರಲ್ಲಿ ಭಕ್ತಿ ಜ್ಞಾನ ಕರ್ಮಗಳ ವಿವೇಚನೆಯು ಬಂದಿದೆ. ಇಲ್ಲಿಯವರೆಗೆ ಗೀತೆಗೆ ಅಸಂಖ್ಯ ಜನರು ಟೀಕೆಯನ್ನು ಬರೆದಿದ್ದಾರೆ. ಇದೊಂದು ಸಂಗತಿಯಿಂದಲೇ ಗೀತೆಯ ಮಹತಿಯನ್ನು ಕಂಡುಹಿಡಿಯಬಹುದು. ಇದೇವೇಳೆಗೆ ಮೀಮಾಂಸಕಾರರೂ ತಲೆಯೆತ್ತಿದರು. ಕುಮಾರಿಲಭಟ್ಟ ಪ್ರಭಾಕರರೆಂಬವರು ಕರ್ಮಕಾಂಡದಲ್ಲಿ ತಮ್ಮ ಮಹತಿಯನ್ನು ತೋರಿದರು.

ಕೇವಲ ಕರ್ಮಕಾಂಡದ ಅಂಧಾನುಕರಣವನ್ನು ಬದಿಗೊತ್ತಿ ಭಗವದ್ಗೀ

ತೆಯಿಂದಲೂ ಇತರ ವೇದೋಪನಿಷತ್ತುಗಳಿಂದಲೂ ಬರುವ ಜ್ಞಾನದ ಯಥಾರ್ಥ ಕಲ್ಪನೆಮಾಡಿಕೊಡಲು ಶ್ರೀಮತ್ ಶಂಕರ ಭಗವತ್ಪಾದರು ಜನ್ಮವೆತ್ತಿದರು. ಈಗಿನ ಕಾಲಟೀಗ್ರಾಮದಲ್ಲಿ ಒಂದು ನಂಬೂದ್ರಿಬ್ರಾಹ್ಮಣ ಕುಟುಂಬದಲ್ಲಿ ಇವರು ಜನ್ಮತಾಳಿದರು. ಚಿಕ್ಕಂದಿನಲ್ಲಿಯೇ ವಿದ್ಯಾಭ್ಯಾಸ ಮುಗಿಸಿ [illegible] ಭಗವತ್ಪಾದರು ಕಾಶಿಗೆ ಹೋಗಿ ಬ್ರಹ್ಮಸೂತ್ರಗಳಿಗೆ ಟೀಕಾ ಭಾ[illegible]. ಇವರಲ್ಲಿ [illegible] ಇವರ [illegible] ತತ್ತ್ವ[illegible]. ನಂತರ ಶಂಕರಾಚಾರ್ಯರು ಬೌದ್ಧ [illegible], ಇತರ [illegible] ವಾದದಲ್ಲಿ ಗೆದ್ದರು. [illegible] ಎಂದರು. "[illegible] ಸತ್ಯಂ [illegible] [illegible]" ಎಂಬ [illegible] ಶಂಕರಾಚಾರ್ಯರು ಬೌದ್ಧ [illegible] ವಾದಿಸಿದರು. [illegible] ಮತದ [illegible] ಸ್ಥಾಪನೆಗೆ ಶಂಕರಾಚಾರ್ಯರು ಕೈಕೊಟ್ಟುದರಿಂದ ಬೌದ್ಧ ಮತದ ಪ್ರಭಾವವು ಮಾಯವಾಗತೊಡಗಿತು.

ಶಂಕರಾಚಾರ್ಯರು ಬೋಧಿಸಿದ ತತ್ತ್ವಗಳು ಭಕ್ತಿಯನ್ನೇ ಮೂಲವಾಗಿಟ್ಟುಕೊಂಡಿವೆಯೆಂದು ಹೇಳಲು, ಅವರು ಸ್ವತಃ ರಚಿಸಿದ ಸಂಸ್ಕೃತ ಸ್ತೋತ್ರಗಳೇ ಸಾಕ್ಷಿ. ಆಳ್ವಾರರೆಂಬ ವಿಷ್ಣುಭಕ್ತರು ಆಚಾರ್ಯರಿಂತ ತುಸು ಮುಂಚೆ ಭಕ್ತಿಮಾರ್ಗವನ್ನು ಜನರಿಗೆ ಬೋಧಿಸಿದ್ದರು.

ತಾವು ಬೋಧಿಸಿದ ಹಿಂದುಮತದ ಹೊಸ ತತ್ತ್ವಗಳ ಪ್ರಚಾರಕ್ಕೆ ಆಚಾರ್ಯರು ಭಾರತದ ನಾಲ್ಕೂ ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿದರು. ಉತ್ತರದಲ್ಲಿ, ಬದರಿ, ದಕ್ಷಿಣದಲ್ಲಿ ಶೃಂಗೇರಿಗಳಲ್ಲಿ ಮಠಗಳು ಸ್ಥಾಪನೆಯಾದವು. ಪೂರ್ವ ಪಶ್ಚಿಮಗಳಲ್ಲಿ, ದ್ವಾರಕಾ ಮತ್ತು ಜಗನ್ನಾಥಪುರಿಗಳು ಮಠಗಳ ಸ್ಥಾಪನೆಗೆ ಯೋಗ್ಯ ಸ್ಥಳಗಳೆನಿಸಿದವು. ಇವುಗಳ ಹೊರತಾಗಿ ದಾಸನಾಮಿ ಸಂನ್ಯಾಸಿಗಳೆಂಬ ಧರ್ಮಬೋಧಕರು ದೇಶದಲ್ಲೆಲ್ಲ ಸುತ್ತಾಡಿ ಆಚಾರ್ಯರ ತತ್ತ್ವಗಳನ್ನು ತಿಳಿಹೇಳಿದರು. ಅಲ್ಲಲ್ಲಿ ಹಳೆಯತ್ತಿದ್ದ ದೇವ-

ನ್ಯಾಸ, ಪಾತಂಜಲಿಗಳು ಈ ವೇಳೆಗೆ ಆಚಾರ್ಯರ ತತ್ತ್ವಗಳನ್ನೇ ಪೋಷಿಸಿದವು.

[illegible]

[illegible] ಗಳೂ, ಹಿಂದೂ [illegible] ಈ ಕಾರಣಗಳಿಂದ ಜನಸ್ತೋಮದಲ್ಲಿಯೂ ಸ್ಥಾನವಿಲ್ಲದೆ ಬೌದ್ಧ ಧರ್ಮವಂತೂ ಹಿಂದೂ ಧರ್ಮದ [illegible] ಪರಿಣಮಿಸಿತು. ಸಾಮಾನ್ಯ ಜನರಿಗಂತೂ [illegible] ಬುದ್ಧನೂ ದೇವರಿಗೆ [illegible] ತತ್ತ್ವ [illegible] ಉಪನಿಷತ್ತುಗಳಿಂದ, ಎರಡೂ ಮತತತ್ತ್ವಗಳು ಒಂದೇ ತರಹದವೆಂದು ತೋರುತ್ತಿದ್ದವು. ಆದ್ದರಿಂದ ಬೌದ್ಧಮತಕ್ಕೆ ಸ್ವತಂತ್ರ ಸ್ಥಾನವು ಇಲ್ಲದಂತಾಯಿತು. ಆದ್ದರಿಂದ ಬೌದ್ಧ ಮತವು ಶ್ರೀ ಶಂಕರಾಚಾರ್ಯರ ಹೋರಾಟದಲ್ಲಿ ಲೀನವಾದ ವೆಂದು ಹೇಳಬಹುದೆ ?

ಶ್ರೀ ರಾಮಾನುಜಾಚಾರ್ಯರು:

ದಿನಗಳು ಕಳೆದಂತೆ ವೈದಿಕ ಧರ್ಮದ [illegible] ಪುರಸ್ಕರ್ತರು ತಲೆ ದೋರಿದರು. ೧೧ನೆಯ ಶತಕದಲ್ಲಿ ರಾಮಾನುಜಾಚಾರ್ಯರೆಂಬ ನಾಮಾಂಕಿತ ಮಹನೀಯರೊಬ್ಬರು ಜನ್ಮವೆತ್ತಿ ವಿಶಿಷ್ಟಾದ್ವೈತವೆಂಬ ಮತದ ಪುನ

ಸ್ಕಾರ ಮಾಡಿದರು. ಯಾದವ ಪ್ರಕಾಶರೆಂಬವರು ಇವರ ಗುರುವೆನಿಸಿದರು. ಪಾಠಪ್ರವಚನ ನಡೆದಾಗ ಶಿಷ್ಯನಾದ ರಾಮಾನುಜಾಚಾರ್ಯನಲ್ಲಿ ಈಶ್ವರ ಭಕ್ತಿಯ ಪರಾಕಾಷ್ಠತೆ, ಅರ್ಥನಿರೂಪಣೆಯ ಲೋಕೋತ್ತರ ಕೌಶಲ್ಯ, ಮುಂತಾದವುಗಳು ಕಂಡುಬಂದವು. ಇವರು ಅತುಲ ವಿದ್ವಾಂಸರೂ ಅಹುದು.

ಮುಂದೆ ಇವರು ಸಂನ್ಯಾಸ ಆಶ್ರಮವನ್ನು ಕೈಕೊಂಡು ವಿಶಿಷ್ಟಾದ್ವೈತ ತತ್ವದ ಬೋಧೆ ಮಾಡಿದರು. ಇವರಿಗೆ ಶ್ರೀ ಶಂಕರಾಚಾರ್ಯರ ಮಾಯಾ ವಾದವು ಒಪ್ಪಿಗೆಯಿಲ್ಲ. ಆದರೆ ಪರಮೇಶ್ವರನಲ್ಲಿ ಪರಮ ಭಕ್ತಿಯಿಡುವದ ರಿಂದಲೇ ಮಾನವನಿಗೆ ಪರಮಪದವು ಪ್ರಾಪ್ತವಾಗುವದೆಂದು ಇವರು ಬೋಧಿಸಿದರು ಇವರು ೧೨೦ ವರ್ಷಗಳ ವರೆಗೆ ಬಾಳಿ, ಕ್ರಿ. ಶ. ೧೧೪೭ ರಲ್ಲಿ ದೇಹಬಿಟ್ಟರೆಂದು ಹೇಳಿಕೆಯಿದೆ. ಇವರ ಪಂಥವು ಶ್ರೀವೈಷ್ಣವ ಪಂಥ ವೆಂದು ಹೆಸರಾಗಿದೆ.

ಶ್ರೀಮಧ್ವಾಚಾರ್ಯರು:

ಕ್ರಿ. ಶ. ೧೨೩೮ರಲ್ಲಿ ಕರ್ನಾಟಕದಲ್ಲಿ ಶ್ರೀ ಮಧ್ವಾಚಾರ್ಯರೆಂಬ ಮಹನೀಯರು ಜನ್ಮವೆತ್ತಿ, ದ್ವೈತಮತವನ್ನು ಪ್ರಸಾರಗೊಳಿಸಿದರು. ಭಕ್ತಿ- ಯೆ ಮುಕ್ತಿಯ ಮುಖ್ಯ ಸಾಧನವೆಂದು ಇವರು ಬೋಧಿಸಿದರು. ವಿಷ್ಣು ಸರ್ವೋತ್ತಮ ತತ್ವವನ್ನು ಇವರು ಸ್ಥಾಪಿಸಿದರು. ಜೀವನು ಸೇವಕ, ದೇವನು ಸೇವ್ಯ, ಎಂಬುದು ಇವರ ಬೋಧೆಯ ತಿರುಳು. ಈ ಪಂಥದ ಜನರಲ್ಲಿ ತಪ್ತ ಮುದ್ರಾಧಾರಣ, ಗೋಪೀಚಂದನ ಧಾರಣಗಳ ರೂಢಿಯು ಬಳಕೆಯಲ್ಲಿದೆ. ಇವರು ೭೯ ವರ್ಷದವರಿದ್ದಾಗ ಬದರಿಕಾಶ್ರಮದಲ್ಲಿ ದೇಹ ವಿಟ್ಟರು.

ಅಭ್ಯಾಸನಗಳು:

೫. ಐತಿಹಾಸಿಕ ಕಾರಣ ಕೊಡಿರಿ:

(ಅ) ಕ್ರಿ ಶ. ೮ನೆಯ ಶತಕದಲ್ಲಿ ವೈದಿಕ ಮತದತ್ತ ಜನಸಾಮಾನ್ಯರ ಮನಸ್ಸು ಒಲಿಯ ಹತ್ತಿತು.

(ಬ) ಶಂಕರಾಚಾರ್ಯರು ಭಾರತ ದೇಶದಾದ್ಯಂತ ಸಂಚರಿಸಿದರು.

(ಕ) ಆಚಾರ್ಯರ ಬೋಧೆಯಿಂದ ಬೌದ್ಧಮತವು ಮಾಯವಾಗಹತ್ತಿತು.

(ಡ) ಭಾರತದ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರಗಳಿಗೆ ಮಠಗಳನ್ನು ಸ್ಥಾಪಿಸಿದರು.

೨. ಬಿಡುವು ತುಂಬಿರಿ:

(ಅ) ರಾಮಾನುಜಾಚಾರ್ಯರು .... ಮತವನ್ನು ಸ್ಥಾಪಿಸಿದರು.

(ಬ) ಮಧ್ವಾಚಾರ್ಯರು .... ಮತವನ್ನು ಸ್ಥಾಪಿಸಿದರು.

(ಕ) ಶಂಕರ, ಮಧ್ವ, ರಾಮಾನುಜರು ದೇವರಲ್ಲಿ . ... ಇಡಲು ಬೋಧಿಸಿದರು.

(ಡ) ಇದೇ ಕಾಲದಲ್ಲಿ ಜನಸಾಮಾನ್ಯರಲ್ಲಿ . . .. ವೈಷ್ಣವ ಮತವನ್ನು ಸ್ಥಾಪಿಸಿದರು.

---

೮. ಇಸ್ಲಾಂ ಮತದ ಉದಯ.

ಹಿಂದುಸ್ತಾನದ ಪಶ್ಚಿಮಕ್ಕಿರುವ ಅರಬಸ್ತಾನವು ಪ್ರಾಚೀನಕಾಲದಲ್ಲಿ ಪ್ರಸಿದ್ಧಿ ಪಡೆಯಲಿಲ್ಲ. ಕ್ರಿ. ಶ. ೫೭೦ರಲ್ಲಿ ಮಕ್ಕೆಯಲ್ಲಿ ಜನಿಸಿದ ಮಹಮ್ಮದನು ಅರಬಸ್ತಾನದ ಜನರಿಗೆ ಧರ್ಮಬೋಧೆ ಮಾಡಿದನು. ಆಗಿನಕಾಲದಲ್ಲಿ ಅರಬಿ ಜನರಲ್ಲಿ ನಾನಾಬಗೆಯ ಮತಗಳು ಲೆಕ್ಕವಿಲ್ಲದಂತೆ ಹಬ್ಬಿ ಅವರಲ್ಲಿ ಅನೈಕ್ಯತೆ, ದೌರ್ಬಲ್ಯ, ದುರವಸ್ಥೆಗಳು ಒಡಮೂಡಿದ್ದವು.

ಅಸಂಖ್ಯದೇವತೆಗಳ ಪೂಜೆಯನ್ನು ಮಹಮ್ಮದನು ನಿಷೇಧಿಸಿ ಅರಬಿಯರಿಗೆ ಏಕೇಶ್ವರೀ ಪಂಥವನ್ನು ಬೋಧಿಸಿದನು. ಸರ್ವಜ್ಞನೂ ಸರ್ವಶಕ್ತನೂ ಅಸದೃಶನೂ ಆದ ದೇವನು ಒಬ್ಬನೇ ಎಂಬುದು ಇವನ ಬೋಧೆಯ ತಿರುಳು. ಈ ಬೋಧೆಯನ್ನು ಜನರಿಗೆ ತಿಳಿಹೇಳಲಿಕ್ಕೆ ತಾನು ದೇವನಿಂದ ಕಳುಹಲ್ಪಟ್ಟ ದೇವದೂತನೆಂದೂ ಇವನು ಸಾರಿದನು. ಆದ್ದರಿಂದ ತನ್ನ ವಚನಗಳಲ್ಲಿ ನಂಬಿಕೆಯಿಟ್ಟು ನಡೆವವರಿಗೆ ಮರಣಾನಂತರ ಸ್ವರ್ಗಪ್ರಾಪ್ತಿಯಾಗಿ ಶಾಶ್ವತ ಸುಖ ಸಿಗುವದೆಂದು ಇವನು ಹೇಳಿದನು. ತನ್ನ ಅನುಯಾಯಿಗಳಾದ ಮುಸಲ್ಮಾನರೆಲ್ಲರೂ ಸಹೋದರರು. ಇವರಲ್ಲಿ ಬಡವ ಬಲ್ಲಿದರೆಂಬ ಭೇದ

ಭಾವವಿಲ್ಲ. ಇದೇ ಇಸ್ಲಾಂ ಮತದ ಬಲ. ಯಾಕಂದರ ರಾಜನಿಂದಲೂ ಪುರೋಹಿತರಿಂದಲೂ ಹಿಂಸೆಪಟ್ಟು ಕೋಲುತ್ತಿದ್ದವರೆಲ್ಲ ಇಸ್ಲಾಂ ಮತಕ್ಕೆ ಸೇರಿಕೊಂಡರು.

ಮಹಮ್ಮದನ ಧರ್ಮದಿಂದ ಒಂದು [illegible] ಧರ್ಮವನ್ನು ಹಬ್ಬಿಸಲು ಸಾಧ್ಯವಾಯಿತು [illegible] ಬೈಜಾಂಟಿಯಂ ಎಂಬ [illegible] ಎದುರಿಸಿ [illegible] ಸಂಪದ್ಭರಿತ [illegible] ವನ್ನು ಸೂರೆಮಾಡಿತು. [illegible] ಗಳಲ್ಲಿ ಅರಬಸ್ತಾನ, ಸಿರಿಯಾ, ಈಜಿಪ್ತ, [illegible] ನಿಯಾ, ಮತ್ತು ಪಾರಸ್ತಾನಗಳಲ್ಲಿ ಈ ಧರ್ಮದವರು ನುಗ್ಗಿದರು. ಮತ್ತು ನೂರುವರ್ಷ [illegible] ಇವರಿಗೆ ವಶವಾಯಿತಲ್ಲದೆ ಸ್ಪೇನ ದೇಶದಲ್ಲಿ [illegible] ದರು. ಇತ್ತ ಅಕ್ಸಸ ನದಿ ದಾಟಿ ತುರ್ಕಸ್ತಾನದಲ್ಲಿಯೂ ಸಿಂಧೂನದಿಯನ್ನು ದಾಟಿ ಹಿಂದುಸ್ತಾನದಲ್ಲಿಯೂ ಮಹಮ್ಮದೀಯರು ಪ್ರವೇಶಿಸಿದರು.

ಸ್ಪೇನದಲ್ಲಿ ಮಹಮ್ಮದೀಯರು ರಾಜ್ಯವನ್ನು ಸ್ಥಾಪಿಸಿದ ನಂತರ ಅದಕ್ಕೂ ಮುಂದಕ್ಕೆ ಹೋಗಬಯಸಿ, ಪಿರನೀಜ [illegible] ದಾಟಿ ನುಗ್ಗಿದರು. ಆದರೆ ಆಕಾಲಕ್ಕೆ ಫ್ರಾನ್ಸದಲ್ಲಿ [illegible] ಚಾರ್ಲ್ಸ ಮಾರ್ಟೆಲ್ ಎಂಬಾತನು ಟೂರ್ಸದ ಹತ್ತಿರ ಮುಸಲ್ಮಾನರೊಡನೆ ಕಾದಿದನು. ಕ್ರಿ. ಶ. ೭೩೨ರಲ್ಲಿ ನಡೆದ ಈ ಕದನದಲ್ಲಿ ಮುಸಲ್ಮಾನರು ಸಂಪೂರ್ಣವಾಗಿ ಸೋತರು ಈ ಸೋಲಿನಿಂದ ಮುಸಲ್ಮಾನರು ಹಿಮ್ಮೆಟ್ಟಿದರು. [illegible] ಇಸ್ಲಾಂ ಮತವ್ಯಾಪ್ತಿಗೆ ತಡೆಯುಂಟಾಯಿತು. ಆದರೆ [illegible] ಗೆ ಅಟಲಾಂಟಿಕ ಮಹಾಸಾಗರದಿಂದ ಈಚೆ ಅಫಗಾನಿಸ್ತಾನದ ವರೆಗಿನ ಭೂಭಾಗವೆಲ್ಲ ಮಹಮ್ಮದೀಯ ಧರ್ಮಸತ್ತೆಗೆ ಒಳಪಟ್ಟಿತು. ಈ ರೀತಿ ಒಳಪಟ್ಟ ದೇಶಗಳು ಹಸ್ತಗತವಾದದ್ದರಿಂದ ಅರಬ ಜನರಿಗೆ ಶಾಸ್ತ್ರಗಳು, ತತ್ವಗಳು, ರಸಾಯನ, ಜ್ಯೋತಿಷ, ಭೂವಿವರಣೆ, ವೈದ್ಯ ಗಣಿತಶಾಸ್ತ್ರಗಳನ್ನು ಅರಬಿಜನರು ತಿಳಿದುಕೊಂಡರು. ಕಾಗದ ಉತ್ಪಾದನೆ ತಿಳಿಯಿತು. ಬಗದಾದ, ಕೈರೊ, ಕಾರ್ಡೋಬ

ಮುಂತಾದಲ್ಲಿ ವಿಶ್ವವಿದ್ಯಾಲಯಗಳು ಅಭಿವೃದ್ಧಿ ಪಡೆದವು. ಮುಂದೆ ಬಗ್
ದಾದವೆ ಪೈಗಂಬರರಿಂದ ಪಡೆದುಬಂದ ಧರ್ಮಗುರುಗಳ ಮುಖ್ಯ ಪೀಠ
ವಾಯಿತು.

ಕಾಲಗತಿಯಲ್ಲಿ ಮಹಮ್ಮದೀಯರಲ್ಲಿ ಶಿಯಾ, ಮತ್ತು ಸುನ್ನಿ ಎಂಬ
ಪಂಥಗಳು ಒಡಮೂಡಿದವು.

ಇತ್ತ ಇಸ್ಲಾಂ ಮತಾನುಯಾಯಿಗಳು ಚೀನ ದೇಶದ ವರೆಗೂ ಹರಿ
ಬಿದ್ದರು. ಅಲ್ಲಿ ಆಳುತ್ತಿದ್ದ ತೈ-ತ್ಸಂಗ ಎಂಬ ದೊರೆಯು ಅವರನ್ನು ಬರ
ಮಾಡಿಕೊಂಡನು. ವ್ಯಾಪಾರಿ ಅರಬರ ಉಪಯೋಗಕ್ಕಾಗಿ ಇವನು ಒಂದು
ಮಸೀದೆಯನ್ನು ತನ್ನ ರಾಜ್ಯದಲ್ಲಿ ಕಟ್ಟಿಸಿದ್ದೂ ಉಂಟು. ಈ ವೇಳೆಯು ಚೀನದ
ಉನ್ನತಿಯ ಕಾಲ; ಚಿತ್ರಕಲೆ, ಕಾಗದದ ಶೋಧ, ಅಚ್ಚು ಹಾಕುವದು,
ಚಹದ ಬಳಿಕೆ, ಚೀನಕ್ಕೆ ಬೌದ್ಧ ಪಂಡಿತರ ಆಗಮನಗಳು ನಡೆದಿದ್ದವು.

ಇತ್ತ ಮಧ್ಯ ಯುರೋಪದಲ್ಲಿ ಚಾರ್ಲಮೇನ ಎಂಬ ದೊರೆಯು
ತನ್ನದೊಂದು ದೊಡ್ಡ ರಾಜ್ಯ ಕಟ್ಟಿಕೊಂಡು, ಈಗಿನ ಫ್ರಾನ್ಸ, ಜರ್ಮನಿ
ಸ್ವಿಡ್ಝರಲಂಡ, ಮುಂತಾದ ದೇಶಗಳನ್ನು ಆಕ್ರಮಿಸಿ ಆಳುತ್ತಿದ್ದನು. ಇವನು
ಪೋಪನಿಂದ ಆಶೀರ್ವಾದವನ್ನು ಪಡೆದು, ಕ್ರಿಸ್ತಮತಕ್ಕೆ ಸೇರಿದನು.
ಅಂದಿನಿಂದ ಪಶ್ಚಿಮ ಯುರೋಪದಲ್ಲಿ ‘‘ಪವಿತ್ರ ರೋಮಕ ರಾಜ್ಯವು’ ತಲೆ
ದೋರಿತು. ಆದರೂ ಈ ಭಾಗದಲ್ಲಿ ಅಸಭ್ಯ ಜನಾಂಗಗಳ ದಾಳಿಗಳು ನಿಲ್ಲ
ಲಿಲ್ಲ. ಯುರೋಪದಲ್ಲಿ ಉತ್ತರ ರಷ್ಯ, ಸ್ಕ್ಯಾಂಡಿನೇವ್ಹಿಯಾಗಳ ಕಡೆ
ಯಿಂದ ನಾರ್ಥಮೆನ್ ಎಂಬವರು ಆಗಾಗ್ಗೆ ನುಗ್ಗಿ ಬಂದು ಕೊಳ್ಳೆಹೊಡೆಯು
ತ್ತಿದ್ದರು. ಇವರು ಐಸಲಂಡ ಗ್ರೀನಲಂಡಗಳಲ್ಲದೆ, ಇಂಗ್ಲಂಡ ಫ್ರಾನ್ಸ
ಗಳಲ್ಲಿಯೂ ಉಪಟಳವನ್ನುಂಟುಮಾಡುತ್ತಿದ್ದರು.

ಈ ಕಾಲದಲ್ಲಿ ನೆಮ್ಮದಿ ಕಾಯಲು, ಫ್ಯೂಡಲ್ ಪದ್ಧತಿ (ಜಮೀನದಾರಿ
ಪದ್ಧತಿ) ಯು ಬೆಳೆದು ಬಂದಿತು. ರಾಜನಾದವನಿಗೆ ಫ್ಯೂಡಲ ಪಾಳೆಗಾರರ
ವಿನಾ ಕೆಲಸಗಳೇ ನಡೆಯಲಿಲ್ಲ. ರಾಜನು ದೇಶಕ್ಕೆಲ್ಲ ಒಡೆಯನೆನಿಸಿ, ಬೇರೆ

ಬೇರೆ ಭಾಗಗಳನ್ನು ಬೇರೆಬೇರೆ ಆಪ್ತೇಷ್ಟರಿಗೆ ಕೊಡುತ್ತ, ಅವರಿಂದ ಯುದ್ಧ ಕಾಲದಲ್ಲಿ ಸಹಾಯವನ್ನು ನಿರೀಕ್ಷಿಸುತ್ತಿದ್ದನು. ಈ ಸಾಮಂತರು ತಮ್ಮ ಭಾಗಗಳನ್ನು ಪುನಃ ಸಣ್ಣ ಪುಟ್ಟ ಜಮೀನದಾರರಿಗೆ ಹಂಚಿಕೊಡುತ್ತಿದ್ದರು. ಭೂಮಿಯೊಂದೆ ಆಗಿನ ಕಾಲಕ್ಕೆ ಮಹತ್ವದ ಸಂಪತ್ತು ಆಗಿತ್ತು. ವ್ಯಾಪಾರ, ಕೈಗಾರಿಕೆ ಮುಂತಾದವು ಇದ್ದಿಲ್ಲ. ಅಜ್ಞಾನಾಂಧಃಕಾರದಲ್ಲಿ ಮುಳುಗಿದ ಈ ಕಾಲದ ಯುರೋಪದಲ್ಲಿ ಫ್ಯೂಡಲ ಪದ್ಧತಿಯು ದೇಶದ ನೆಮ್ಮದಿಯನ್ನು ಕಾಯಿತು. ಈ ವೇಳೆಯಿಂದ ಮುಂದೆ ಅರಬರೂ ಯುರೋಪದ ಕ್ರಿಸ್ತರೂ ಪರಸ್ಪರ ಸ್ನೇಹಭಾವದಿಂದ ಇದ್ದರು. ಅರಬೀ ರಾಜ್ಯದಲ್ಲಿಯ ಜೆರುಸಲೆಂ ಪಟ್ಟಣಕ್ಕೆ ಯಾತ್ರಾರ್ಥಿಗಳಾಗಿ ಹೋಗುತ್ತಿದ್ದ ಕ್ರಿಸ್ತ ಮತಸ್ಥರಿಗೆ ತೊಂದರೆ ಕಾಣಲಿಲ್ಲ. ಅಲ್ಲದೆ, ಯುರೋಪ ಏಶಿಯಗಳ ನಡುವೆ ವ್ಯಾಪಾರ ಬೆಳೆದು, ವ್ಯಾಪಾರಿಗಳು ಬಾ-ಹೋಗು ಮಾಡಹತ್ತಿದರು.

ಆದರೆ ಇದೇ ವೇಳೆಯಲ್ಲಿ ಮುಸಲ್ಮಾನ ಮತವನ್ನು ಅಪ್ಪಿಕೊಂಡಿದ್ದ ಮಧ್ಯ ಏಷ್ಯದ ತುರುಷ್ಕರು ತಂಡತಂಡವಾಗಿ ನುಗ್ಗಿ ಪ್ರಬಲರಾದರು. ಮಧ್ಯ ಪೂರ್ವದಲ್ಲಿ ತುರುಷ್ಕರ ಸಾಮ್ರಾಜ್ಯವೊಂದು ಏರ್ಪಟ್ಟಿತು. ತುರುಷ್ಕರು ಪ್ರಬಲರಾದಂತೆ, ಯುರೋಪ ಏಶಿಯಗಳ ವ್ಯಾಪಾರವನ್ನೂ, ಕ್ರಿಸ್ತರ ಯಾತ್ರಾ ಪ್ರಸಂಗಗಳನ್ನೂ ತಡೆಯಹತ್ತಿದರು. ವ್ಯಾಪಾರಮಾರ್ಗಗಳು ಮುಚ್ಚಿಹೋದವು. ಯಾತ್ರೆಗಳು ಬಂದಾದವು. ಅಲ್ಲದೆ, ಕಾನ್‌ಸ್ಟಾಂಟಿನೋಪಲನ್ನು ಮುತ್ತಿ ಕ್ರೈಸ್ತ ರಾಜ್ಯವನ್ನು ಗೆಲ್ಲಲು ಹವಣಿಸಿದರು. ಇದನ್ನು ಕಂಡು ಗಾಬರಿಗೊಂಡ ಕ್ರಿಸ್ತಪ್ರಭುವು ದಿಕ್ಕುಗಾಣದೆ, ಕ್ರಿ. ಶ. ೧೦೯೫ರಲ್ಲಿ ಪೋಪನ ಮತ್ತು ಇತರರ ಸಹಾಯ ಬೇಡಿದನು. ಅಂದಿನಿಂದ ಕ್ರುಸೇಡು ಗಳು ಪ್ರಾರಂಭವಾದವು. ಕ್ರುಸೇಡುಗಳೆಂದರೆ ಕ್ರೈಸ್ತರು ಮುಸಲ್ಮಾನರ ವಿರುದ್ಧ ನಡೆಸಿದ ಧರ್ಮಯುದ್ಧಗಳು. ಇವು ೨೦೦ ವರ್ಷ ಕಾಲ ನಡೆದರೂ ಉಪಯೋಗ ಬೀಳಲಿಲ್ಲ. ಆದರೆ ವ್ಯಾಪಾರಾಭಿವೃದ್ಧಿ, ಶಾಸ್ತ್ರ, ವ್ಯಾಸಂಗಗಳು ಪೂರ್ವ ಪಶ್ಚಿಮಗಳ ಸಂಪರ್ಕದಿಂದ ತಲೆದೋರಿದವು. ಜನಕ್ಷಯವೂ ಧನಕ್ಷಯವೂ ಈ ಯುದ್ಧಗಳಲ್ಲಿ ಆದದ್ದರಿಂದ ಫ್ಯೂಡಲ ಪದ್ಧತಿಯು ಮಾಯವಾಗಹತ್ತಿತು. ಇವುಗಳ ಸ್ಥಾನದಲ್ಲಿ ಪ್ರತ್ಯೇಕ ರಾಜ್ಯಗಳು ತಲೆಯೆತ್ತಿದವು.

ಬರಬರುತ್ತ ಜನಸಾಮಾನ್ಯರಲ್ಲಿ ಸ್ವದೇಶ ಪ್ರೇಮವು ತೋರಿಕೊಂಡಿತು. ಕ್ರೂಸೇಡುಗಳಲ್ಲಿ ಸೇರಿದ ಕ್ರೈಸ್ತ ಪುರೋಹಿತ ವರ್ಗದವರು ಧರ್ಮದ ಹೆಸರಿನಲ್ಲಿ ನಡೆಸುತ್ತಿದ್ದ ಅಧರ್ಮವು ಸಾಮಾನ್ಯ ಜನರಿಗೆ ಹೇಸಿಗೆಯನ್ನುಂಟು ಮಾಡಿತು. ಆದ್ದರಿಂದ ಅವರಿಗಿದ್ದ ಗೌರವ ಭಕ್ತಿಗಳೂ ಮಾಯವಾದವು.

ಭಾರತದ ಪರಿಸ್ಥಿತಿ:


ಕ್ರಿ. ಶ. ೭ನೆಯ ಶತಕದಿಂದ ಈಚೆಗೆ ರಜಪೂತರ ಬೆಳವಣಿಗೆಯು ಭಾರತದಲ್ಲಿ ನಡೆಯಿತು. ಇವರ ಮೂಲದ ಬಗ್ಗೆ ಪಂಡಿತರಲ್ಲಿ ವಾದವಿದೆ. ಇವರು ಭಾರತದಲ್ಲಿ ಆಗಾಗ ಪ್ರವೇಶಿಸಿದ ಗುರ್ಜರು, ಹೂಣರು, ಶಕರು, ಮುಂತಾದವರ ವಂಶಸ್ಥರೇ ರಜಪೂತರೆಂದು ಹೇಳಲಾಗುತ್ತದೆ. ಪೂರ್ವಕಾಲದಿಂದಲೂ ನಡೆದು ಬಂದ ಕ್ಷತ್ರಿಯ ಕುಲಗಳೇ ರಜಪೂತರ ಮೂಲವೆಂದು ಹೇಳುವದು ಇನ್ನೊಂದು ವಾದ. ಏನಿದ್ದರೂ ಭಾರತದ ದಕ್ಷಿಣದಲ್ಲಿಯೂ ಉತ್ತರದಲ್ಲಿಯೂ ೬೦೦-೮೦೦ ವರ್ಷಗಳ ವರೆಗೆ ಭಾರತದಲ್ಲಿ ರಾಜ್ಯಭಾರ ನಡೆಸಿದರು.

ರಜಪೂತರು:—

ರಜಪೂತರ ಚರಿತ್ರೆಯು ಮನೋರಂಜಕವಾಗಿದೆ. ಶೌರ್ಯ ಸಾಹಸಗಳಿಗೂ, ಪರಂಪರಾಗತ ವೀರ್ಯ ಔದಾರ್ಯಗಳಿಗೂ, ಮಾನ ಸಂಚೆಯುಕ್ಕೂ ರಾಜಪುತ್ರರು ಇಡೀ ಪ್ರಪಂಚದಲ್ಲಿಯೇ ಅಗ್ರಗಣ್ಯರು. ಇವರ ಸ್ವದೇಶ ಸ್ವಕುಲಾಭಿಮಾನಗಳು ಅನುಪಮವಾದವುಗಳು. ಇಂಥ ಅಭಿಮಾನವೇ ಇವರಲ್ಲಿ ಆಕಾಲಿಕ ಕದನಗಳಿಗೂ ಮಹಾಯುದ್ಧಗಳಿಗೂ ಕಾರಣವಾಗಿ ರಕ್ತದ ಕಾಲುವೆಗಳು ಹರಿದವು. ರಾಜಪುತ್ರರ ಕುಲಗಳು ಜಗತ್ತನ್ನು ಬೆರಗುಗೊಳಿಸುವ ಕೆಲವು ಸಂಗತಿಗಳನ್ನು ನಡೆಸಿದವು. ಅವುಗಳಲ್ಲಿ ಜೋಹರ ಮತ್ತು ಕೇಸರಿಯಾಗಳು ಬಹಳ ಮಹತ್ವದವು.

ಜೋಹರ:—

ವೈರಿಗಳ ಕೂಡ ಯುದ್ಧ ಮಾಡುವಾಗ ಕೊನೆಯ ಪ್ರಯತ್ನ ನಡೆಸುವ ಪ್ರಸಂಗ ಬಂದಾಗ ಪಟ್ಟಣದ ಎಲ್ಲ ಯುದ್ಧಾಳುಗಳು ಹೊರಡಲು ಅನುವಾಗುತ್ತಿದ್ದರು. ಪಟ್ಟಣದ ವನಿತೆಯರೆಲ್ಲ ಗಂಡಸರಿಗೆ ಜಯವನ್ನು ಕೋರಿ ಯುದ್ಧರಂಗಕ್ಕೆ ಕಳಿಸುತ್ತಿದ್ದರು. ತಾವು ವೈರಿಗಳ ಕೈಗೆ ಬೀಳಬಾರದೆಂದು ಊರ ಮಧ್ಯದಲ್ಲಿ ಚಿತೆಯನ್ನು ಏರ್ಪಡಿಸಿ ಅದರಲ್ಲಿ ಬಿದ್ದು ಪತಂಗಗಳಂತೆ ಸುಟ್ಟುಕೊಂಡು ಸಾಯುತ್ತಿದ್ದರು.



ಒಬ್ಬ ರಜಪೂತ ವೀರನು.

ಕೇಸರಿಯಾ:—

ಇತ್ತ ವೀರಾಳುಗಳೆಲ್ಲ ತಮ್ಮ ಮನೆತನದ ಮೋಹವನ್ನು ತೊರೆದು ಕದನ ಕೂಗಿನಿಂದ ಪ್ರೇರಿತರಾಗಿ ಅಸಮ ಆವೇಶದಿಂದ ವೈರಿಗಳ ಮೇಲೆ ಎರ

ಹೋಗುತ್ತಿದ್ದರು. ಆಗ ಒಬ್ಬೊಬ್ಬ ರಾಜಪುತ್ರನು ಕಾಲಭೈರವನಂತೆ ಕಂಡು ವೈರಿಗಳನ್ನು ನುಚ್ಚುನೂರಾಗಿ ಕಡಿಯುತ್ತಿದ್ದನು. ಈ ಕಾಲಕ್ಕೆ ಇವರು ಕೇಸರಿ ಬಣ್ಣದ ಅರಿವೆಗಳನ್ನು ತೊಡುತ್ತಿದ್ದರು. ಉಡುಗೆಯ ಬಣ್ಣದಿಂದ ಈ ಸಂಗತಿಗೆ ಕೇಸರಿಯಾ ಎಂಬ ಹೆಸರು ಬಂದಿದೆ. ಯುದ್ಧದ ಕೊನೆಯ ಪ್ರಯತ್ನಕ್ಕಾಗಿ ವೀರಾಂಗನೆಯರು ಜೋಹರವನ್ನೂ ವೀರರು ಕೇಸರಿಯವನ್ನೂ ಮಾಡಿದರು.

ಭಾರತದಲ್ಲಿ ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿಕೊಳ್ಳುತ್ತ ರಜಪೂತರು, ಮುಂದೆ ಮೊಗಲರು ಭಾರತಕ್ಕೆ ಬರುವವರೆಗೂ, ಆಳುತ್ತಿದ್ದರು. ಮೊಗಲರ ಕಾಲದಲ್ಲಿ ಇವರು ಸ್ವತಂತ್ರತೆಯನ್ನು ಕಳೆದುಕೊಂಡು ಸಾಮಂತರಾಜರಾದರು.

ಮಧ್ಯ ಏಶಿಯದ ಸಂಗತಿಗಳು:

೧೨ನೆಯ ಶತಮಾನದಲ್ಲಿ ಮಧ್ಯ ಏಶಿಯದಲ್ಲಿ ಗುಂಪು ಗುಂಪಾಗಿ ಗುಡಾರಗಳಲ್ಲಿ ವಾಸಮಾಡುತ್ತಿದ್ದ ಮಂಗೋಲ ಕುಲಗಳೆಲ್ಲ ಒಬ್ಬಾತನ ನಾಯಕತ್ವದಲ್ಲಿ ಒಟ್ಟುಗೂಡಿದವು. ಕ್ರಿ. ಶ. ೧೧೬೨ರಲ್ಲಿ ಹುಟ್ಟಿದ ಈ ನಾಯಕನು ತನ್ನ ಐವತ್ತೊಂದನೆಯ ವರ್ಷದಲ್ಲಿ ಎಲ್ಲ ಕುಲಸ್ಥರ ಸಮ್ಮತಿಯಿಂದ ನಾಯಕನಾಗಿ ಜೆಂಗೀಜಖಾನನೆಂದು ಹೆಸರಾದನು.

ಮಂಗೋಲ ಕುಲಗಳ ನಾಡು ಮಧ್ಯಏಶಿಯದ ಬೈಕೇಲ ಸರೋವರದ ಪಶ್ಚಿಮಕ್ಕೆ ನೆಲೆಸಿದೆ. ಜೆಂಗೀಜಖಾನನು ನಾಯಕನಾದ ಕೂಡಲೆ ಆತನು ಅಲ್ತಾಯಿ ಬೆಟ್ಟಗಳನ್ನು ದಾಟಿ ತಾರ್ತಾರ ಗುಂಪಿನವರ ಗೆಳೆತನ ಬೆಳೆಸಿದನು. ಕ್ರಿ. ಶ. ೧೨೧೫ರಲ್ಲಿ ಚೀನವನ್ನು ಮುತ್ತಿ ಪೇಕಿಂಗ ನಗರವನ್ನು ಹಿಡಿದುಕೊಂಡನು. ಮಧ್ಯಏಶಿಯದ ತುರ್ಕಸ್ತಾನದಲ್ಲಿ ಆಳುತ್ತಿದ್ದ ಅರಸು ಇವನನ್ನು ಮನ್ನಿಸದಾದ್ದರಿಂದ ಜೆಂಗೀಜಖಾನನು, ಆ ಕಡೆ ಹೊರಳಿ ಬೊಖಾರಾ ಮತ್ತು ಸಮರಕಂದ ಪಟ್ಟಣಗಳನ್ನು ನಾಶಗೊಳಿಸಿದನು. ನಂತರ ಅಲ್ಲಿಯ ಅರಸನನ್ನು ಅಟ್ಟಿಕೊಂಡು, ಸಿಂಧೂ ನದಿಯ ವರೆಗೂ ಬಂದನು. ಆದರೆ ಭಾರತವನ್ನು ಪ್ರವೇಶಿಸಲಿಲ್ಲ. ಅಫಗಾಣಿಸ್ತಾನ, ಪರ್ಶಿಯಾಗಳನ್ನು ಗೆದ್ದು ಯುರೋಪದ ಪೂರ್ವಭಾಗಕ್ಕೆ ನುಗ್ಗಿದನು. ಮತ್ತು ಈಗಿನ ರಷ್ಯದ ದಕ್ಷಿಣಾರ್ಧವನ್ನೆಲ್ಲ ವಶಪಡಿಸಿಕೊಂಡನು. ಪ್ಯಾಸಿಫಿಕ್ ಮಹಾಸಾಗರದಿಂದ

ಯುರೋಪದ ನೀಪರ ನದಿಯ ವರೆಗೆ ಇವನ ಸಾಮ್ರಾಜ್ಯವು ಹಬ್ಬಿತು.

ಜೆಂಗಿಜ್ ಖಾನನು ಅತಿಕ್ರೂರನೆಂದು ಹೇಳುವ ವಾಡಿಕೆಯಿದೆ. ಆತನು ವೈರಿಗಳ ಮೇಲೆ ನಿಷ್ಕರುಣಿಯಾಗಿದ್ದನು. ಸೈನ್ಯದ ಆಡಳಿತೆ, ಅಧಿಕಾರಿಗಳ ಆಯ್ಕೆಗಳಲ್ಲಿ ಇವನು ಬಹು ಬಲ್ಲಿದನಾಗಿದ್ದನು. ಈತನಿಗೂ ಈತನ ವಂಶಸ್ಥರಿಗೂ ಖಾಕರ್ ಎಂಬ ಬಿರುದಿದ್ದರೂ, ಇವನು ಮುಸಲ್ಮಾನನಲ್ಲ. ಷಮಾ: ಎಂಬುದು ಇವನ ಮತದ ಹೆಸರಾಗಿದ್ದಿತು. ಆ ಮತದವರಿಗೆ ಆಕಾಶವೇ ದೇವರು. ಅನ್ಯಮತ ದ್ವೇಷವು ಇವನಲ್ಲಿರಲಿಲ್ಲ. ಸಾಮ್ರಾಜ್ಯದ ಆಡಳಿತಕ್ಕೆ ತಕ್ಕ ಏರ್ಪಾಡನ್ನು ನಡೆಸಿದ ಬಳಿಕ ತನ್ನ ೭೨ನೆಯ ವರ್ಷ(ಕ್ರಿ. ಶ. ೧೨೨೭) ಜೆಂಗಿಜ್ ಖಾನನು ತೀರಿಕೊಂಡನು.

ಇವನ ಮಗನಾದ ಉರಗಯಿಖಾನನು ಸಾಮ್ರಾಜ್ಯವನ್ನು ಇನ್ನೂ ವಿಸ್ತರಿಸಿದನಲ್ಲದೆ ತಾಳ್ಮೆಯಿಂದಲೂ ವಿವೇಕದಿಂದಲೂ ಆಳಿದನು. ಇವನ ತರುವಾಯ ಪಟ್ಟಕ್ಕೆ ಬಂದ ಮಂಗೂಖಾನನು ೧೨೫೯ರವರೆಗೆ ಆಳಿದನು. ಮತ್ತು ತನ್ನ ಆಳಿಕೆಯಲ್ಲಿ ತಿಬೇಟ ಪ್ರದೇಶವನ್ನು ರಾಜ್ಯಕ್ಕೆ ಸೇರಿಸಿಕೊಂಡನು. ಆಗ ಪರ್ಶಿಯಾದಲ್ಲಿ ಆಳುತ್ತಿದ್ದ ಹುಲಗುಖಾನನು ಬಗದಾದದ ಖಲೀಫರನ್ನು ಕೊನೆಗಾಣಿಸಿಬಿಟ್ಟನು.

ಈಗ ಮಂಗೋಲ ಸಾಮ್ರಾಜ್ಯವು ಏಶಿಯಾ ಮತ್ತು ಯುರೋಪ ಇವೆರಡೂ ಖಂಡಗಳಲ್ಲಿ ವಿಸ್ತಾರಪಡೆಯಿತು.

ಮಂಗೂಖಾನನ ತರುವಾಯ ಕುಬ್ಲಾಯಿಖಾನನು ವಿಖ್ಯಾತಿ ಪಡೆದನು. ಚೀನಕ್ಕೆ ಅಧಿಪತಿಯಾಗಿದ್ದರಿಂದ ಇವನು ಚೀನಿ ಸಂಸ್ಕೃತಿಯನ್ನು ಕಂಡು ಮೆಚ್ಚಿದನು. ಹಳೆ ರಾಜಧಾನಿಯನ್ನು ಬಿಟ್ಟು ಕುಬ್ಲಾಯಿಖಾನನು ಪೆಕಿಂಗ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಕ್ರಿ. ಶ ೧೨೯೪ರವರೆಗೆ ಆಳಿದ, ಇವನು ಅನ್ನಂ, ಬ್ರಹ್ಮದೇಶಗಳನ್ನು ಗೆದ್ದುಕೊಂಡನು. ಇವನು ಬಹಳ ವಿಶಾಲ ಹೃದಯಿಯಾಗಿದ್ದನು. ಅನ್ಯ ಮತಸ್ಥರನ್ನು ಇವನು ಪರಮಾದರದಿಂದ ಕಂಡನು.

ಕುಬ್ಲಾಯಿಖಾನನ ಕಾಲದಲ್ಲಿ ಕಪ್ಪುಸಮುದ್ರದ ನೆರೆಯ ಪ್ರದೇಶಗಳಿಗೆ ವ್ಯಾಪಾರಕ್ಕೆಂದು ಇಟಲಿಯ ಪೋಲೋಬಂಧುಗಳೆಂಬ ಕ್ರೈಸ್ತ ಸಹೋದರರು ಹೋಗಿದ್ದರು. ಖಾನನ ಕಡೆಯವರು ಅವರನ್ನು ಆದರಿಸಿ ಚೀನಕ್ಕೆ ಕರೆದುಕೊಂಡು ಹೋದರು. ಅಲ್ಲಿಯ ಮಂಗೋಲ ಅರಸರು ಕ್ರೈಸ್ತಮತಕ್ಕೆ ಮನಸೋತರು. ಆದ್ದರಿಂದ ಪೋಲೋ ಬಂಧುಗಳ ಮುಖಾಂತರ ಯುರೋಪದಲ್ಲಿಯ ಪೋಪನಿಗೆ ಒಂದು ಸಂದೇಶವನ್ನು ಕಳಿಸಿ ೧೦೦ ಜನ ಕ್ರೈಸ್ತಮತಬೋಧಕರನ್ನು ಕಳಿಸಬೇಕೆಂದು ವಿನಂತಿಸಿದರು. ಆದರೆ ಪೋಪನ ಹತ್ತಿರ ಇಷ್ಟು ದೂರಪ್ರವಾಸವನ್ನು ಕೈಕೊಳ್ಳುವವರಿಲ್ಲದ್ದರಿಂದ ಈ ಸಂಗತಿಯು ಜರುಗಲಿಲ್ಲ. ಆದರೆ ಮತ್ತೊಮ್ಮೆ ಪೋಲೋ ಸಹೋದರರು ಮಾರ್ಕೋ ಪೋಲೊ ಎಂಬ ತಮ್ಮನನ್ನು ಕರೆದುಕೊಂಡು ಪುನಃ ಹೊರಟರು. ಖಾನನು ಎಂದಿನಂತೆ ಅವರನ್ನು ಆದರಿಸಿ ಮಾರ್ಕೋನಿಗೆ ಒಂದು ಹುದ್ದೆಯನ್ನು ಕೊಟ್ಟನು. ಮಾರ್ಕೋನು ೩ ವರ್ಷಗಳವರೆಗೆ ಯ್ಯಾಂಗಚಾಂಗನಗರದ ಅಧಿಕಾರಿಯಾಗಿದ್ದನು. ಮಾರ್ಕೋನು ಚೀನ ಜಪಾನ ಬ್ರಹ್ಮದೇಶಗಳಲ್ಲಿ ಸಂಚರಿಸಿ ಅವುಗಳ ಪರಿಚಯ ಮಾಡಿಕೊಂಡನು. ಸ್ವದೇಶಕ್ಕೆ ತಿರುಗಿ ಹೊರಟಾಗ ಕುಬ್ಲಾಯಿಖಾನನು ಇವರನ್ನು ಪರ್ಶಿಯಾದಲ್ಲಿದ್ದ ತನ್ನ ತಮ್ಮನ ಕಡೆಗೆ ಕಳುಹಿದನು. ಆಗ ಇವರು ಸಮುದ್ರ ಮಾರ್ಗವಾಗಿ ಪ್ರಯಾಣ ಬೆಳೆಸಿ ಮೆಸಪೊಟೇಮಿಯಾ ಮತ್ತು ಇರಾಣದ ಪರ್ವತಗಳೊಳಗಿಂದ ಹಾಯ್ದು ಇರಾಣ ಬಯಲು ಪ್ರದೇಶಗಳನ್ನು ಸೇರಿದರು. ಮಾರ್ಗದಲ್ಲಿ ಸುಮಾತ್ರಾ ಮತ್ತು ದಕ್ಷಿಣಗಳಲ್ಲಿ ಕೆಲ ದಿನಗಳವರೆಗೆ ತಂಗಿದರು. ಮುಂದೆ, ಇರಾಣದಿಂದ ಕಾನ್‌ಸ್ಟಂಟಿನೋಪಲ್ಲದ ಮಾರ್ಗವಾಗಿ ಇವರು ಸ್ವದೇಶಕ್ಕೆ ತೆರಳಿದರು. ತಲುಪಿದಾಗ ಇವರು ಪೌರ್ವಾತ್ಯ ಪೋಷಾಕಿನಲ್ಲಿದ್ದದರಿಂದ ಸ್ವಜನರು ಇವರನ್ನು ಗುರುತಿಸಲಿಲ್ಲ. ಇವರು ವಿವರಿಸಿದ ದೇಶಕೋಶಗಳ ಸುದ್ದಿಗಳನ್ನು ಅವರು ನಂಬದಾದರು. ಯುರೋಪದವರು ಅಷ್ಟು ಅಜ್ಞಾನದಲ್ಲಿದ್ದರು. ಒಂದು ಔತಣಮಾಡಿಸಿ ಇವರು ಎಲ್ಲರಿಗೂ ಆಮಂತ್ರಣ ಕೊಟ್ಟರು. ಸರ್ವ ಜನರ ಮಧ್ಯದಲ್ಲಿ ಇವರು ತಮ್ಮ ಹಳೆಯ ಪೋಷಾಕುಗಳನ್ನು ಧರಿಸಿದರು. ಕಡೆಗೆ ಇವರು ವಿವರಿಸಿದ ಸಂಗತಿಗಳನ್ನೊಳಗೊಂಡ ಹೊತ್ತಿಗೆಯು ಹೊರಬಿದ್ದಿತು. "ಮಾರ್ಕೋ ಪೋಲೋನ ಪ್ರವಾಸಗಳು" ಎಂದು ಅದರ ಹೆಸರು. ಈ ಪುಸ್ತಕದಲ್ಲಿಯ ಸಂಗತಿಗಳು ಕೃತ್ರಿಮ

ವೆಂದು ಯುರೋಪದ ಜನರೆಲ್ಲ ತಿಳಿದರು.

ಮಹಮ್ಮದೀಯರು ಹುರುಪುಗೊಂಡು ವಿಸ್ತಾರ ಹೊಂದಿದ್ದನ್ನು ನಾವು ಕಂಡೆವು. ಈ ಕಾಲದಲ್ಲಿಯೂ ಇದಕ್ಕೂ ಮುಂಚಿನ ಕಾಲದಲ್ಲಿಯೂ ಅರಬರು ದಕ್ಷಿಣ ಭಾರತಕ್ಕೆ ವ್ಯಾಪಾರಕ್ಕಾಗಿ ಹಡಗುಗಳಲ್ಲಿ ಬರುತ್ತಿದ್ದರು. ಬಗದಾದ ಖಲೀಫರಿಂದ ಆಜ್ಞೆ ಪಡೆದ ಅರಬರ ಗುಂಪು ಪರ್ಶಿಯಾದ ಮೇಲೆ ದಾಳಿ ಮಾಡಿದಾಗ ಬಲೂಚಿಸ್ತಾನದ ವರೆಗೆ ನುಗ್ಗಿತು. ಅಲ್ಲಿಯ ಅರಸನು ಅವ ರೊಡನೆ ಯುದ್ಧ ಮಾಡುತ್ತ ಮಡಿದನು. ಮುಂದೆ ಕ್ರಿ. ಶ. ೬೬೪ ರಲ್ಲಿ ಮಹಾಬಿಜ್ ಎಂಬ ಮುಸಲ್ಮಾನ ಸರದಾರನು ಮುಲ್ತಾನದ ವರೆಗೂ ಬಂದು ಪುನಃ ತಿರುಗಿ ಹೋದನು. ಕ್ರಿ. ಶ ೭೧೨ರಲ್ಲಿ ಕೆಲವು ಅರಬ ವ್ಯಾಪಾರಸ್ಥ ರನ್ನು ಸುಲಿದುದಕ್ಕೆ ಬಗದಾದದ ಖಲೀಫನು ಸಿಂಧ ಪ್ರಾಂತದ ಮೇಲೆ ಏರಿ ಬಂದನು. ಘೋರ ಯುದ್ಧವಾಯಿತು. ಖಲೀಫನು ಗೆದ್ದನು. ಅರಾರ ಚಿತ್ತೂರುಗಳೆಂಬ ಪಟ್ಟಣಗಳು ಖಲೀಫನ ವಶವಾದವು. ಕ್ರಿ. ಶ. ೭೧೩ರಲ್ಲಿ ಮುಲ್ತಾನ ನಗರವನ್ನು ವಶಪಡಿಸಿಕೊಂಡು ಅಲ್ಲಿ ಒಬ್ಬ ಅಧಿಕಾರಿಯನ್ನು ನೇಮಿಸಿ ಮರಳಿದನು. ಖಲೀಫನ ಪರವಾಗಿಯಿಂದ 'ಮಹಮ್ಮದ ಬಿನ್ ಕಾಶೀಮ' ಎಂಬವನು ಈ ಕೆಲಸವನ್ನು ಮಾಡಿದನು. ಕಾಲಗತಿಯಲ್ಲಿ ಈ ಅಧಿಕಾರಿಯು ಜನರಿಗೆ ಮುಸಲ್ಮಾನ ಮತವನ್ನು ಸ್ವೀಕರಿಸಿರೆಂದು ಒತ್ತಾಯ ಪಡಿಸಹತ್ತಿ ದನು. ಒಟ್ಟಾರೆ ಬಗದಾದ ಖಲೀಫರ ಅಧಿಕಾರವು ಕ್ರಿ. ಶ. ೮೭೧ರ ವರೆಗೆ ಸಿಂಧ ಪ್ರಾಂತದ ಕೆಲವು ಭಾಗಗಳಲ್ಲಿ ನಡೆಯಿತು. ಅಂದಿನಿಂದ ಸಿಂಧ ಪ್ರಾಂತವು ಮಹಮ್ಮದೀಯರ ವರ್ಚಸ್ಸಿಗೆ ಒಳಗಾಗಿದೆ

ಇಸ್ಲಾಂ ಸಂಪರ್ಕಕ್ಕೆ ಮುಂಚಿನ ಭಾರತ:

ತೋರಮಾನನಿಂದ ಗಝನಿ ಮಹಮೂದನ ದಾಳಿಗಳ ವರೆಗೆ ಹಿಂದು ಸ್ಥಾನಕ್ಕೆ ಯಾವ ಪರದೇಶದವರ ದಾಳಿಗಳೂ ಆಗಲಿಲ್ಲ. ಈ ಪರಿಸ್ಥಿತಿಯು ಒಮ್ಮೆಲೆ ಕಹಿ ಫಲಗಳನ್ನು ಕೊಡುವಂತೆ ಭಾರತವು ತನ್ನ ಜಾಗೃತಾವಸ್ಥೆ ಯನ್ನು ಬಿಟ್ಟುಕೊಡಹತ್ತಿತೆಂದು ಹೇಳಬಹುದು. ಆದ್ದರಿಂದ ಶೌರ್ಯ, ಸ್ವದೇಶಾಭಿಮಾನ, ಮುಂತಾದ ಸದ್ಗುಣಗಳು ಕೆಲ ಮಟ್ಟಿಗೆ ಮಾಯವಾಗ

ಹತ್ತಿದವು. ಮೇಲಾಗಿ ಭಾರತೀಯರು ತಾವೇ ಮೇಲು ಎಂಬ ಅಹಂಕಾರದ ಭಾವನೆಯನ್ನು ತಾಳಿದ್ದರು. ಅಂದರೆ ತಮ್ಮ ಶಾಸ್ತ್ರ, ಧರ್ಮ, ಕಲೆ, ಆಡಳಿತೆಗಳ ವಿಷಯವಾಗಿ ಇತರ ದೇಶಗಳವರ ಕೂಡ ಚರ್ಚಿಸದಾದರು. ಈ ರೀತಿ ಇತರ ದೇಶಗಳಲ್ಲಿ ನಡೆಯುವ ಸಂಗತಿಗಳು ಭಾರತೀಯರಿಗೆ ತಿಳಿಯದಾದವು. ಈ ಕಾರಣಗಳಿಂದ ಸಾಹಿತ್ಯ, ಶಿಲ್ಪ, ನೀತಿಗಳಲ್ಲಿ ಅಧಃಪತನವು ಕಂಡುಬಂದಿತು. ಈ ಸಂದರ್ಭದಲ್ಲಿ ಗುಹ್ಯ ಸಮಾಜದ ಸಂಗತಿಯನ್ನು ಹೇಳದಿರೆ ತಪ್ಪಾಗದು. ಇವರು ಬೌದ್ಧ ಧರ್ಮದ ತತ್ವಗಳನ್ನು ಬದಿಗೊತ್ತಿ ಅನೀತಿವಂತರಾಗಿ ನಡೆದರು. ಹಿಂದೂ ಗುಡಿ ಗುಂಡಾರಗಳಲ್ಲಿರುವ ದೇವದಾಸಿಯರು ಇದಕ್ಕೆ ಪುಷ್ಟಿ ಕೊಟ್ಟರು. ಇದರಂತೆ ಆಗಿನ ಸಮಾಜದಲ್ಲಿ ಪಾಶುಪತರೂ, ಕಾಪಾಲಿಕರೂ ಭೀಕರ ಮತ್ತು ಬೀಭತ್ಸವಾದ ಆಚಾರವನ್ನಿಟ್ಟುಕೊಂಡರು. ಒಂದು ರೀತಿಯಲ್ಲಿ ಆಗಿನ ಭಾರತೀಯರು ಸ್ವಾಭಿಮಾನರಹಿತರೂ, ಹಟವಾದಿಗಳೂ, ದುರಾಗ್ರಹಿಗಳೂ, ಒಕ್ಕಟ್ಟಿಲ್ಲದವರೂ ಆಗಿದ್ದರು.

ಆದರೆ ಹಿಂದೂ ಸಮಾಜದ ತಳಹದಿಯು ಭದ್ರವಾಗಿದ್ದಿತು. ಬೌದ್ಧ ಧರ್ಮವನ್ನು ಅಳವಡಿಸಿಕೊಂಡದ್ದರಿಂದ ಒಂದು ತರದ ದಾರ್ಢ್ಯತೆಯನ್ನು ಪಡೆದು, ಸಂಪತ್ತು ವಿಪುಲವಾಗಿ ಕೂಡಿಬಿದ್ದುದರಿಂದ, ಎಂಥ ಸಾಹಸಕ್ಕಾದರೂ ಸಮಾಜವು ಅಣಿಯಾಗುವಂತಾಯಿತು. ಮುಂಬರುವ ಮಹಮ್ಮದೀಯರ ದಾಳಿಗಳನ್ನು ಈ ಸ್ಥಿರವಾಗಿ ಸಮಾಜವು ತಡೆಯಲು ಅಣಿಯಾಗಿದ್ದಿತು.

ಮಹಮ್ಮದೀಯರ ಸಂಪರ್ಕ:

ಕ್ರಿ. ಶ. ೭೧೨ರಲ್ಲಿ ಮಹಮ್ಮದ ಬಿನ್ ಕಾಶೀಮನೆಂಬಾತನು ಬಗ್ದಾದದ ಖಲೀಫನಿಂದ ಪ್ರೇರಿತನಾಗಿ ಭಾರತಕ್ಕೆ ನುಗ್ಗಿ ಸಿಂಧ ಪ್ರಾಂತದಲ್ಲಿ ಕಾಲುಚಾಚಿದನಷ್ಟೆ ? ಇದನ್ನೆ ಆಧಾರವನ್ನಾಗಿ ಮಾಡಿಕೊಂಡು, ಮುಸಲ್ಮಾನರು ಮುಲ್ತಾನವನ್ನು ಹಿಡಿದುಕೊಂಡದ್ದಾಯಿತು. ನಂತರ ಬಂದ ಸಿಂಧದ ಮಹಮ್ಮದೀಯ ಆಡಳಿತೆಗಾರರು ತಮ್ಮ ವಿಜಯದ ಹೆಜ್ಜೆಯನ್ನು

ಮುಂದಿಡಲು ಎಷ್ಟೋ ಪ್ರಯತ್ನ ಮಾಡಿದರು. ಆದರೆ ಅವುಗಳಿಗೆ ಯಶಸ್ಸು ದೊರೆಯಲಿಲ್ಲ. ಇದೇ ವೇಳೆಯಲ್ಲಿ ಭಾರತದ ವಾಯುವ್ಯಕ್ಕೆ ಕೆಲ ಹೊಸ ಸಂಗತಿಗಳು ನಡೆದು, ಮುಂಬರುವ ಮಹಮ್ಮದೀಯರ ದಾಳಿಗಳ ನವ ಸಂವಿಧಾನವು ನಡೆಯಿತು.

ಈಗಿನ ಅಫಗಾಣಿಸ್ತಾನವೆಂಬ ಭಾಗವೆಲ್ಲ ಖಲೀಫರಿಗೆ ಅಧೀನವಾದ ದೇಶದ ಕೊನೆಯ ಪ್ರದೇಶವೆನಿಸಿತು. ಖಲೀಫರು ಕೊನೆಗೊಳ್ಳುವ ಕಾಲಕ್ಕೆ ಈ ಭಾಗದಲ್ಲಿ ಅಲಪ್ತಗೀನನೆಂಬ ಸುಭೇದಾರನು ಪ್ರಸಿದ್ಧಿ ಪಡೆದು, ಅದನ್ನು ಸ್ವತಂತ್ರ ರಾಜನಂತೆ ಆಳಿದನು. ಇವನ ನಂತರ ಸಬಕ್ತಗೀನನೆಂಬವನು ರಾಜನಾಗಿ ರಾಜ್ಯದ ಬಲವನ್ನು ಇನ್ನೂ ಬೆಳೆಸಿದನು. ಈ ಕಾಲಕ್ಕೆ ಅಫಗಾಣಿಸ್ತಾನದ ಕೆಲವು ಭಾಗವೂ, ಪಂಜಾಬದ ಕೆಲವು ಭಾಗವೂ ಕೂಡ, ಶಹಾ ಜಯಪಾಲನೆಂಬ ಅರಸನ ಆಡಳಿತಕ್ಕೆ ಒಳಪಟ್ಟಿದ್ದಿತು. ಸಬಕ್ತಗೀನನು ಅಫಗಾಣಿಸ್ತಾನವನ್ನು ಒಂದುಗೂಡಿಸಲು ಪ್ರಯತ್ನಿಸಿದಾಗ, ಶಹ ಜಯಪಾಲನು ಪ್ರತಿಭಟಿಸಿದರೂ, ಕೊನೆಗೆ ಸಬಕ್ತಗೀನನ ಆಧಿಪತ್ಯವನ್ನು ಒಪ್ಪಿಕೊಂಡನು. ಕೊರಾಸಾನ ಮತ್ತು ಮಧ್ಯ ಏಶಿಯದ ಕೆಲವು ಪ್ರದೇಶಗಳನ್ನು ಒಳಗೊಂಡ ಇವನ ರಾಜ್ಯವು ಭಾರತದ ನೆಮ್ಮದಿಗೆ ಅಡ್ಡಿಯನ್ನೊಡ್ಡುತ್ತಲಿತ್ತೆಂಬುದು ಆಗಿನವರ ಅರಿಕೆಗೆ ಬರಲಿಲ್ಲ. ಅಥವಾ ತಮ್ಮ ಸಂಕುಚಿತ ಭಾವನೆಗೆ ಅನುಸಾರವಾಗಿ ಈ ಸಂಗತಿಯನ್ನು ಕಡೆಗಣಿಸಿರಲೂಬಹುದು.

ಅಭ್ಯಸನಗಳು:

೧. ಜೆಂಗಿಜಖಾನನು ದಾಳಿ ಮಾಡಿದ ಪ್ರದೇಶಗಳನ್ನು ನಕ್ಷೆಯಲ್ಲಿ ತುಂಬಿರಿ.

೨. ಬಿಡುವು ತುಂಬಿರಿ:

(ಅ) ರಜಪೂತರ ಹುಟ್ಟುಗುಣಗಳೆಂದರೆ (೧) .... (೨) .... (೩) . ... ಆಗಿದ್ದವು.

(ಬ) ಕ್ರಿಶ್ಚನರು ಮಹಮ್ಮದೀಯರ ಕೂಡ .... ಯುದ್ಧ ನಡೆಸಿದರು.

(ಕ) ಮಧ್ಯ ಯುಗದ ಯುರೋಪದಲ್ಲಿ ... ಪದ್ಧತಿಯು ಇತ್ತು.

೩. ಕೆಳಗೆ ಕೊಟ್ಟ ಆಯಾ ಚೌಕಟ್ಟುಗಳಲ್ಲಿ ಭಾರತ ಮತ್ತು ವಿದೇಶಗಳಲ್ಲಿ ಆಯಾ ಶತಮಾನಗಳೊಳಗೆ ಜರುಗಿದ ಮೂರು ಮುಖ್ಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ. (ಉದಾಹರಣೆಯೆಂದು ಒಂದು ಸಂಗತಿಯನ್ನು ಕೊಡಲಾಗಿದೆ.

ಭಾರತ	ಶತಮಾನಗಳು	ವಿದೇಶಗಳು
(೧) ಹರ್ಷ, ಪುಲಕೇಶಿಯರು, ಪಲ್ಲವ ನರಸಿಂಹವರ್ಮನು, ರಾಜ್ಯಗಳನ್ನಾಳಿದರು.	೭ನೆಯ ಶತಕ	(೧) ಇಂಡೋನೇಶಿಯಾ, ಅನ್ನಾಂ ಮುಂತಾದಲ್ಲಿ ಭಾರತೀಯರು ನೆಲೆಸಿದರು.
	೮ನೆಯ ಶತಕ	
	೯ನೆಯ ಶತಕ	
	೧೦ನೆಯ ಶತಕ	
	೧೧ನೆಯ ಶತಕ	
	೧೨ನೆಯ ಶತಕ	

೯. ದಿಲ್ಲಿಯ ಸುಲ್ತಾನರು

ಪಂಜಾಬದ ಜಯಪಾಲನು ಮಹಮ್ಮದೀಯರ ಗಂಡಾಂತರದ ಅರಿವು ಮಾಡಿಕೊಂಡು, ನೆರೆಯ ರಾಜರ ಸಹಾಯವನ್ನು ಕೋರಿದನು. ಅಜಮೀರದ ಚವ್ಹಾಣರೂ, ಕನೋಜದ ಪಾರಮಾರರೂ ಇದಕ್ಕೆ ಒಪ್ಪಿಕೊಂಡರು. ಅದರಂತೆ ದೊಡ್ಡ ದಂಡನ್ನು ಕೂಡಿಸಿ, ಕ್ರಿ. ಶ. ೯೯೧ರಲ್ಲಿ ಜಯಪಾಲನು ಗಝನೀ ಮಹಮ್ಮದನನ್ನು ಎದುರಿಸಿದನು. ಆದರೆ ಈ ಕಾಳಗವು ಜಯಪಾಲನಿಗೆ ದೊಡ್ಡದೊಂದು ಅಪಜಯವನ್ನು ತಂದೊಡ್ಡಿತು. ಈ ರೀತಿ ಪೇಶಾವರವು ಮಹಮ್ಮದನ ವಶವಾಗಿ, ಭಾರತದೊಳಕ್ಕೆ ನುಗ್ಗುವ ಮಾರ್ಗಗಳು ಅತನಿಗೆ ಸಿಕ್ಕವು. ಆ ನಂತರ ಮಹಮ್ಮದನು ಕೊಳ್ಳೆ ಹೊಡೆಯಲು, ಭಾರತಕ್ಕೆ ಎಷ್ಟೋ ಸಲ ನುಗ್ಗಿ ಬಂದನು. ಪ್ರತಿ ಸಲವೂ ಸಿಕ್ಕ ಲೂಟಿಯ ದ್ರವ್ಯದಿಂದ ಮಹಮ್ಮದನ ದ್ರವ್ಯಲಾಲಸೆಯು ಹೆಚ್ಚಾಯಿತು. ದ್ರವ್ಯ ಸಂಚಯವು ಬಹುತರ ಕೋಶಾಗಾರದಲ್ಲಿಯೂ, ಹಿಂದೂ ದೇವಾಲಯಗಳಲ್ಲಿಯೂ ಇರುವದೆಂದು ಕಂಡುಹಿಡಿದು, ಇವನು ಅರಸರ ಕೂಡ ಯುದ್ಧಕ್ಕೆ ಮತ್ತು ಮೂರ್ತಿಗಳ ಭಂಗಕ್ಕೆ ಅಣಿಯಾದನು.

ಮಹಮ್ಮದನು ಮೊದಲು ಪಂಜಾಬದಲ್ಲಿ ನೆಲೆಯೂರಿ ನಿಂತು, ಮುಂದಿನ ದಾಳಿಗಳ ಸಿದ್ಧತೆಯನ್ನು ಮಾಡಿಕೊಂಡನು. ಗಂಗಾ ನದಿಯ ದಂಡೆಗುಂಟ ಮತ್ತು ಕಾಠೇವಾಡದಲ್ಲಿಯ ಸೋಮನಾಥ ದೇವಾಲಯದ ವರೆಗೂ ಇವನ ದಾಳಿಗಳು ಮುಟ್ಟಿದವು. ಠಾಣೇಶ್ವರ, ಕನೋಜ, ಮಥುರಾ ಮುಂತಾದ ಪಟ್ಟಣಗಳಿಗೆ ದಾಳಿಯಿಟ್ಟು, ಇವನು ಅಪಾರ ದ್ರವ್ಯವನ್ನು ಸುಲಿದುಕೊಂಡನು. ಕೊಳ್ಳೆ ಹೊಡೆಯುವದು, ಮೂರ್ತಿಗಳನ್ನು ಒಡೆಯುವದು, ಇವೆರಡನ್ನು ಮಾತ್ರ ಮಹಮ್ಮದನು ಮಾಡಿದನಲ್ಲದೆ, ಪಂಜಾಬದ ಹೊರತು ಇನ್ನಾವ ಪ್ರದೇಶವನ್ನೂ ಮಹಮ್ಮದನು ಅಧೀನಪಡಿಸಿಕೊಳ್ಳಲು ಆಶೆಪಡಲಿಲ್ಲ. ಹಿಂದುಗಳು ಈ ದಾಳಿಗಳನ್ನು, ಒಂದು ದೇವತಾ ಕ್ಷೋಭೆ ಅಥವಾ ಪಿಡುಗು ಎಂದು ಎಣಿಸಿದರಲ್ಲದೇ, ಇವುಗಳನ್ನು ತಡೆದು, ದಾಳಿಗಾರರನ್ನು ಮಣಿಸುವ ವಿಚಾರ ಮಾಡಲಿಲ್ಲ. ಸೋಮನಾಥದ ದಾಳಿಯ ಕಾಲಕ್ಕೆ

ಮಾತ್ರ, ಮಹಮ್ಮದನು ಮರಳಿ ಹೋಗುವಾಗ, ಹಿಂದುಗಳು ಅವನಿಗೆ ಅತ್ಯಂತ ಭೀತಿಯನ್ನುಂಟುಮಾಡಿದರು. ಕಾಠೇವಾಡದ ಭೋಜನೆಂಬ ಅರಸನು ಇವನನ್ನು ಬೆನ್ನಟ್ಟಿದನು. ಮತ್ತು ಮಹಮ್ಮದನ ಹಿನ್ನಡೆಯನ್ನು ತಡೆಹಿಡಿದನು. ಆದ್ದರಿಂದ ಮಹಮ್ಮದನು ಅವಸರದಿಂದ ಸಮೀಪದ ಮಾರ್ಗದಿಂದ ತನ್ನ ದೇಶಕ್ಕೆ ಓಡಿಹೋಗಬೇಕಾಯಿತು.

ಮಹಮ್ಮದನ ಮಗನಾದ ಮಸೂದನ ಕಾಲದಲ್ಲಿ ತಿಲಕನೆಂಬ ಹಿಂದೂ ಸರದಾರನೊಬ್ಬನು ಪಂಜಾಬದಲ್ಲಿ ದೊಂಬಿಗಳನ್ನು ಶಾಂತಗೊಳಿಸುವ ಕೆಲಸಕ್ಕೆ ನೇಮಕ ಹೊಂದಿದನು.

ಘೋರಿ ಮಹಮ್ಮದ:

ಗಝನಿ ಮಹಮ್ಮದನಿಂದ ಘೋರಿ ಮಹಮ್ಮದನ ಕಾಲದ ವರೆಗೆ - ಅಂದರೆ ೧೬೦ ವರ್ಷಗಳ ವರೆಗೆ— ಭಾರತಕ್ಕೆ ಮಹಮ್ಮದೀಯರ ದಾಳಿಗಳು ಆಗಲಿಲ್ಲ. ಗಝನೀ ಮಹಮ್ಮದನ ನಂತರ ಎಷ್ಟೋ ವರ್ಷಗಳ ಮೇಲೆ ಆ ಪ್ರಾಂತಕ್ಕೆಲ್ಲ ಒಡೆಯನಾದ ಘೋರಿ ಮಹಮ್ಮದನು ಭಾರತದ ಮೇಲೆ ಮುತ್ತಿಗೆ ಹಾಕಿದನು. ಆಗ ಉತ್ತರ ಭಾರತದಲ್ಲಿ ಅನೇಕ ಶೂರರಾದ ರಜಪೂತ ಅರಸರು ರಾಜ್ಯನಾಳುತ್ತಿದ್ದರು. ದಿಲ್ಲಿಯ ಅನಂಗಪಾಲ, ಅಜಮೀರದ ಸೋಮೇಶ್ವರ, ಕನೋಜದ ಜಯಚಂದ, ಚಿತ್ತೋಡದ ಸಾಮಂತಸಿಂಗ ಮುಂತಾದವರು ಒಳ್ಳೆ ಹೆಸರಾಗಿದ್ದರು. ಇವರಲ್ಲಿ ಕೆಲವರು ಒಗ್ಗಟ್ಟಿನಿಂದ ನಡೆದರೆ, ಇನ್ನು ಕೆಲವರು ತಮಗೆ ಬೇಡಾದವರನ್ನು ಸದೆಬಡಿಯಲು ಹೊರಗಿನ ವೈರಿಗಳನ್ನು ಬರಮಾಡಿಕೊಳ್ಳುವವರಾಗಿದ್ದರು.

ಕಾಲಗತಿಯಲ್ಲಿ ಪೃಥ್ವಿರಾಜ ಚವ್ಹಾಣ ಎಂಬವನು ಅಜಮೀರ ದಿಲ್ಲಿಗಳಿಗೆ ಒಡೆಯನಾದನು. ಕ್ರಿ. ಶ. ೧೧೯೧ರಲ್ಲಿ ಪೃಥ್ವಿರಾಜನಿಗೂ ಮಹಮ್ಮದ ಘೋರಿಗೂ ಪಾಣಿಪತ್ತದ ಸೆರೆಯಲ್ಲಿ ಕದನವೆಸಗಿ ಘೋರಿಯು ಸೋಲನ್ನೊಪ್ಪಬೇಕಾಯಿತು. ಆದರೆ ಕನೋಜದ ಜಯಚಂದನು ಪೃಥ್ವಿರಾಜನ ಮೇಲಿನ ವೈರದಿಂದ, ಮುಂದೆ ಎರಡೇ ವರ್ಷಗಳಲ್ಲಿ ಮಹಮ್ಮದನನ್ನು

ಮತ್ತೊಮ್ಮೆ ಬರಮಾಡಿಕೊಂಡನು. ಈ ಸಾರೆ ಥಾಣೇಶ್ವರದ ಬಳಿಯಲ್ಲಿ ಕದನವೆಸಗಿ ಪೃಥ್ವಿರಾಜನು ಸೋತು ಮರಣಹೊಂದಿದನು. ಮುಂದೆ ಕೆಲವೇ ದಿನಗಳಲ್ಲಿ ಜಯಚಂದನನ್ನೂ ಘೋರಿಯು ಹಣ್ಣಿಗೆ ತಂದನು. ಮತ್ತು ಆವನ ಪಟ್ಟಣವನ್ನು ಸೂರೆಗೈದನು. ಮುಂದೆ ಇವನು ಕಾಶಿಯನ್ನೂ ಮುತ್ತಿದನು. ಬಳಿಕ ತನ್ನ ದೇಶಕ್ಕೆ ಮರಳಿದನು. ಈ ಕಾಲಕ್ಕೆ ತಾನು ಗೆದ್ದ ಭಾರತ ಪ್ರದೇಶಗಳನ್ನು ನೋಡಿಕೊಳ್ಳಲಿಕ್ಕೆ ಕುತುಬುದ್ದೀನ ಐಬಕ ಎಂಬ ತನ್ನ ಗುಲಾಮನನ್ನು ದಿಲ್ಲಿಯಲ್ಲಿಟ್ಟು ಹೋದನು. ಕ್ರಿ. ಶ. ೧೨೦೬ರಲ್ಲಿ ಘೋರಿ ಮಹಮ್ಮದನ ಕೊಲೆಯಾದ್ದರಿಂದ ಕುತುಬುದ್ದೀನ ಐಬಕನು ಹಿಂದುಸ್ತಾನದಲ್ಲಿ ಸ್ವತಂತ್ರನಾದನು. ಈ ರೀತಿ ದಿಲ್ಲಿ ಭಾಗದಲ್ಲಿ ಮಹಮ್ಮದೀಯರ ಆಳಿಕೆ ಮೊದಲಾಯಿತು.

ಕುತುಬುದ್ದೀನ ಐಬಕ:

ಇವನು ಕ್ರಿ. ಶ. ೧೨೦೬ರಲ್ಲಿ ದಿಲ್ಲಿಯ ಪಟ್ಟಕ್ಕೆ ಬಂದನು. ಇತರ ಅರಸರ ಕೂಡ ಶರೀರ ಸಂಬಂಧವನ್ನು ಬೆಳೆಸಿ, ತನ್ನ ಸ್ಥಾನವನ್ನು ಗಟ್ಟಿಮಾಡಿಕೊಳ್ಳಬೇಕೆಂದು ಕುತುಬುದ್ದೀನನು ಹವಣಿಸಿದನು. ಇವನ ವಂಶವು ದಿಲ್ಲಿ ಪಟ್ಟದ ಮೇಲೆ ಗುಲಾಮ ವಂಶವೆಂದು ಹೆಸರಾಗಿದೆ. ಇವನು ೪ ವರ್ಷ ರಾಜ್ಯವಾಳಿದ ಬಳಿಕ ಆಟದ ಬಯಲಿನಲ್ಲಿ ಗಾಯಗೊಂಡ ನೆವದಿಂದ ಮೃತಿ ಪಟ್ಟನು. ಆ ಮೇಲೆ ಇವನ ಮಗನಾದ ಆರಮ್ ಎಂಬವನು ಪಟ್ಟವೇರಿದನೇನೋ ನಿಜ. ಆದರೆ ಇವನು ಹೇಡಿಯಾಗಿದ್ದರಿಂದ, ಕುತುಬುದ್ದೀನನ ಅಳಿಯನಾದ ಅಲ್ತಮಶಹನೆಂಬವನು ದಿಲ್ಲಿಯ ಅರಸನಾದನು. ಇವನು ಪಟ್ಟವೇರಿದ ಬಳಿಕ ಶ್ಯಾಮಸುದ್ದೀನನೆಂಬ ಹೆಸರನ್ನಿಟ್ಟುಕೊಂಡನು. ಅಲ್ತಮಶಹನು ಕ್ರಿ. ಶ. ೧೨೩೬ರಲ್ಲಿ ಮೃತಿಪಟ್ಟನು. ಇವನು ಕ್ರಿ. ಶ. ೧೨೩೨ರಲ್ಲಿ ಕುತುಬ ಮಿನಾರವನ್ನು ಕಟ್ಟಿಸಿದನು.

ಸುಲ್ತಾನ ರೇಝಿಯಾ:

ಅಲ್ತಮಶಹನು ತನ್ನ ಗಂಡುಮಕ್ಕಳ ಹೇಡಿತನವನ್ನು ಕಂಡು, ಮಗ

ಣಾದ ರೇಝಿಯಳೇ ಪಟ್ಟಕ್ಕೆ ಬಾಧ್ಯಳೆಂದು ಮೊದಲೇ ಸಾರಿದ್ದನು. ಆದರೆ ಅವಳು ಹೆಂಗಸೆಂಬ ವಾದವನ್ನು ಮುಂದೆಮಾಡಿ, ಪಟ್ಟವನ್ನು ರುಕ್ನ-ಉ-ದ್ದೀನ ಎಂಬವನಿಗೆ ಕೊಟ್ಟಿದ್ದಾಯಿತು. ಕೆಲವೇ ತಿಂಗಳುಗಳಲ್ಲಿ ಇವನು ಆಳಲು ಅಸಮರ್ಥನೆಂದು ಕಂಡುಬಂದದ್ದರಿಂದ, ರೇಝಿಯಳೇ ಪಟ್ಟವನ್ನೇರಿದಳು. ೩ ವರ್ಷಗಳ ವರೆಗೆ ನಾಮಾಂಕಿತ ಗಂಡಸರಂತೆ ಆಡಳಿತೆ ಸಾಗಿಸಿದಳು. ಹಿಂದು ಮುಸಲ್ಮಾನ ಅರಸರ ವಿರುದ್ಧವಾಗಿ ತನ್ನ ರಾಜ್ಯವು ನಡೆಸಿದ ಯುದ್ಧಗಳಲ್ಲಿ ಆಸ್ಥೆಯಿಂದ ಭಾಗ ವಹಿಸಿದಳು. ಪುರುಷರ ಪೋಷಾಕಿನಲ್ಲಿ ಇವಳು ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತು ಯುದ್ಧಭೂಮಿಯಲ್ಲಿ ಮುನ್ನುಗ್ಗುತ್ತಿದ್ದಳು. ಆದರೆ ಅವಳು ಹೆಂಗಸಾದ್ದರಿಂದ, ಅವಳ ಸ್ಥೈರ್ಯ, ಧೈರ್ಯ, ಸಾಹಸಗಳು ಬೇರೆ ಕಲ್ಪನೆಗಳನ್ನು ತಂದುಕೊಟ್ಟವು. ಒಂದು ಸಾರೆ ಎದುರಾಳಿಯನ್ನು ಮದುವೆ ಮಾಡಿಕೊಂಡು ಯುದ್ಧವನ್ನು ನಂದಿಸಲು ಪ್ರಯತ್ನಿಸಿದಳು. ಆದರೆ ಕೆಲವು ಕಾಲ ಕಳೆಯಲಾಗಿ, ಅವಳ ಸರದಾರರೇ ಅವಳ ಕೊಲೆಮಾಡಿದರು.

ಇವಳ ನಂತರ ದಿಲ್ಲಿಯ ಪಟ್ಟಕ್ಕೆ ಬಲ್ಬನ್ ಎಂಬವನು ಬಂದನು. ಇವನು ಬಂಗಾಲದಲ್ಲಿಯ ದಂಗೆಯನ್ನು ಹತ್ತಿಕ್ಕಲು ಪ್ರಯತ್ನ ಮಾಡಿದನು. ಇವನ ನಂತರ ಬಂದ ಸುಲ್ತಾನರು ದಿಲ್ಲಿಯ ಪಟ್ಟಾಧಿಕಾರವನ್ನು ಹಿಡಿತದಲ್ಲಿಟ್ಟುಕೊಳ್ಳಲಾರದಾದರು. ಅಲ್ಲಲ್ಲಿಯ ಹಿಂದೂ ಪ್ರಾಂತ ಪ್ರದೇಶಗಳು ಬೊಂಬೆಯೆಬ್ಬಿಸಿ ಸ್ವತಂತ್ರತೆಯ ಕೂಗನ್ನು ಮುಂದೆ ಮಾಡಿದವು.

ಖಿಲಜಿ ಮನೆತನ- ಅಲ್ಲಾ-ವು-ದೀನ ಖಿಲಜಿ:

ಇಷ್ಟೊತ್ತಿಗೆ ಇನ್ನೊಂದು ಹೊಸ ರಾಜವಂಶವೆ ದಿಲ್ಲಿಯ ಪಟ್ಟದ ಮೇಲೆ ತಲೆಯೆತ್ತಿತು. ಇದೆಂದರೆ, ಖಿಲಜಿ ಮನೆತನ. ಈ ಮನೆತನದಲ್ಲಿ ಒಳ್ಳೆ ಹೆಚ್ಚಳವನ್ನು ಪಡೆದವನೆಂದರೆ, ಅಲ್ಲಾ-ವು-ದೀನ ಖಿಲಜಿ ಎಂಬವನು. ಇವನು ದೇವಗಿರಿಯ ಯಾದವರನ್ನೂ, ಗುಜರಾಥದ ಚಾಲುಕ್ಯರನ್ನೂ ಹಣಿದನು. ರಾಣಾ ಹಮೀರನೆಂಬ ರಜಪೂತ ವೀರನು ಅಲ್ಲಾ-ವು-ದೀನ ಖಿಲಜಿಗೆ ಕಡುವೈರಿಯಾಗಿದ್ದನು. ಕೊನೆಗೆ ಇವನೂ ಕೈಯೂರಿ, ಸೋಲ

ನ್ನೊಪ್ಪಿಕೊಂಡದ್ದರಿಂದ, ಚಿತೋಡವು ಅಲ್ಲಾ-ವು-ದೀನನ ವಶವಾಯಿತು.

ಅಲ್ಲಾ-ವು-ದೀನನ ಸೇನಾಪತಿಯಾದ ಮಲಿಕ ಕಾಫೂರ ಎಂಬವನು ದಕ್ಷಿಣಕ್ಕೆ ಹೌಡುಮಾಡಿ ರಾಮೇಶ್ವರದ ವರೆಗೆ ಸಾಗಿಹೋದನು. ಇವನ ದಾಳಿಯು ಮಿಂಚಿನ ವೇಗದಿಂದಲೂ, ರಭಸದಿಂದಲೂ ಕೂಡಿದ್ದರಿಂದ, ದಕ್ಷಿಣದ ರಾಜ್ಯಗಳೆಲ್ಲ ಕಂಗೆಟ್ಟು ನೋಡಹತ್ತಿದವು.

ಅಲ್ಲಾ ವು-ದೀನನ ಮರಣದ ನಂತರ ಪಟ್ಟಕ್ಕಾಗಿ ಜಗಳಗಳೆದ್ದವು. ಈ ಸಂಧಿಯನ್ನು ಸಾಧಿಸಿ ಹೊರದ ರಾಜ್ಯಗಳು ದಿಲ್ಲಿಯ ಅಧಿಪತ್ಯವನ್ನು ಅಲ್ಲಗಳೆದವು. ರಾಜಪುತ್ರರೂ ಅರಸರೂ ಬಹಳ ಹೀನ ದೆಸೆಗಿಳಿದರು. ಇವರ ಸ್ವಭಾವಗಳು ಬಹಳ ವಿಚಿತ್ರ ರೂಪ ತಾಳಹತ್ತಿದವು. ಕುತುಬುದ್ದೀನ ಮುಬಾರಕ ಎಂಬ ಅರಸನು ಹೆಂಗಸರಂತೆ ವೇಷ ಭೂಷಣಗಳನ್ನು ಮಾಡಿಕೊಂಡು, ಸೂಳೆಯರ ಸಂಗಡ ಸರದಾರರ ಮನೆಯಲ್ಲಿ ಕುಣಿತ ನಡೆಸಿದನಂತೆ ! ಇವನ ಮರಣದ ನಂತರ ಖಿಲಜಿ ಮನೆತನದಲ್ಲಿ ಯೋಗ್ಯನಾದ ಅರಸನು ಸಿಗದ್ದರಿಂದ ಸರದಾರರೆಲ್ಲ ಕಲೆತು, ಗಿಯಾಸ-ಉ-ದೀನ ತಗಲಖ ಎಂಬವನನ್ನು ಪಟ್ಟಕ್ಕೆ ಕುಳ್ಳಿರಿಸಿದರು. ಇವನ ವಂಶಕ್ಕೆ ತಗಲಖ ಮನೆತನವೆಂಬ ಹೆಸರು.

ತಗಲಖ ಮನೆತನ— ಮಹಮ್ಮದ ತಗಲಖ:

ಗಿಯಾಸ-ಉ-ದೀನನು (ಕ್ರಿ. ಶ. ೧೩೨೦ರಿಂದ ೧೩೨೫) ಕೆಲ ಪ್ರಾಂತಗಳಲ್ಲಿ ಶಾಂತತೆಯನ್ನು ನೆಲೆಸಿದನು. ಇವನ ನಂತರ ದಿಲ್ಲಿಯ ಪಟ್ಟವನ್ನೇರಿದ ಮಹಮ್ಮದ ತಗಲಖ ಎಂಬವನು "ಸೃಷ್ಟಿಯ ವಿಚಿತ್ರ ಪ್ರಾಣಿ" ಎಂದು ಹೊಗಳಿಸಿಕೊಂಡಿದ್ದಾನೆ. ಇವನ ಯೋಜನೆಗಳೆಲ್ಲ ವಾದದಲ್ಲಿ ಸಮಂಜಸವಾಗಿದ್ದರೂ, ಕಾರ್ಯರಂಗಕ್ಕಿಳಿದಾಗ ಕಹಿ ಫಲಗಳನ್ನಿತ್ತವು. ತೊಗಲಿನ ನಾಣ್ಯಗಳ ಚಲಾವಣೆ, ರಾಜಧಾನಿಯನ್ನು ದಿಲ್ಲಿಯಿಂದ ದೇವಗಿರಿ(ದೌಲತ್ತಾಬಾದ) ಗೆ ಒಯ್ಯಲು ಪ್ರಯತ್ನಿಸಿದ್ದು, ಮುಂತಾದವುಗಳು ಅವನ ಹುಚ್ಚುತನವನ್ನು ಎತ್ತಿ ತೋರಿಸುವ ಸಂಗತಿಗಳಾಗಿವೆ. ಮಹಮ್ಮದನ ಆಳಿಕೆಯಲ್ಲಿ

ಹಿಂದುಗಳ ಒಕ್ಕಟ್ಟು, ಬಲ ಮುಂತಾದವು ಬೆಳೆಯುತ್ತಿದವು. ಉತ್ತರದಲ್ಲಿ ರಜಪೂತರು ಒಂದುಗೂಡಿದರು. ದಕ್ಷಿಣದಲ್ಲಿ ವಿಜಯನಗರದ ರಾಜ್ಯವು ರೂಪಿಸಿಕೊಂಡಿತು (ಕ್ರಿ. ಶ. ೧೩೩೬) ಈಗಿನ ಮಹಾರಾಷ್ಟ್ರ ಪ್ರದೇಶದಲ್ಲಿ ಬಹಮನಿ ರಾಜ್ಯವೆಂಬುದೊಂದು ಹೊಸ ಸ್ವತಂತ್ರ ಅರಸೊತ್ತಿಗೆಯು ತಲೆಯೆತ್ತಿತು. ಮಹಮ್ಮದನ ನಂತರ ಬಂದ ಫಿರೋಜ ತಗಲಖನೆಂಬಾತನು ದುರ್ಬಲನೂ ಧೈರ್ಯಹೀನನೂ ಆಗಿದ್ದನು. ಆದರೆ ಲೋಕೋಪಯೋಗಿ ಕೆಲಸಗಳನ್ನು ಮಾಡಿದ ದಿಲ್ಲಿಯ ಅರಸರಲ್ಲಿ, ಇವನು ಅಗ್ರಗಣ್ಯನೆಂದು ಹೇಳಬಹುದು. ಇವನು ಗೋಗ್ರಾ ನದಿಗೆ ಕಾಲುವೆಗಳನ್ನು ತೋಡಿಸಿ, ನೀರಾವರಿಯಿಂದ ಹೊಲಗಳಿಗೆ ನೀರು ಸಿಗುವಂತೆ ಮಾಡಿದನು. ಇವನ ಆಡಳಿತವು ಸಡಿಲುಗೊಂಡಿದ್ದುದರಿಂದ ಗುಜರಾತ, ಮಾಳವಾ, ಬಹಾರಗಳು ಸ್ವತಂತ್ರವಾದವು. ಈ ರೀತಿ ೧೪೦೦ ಇಸ್ವಿಯ ಸುಮಾರಕ್ಕೆ ದಿಲ್ಲಿ ರಾಜ್ಯವು ಪಂಜಾಬ ಮತ್ತು ಅದರ ನೆರೆಯ ಪ್ರದೇಶಗಳಲ್ಲಿ ಮಾತ್ರ ಮರ್ಯಾದಿತವಾಯಿತು. ಫಿರೋಜಶಹನ ನಂತರ ಅವನ ಮೊಮ್ಮಗ ಮತ್ತು ಬೇರೊಬ್ಬ ಅರಸು ಇವರೊಳಗೆ ಜಗಳಗಳಿದ್ದವು. ಇವು ಹತ್ತುವರುಷ ನಡೆಯುವದರಲ್ಲಿ ತೈಮೂರನೆಂಬ ಸಮರಕಂದದ ತುರ್ಕಿ ರಾಜನು ಭಾರತಕ್ಕೆ ದಾಳಿಯಿಟ್ಟನು. ಕ್ರಿ. ಶ. ೧೩೯೮ರಲ್ಲಿ ಇವನು ಸಿಂಧು ನದಿಯನ್ನು ದಾಟಿ ಬಂದು ಮುಲ್ತಾನದ ನೆರೆಯ ಪ್ರದೇಶಗಳನ್ನು ಹಿಡಿದುಕೊಂಡನು. ಮುಂದೆ, ಪಾನಿಪತ್ತದ ಹತ್ತರ ತಗಲಖ ಮನೆತನದ ಅರಸರಿಗೂ ಇವನಿಗೂ ಯುದ್ಧವಾಗಿ ಸೋಲನ್ನೊಪ್ಪಬೇಕಾಯಿತು. ನಂತರ ತೈಮೂರನು ದಿಲ್ಲಿಯನ್ನು ಪ್ರವೇಶಿಸಿ ತಾನೇ ದಿಲ್ಲಿಯ ಅರಸನೆಂದು ಅಭಿಷಿಕ್ತನಾದನು. ಅಸಂಖ್ಯ ಜನ ನಿರಪರಾಧಿ ನಾಗರಿಕರ ಕೊಲೆಗೈದು ತೈಮೂರನು ದಿಲ್ಲಿಯನ್ನು ಸೂರೆಗೊಳ್ಳಲು ಅಪ್ಪಣೆಯಿತ್ತನು. ಈ ನಂತರ ದಿಲ್ಲಿಯ ಆಡಳಿತೆಯು ಸಯ್ಯದ ವಂಶಜರ ಕೈಯಲ್ಲಿ ಬಂದಿತು.

ಕ್ರಿ. ಶ. ೧೪೫೧ಕ್ಕೆ ದಿಲ್ಲಿ ಪಟ್ಟವು ಲೋದಿ ಅರಸರ ಕೈಸೇರಿತು. ಇವರಲ್ಲಿ ಶಿಕಂದರನೆಂಬಾತನು ಆಗ್ರಾ ಪಟ್ಟಣವನ್ನು ಸ್ಥಾಪಿಸಿದನು. ಇವನ ಕಾಲದಲ್ಲಿ ತೈಮೂರನ ವಂಶಜನಾದ ಬಾಬರನು ಭಾರತಕ್ಕೆ ದಾಳಿಯಿಟ್ಟನು. (೧೫೨೬) ಈ ವೇಳೆಗೆ ಪಾನಿಪತ್ತದಲ್ಲಿ ಯುದ್ಧವೆಸಗಿ ಶಿಕಂದರನ ಮಗನಾದ

ಇಬ್ರಾಹಿಮ ಲೋದಿಯು ಸೋತು ಮಡಿದನು. ಬಾಬರನು ದಿಲ್ಲಿಯ ಪಟ್ಟವನ್ನೇರಿ ಮೊಗಲ ವಂಶಜರ ಆಳಿಕೆಯನ್ನು ಪ್ರಾರಂಭಿಸಿದನು.

ದಿಲ್ಲಿಯ ಅರಸೊತ್ತಿಗೆಯು ಈ ರೀತಿ ಇಳಿಮುಖವಾಗುತ್ತಿರುವಾಗ ಭಾರತದ ಇತರ ಪ್ರದೇಶಗಳಲ್ಲಿ ಪ್ರಾದೇಶಿಕ ದೊರೆತನಗಳು ತಲೆಯೆತ್ತುತ್ತಿದ್ದವು. ಅವೆಂದರೆ—ಬಂಗಾಲ, ಜಾನಪುರ, ಗುಜರಾಥ, ಮತ್ತು ಮಾಳವಾಗಳಲ್ಲಿಯ ಸುಲ್ತಾನರ ಮನೆತನಗಳು. ಈ ರಾಜವಂಶಗಳು ಸಾಮಾನ್ಯ ಜನರ ಜೀವನದಲ್ಲಿ ಬೆರೆತುಕೊಂಡು ಹಿಂದೂ ಇಸ್ಲಾಂ ಮತಗಳ ಸರಿಬೆರಿಕೆಯನ್ನು ತೋರಿಸಿಕೊಟ್ಟವು.

ಗುಜರಾಥದ ಸುಲ್ತಾನರು:

ಗುಜರಾಥದ ಸುಲ್ತಾನನು ಕ್ರಿ. ಶ. ೧೪೦೧ ರಲ್ಲಿ ತಾನು ಸ್ವತಂತ್ರನೆಂದು ಸಾರಿದನು. ಮತ್ತು "ಶಹ" ಎಂಬ ಬಿರುದನ್ನು ಧರಿಸಿದನು. ಮುಂದೆ ಒಂದೂವರೆ ಶತಕದ ವರೆಗೆ ಗುಜರಾಥವು ವಿದ್ಯೆ, ಸಂಸ್ಕೃತಿಗಳ ಕೇಂದ್ರವೆನಿಸಿತು. ಅಹಮ್ಮದಶಹ (ಕ್ರಿ. ಶ. ೧೪೧೧—೧೪೪೧) ಎಂಬವನ ಕಾಲಕ್ಕೆ ಅಹಮದಾಬಾದವು ಸ್ಥಾಪಿಸಲ್ಪಟ್ಟಿತು. ಇವನ ನಂತರ ಬಂದ ಮಹಮ್ಮದ ಶಹನೂ ಕಲೆಗಳಿಗೆ ಪ್ರೋತ್ಸಾಹನ ಕೊಟ್ಟನು. ಗುಜರಾಥ ಮತ್ತು ಮಾಳವಾಗಳ ಸುಲ್ತಾನರು ಒಂದುಗೂಡದಂತೆ ನೋಡಿಕೊಂಡು, ಇವೆರಡು ಪ್ರದೇಶಗಳ ನಡುವೆ ನೆಲೆಸಿದ ರಜಪೂತರು ಇವರಿಗೆ ಯುದ್ಧರಂಗದಲ್ಲಿ ಎದುರಾಗುತ್ತಲೇ ಇದ್ದರು.

ಮಾಳವದ ಅರಸೊತ್ತಿಗೆಯು:

ಮಾಳವಾದ ಅರಸೊತ್ತಿಗೆಯು ಖಿಲಜಿ ವಂಶಜರ ಆಳಿಕೆಯಲ್ಲಿ ಸ್ಥಾಪಿತವಾಗಿ ಕ್ರಿ. ಶ. ೧೪೦೧ರಲ್ಲಿ ಸ್ವತಂತ್ರತೆಯನ್ನು ಸಾರಿತು. ಕಾಲಗತಿಯಲ್ಲಿ ಇದರ ರಾಜಧಾನಿಯು 'ಮಾಂಡು' ಎಂಬ ಪಟ್ಟಣದಲ್ಲಿ ನೆಲೆಸಿತು. ಈ ರಾಜ್ಯಕ್ಕೂ ನೆರೆಯ ಪ್ರದೇಶದಲ್ಲಿ ನೆಲೆಸಿದ ರಜಪೂತ ರಾಜ್ಯಗಳಿಗೂ ಕಾಳಗಗಳೂ ಸತತವಾಗಿ ನಡೆದಿರುತ್ತಿದ್ದವು. ಈ ರಾಜ್ಯದಲ್ಲಿ ಹಿಂದು ಮುಸಲ್ಮಾ

ನರು ಒಳ್ಳೆ ಬಂಧುಭಾವದಿಂದಿದ್ದರು. ಒಂದು ಸಲ ಈ ರಾಜ್ಯದ ಮಹಮ್ಮದೀಯ ಪ್ರಜರು ದಂಗೆಯೆದ್ದಾಗ ಹಿಂದುಗಳ ಸಹಾಯದಿಂದ ಅದು ಶಮನ ಮಾಡಲ್ಪಟ್ಟಿತು. ಇಲ್ಲಿಯ ಮುಖ್ಯ ಮಂತ್ರಿಯು ಮೇದಿನಿರಾಯನೆಂಬ ಹಿಂದು ಇದ್ದನು.

ಜಾನಪುರದ ರಾಜ್ಯವು.

ಜಾನಪುರದ ರಾಜ್ಯವು ಕೆಲಕಾಲ ಮಾತ್ರ ಬಾಳಿದರೂ ಮಿಗಿಲಾದ ವಿದ್ಯಾಕೇಂದ್ರವಾಗಿದ್ದಿತು. ಇಲ್ಲಿಯ ಸುಲ್ತಾನರು ಹಿಂದು ಮಹಮ್ಮದೀಯ ಸಂಸ್ಕೃತಿಗಳ ಬೆಳಿಕೆಗೆ ಬಲವಾದ ಸಹಾಯ ಮಾಡಿದರು.


ಬಂಗಾಲ ರಾಜ್ಯವು:—

ಬಂಗಾಲ ರಾಜ್ಯವು, ಇದರ ಸ್ಥಾಪಕನಾದ ಬಕ್ತ್ಯಾರ ಖಿಲಜಿಯ ಕಾಲದಿಂದಲೂ ದಿಲ್ಲಿ ಪಟ್ಟಕ್ಕೆ ತಲೆಬಾಗಲಿಲ್ಲ. ದಿಲ್ಲಿಯ ದೊರೆಗಳೆಲ್ಲರೂ ಬಂಗಾಲದತ್ತ ಗಮನ ಕೊಟ್ಟರು. ಕೊನೆಗೆ ಫಿರೋಜ ತಗಲಖನ ಕಾಲದಲ್ಲಿ ಸ್ವತಂತ್ರವಾಯಿತು. ಹುಸೇನಶಹನೆಂಬವನ ಕಾಲದಲ್ಲಿ ಇದರ ವೈಭವವು ಪ್ರಾರಂಭವಾಗಿ ಅಕಬರನ ಕಾಲದವರಗೂ ವೈಭವದಲ್ಲಿ ಮೆರೆಯಿತು.

ಈ ತೆರನಾಗಿ, ಮೊದಮೊದಲು ದಿಲ್ಲಿಯ ಪಟ್ಟಕ್ಕೆ ಬಂದವರು ಕೇವಲ ಲೂಟಿಗಾರರ ಧೋರಣೆಯನ್ನಿಟ್ಟುಕೊಂಡು ಹಣ ಸೆಳೆದು ಬೊಕ್ಕಸವನ್ನು ತುಂಬಿ ಕೊಂಡರು. ಕೊನೆಗೆ ಬಂದವರು ದಿಲ್ಲಿಯ ಗದ್ದುಗೆಯ ಮೇಲೆ ನಿಲ್ಲಲಾರದೆ ತತ್ತರಿಸಹತ್ತಿದರು. ಒಟ್ಟಿನಲ್ಲಿ, ದಿಲ್ಲಿಗಿಂತ, ನಂತರ ತಲೆದೋರಿದ ಅಹಮುದಾಬಾದ, ಮಾಂಡು, ಜಾನಪುರ, ಲಕ್ನೌ ಮುಂತಾದವುಗಳು ಮಹಮ್ಮದೀಯರ ಹೆಚ್ಚಳಕ್ಕೆ ಕಾರಣವಾದವು. ಇಲ್ಲಿಯ ಸುಲ್ತಾನರು ಹಿಂದು ಇಸ್ಲಾಂ ಮಿಶ್ರಿತ ಶಿಲ್ಪದ ಕಟ್ಟಡಗಳನ್ನು ಕಟ್ಟಿಸಿದರು. ಆದರೆ, ಇನ್ನಿತರ ಕಡೆಗೆ ಕೇವಲ ಹಿಂದೂ ಶಿಲ್ಪ ಶಾಸ್ತ್ರವನ್ನು ಅನುಸರಿಸಿ ಕಟ್ಟಿಸಿದ ಕಟ್ಟಡಗಳೇ ತಲೆದೋರುವವು.

ವಿಜಯನಗರದ ಸಾಮ್ರಾಜ್ಯ:

ಅಲ್ಲಾ-ವು-ದೀನ ಖಿಲಜಿಯ ಸರದಾರನಾದ ಮಲೀಕಕಾಫರ ಎಂಬಾತನು ದಕ್ಷಿಣಕ್ಕೆ ದೌಡು ಮಾಡಿದನಷ್ಟೇ! ಅವನು ಮಧ್ಯಭಾರತದಲ್ಲಿಯ ಕಾಕತಿ ಅರಸರನ್ನು ಸದೆಬಡಿದನು. ಅಲ್ಲಿಯ ಕೋಶದ ಮೇಲಾಧಿಕಾರಿಗಳಾದ (ಹೊಯ್ಸಳರ ನೌಕರರಲ್ಲಿದ್ದರು ಎಂದು ಫಾದರ ಹೆರಾಸರು ಬರೆಯುತ್ತಾರೆ) ಹುಕ್ಕ ಬುಕ್ಕರೆಂಬ ಬಂಧುಗಳು ಈಗಿನ ಹಂಪೆಯ ಹತ್ತಿರ ಶ್ರೀ ಮಾಧವಾಚಾರ್ಯ ಅಥವಾ ವಿದ್ಯಾರಣ್ಯರೆಂಬ ಬ್ರಾಹ್ಮಣರಿಂದ ಪ್ರೇರಿತರಾಗಿ



ರಾಜವೈಭವದಿಂದ ಓಲಗಕ್ಕೆ ಹೊರಟ ಶ್ರೀ ವಿದ್ಯಾರಣ್ಯ ಸ್ವಾಮಿಗಳು.

ಹೊಸದೊಂದು ಹಿಂದೂ ರಾಜ್ಯವನ್ನು ಸ್ಥಾಪಿಸಿದನು. (ಕ್ರಿ. ಶ. ೧೩೩೬) ಇದಕ್ಕೆ ವಿಜಯನಗರವೆಂಬ ಹೆಸರು ಬಂದಿತು. ಅದರ ಪಟ್ಟದ ಮೇಲೆ ತುಳು ಸಾಳ್ವ ಅರವೀಡು ಮನೆತನಗಳು ಕ್ರಿ. ಶ. ೧೫೬೫ ರವರೆಗೆ ಬಹು ವೈಭವದಿಂದ ರಾಜ್ಯ ನಡೆಸಿದವು. ಆ ಅರಸರು ಸಾಹಿತ್ಯ, ಶಿಲ್ಪ, ಮತ್ತು ಹಿಂದೂ ಸಂಸ್ಕೃತಿಯ ಬೆಳವಣಿಗೆಗೆ ಬಲವಾದ ಸಹಾಯ ಸಲ್ಲಿಸಿದರು. ಅಲ್ಲಿ ಆಳಿದ

ಅರಸರಲ್ಲಿ ೨ನೆಯ ಕೃಷ್ಣದೇವರಾಯನೆಂಬ ಅರಸನು ಬಹಳ ಖ್ಯಾತಿಯನ್ನು ಪಡೆದನು. (ಕ್ರಿ. ಶ. ೧೫೦೯–೧೫೩೦)ಇವನು ವಿಜಾಪುರದ ಅರಸನ ಕೂಡ ರಾಯಚೂರ ಬಳಿಯಲ್ಲಿ ಕದನ ನಡೆಸಿ ಮಿಗಿಲಾದ ಯಶಸ್ಸನ್ನು ಪಡೆದನು. ವಿಜಯನಗರದ ಕಾಲದಲ್ಲಿ ಹಲವಾರು ಪರದೇಶಗಳ ಪ್ರವಾಸಿಕರು ಇಲ್ಲಿಗೆ ಬಂದು ಇದರ ವೈಭವವನ್ನು ಕಣ್ಣಾರೆ ಕಂಡು ಅಚ್ಚರಿಗೊಂಡರು. ಪೇಜ, ನ್ಯಾರ್ಝುಸಿ, ಅಬ್ದುರ್ ರಝಾಕ ಎಂಬವರು ತಾವು ಕಂಡ ವಿಜಯನಗರದ ವರ್ಣನೆಯನ್ನು ಬರೆದಿಟ್ಟಿರುವರು. ದಕ್ಷಿಣ ಭಾರತದಲ್ಲಿ ಇದು ಬಹು ಬಲಾಢ್ಯ ರಾಷ್ಟ್ರವೆನಿಸಿತು. ಇಲ್ಲಿಯ ಕೊನೆಯ ಅರಸು ಸದಾಶಿವ ರಾಯನೆಂಬವನ ಆಳಿಕೆಯಲ್ಲಿ ನಾಲ್ಕು ಮಹಮ್ಮದೀಯ ರಾಜ್ಯಗಳು ಒಂದಾಗಿ ಬಂದು ಇದನ್ನು ಮುತ್ತಿದವು. ರಕ್ಕಸ ತಂಗಡಿಗಿ ಎಂಬಲ್ಲಿ ಸದಾಶಿವರಾಯನು ಸೋತು ಓಡಿಹೋಗಲು ಮುಹಮ್ಮದೀಯರು ಈ ರಾಜ್ಯವನ್ನು ಸೂರೆಗೊಂಡರು.

ಬಹಮನಿ ರಾಜ್ಯವು:—

ಮುಹಮ್ಮದ ತಘಲಖನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಬಂಡಾಯಗಳಾದವು. ಅವುಗಳಲ್ಲಿ ಕ್ರಿ. ಶ. ೧೩೪೭ರಲ್ಲಿ ನಡೆದ ಬಂಡನ್ನಡಗಿಸಲು ಜಾಫರ ಖಾನನೆಂಬೊಬ್ಬ ಸರದಾರನನ್ನು ಇವನು ದಕ್ಷಿಣಕ್ಕೆ ಕಳುಹಿದನು. ಜಾಫರಖಾನನು ದಕ್ಷಿಣಕ್ಕೆ ಬಂದು ತಾನು ಸ್ವತಂತ್ರನೆಂದು ಸಾರಿ ಗುಲಬುರ್ಗೆಯಲ್ಲಿ ಹೊಸದೊಂದು ರಾಜ್ಯವನ್ನೇ ಸ್ಥಾಪಿಸಿಕೊಂಡನು. ಇದರ ಹೆಸರು ಬಹಮನಿ ರಾಜ್ಯ. ಈ ಕಾರ್ಯದಲ್ಲಿ ಒಬ್ಬ ಬ್ರಾಹ್ಮಣನು ಉಪಕಾರ ಮಾಡಿದ್ದರಿಂದ "ಬಹಮನಿ" ಎಂಬ ಹೆಸರು ಬಂದಿತು. ಇದರ ಸ್ಥಾಪಕನಾದ ಹಸನ ಗಂಗೂ(ಜಾಫರಖಾನ)ಇವನು ೧೩೫೮ರಲ್ಲಿ ಮರಣ ಹೊಂದಲು ಹಲಕೆಲವು ಮೇಲಾದ ರಾಜರು ಇಲ್ಲಿ ರಾಜ್ಯ ಭಾರ ನಡೆಸಿದರು. ಮಹಮ್ಮದ ಗವಾನ ಎಂಬ ಇಲ್ಲಿಯ ಮುಖ್ಯ ಮಂತ್ರಿಯೊಬ್ಬನು ಒಂದು ವಿದ್ಯಾಪೀಠವನ್ನೂ ಗ್ರಂಥ ಭಾಂಡಾರವನ್ನೂ ಸ್ಥಾಪಿಸಿದನು. ಹಿಂದುಗಳು ಈ ರಾಜ್ಯಕ್ಕೆ ತಮ್ಮ ಸಹಾಯ ಸಲ್ಲಿಸಿದರಲ್ಲದೆ, ರಾಜ್ಯದಲ್ಲಿಯ ಉಚ್ಚ ಅಧಿಕಾರಗಳು ಅವರಿಗೆ ಸಲ್ಲಿದವು. ಕ್ರಿ. ಶ. ೧೫೨೬ರಲ್ಲಿ ಈ ರಾಜ್ಯವು ಒಡೆದು ಐದು ಭಾಗಗಳಾದವು.

ಇಮಾನಶಾಹಿ, ಕುತುಬಶಾಹಿ, ಬರೀದಶಾಹಿ, ನಿಜಾಮಶಾಹಿ ಮತ್ತು ಆದಿಲ ಶಾಹಿಗಳೇ ಆ ಭಾಗಗಳ ಅರಸರ ಹೆಸರುಗಳಾದವು. ಈ ಕಾಲಕ್ಕೆ ದಿಲ್ಲಿಯಲ್ಲಿ ಮೊಗಲ ಬಾದಶಹರು ಒಳ್ಳೆ ಭರಭರಾಟೆಯಿಂದ ರಾಜ್ಯವಾಳಿದರು.

ದಿಲ್ಲಿಯ ಸುಲ್ತಾನರ ಕಾಲದಲ್ಲಿ ಹಿಂದೀಯರ ಸ್ಥಿತಿ:

ಕ್ರಿ. ಶ. ೧೨೦೬ರಿಂದ ೧೫೨೬ರ ವರೆಗೆ ಆಳಿದ ದಿಲ್ಲಿಯ ಸುಲ್ತಾನರ ಕಾಲವು ಭಾರತೀಯರಿಗೆ ಕಲ ಮಟ್ಟಿಗೆ ನೋವು ಮಾಡಿತೇನೋ, ನಿಜ ! ಆದರೆ ಇದರಿಂದ ಹೇಳಿಕೊಳ್ಳುವಂತಹ ಯಾವ ಲಾಭವೂ ಮಹಮ್ಮದೀಯರಿಗೆ ಆಗಲಿಲ್ಲ. ಪಟ್ಟಣಗಳಲ್ಲಿದ್ದ ಹಿಂದೂ ಜನರನ್ನೂ ಅವರ ಧರ್ಮವನ್ನೂ ಕಡೆ ಗಣಿಸಿ, ಮಹಮ್ಮದೀಯ ಅರಸರು ಹಿಂದುಗಳನ್ನು ರಾಜಕಾರಣದಲ್ಲಿಯೂ ಸಮಾಜಕಾರ್ಯಗಳಲ್ಲಿಯೂ ಕೆಲವು ದಿನಗಳ ವರೆಗೆ ಮೂಲೆಗುಂಪು ಮಾಡಿರ ಬಹುದು. ಆದರೆ, ಹಳ್ಳಿಗರ ಜೀವನವು ಮಹಮ್ಮದೀಯರ ಆರ್ಭಟದಿಂದ ಯಾವ ಬದಲಾವಣೆಯನ್ನೂ ಹೊಂದಲಿಲ್ಲ. ಇಲ್ಲಿ ಒಕ್ಕಲಿಗರೆಲ್ಲ ಹಿಂದುಗಳಾಗಿಯೇ ಉಳಿದರು. ಇಷ್ಟೊಂದು ಹಿಂದುಗಳನ್ನು ಮತಾಂತರ ಗೊಳಿಸಿದೆವೆಂದು ಮಹಮ್ಮದೀಯರು ಹೇಳಿಕೊಂಡರೂ, ಮಹಮ್ಮದೀಯರ ಸಂಸ್ಕೃತಿಯ ನೆಲೆಯಾದ ಗಂಗಾ ನದಿಯ ಕೊಳ್ಳದಲ್ಲಿ ಇಂದಿಗೆ ನೂರಕ್ಕೆ ೧೫ ಜನರು ಮಾತ್ರ ಮಹಮ್ಮದೀಯರಿದ್ದಾರೆ.

ಮಹಮ್ಮದೀಯರ ಕಾಲದಲ್ಲಿ ವ್ಯಾಪಾರವು ಹಿಂದುಗಳ ಕೈಬಿಡಲಿಲ್ಲ. ಇಂದು ಕಾಣುವ ಸೇಠ, ಸಾಹುಕಾರ, ಬನಿಯಾಗಳು ಅಂದಿನಿಂದ ಸಾಗಿ ಬಂದವರು. ಒಳ್ಳೆ ಧರ್ಮಾಂಧರೆಂದೆನಿಸಿದ ಅಲ್ಲಾವುದ್ದೀನ ಖಿಲಜಿ, ಫಿರೋಜ ತಗಲಖರ ಕಾಲದಲ್ಲಿ ಜೈನರೂ, ಹಿಂದುಗಳೂ ಇವರ ಹತ್ತಿರ ಆಶ್ರಯ ಪಡೆದರು. ಅಲ್ಲಾವುದ್ದೀನ ಖಿಲಜಿಯು ಕರ್ನಾಟಕದಿಂದ ಆಚಾರ್ಯ ಮಹಾಸೇನನೆಂಬವನನ್ನು ಬರಮಾಡಿಕೊಂಡು, ಅವನೊಡನೆ ಧರ್ಮ ಚರ್ಚೆ ನಡೆಸಿದನು. ಪೂರ್ಣಚಂದ್ರ ಮತ್ತು ರಾಮಚಂದ್ರರೆಂಬ ದಿಗಂಬರ ಮತ್ತು ಶ್ವೇತಾಂಬರ ಯತಿಗಳು ಖಿಲಜಿಯ ಹತ್ತಿರ ಇದ್ದರೆಂದು ಜೈನ ಉಪಪತ್ತಿ ಗಳಿಂದ ತಿಳಿಯಬಹುದಾಗಿದೆ. ಆಡಳಿತೆಯಲ್ಲಿ ಹಿಂದುತ್ವದ ಮೇಲ್ಮೆಯನ್ನು

ಕಾಯುವಕ್ಕೆ ಮುಸಲ್ಮಾನರ ನೌಕರರೊಳಗೆ ಅತ್ಯುಚ್ಚ ವರ್ಜಿಯುವರನ್ನು ಬಿಟ್ಟು ಉಳಿದವರೆಲ್ಲ ಹಿಂದುಗಳೆ ಇದ್ದರೆಂಬದು ನೆನಪಿಡತಕ್ಕ ಸಂಗತಿಯಾಗಿದೆ. ಮಹಮ್ಮದಿಯ ಆಳರಸರು ಎತ್ತಿಬಂದವರಾದ್ದರಿಂದ ಆಡಳಿತೆಯ ಸರ್ವನೌಕರರೊಂದಿಗೆ ಭಾರತಕ್ಕೆ ಬಂದಿರಲು ಸಾಧ್ಯವಿಲ್ಲವೆಂಬುವು ಸ್ಪಷ್ಟವಾಗಿಯೆ ಇದೆ. ಈ ರೀತಿ ನೌಕರರಲ್ಲಿ ಬಹುಜನರು ಹಿಂದುಗಳಿದ್ದರಿಂದಲೇ ಆಗಾಗ ಎದ್ದ ದಂಗೆಗಳು ಶಾಂತವಾಗುತ್ತಿದ್ದವು. ರಾಜದರಬಾರದಲ್ಲಿ ನಡೆಯುವ ವ್ಯವಹಾರಗಳು ಅಲ್ಲಿಯ ಸರದಾರ ಅಮೀರ ಉಮರಾವಗಳಿಗೆ ಮೊದಲು ಸಂಬಂಧಿಸುವದಿಲ್ಲವೆ ? ಆದ್ದರಿಂದ ದಿಲ್ಲಿಯ ಮುಸಲ್ಮಾನ ಅರಸರ ಕ್ರೂರತನ ಕೊಲೆ ಮತ್ತು ರಕ್ತಪಾತದ ನಾಟಕಗಳು ಸರದಾರರನ್ನುದ್ದೇಶಿಸಿರುತ್ತಿದ್ದವಲ್ಲದೆ, ದೇಶದಲ್ಲಿಯ ಸಾಮಾನ್ಯಮನುಷ್ಯನನ್ನಾಗಲಿ ರೈತನನ್ನಾಗಲಿ ಬಾಧಿಸಲಿಲ್ಲ. ಮೇಲಾಗಿ ತುರ್ಕ ಮತ್ತು ಅಫಗಾನ ದಾಳಿಗಾರರನ್ನಾಗಲಿ ರಾಜರನ್ನಾಗಲಿ ನಾವು ಇಸ್ಲಾಂ ಮತತತ್ವಗಳನ್ನು ಹರಡುವ ಧರ್ಮ ದೂತರಲ್ಲಿ ಗಣಿಸಬಹುದೆ? ಇವರು ತಮ್ಮನ್ನು ಮಹಮ್ಮದೀಯರೆಂದು ಕರೆದುಕೊಂಡರೂ, ಇವರಲ್ಲಿ ಎಷ್ಟು ಜನರಿಗೆ ಮಹಮ್ಮದ ಪೈಗಂಬರರ ತತ್ವಗಳು ತಿಳಿದಿದ್ದವೋ, ಹೇಳಲು ಬರುವಂತಿಲ್ಲ. ಏನಿದ್ದರೂ ಇವರ ಆಳಿಕೆಗೆ ರಜಪೂತರಿಂದಲೂ ದಕ್ಷಿಣದಲ್ಲಿಯ ವಿಜಯನಗರದಿಂದಲೂ ಬಲವಾದ ವಿರೋಧ ತೋರಿ ಮಹಮ್ಮದೀಯರ ಉಪಟಳವನ್ನು ಅಡಗಿಸಲು ಅವಕಾಶ ಸಿಕ್ಕಿತು. ನಿಜವಾದ ಧರ್ಮವೇನೆಂದು ಪ್ರತಿ ಹಿಂದುವಿಗೂ ತಿಳಿದಿರುವಾಗ ಧರ್ಮಕ್ಕಾಗಿ ಯುದ್ಧ ಮಾಡಬೇಕಾಗುವದೆಂದು ನೋಡನೋಡಲು ಭಾರತೀಯರು ತಿಳಿದಿರಲಿಲ್ಲ. ಆದರೆ ಭಾರತೀಯ ಕ್ಷತ್ರಿಯರು ಹಿಂದುತ್ವದ ರಕ್ಷಣೆಗೆ ಹೆಣಗಾಡಿದ್ದನ್ನು ಕಂಡರೆ, ಮುಸಲ್ಮಾನರ ಸಂಪರ್ಕದಿಂದ ಬಂದ ಒಂದು ಮಹತ್ವದ ಪರಿಣಾಮವೇನೆಂದು ಕೇಳಬಹುದಾಗಿದೆ. ಈಗಿನ ಕಾಲದಲ್ಲಿ ತಲೆದೋರಿದ ಭಕ್ತಿಪಂಥದ ಅನುಯಾಯಿಗಳು, ಒಂದೂ ಧರ್ಮದ ಮರ್ಮವು ಜನತೆಯ ಹೃದಯಕ್ಕೆ ತಾಗುವಂತೆ ಮಾಡಿದರು. ದೇವರು ದೊಡ್ಡವನು; ದೇವರು ಒಬ್ಬನೇ ಇರುವನು; ದೇವರು ಎಲ್ಲರಿಗೂ ಕಲ್ಯಾಣ ಮಾಡುವನೆಂಬ ಕಲ್ಪನೆಗಳು ಈ ಕಾಲದಲ್ಲಿ ಬಹಳ ಬೆಳಕಿಗೆ ಬಂದವು. ಆದ್ದರಿಂದ ಭಕ್ತಿಪಂಥವೂ ಸಹ ಮಹಮ್ಮದೀಯರ ಸಂಪರ್ಕದ ಫಲವಾಗಿರಬಹುದೇ?

ಈ ಕಾಲದಲ್ಲಿ ಎತದ್ದೇಶೀಯ ಭಾಷೆಗಳು ಬೆಳೆಯ ಹತ್ತಿದವು. ಅದರಿಂದ ಸಾಹಿತ್ಯ ಮತ್ತು ಧರ್ಮಗಳು ಸಾಮಾನ್ಯ ಮನುಷ್ಯನ ಸೊತ್ತಾದವು. ಈ ಕಾಲಕ್ಕೆ ಹೇಮಚಂದ್ರನೆಂಬ ಜೈನಯತಿಯು ಜೈನಮತವನ್ನು ಹೆಚ್ಚು ಪ್ರಸಾರ ಮಾಡಲು ಹೆಣಗಿದನು. ಹಿಂದುಗಳನ್ನು ಮತಾಂತರಗೊಳಿಸುವ ಕೆಲಸವು ನಡೆದಂತೆ ಶುದ್ಧೀಕರಣವೂ ತಲೆಯೆತ್ತ ಹತ್ತಿತು. ಸಮಾಜದಲ್ಲಿ ಜರುಗುವ ಕೆಲ ಸಂಗತಿಗಳ ಮೇಲೆ ಸೂತ್ರಗಳು ರಚಿತವಾಗುತ್ತವೆಯಷ್ಟೆ ? ಈ ಕಾಲದ ವಿಜ್ಞಾನೇಶ್ವರನ 'ಮಿತಾಕ್ಷರ' ವಿಚಾರ ಸರಣಿಯು ೧೨ನೆಯ ಶತಕದಲ್ಲಿಯೆ ನೂತನ ಸಮಾಜ ರಚನೆಯ ಕಾರ್ಯಗಳನ್ನು ತಿಳಿಯಪಡಿಸಿತು. ಈ ಅಂಶಗಳನ್ನು ತಿಳಿದುನೋಡಿದಾಗ ಒಂದು ಸಿದ್ಧಾಂತವು ಹೊರಡುವದು ಅದೆಂದರೆ ಮುಸಲ್ಮಾನರು ಹಿಂದುಗಳ ಮನಸ್ಸು ಬುದ್ಧಿ ಜೀವಿತಗಳ ಮೇಲೆ ಸ್ವಾಮಿತ್ವ ನಡೆಸಲಿಲ್ಲವೆಂಬುದು.

ಅಭ್ಯಾಸನಗಳು:

೧. ಬಿಡುವು ತುಂಬಿರಿ.

(ಅ) ದಿಲ್ಲಿಯ ಅರಸೊತ್ತಿಗೆಯು ದುರ್ಬಲವಾದಾಗ (೧) . (೨) (೩) . . . (೪). , ಮುಂತಾದಲ್ಲಿ ಪ್ರಾದೇಶಿಕ ಸ್ವತಂತ್ರ ರಾಜ್ಯಗಳೆದ್ದವು.

(ಬ) ಪ್ರಾದೇಶಿಕ ರಾಜ್ಯಗಳಲ್ಲಿಯ ಅರಸರು ಹಿಂದುಗಳಿಗೆ . .. ಕೊಟ್ಟರು.

(ಕ) ಮುಸಲ್ಮಾನರ ಸಂಪರ್ಕದಿಂದ ಹಿಂದುಗಳಲ್ಲಿಯ . .. ಬೆಳೆಯಿತು.

(ಡ) ದಿಲ್ಲಿಯ ಸುಲ್ತಾನರ ವಿಲಾಸಗಳು . . . . ನನ್ನು ಬಾಧಿಸಲಿಲ್ಲ.

೨. ವಿಜಯನಗರ ಸಾಮ್ರಾಜ್ಯವು ಕೃಷ್ಣದೇವರಾಯನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಎಷ್ಟರ ವರೆಗೆ ಹಬ್ಬಿತ್ತೆಂಬುದನ್ನು ನಕ್ಷೆಯಲ್ಲಿ ರೂಪಿಸಿರಿ.

೧೦. ಹಳೆ—ಹೊಸ ಸಾರಿಗೆ ಮಾರ್ಗಗಳು.

ಕ್ರೈಸ್ತ ಶಕದ ಪ್ರಾರಂಭದಿಂದಲೂ, ಮುಂಚೆಯೂ ಯುರೋಪದ ಪಟ್ಟಣಗಳಾದ ರೋಮ ಸ್ಪೈನಿಸಗಳೊಂದಿಗೆ ದಕ್ಷಿಣ ಭಾರತದ ವ್ಯಾಪಾರವು ನಡೆದು ಬಂದಿದೆ. ಈ ವ್ಯಾಪಾರವು ಸಮುದ್ರಮಾರ್ಗವಾಗಿಯೂ ಭೂಮಾರ್ಗವಾಗಿಯೂ ಸಾಗಿತು. ಪಶ್ಚಿಮ ಕರಾವಳಿಯಲ್ಲಿ ಸುರತ ಗೋವೆಗಳು ವಿಜಯನಗರ ಮತ್ತು ಬಹಮನಿ ಅರಸರ ಕಾಲದಲ್ಲಿ ಹೊರನಾಡುಗಳ ಕೂಡ ವ್ಯಾಪಾರವನ್ನು ನಡೆಸಿದವು. ಪೂರ್ವಕರಾವಳಿಯಲ್ಲಿ ಮದ್ರಾಸ ಮತ್ತು ಕಾಸ್ರಲಿಕ್ಷಿ (ಕಲಕತ್ತೆ)ಗಳು ಹೆಸರಾದ ಬಂದರಗಳಾಗಿದ್ದವು. ಪಶ್ಚಿಮ ಕರಾವಳಿಯಿಂದ ಹೊರಟ ವ್ಯಾಪಾರಿ ನಾವೆಗಳು ಕೆಂಪು ಸಮುದ್ರ ನೈಲ ನದಿಯ ಮುಖ ಮತ್ತು ಭೂಮಧ್ಯ ಸಮುದ್ರಗಳೊಳಗಿಂದ ಹಾಯ್ದು ಬಿಜಿನಾ ಅಥವಾ ರೋಮ ಪಟ್ಟಣವನ್ನು ತಲುಪಿದವು. ಜಲಮಾರ್ಗದ ಇನ್ನೊಂದು ಹಾದಿಯೆಂದರೆ, ಸುರತೆದಿಂದ ಪರ್ಶಿಯಾದ ಆಖಾತದವರೆಗೆ. ನಂತರ ಬಗದಾದ ಪಟ್ಟಣವನ್ನು ತಲುಪಿ, ಅಲೆಪ್ಪೊ ಬಂದರವನ್ನು ನಾವಿಕರು ಸೇರುತ್ತಿದ್ದರು. ಬಳಿಕ ಗ್ರೀಸದ ದಕ್ಷಿಣಕ್ಕೆ ಭೂಮಧ್ಯ ಸಮುದ್ರದಲ್ಲಿ ಹಾಯ್ದು ರೋಮ, ಸ್ಪೈನಿಸ ಪಟ್ಟಣಗಳನ್ನು ಸೇರಿದರು. ಇದರಂತೆ ದಕ್ಷಿಣ ಭಾರತದ ನಾವಿಕರು ಪೂರ್ವಕರಾವಳಿಯ ಬಂದರಗಳಿಂದ ಹೊರಟು ಮಲಕ್ಕಾ ನಡುಗಡ್ಡೆಗಳನ್ನು ಸುತ್ತುವರಿದು ಚೀನದ ಪೂರ್ವಕ್ಕಿದ್ದ ಪೆಕಿನ್ ಪಟ್ಟಣದವರೆಗೂ ತಲುಪಿದರು.

ಯುರೋಪ ಏಶಿಯಗಳ ನಡುವೆಯಾದರೂ ಆ ಕಾಲಕ್ಕೆ ಭೂಮಾರ್ಗದಿಂದ ವ್ಯಾಪಾರವು ವಿಪುಲವಾಗಿ ನಡೆದಿತು. ಸ್ಪೈನಿಸದಿಂದ ಹೊರಟ ಭೂಮಾರ್ಗದ ಸಾರಿಗೆಗಾರರು ಕಾನ್‌ಸ್ಟಂಟಿನೋಪಲ್ಲದಲ್ಲಿ ಹಾಯ್ದು ಅಲೆಪ್ಪೊ ಬಗದಾದಗಳಿಗೆ ತಲುಪಿದರು. ನಂತರ ನೇರವಾಗಿ ಮಧ್ಯಏಶಿಯದ ಸಮರಕಂದ ಖಾಸಗರ ಯಾರಕಂದಗಳ ಮುಖಾಂತರವಾಗಿ ಚೀನದ ಪ್ರದೇಶಗಳನ್ನು ಸೇರಿದರು. ನಂತರ ಪೂರ್ವಾಭಿಮುಖವಾಗಿ ಹೊರಟು ಪೇಕಿಂಗ ಪಟ್ಟಣಕ್ಕೆ ತಲುಪಿದರು.

ಮಹಮ್ಮದೀಯರ ಪ್ರಾಬಲ್ಯಶಕ್ತಿ, ಯುರೋಪಿನ ದೇಶಗಳೊಳಗೆ ನುಗ್ಗಿ ಯುರೋಪಿನ ವರ್ತಕರುಗಳ ಭೂಮಾರ್ಗ ಸಾರಿಗೆಗೆ ತಡೆಯನ್ನುಂಟುಮಾಡಿದರು. ಆದ್ದರಿಂದ ಯುರೋಪಿನ ವ್ಯಾಪಾರಿ ದೇಶಗಳಾದ ಸ್ಪೇನ ಪೋರ್ಚುಗಾಲ ಇಂಗ್ಲೆಂಡ ಮುಂತಾದ ದೇಶಗಳ ನಾವಿಕರು ಪೂರ್ವದೇಶಗಳಾದ ಭಾರತ ಚೀನ ಮುಂತಾದವುಗಳಿಗೆ ಸಮುದ್ರದ ಹಾದಿಯನ್ನು ಹುಡುಕಲು ತವಕಪಟ್ಟರು. ಮುಖ್ಯವಾಗಿ ಜೆನಿವಾ ಪಟ್ಟಣ, ಸ್ಪೇನ ಪೋರ್ಚುಗಾಲ ದೇಶಗಳು ಈ ಸಾಹಸದಲ್ಲಿ ಮುಂದುವರಿದವು. ಹಾಲೆಂಡ ಇಂಗ್ಲೆಂಡಗಳಲ್ಲಿಯವರು ಇವರನ್ನು ಅನುಸರಿಸಿದರು. ಈ ಸಾಹಸದ ಸಮುದ್ರಯಾನಗಳಲ್ಲಿ ಹೊಸ ಭೂಭಾಗಗಳು ಬೆಳಕಿಗೆ ಬಂದು ಜಗತ್ತಿನ ಇತಿಹಾಸ ಹಾಗೂ ಭಾರತದ ಆಗುಹೋಗುಗಳ ಮೇಲೆ ಹೇಳಿಕೊಳ್ಳುವಂತಹ ಪರಿಣಾಮಗಳುಂಟಾದವು. ಈ ಕಾಲಕ್ಕೆ ನಾವಿಕರಿಗೆ ಸಹಾಯ ಮಾಡುವ ಕೆಲವು ಶೋಧಗಳು ಬೆಳಕಿಗೆ ಬಂದವು. ಪೃಥ್ವಿಯ ಗೋಲಾಕಾರದ ಬಗ್ಗೆ ಬಲವಾದ ಅನುಮಾನ, ನಾವಿಕರ ದಿಕ್-ಸೂಚಿಯ ಶೋಧ, ಅಕ್ಷಾಂಶ ರೇಖಾಂಶಗಳ ಯಥಾರ್ಥ ಕಲ್ಪನೆಯು— ಇವುಗಳಲ್ಲಿ ಕೆಲವು. ಮೊದಲು ಪೋರ್ತುಗಾಲ ದೇಶದ ಬಾರ್ಥೆಲೋಮ್ಯು ಡಾಯಸ್ ಎಂಬಾತನು ಆಫ್ರಿಕೆಯ ದಕ್ಷಿಣಕ್ಕಿದ್ದ ಕೇಪ ಆಫ್ ಗುಡ್ ಹೋಪನ್ನು ತಲುಪಿದನು. ನಂತರ ಜೆನಿವಾ ಪಟ್ಟಣದವನಾದ ಕ್ರಿಸ್ಟೋಫರ್ ಕೊಲಂಬಸ್ ಎಂಬಾತನು ಸ್ಪೇನದ ಅರಸನಿಂದ ಸಹಾಯ ಪಡೆದು ಕಡಲ ಪಯಣಕ್ಕೆ ಹೊರಹೊರಟನು. ಇವನು ಅಟಲಾಂಟಿಕವನ್ನು ದಾಟಿ, ವೆಸ್ಟ ಇಂಡೀಜ ದ್ವೀಪಗಳನ್ನು ಹುಡುಕಿದನು. ಅವುಗಳ ಸನಿಯಲ್ಲಿದ್ದ ಅಮೇರಿಕೆಯನ್ನು ಹುಡುಕಿದಾತನು ಇಟಲಿಯ ಒಬ್ಬ ವರ್ತಕನೆಂದು ಹೇಳಲಾಗುತ್ತದೆ. ಕಾಲಗತಿಯಲ್ಲಿ ವಾಸ್ಕೋ-ಡಾ-ಗಾಮಾ ಎಂಬ ಪೋರ್ತುಗೀಜ ಕಪ್ತಾನನು ಆಫ್ರಿಕೆಯ ಪೂರ್ವ ದಂಡೆಯನ್ನು ತಲುಪಿದನು. ಅವನು ಹಾಗೇ ಮುಂದೆಸಾಗಿ ಭಾರತದ ಪಶ್ಚಿಮದ ಕರಾವಳಿಯಲ್ಲಿಯ ಕಾಲಿಕತ್ತ ಎಂಬ ಬಂದರವನ್ನು ತಲುಪಿದನು. ಬಳಿಕ ಮತ್ತಿತರ ಕೆಲವು ಯುರೋಪಿಯನ್ ನಾವಿಕರು ಮುಂದುವರಿದು ಶಾಂತಿಸಾಗರದಲ್ಲಿಯ ಜಾವಾದ್ವೀಪವನ್ನು ಸಂದರ್ಶಿಸಿದರು. ಇಡೀ ಪೃಥ್ವಿಯ ಪ್ರದಕ್ಷಿಣೆಯನ್ನು ಮೊದಲು ಮಾಡಿದವನೆಂದರೆ ಮೆಗ್ಯಾಲಿನ್ ಎಂಬ ಇಟಲಿಯ ಧೈರ್ಯಶಾಲಿ ನಾವಿಕನು.

ಇವನು ಅಟ್ಲಾಂಟಿಕ ಮಹಾಸಾಗರದಿಂದ ಹಾಯ್ದು ದಕ್ಷಿಣ ಅಮೇರಿಕೆಯನ್ನು ಸುತ್ತುವರಿದನು. ನಂತರ ಶಾಂತಸಾಗರದೊಳಗಿನ ಫಿಲಿಪ್ಪಾಯಿನ್ಸ ನಡುಗಡ್ಡೆಗಳನ್ನು ಕಂಡು ಹಿಂದೀ ಮಹಾಸಾಗರವನ್ನು ಸೇರಿದನು. ಹೀಗೆ ದಕ್ಷಿಣ ಭಾರತ, ದಕ್ಷಿಣ ಆಫ್ರಿಕಗಳನ್ನು ಸುತ್ತುವರಿದು ಸ್ಪೇಯಿನನ್ನು ಸೇರಿದನು. ಈ ಸಾಹಸದ ಹಿನ್ನೆಲೆಯಲ್ಲಿ ವ್ಯಾಪಾರಾಭಿವೃದ್ಧಿಯೂ, ಆ ಮೂಲಕ ಹೆಚ್ಚಿನ ಸಂಪತ್ತಿನ ಸಂಗ್ರಹವೂ ಯುರೋಪದ ಅರಸರಲ್ಲಿ ಒಡೆದು ಕಂಡಿತು. ಈ ಮುಂದೆ [illegible] ಕೈಕೊಂಡ ಪಶ್ಚಿಮ ರಾಷ್ಟ್ರಗಳೆಂದರೆ- ಹಾಲೆಂಡ, ಇಂಗ್ಲಂಡ, ಫ್ರಾನ್ಸ ಮುಂತಾದವು. ಸ್ಪೇನ, ಪೋರ್ತುಗಾಲಗಳ ಜನರು ದಕ್ಷಿಣ ಅಮೇರಿಕೆಗೆ ಹೋಗಿ, ದ್ರವ್ಯದಾಶೆಯಿಂದ ಅಲ್ಲಿಯ ನಿವಾಸಿಗಳ ಮೇಲೆ ಕೊಲೆ, ಸುಲಿಗೆ, ಹೋರಾಟಗಳನ್ನು ನಡೆಸಿದರು. ಅಲ್ಲಿಯ ಮೂಲನಿವಾಸಿಗಳು ಕ್ರೈಸ್ತ ಮತಸ್ಥರಲ್ಲದ್ದರಿಂದ ಸ್ಪೇನದೇಶದವರು ಅವರನ್ನು ಹಿಂಸಿಸಿದರು. ಮತ್ತು ಅವರ ಸಂಪತ್ತನ್ನೆಲ್ಲ ಸ್ವದೇಶಕ್ಕೆ ತಂದೊಟ್ಟಿಕೊಂಡರು. ಮುಂದೆ ಯುರೋಪದ ರಾಷ್ಟ್ರ-ರಾಷ್ಟ್ರಗಳಲ್ಲಿ ಹಗೆತನವುಂಟಾಗಲು ಈ ಸ್ಪರ್ಧೆಯೇ ಕಾರಣವಾಯಿತು.

ಭಾರತಕ್ಕೆ ಬಂದ ಪೋರ್ತುಗಾಲ, ಫ್ರಾನ್ಸ, ಇಂಗ್ಲಂಡಗಳ ವ್ಯಾಪಾರಸ್ಥರು ಇಲ್ಲಿಯ ರಾಜ, ಮಹಾರಾಜ, ನವಾಬ, [illegible] ಮುಂತಾದವರಿಂದ ವ್ಯಾಪಾರದ ಸವಲತ್ತುಗಳನ್ನು ಪಡೆದು, ಮೊದಮೊದಲು ಕೇವಲ ವ್ಯಾಪಾರವನ್ನು ಗುರಿಯಾಗಿಟ್ಟುಕೊಂಡು ನಡೆದರು.

ಅಭ್ಯಾಸಗಳು:

೧. ನಾವಿಕರಿಗೆ ಪರ್ಯಟನದಲ್ಲಿ ಉಪಯೋಗವಾಗುವ ಸಾಧನಗಳಾವವು ?

೨. ಪಶ್ಚಿಮ ಯುರೋಪದವರು ವ್ಯಾಪಾರಕ್ಕಾಗಿ ಜಲಮಾರ್ಗಗಳನ್ನು ಶೋಧಿಸಲೇ ಬೇಕಾಯಿತು. ಏಕೆ ?

೩. ಕೆಳಗೆ ಒಂದು ರೇಷೆಯನ್ನು ಕೊಟ್ಟಿದೆ ಅದರ ಒಂದು ಬದಿಗೆ ಕೆಲವು ಹೆಸರುಗಳನ್ನು ಕೊಟ್ಟಿದೆ. ಅವರು ಯಾವ ಮಾರ್ಗಗಳನ್ನು ಶೋಧಿಸಿದರೆಂಬುದನ್ನು ರೇಷೆಯ ಇನ್ನೊಂದು ಪಕ್ಕಕ್ಕೆ ಬರೆಯಿರಿ.

ಪುರಾತನಕಾಲದ ದಕ್ಷಿಣಭಾರತೀಯರು

ಬಾರ್ಥಲೋಮ್ಯೂ ಡಾಯಸ್

ಕ್ರಿಸ್ಟೋಫರ್ ಕೋಲಂಬಸ್

ವಾಸ್ಕೋ-ಡಾ-ಗಾಮಾ

ಮೆಗೆಲನ್

ಹಾಲಂಡದವರು

ಇಂಗ್ಲಂಡದವರು

ಫ್ರಾನ್ಸದೇಶದವರು

೧೧. ಭಾಗವತ ಪಂಥದ ಉದಯ.

ಈ ಮೊದಲಿನ ಶತಮಾನಗಳಲ್ಲಿ ಅಂದರೆ:— ಶಂಕರಾಚಾರ್ಯರ ಕಾಲ ಮತ್ತು ಅದಕ್ಕೂ ಮೊದಲಿಗೆ ಗುಪ್ತ ಅರಸರು ಆಳುವ ಹೊತ್ತಿನಲ್ಲಿ ಧರ್ಮಸುಧಾರಣೆಯೆಂಬುದು, ಸಮಾಜದಲ್ಲಿ ಆಂತರಿಕ ಮಾರ್ಪಾಟುಗಳನ್ನು ಮಾಡುವದು, ಅಥವಾ ಪಾಖಂಡಿಗಳನ್ನು ಸೋಲಿಸಿ ನೂತನ ಸಿದ್ಧಾಂತಗಳನ್ನು ಸ್ಥಾಪಿಸುವದು, ಇಷ್ಟಕ್ಕೆ ಮಾತ್ರ ಮರ್ಯಾದಿತವಾಗಿದ್ದಿತು. ಭಾರತಕ್ಕೆ ಹೊಸದಾಗಿ ಬಂದು ನೆಲಸಿದ ಆರ್ಯರಲ್ಲದವರನ್ನು ಆರ್ಯ ಸಮಾಜದಲ್ಲಿ ಬೆರೆಸಿಕೊಂಡದುದು, ಮತ್ತು ಶ್ರೀ ಮತ್ ಶಂಕರಾಚಾರ್ಯರು ಬೌದ್ಧ ಪಂಡಿತರನ್ನೂ ಮೀಮಾಂಸಕರನ್ನೂ ವಾದದಲ್ಲಿ ಗೆದ್ದು ವೈದಿಕ ಮತವ ಪುನಃ ಸ್ಥಾಪನೆ ಮಾಡಿದ್ದು, ಇವರ ಸ್ಪಷ್ಟ ಉದಾಹರಣೆಗಳಾಗಿವೆ. ೧೩ನೆಯ ಶತಕವಷ್ಟೊತ್ತಿಗೆ ಈ ಪರಿಸ್ಥಿತಿಯು ಬದಲಾಗಿದ್ದಿತು. ಈಗ ಹಿಂದೂ ಧರ್ಮಕ್ಕೆ ಮತ್ತೊಂದು ವಿದೇಶೀಯ ಧರ್ಮಕ್ಕೆ ಎದುರು ಬದಿಗೆ ನಿಂತು ತನ್ನ ಶ್ರೇಷ್ಠತೆಯನ್ನು ತೋರಿಸುವ ಪ್ರಸಂಗ ಬಂದಿತು. ಈ ವಿದೇಶಿ ಮಹಮ್ಮದೀಯ ಧರ್ಮವು ವೈದಿಕ ಧರ್ಮದ ತಳಹದಿಯ ತತ್ವಗಳಿಗೆನೇ ವಿರೋಧ ತಳೆಯುತ್ತದೆಂಬುದನ್ನು ಮರೆಯಲಾಗದು. ಹಿಂದು ಧರ್ಮದ ಮೂಲ ತತ್ವಗಳಾದ ಪ್ರಕೃತಿ, ಪುರುಷ, ಕರ್ಮ, ಪುನರ್ಜನ್ಮ ಮುಂತಾದವುಗಳನ್ನು ಒಪ್ಪದೆ, ಏಕೇಶ್ವರಿ ಪಂಥದ ಪುರಸ್ಕಾರವನ್ನು ಮಾಡುವ ಮಹಮ್ಮದೀಯ ಧರ್ಮವು ವೈದಿಕ ಮತಾನುಯಾಯಿಗಳಿಗೆ ಒಂದು ತರದ ಆವ್ಹಾನವನ್ನೇ ಕೊಟ್ಟಿತು.

ಕ್ರಿ. ಶ. ೧೩ನೆಯ ಶತಮಾನದಿಂದ ನಂತರ ಭಾರತದಲ್ಲಿ ನಡೆದ ಧಾರ್ಮಿಕ ಸುಧಾರಣೆಗಳಲ್ಲಿ ಕಂಡು ಬರುವ ಮುಖ್ಯಲಕ್ಷಣಗಳೆಂದರೆ, ಏಕೇಶ್ವರಿ ಪಂಥದ ಪುರಸ್ಕಾರ, ಜಾತಿಗಳ ಐಕ್ಯವು ಮಹತ್ವದವಾಗಿವೆ. ಇಷ್ಟ ದೇವತೆಗಳ ಪ್ರಾರ್ಥಿಸಿ ಭಜಿಸಿ ಪೂಜಿಸಿ ಮಾನವನು ತನ್ನ ಪುರುಷಾರ್ಥಗಳನ್ನು ದೊರಕಿಸಿಕೊಳ್ಳುವನೇವಿನಾ, ಇತರ ಸಾಧನಗಳಿಂದಲ್ಲ! ಎಂಬುದು ಈ ಕಾಲದ ಧರ್ಮ

ಭಾವನೆಗಳ ತಿರುಳಾಗಿದ್ದಿತು. ಸ್ವಲ್ಪದರಲ್ಲಿ ಹೇಳಬೇಕಾದರೆ, ನಿಮ್ಮ [illegible] ಮಹಾಭಾರತ ಕಾಲದಿಂದಲೂ ಬೆನ್ನಟ್ಟಿ ನಡೆದ ಭಕ್ತಿ ಮಾರ್ಗವು [illegible] ಮತ, ಪಂಥಗಳ ಭೇದಗಳಿಲ್ಲದೆ, ಈ ಕಾಲದಲ್ಲಿ ಅಭಿವೃದ್ಧಿಹೊಂದಿತು. ಕರ್ನಾಟಕ, ಮಹಾರಾಷ್ಟ್ರ, ಗುಜರಾಥ, ತಮಿಳು ನಾಡು, ಆಂಧ್ರದೇಶ, ಉತ್ತರ ಭಾರತದ ಬಂಗಾಲ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಭಕ್ತಿ ಮಾರ್ಗ ಪುರಸ್ಕರ್ತರು ತಲೆದೋರಿದರು. ಇದರಲ್ಲಿ [illegible] ಹೆಸರು ಪಡೆದ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯರ ಹೆಸರಿಕ್ಕಾಗಿ ಕೆಲಮಟ್ಟಿಗೆ [illegible] ಚಾರ್ಯರು ಮಾಡಿದ [illegible] ಸಂಬಂಧವು [illegible] ವಿವೇಕವನ್ನು ಮಾಡಿಕೊಳ್ಳುವದುಚಿತ. [illegible] ಜಗದ್ಗುರುಗಳ ವಂಶದಲ್ಲಿ ಜನ್ಮವೆತ್ತಿದರು. ಈ [illegible] ಶ್ರೀ ಶಂಕರಾಚಾರ್ಯರ ಕೆಲವು ತತ್ತ್ವಗಳನ್ನು [illegible] ವಾಗಿ [illegible] ವರು ಖಂಡಿಸಿದರು. [illegible] ರಾಮಾನುಜಾಚಾರ್ಯರ [illegible]. ತಾವು ಹಿಂದಿನ [illegible] ಸಿದ್ಧಾಂತಗಳನ್ನು [illegible] ಖಂಡಿಸಿ, ಪ್ರಸ್ಥಾನತ್ರಯಗಳಿಗೆ ಭಾಷ್ಯಗಳನ್ನು ಬರೆದಾಯಿತು. ಇವರು ಸ್ಥಾಪಿಸಿದ ಮತಕ್ಕೆ ವಿಶಿಷ್ಟಾದ್ವೈತವೆಂದು ಹೆಸರು. ಇವರು ಹೀಗೆ ಬೋಧಿಸಿದರು —ಭಕ್ತಿಯಿಂದ ಕರ್ಮ ಬಂಧವು ದೂರಾಗುವದು. ಭಗವಂತನು ಪ್ರೇಮಭರಿತನಿದ್ದಾನೆ.

ರಮಾನಂದ:

ಈ ಮತವನ್ನೇ ಹಿಡಿದು, ಅಲಹಾಬಾದದ ರಮಾನಂದನೆಂಬ ಸನ್ಯಾಸಿಯೊಬ್ಬನು ಉತ್ತರದಲ್ಲಿ ಭಕ್ತಿಪಂಥವನ್ನು ಬೋಧಿಸಿದನು. ಮುಕ್ತಿಯ ಸಾಧನೆ, ಸ್ವರ್ಗ ನರಕಗಳ ಕಲ್ಪನೆ, ಸಂಸಾರ ಸಾಗರವನ್ನು ದಾಟುವ ಮೋಕ್ಷೋಪಾಯಗಳ ವಿಚಾರಗಳನ್ನು ಇವನು ಅಲ್ಲಲ್ಲಿ ಸುತ್ತಾಡಿ ಜನರಿಗೆ ಬೋಧಿಸಿದನು. ಇಂತಹ ಬೋಧೆಗಳಲ್ಲಿ ಸೃಷ್ಟಿಕರ್ತನು ಕರುಣಾಮಯನಾಗಿದ್ದು

ನೆಂಬ ಕಲ್ಪನೆಯು ಆಗಿನ ಜನರನ್ನು ಆಕರ್ಷಿಸಿತು. ರಮಾನಂದನು ಕಾಶಿಯಲ್ಲಿ ನೆಲೆಸಿ ಬೋಧೆ ಮಾಡುತ್ತಿರಲು ಅವನಿಗೆ ಅನೇಕ ಜನರು ಶಿಷ್ಯರಾದರು. ಮಹಾತ್ಮಾ ಕಬೀರನೂ ಇವರಲ್ಲಿ ಒಬ್ಬನು.

ಮಹಾತ್ಮಾ ಕಬೀರ:

ಇವನು ಜನ್ಮತಃ ಹಿಂದುವೋ ಮುಸಲ್ಮಾನನೋ ಎಂಬುದರ ಬಗ್ಗೆ ವಾದವಿದೆ. ರಮಾನಂದನ ಶಿಷ್ಯೋತ್ತಮರಲ್ಲೊಬ್ಬನೆನಿಸಿ ಅವನ ತತ್ವ



ಮಹಾತ್ಮಾ ಕಬೀರ

ಗಳನ್ನೇ ಜನರಲ್ಲಿ ಪ್ರಚಾರಗೊಳಿಸಿದನು. ರಾಮ ರಹೀಮ ಇವೆರಡೂ ಒಬ್ಬ ದೇವನ ಹೆಸರುಗಳೆಂದು ಪ್ರತಿಪಾದಿಸಿದನು. ಇವನು ಬೋಧೆ ನಡೆಸುತ್ತಿರುವಾಗ ಹಿಂದೂ ಮುಹಮ್ಮದೀಯ ಎರಡೂ ಮತಗಳವರೂ ಇವನ ಶಿಷ್ಯಕೋಟಿಯಲ್ಲಿ ಸೇರಿದರು. ಇವನು ಮೂರ್ತಿಪೂಜೆ, ಅವತಾರ ಕಲ್ಪನೆ, ಧರ್ಮವಿಧಿ ಮುಂತಾದವುಗಳನ್ನು ಮನ್ನಿಸಿದನು. ಇವನು "ಶುಕನಿಧಾನ" ಎಂಬ ಗ್ರಂಥವನ್ನು ಬರೆದನು. ಶ್ರುತಗೋಪಾಲ, ಮತ್ತು ಧರ್ಮದಾಸ.

ರೆಂಬ ಶಿಷ್ಯರು ಇವನಿಂದ ಹೆಸರಾದರು.

ಗುರು ನಾನಕ:

ಮಹಾತ್ಮಾ ಕಬೀರನ ನಂತರ ಹಿಂದೂ ಮುಸಲ್ಮಾನರ ಐಕ್ಯಕ್ಕಾಗಿ ಹೆಣಗಿದ ಮತ್ತೊಬ್ಬ ಮಹಾನುಭಾವನೆಂದರೆ, ಗುರು ನಾನಕ ಎಂಬವನು ಇವನು ಲಾಹೋರದ ಬಳಿಯಲ್ಲಿ ನೆಲೆಸಿದ್ದ ಕಾಲು ಎಂಬೋರ್ವ ಚಿಕ್ಕ ಧಾನ್ಯ ವ್ಯಾಪಾರಿಯ ಮಗನು. ಕ್ರಿ. ಶ. ೧೪೬೯ರಿಂದ ೧೫೩೮ ರ ವರೆಗೆ ಇವನು ಜೀವಿಸಿದನು. ಚಿಕ್ಕವನಿದ್ದಾಗ ಹಿಂದು ಮಹಮ್ಮದೀಯ ಗ್ರಂಥಗಳನ್ನು ಓದಿದನು. ಮಕ್ಕಾ ಯಾತ್ರೆಯನ್ನು ಮಾಡಿದ್ದಾಯಿತು. ಮೊದಲು ವಿರಕ್ತನಾಗಿದ್ದು, ಬಹು ದಿವಸದ ಮೇಲೆ ಪುನಃ ಮದುವೆಯಾಗಿ ಪ್ರಪಂಚ ಹೂಡಿದನು. ಶ್ರೀಚಂದ ಮತ್ತು ಲಕ್ಷ್ಮೀದಾಸ ಎಂಬ ಮಕ್ಕಳನ್ನು ಪಡೆದನು. ಇವನಾವರೂ ಹಿಂದು ಮುಸಲ್ಮಾನರನ್ನು ಒಂದುಗೂಡಿಸಲು ಹೆಣಗಿ ಸ್ವಕೀಯ ಧರ್ಮ — ಶೀಖ ಧರ್ಮ—ವನ್ನು ಸ್ಥಾಪಿಸಿದನು. ಈ ಧರ್ಮವು ಪಂಜಾಬದಲ್ಲಿ ಬಹಳವಾಗಿ ಹಬ್ಬಿದೆ. ತತ್ವ ಜ್ಞಾನಿಗಳಲ್ಲದೆ, ಇತರರೂ ಈ ಮಾರ್ಗವನ್ನು ಎತ್ತಿ ಹಿಡಿದರು.

ಮಿಥಿಲೆಯ ವಿದ್ಯಾಪತಿಯು ಭಕ್ತಿಮಾರ್ಗವನ್ನು ಬೋಧಿಸುವ ಪ್ರಥಮ ಕವಿಯೆನಿಸಿದನು. ಚಿತ್ತೂರಿನ ರಾಜ ಪುತ್ರಿಯಾದ ಮೀರಾಬಾಯಿಯು ಕೃಷ್ಣ ಭಕ್ತಿಯಲ್ಲಿ ಮಿಗಿಲಾದವಳೆನಿಸಿದಳು. ಅವಳು ರಚಿಸಿದ ಭಕ್ತಿ ಕವನಗಳು ಇಂದಿಗೂ ಹಿಂದಿಯರ ಬಾಯಲ್ಲಿವೆ.

ಮಹಾರಾಷ್ಟ್ರದಲ್ಲಿಯ ಸಂತರಿಗೆ ಆಗಿನ ಕಾಲದ ಹಿಂದುಗಳಲ್ಲಿ ಧರ್ಮದ ದೃಷ್ಟಿಯಿಂದ ಆದ ಅವನತಿಯನ್ನು ಕಂಡು, ಮತ್ತು ಹಿಂದುಗಳ ಗುಡಿಗುಂಡಾರಗಳೆಲ್ಲ ಮಹಮ್ಮದೀಯರಿಂದ ಉದ್ವಸ್ತವಾಗುವದನ್ನು ಕಂಡು, ಅತಃಕರಣದಲ್ಲಿ ಕಳವಳವುಂಟಾಯಿತು. ಈ ಸ್ಥಿತಿಯನ್ನು ಸುಧಾರಿಸಿ ಮಹಾರಾಷ್ಟ್ರದವರಲ್ಲಿ ಧರ್ಮಾಭಿಮಾನ ಕುಲಾಭಿಮಾನಗಳನ್ನು ಉತ್ಪನ್ನ ಮಾಡುವ ಕೆಲಸದಲ್ಲಿ ಇವರು ಮಿಗಿಲಾದ ಕೆಲಸ ಮಾಡಿದರು. ಇವರಲ್ಲಿ

ಜ್ಞಾನದೇವ, ನಾಮದೇವ, ಏಕನಾಥ, ತುಕಾರಾಮ ಮುಂತಾದವರು ಹೆಸ ರಾದರು. ಸಂಸ್ಕೃತದಲ್ಲಿರುವ ಧರ್ಮಕಲ್ಪನೆಗಳನ್ನು ಇವರು ಜನಸಾಮಾನ್ಯ ರಿಗೆ ಅವರ ಮಾತೃಭಾಷೆಯಾದ ಮರಾಠಿಯಲ್ಲಿಯೆ ತಿಳಿಸಿ, ಅವರನ್ನು ಜೀತ ರಿಸಿದರು. ಇದಲ್ಲದೆ, ಜಾತಿಭೇದದ ನಿರ್ಮೂಲನದ ಪ್ರಯತ್ನವೂ ಇವರಿಂದ ಘಟಿಸಿತು. ಬ್ರಾಹ್ಮಣ, ಸಿಂಪಿ, ತೋಟಿಗ ಕುಂಬಾರ, ಮಹಾರ ಮುಂತಾದ ಎಲ್ಲ ಸಮಾಜಗಳ ಸಂತರು ಆಗಿನ ಮಹಾರಾಷ್ಟ್ರದಲ್ಲಿ ಸಂಚರಿಸಿದರು. ಮತ್ತು ಪರಮಪದ ಪ್ರಾಪ್ತಿಗೆ ಪರಮೇಶ್ವರನ ಭಕ್ತಿಯೇ ಕಾರಣವೆಂದು ಪ್ರಸ್ಥಾ ಪಿಸಿದರು. ಭಕ್ತನಿಗೆ ಜಾತಿಭೇದವಿಲ್ಲ; ಜಪ ತಪ ವ್ರತೋಪವಾಸಗಳು ಇಲ್ಲ ವೆಂದು ಇವರು ಪ್ರತಿಪಾದಿಸಿದರು. ಭಕ್ತಿಮಾರ್ಗದ ಈ ಹೊಸ ವಿಚಾರ ಸರಣಿಯಿಂದ ಜನರಲ್ಲಿ ನವ ಚೈತನ್ಯವು ಹುಟ್ಟಿತು.

ರಾಮದಾಸ:

ಕಾಲಗತಿಯಲ್ಲಿ ರಾಮದಾಸರೆಂಬ ಮಹಾರಾಷ್ಟ್ರ ಯತಿಗಳು ಮಹಾ- ರಾಷ್ಟ್ರದಲ್ಲಿ ಹುಟ್ಟಿ, ಈ ಹೊಸ ಚೈತನ್ಯದ ಉಪಯೋಗ ಮಾಡಿಕೊಂಡು, ಸ್ವದೇಶಾಭಿಮಾನ, ಸ್ವಧರ್ಮರಕ್ಷಣೆಗಳ ಕಡೆಗೆ ಜನರ ಒಲವನ್ನು ಹೊರಳಿಸಿ ದರು. ಇವರು ಭಕ್ತಿಪಂಥಕ್ಕೆ ಹೊಂದಿಕೊಂಡು, ರಾಷ್ಟ್ರಧರ್ಮವನ್ನು ಬೋಧಿಸಿದರೆಂದು ತಿಳಿಯುತ್ತದೆ.

ಶ್ರೀ ಬಸವಣ್ಣನವರು:

ಆಗಿನ ಕಾಲಕ್ಕೆ ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ಕರ್ನಾ ಟಕದಲ್ಲಿ ಮಹಾಕ್ರಾಂತಿಯನ್ನೇ ಮಾಡಿದ, ವಿಶ್ವಪ್ರೇಮಿಯಾದ ಮತ್ತು ಮಹಾ ಅನುಭಾವಿಯಾದ ಬಸವಣ್ಣನವರ ಹೆಸರನ್ನು ಅರಿಯದ ಕನ್ನಡಿಗ ನಿಲ್ಲ. ಬಿಜ್ಜಳನೆಂಬ ಅರಸನಲ್ಲಿ ಮಂತ್ರಿಪದಕ್ಕೇರಿ, ಸಮಾಜದ ತಿದ್ದುಪಾಟಿಗೆ ಕೈ ಹಾಕಿದರು. ಉಚ್ಚ ನೀಚರೆಂಬ ಭೇದವಿಲ್ಲದೆ, ಇವರು ಕಲ್ಯಾಣದಲ್ಲಿ ನಡೆಸಿದ ಅನುಭವ ಮಂಟಪಕ್ಕೆ ಜನರು ಧುಮುಕಿದರು. ಅಲ್ಲಿ ಹೊಲೆಯ ನಾದ ಹರಳಯ್ಯ ಮತ್ತು ಬ್ರಾಹ್ಮಣನಾದ ಮಾಚದೇವ, ಇವರ ಬೀಗತನ

ವನ್ನು ನಡೆಸಿ, ಬಸವಣ್ಣನವರು ಆಗಿನ ಕಾಲದ ಸಮಾಜದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಿದರು. ಶಿವಲಿಂಗದಲ್ಲಿ ಮೆಚ್ಚಿಗೆಯಿಟ್ಟು, ನಂಬಿಕೆಯಿಂದ ನಡೆದರೆ ಆತನೊಲಿವನೆಂದು, ಇವರು ತಮ್ಮ ವಚನಗಳಿಂದ ತಿಳಿಸಿ ಹೇಳಿದರು. ಈ ರೀತಿ ಎಷ್ಟೋ ಕಾಲ ಭಕ್ತರನ್ನುದ್ಧರಿಸುತ್ತಿರಲು, ಕಪ್ಪಡಿ ಸಂಗಮದಲ್ಲಿ ಶಿವೈಕ್ಯರಾದರು.

ಕರ್ನಾಟಕದಲ್ಲಿ ಇದೇ ಕಾಲಕ್ಕೆ ಪುರಂದರದಾಸ ಕನಕದಾಸರೆಂಬ ಭಕ್ತಶ್ರೇಷ್ಠರು ತಲೆಯೆತ್ತಿ ಸಾಮಾನ್ಯ ಮನುಷ್ಯನಿಗೆ ಭಕ್ತಿಮಾರ್ಗವನ್ನು ಬೋಧಿಸಿದರು. ವಿಜಯನಗರದ ಘನತೆಯ ಕಾಲಕ್ಕೆ ಪುರಂದರದಾಸರು ರಾಜಧಾನಿಯಲ್ಲಿಯೇ ನೆಲೆಸಿದರು. ದಿನಾಲು ನಗರಸಂಕೀರ್ತನೆ ನಡೆಸಿ, ಘನವಾದ ತತ್ವಗಳನ್ನು ಸರಳವಾದ ಮಾತೃಭಾಷೆಯಲ್ಲಿ ಜನರಿಗೆ ಬೋಧಿಸಿದರು. ಇಂದಿಗೂ ಪುರಂದರ ಕನಕರ ಪದಗಳು ಕನ್ನಡಿಗರ ಮನೆಯ ಗೀತೆಗಳಾಗಿವೆ. ವ್ಯಾಸರಾಯರೆಂಬ ವೈಷ್ಣವ ಯತಿಗಳು ಇದೇ ಕಾಲಕ್ಕೆ ಬದುಕಿದ್ದು, ವಿಷ್ಣುಸರ್ವೋತ್ತಮ ತತ್ವವನ್ನು ಜನರಿಗೆ ಬೋಧಿಸಿದರು. ಲಿಂಗವಂತ ಯತಿಗಳೆನಿಸಿದ ನಿಜಗುಣ ಶಿವಯೋಗಿಗಳ ಕಾಲವಾದರೂ ಇದೇ ಆಗಿದೆ. ಇವರು ವಿಜಯನಗರದಲ್ಲಿದ್ದು ತತ್ವಬೋಧೆ ನಡೆಸಿದರು.


ಭಕ್ತಿಸಂಘವು ಒಂದು ರೀತಿಯಿಂದ ಹಿಂದೂ ಮುಸ್ಲಿಂ ಧರ್ಮಗಳಲ್ಲಿಯ ಆರಿಸಿದ ತತ್ವಗಳ ಸಂಕಲನವಿದ್ದುದರಿಂದ, ಎರಡೂ ಧರ್ಮಗಳ ಜನರಿಗೆ ಅವುಗಳಲ್ಲಿ ಆಸ್ಥೆ ಹುಟ್ಟುವಂತಿದ್ದಿತು. ವೈದಿಕ ವೇದಾಂತ ಗ್ರಂಥಗಳಲ್ಲಿ ಏಕೇಶ್ವರೀಪಂಥವು ಕಂಡು ಬರುತ್ತಿದ್ದರೂ, ಮೇಲೆ ಹೇಳಿದ ಭಕ್ತರು ತಮ್ಮ ಮತದ ತಿರುಳಿನ ಬಹುಭಾಗವನ್ನು ಇಸ್ಲಾಂ ಮತ ಬೋಧೆಯಿಂದ ಆಯ್ದುಕೊಂಡರೆಂದು ಹೇಳಬಹುದೆ?

ಭಕ್ತಿಪಂಥದ ಮತ್ತೊಂದು ಮಹತ್ವದ ಗುಣವೆಂದರೆ, ಇದರಲ್ಲಿದ್ದ ಇಹಲೋಕದ ದುಃಖಗಳನ್ನು ಮರೆಯಿಸುವ ಗುಣ. ಬಂದದ್ದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ, ಎಂದು ಮೊರೆಹೋಗುವಾಗ ದಾಸರ ಮನಸ್ಸಿಗಾದ ಗಾಯ ನೋವು ದುಃಖಗಳನ್ನು ಮನಗಾಣಬಹುದು. ಇದೆ

ರಂತೆ ಆಗಿನ ಕಾಲಕ್ಕೆ ಸಾಮಾನ್ಯ ಜನರು, ತಮ್ಮ ಸಂಸಾರದ ತಾಪತ್ರಯ ಗಳನ್ನೂ, ಇಹಲೋಕದ ತೊಂದರೆಗಳನ್ನೂ ಮರೆಯಲು ಭಾಗವತ ಅಥವಾ ಭಕ್ತಿ ಪಂಥವು ತಾರಕೋಪಾಯವೆನಿಸಿತು. ಕೆಲ ಅನುಭಾವಿಗಳು ಇದ ರಿಂದ ದೇವರನ್ನು ಕಂಡರೆಂದಿಟ್ಟುಕೊಂಡರೂ, ಸಾಮಾನ್ಯ ಜನರು ತಮ್ಮ ದುಃಖ ಮರೆಯುವುದಕ್ಕಾಗಿ ಇದನ್ನು ಅನುಸರಿಸಿದರು. ತುಳಸಿದಾಸನು ಮಾತ್ರ ಅನುಭಾವಿಗಳಿಗೂ ಕರ್ತವ್ಯವಿದೆ, ಎಂಬ ಭಾವನೆಯನ್ನು ತಂದು ಕೊಟ್ಟನು. ಆತನ "ರಾಮಾಯಣ"ವು ಮನುಷ್ಯನನ್ನು ಕರ್ತವ್ಯದ ಕಡೆಗೆ ಸೆಳೆಯಿತು.

ಅಭ್ಯಸನಗಳು:

೧. ಕೆಳಗೆ ಕಾಣಿಸಿದ ಚೌಕಟ್ಟಿನ ಸುತ್ತಲಿರುವ ರೇಷೆಗಳಿಗೆ ಹೊಂದಿ ಭಕ್ತಿಪಂಥದ ಪುರಸ್ಕರ್ತರನ್ನು ಮೇಲ್ಮೆಗೆ ಅನುಸರಿಸಿ ಬರೆಯಿರಿ.



೨. ಬಿಡುವು ತುಂಬಿರಿ.

(ಅ) ಭಕ್ತಿಪಂಥದ ಪುರಸ್ಕರ್ತರು ದೇವರನ್ನು .... ಒಲಿಸಿಕೊಂಡರು.

(ಬ) ಭಕ್ತಿಪಂಥದ ಏಕೇಶ್ವರ ವಾದವು ಭಾರತದಲ್ಲಿ .... ಕಾಲದಿಂದ ಬಂದಿದೆ.

(ಕ) ಪುರಂದರ ಕನಕದಾಸರು .... ಪ್ರಾಂತದವರು.
(ಡ) ಗುರು ನಾನಕ ಪಂಥವು .... ಲ್ಲಿ ನೆಲೆಸಿದೆ.
(ಇ) ಮಹಾರಾಷ್ಟ್ರದಲ್ಲಿ ... .
ಇವರು ಭಕ್ತಿಪಂಥವನ್ನು ಪುರಸ್ಕರಿಸಿದರು.

---

೧೨. ಮೊಗಲ ಬಾದಶಹರು.

ದಿಲ್ಲಿಯ ಪಟ್ಟವನ್ನೇರಿ ಭಾರತದ ಬಾದಶಹನೆಂದು ಕರೆಯಿಸಿಕೊಂಡ ಮಹಮ್ಮದೀಯನು, ಈ ಮೊದಲೆ ನಾವು ಓದಿದ ದಿಲ್ಲಿಯ ಮುಸಲ್ಮಾನ ಅರಸರಕಿಂತ ಬೇರೆಯಾಗಿರುವನು. ಮಧ್ಯ ಏಶಿಯದ ಎರಡು ದೊಡ್ಡ ಬಾದಶಾಹಿ ವಂಶಗಳಿಗೆ ರಕ್ತಾನುಗತವಾಗಿ ಸಂಬಂಧಪಟ್ಟ ಬಾಬರನು, ತಂದೆಯಿಂದ ತೈಮೂರನ ವಂಶಜನೂ ತಾಯಿಯಿಂದ ಪ್ರಸಿದ್ಧಿ ಪಡೆದ ಜಂಗಿಜ ಖಾನನ ವಂಶಜನೂ ಆಗಿದ್ದನು. ತೈಮೂರನು ಮೊದಲೊಮ್ಮೆ ಭಾರತಕ್ಕೆ ಬಂದು ಹೋದವನಾದ್ದರಿಂದ ದಿಲ್ಲಿಯ ಪಟ್ಟವೂ ಅದರ ನೆರೆಯ ಪ್ರದೇಶಗಳೂ ಅವನಿಗೆ ಅಪರಿಚಿತವಾಗಿದ್ದಿಲ್ಲ.

ಬಾಬರನು ಮಧ್ಯ ಏಶಿಯದಲ್ಲಿಯ ಸಮರಕಂದ ರಾಜ್ಯಕ್ಕೆ ಕ್ರಿ. ಶ. ೧೫೦೦ ರಲ್ಲಿ ಒಡೆಯನಾದನು. ಮರುವರುಷವೇ ಉಸ್‌ಬೆಗ್‌ರು ಇವನನ್ನು ಅಲ್ಲಿಂದ ಹೊರಗಟ್ಟಿದರು. ನಂತರ ನೂರು ವರುಷಗಳು ಕಳೆಯಲಾಗಿ ಕಾಬೂಲವು ಬಾಬರನ ವಶವಾಯಿತು.

ಕ್ರಿ. ಶ. ೧೫೨೬ರಲ್ಲಿ ಬಾಬರನು ದಿಲ್ಲಿಗೆ ನುಗ್ಗಿ ಬಂದನು. ಅಲ್ಲಿ ಆಗ ಆಳುತ್ತಿದ್ದ ಇಬ್ರಾಹಿಮ ಲೋದಿ ಎಂಬ ಅರಸನನ್ನು ಪಾಣಿಪತ್ತದ ಯುದ್ಧದಲ್ಲಿ ಸೋಲಿಸಿದನೆಂಬುದನ್ನು ನಾವು ತಿಳಿದೆವು. ನಂತರ ತಾನೇ ದಿಲ್ಲಿಯ ಪಟ್ಟವನ್ನಾಕ್ರಮಿಸಿ ಬಾದಶಹನೆಂದು ಸಾರಿಕೊಂಡನು. ಆಗ ಪಂಜಾಬದಲ್ಲಿ ಮಾತ್ರ ಇವನ ಆಳಿಕೆ ನೆಲೆಸಿದ್ದು, ಉಳಿದೆಲ್ಲ ಭೂಮಿಯ ಒಡೆತನವನ್ನು ಇವನು ಯುದ್ಧದಿಂದಲೇ ಸ್ಥಾಪಿಸಬೇಕಾಯಿತು. ಗ್ವಾಲೇರದ

ವಿಕ್ರಮಜಿತು ಎಂಬ ಹಿಂದು ಅರಸನು ಬಾಬರನಿಗೆ ಬಲವಾದ ವಿರೋಧ ತೋರಿದನು. ಇವನಿಗೆ ಇನ್ನೂ ಗಟ್ಟಿಗತನದಿಂದ ವಿರೋಧತೋರಿದವರೆಂದರೆ ರಜಪೂತರು. ಮೇವಾಡದ ರಾಣಾಸಂಗನೆಂಬ ವೀರನು ವಿರೋಧಕರ ಮುಂದಾಳಾದನು. ಇವನಿಗೆ ಸಂಗ್ರಾಮಸಿಂಹನೆಂಬ ಹೆಸರಿದ್ದಿತು. ಅವನ ಮೈಮೇಲೆ ೮೦ ಖತಿಗಳ ಕಲೆಗಳು ಇದ್ದವು. ಒಂದು ಕಣ್ಣಿಲ್ಲ. ಒಂದು ಕೈ ಕಡಿದು ಹೋಗಿದ್ದಿತು. ಇವನು ಒಂದು ನೂರು ಯುದ್ಧಗಳನ್ನು ನಡೆಸಿದ್ದನಂತೆ ಇವನು ದೊಡ್ಡ ಸೈನ್ಯ ಕೂಡಿಸಿಗೊಂಡು ಸಿಕ್ರಿಯ ಹತ್ತಿರ ಬಾಬರನಿಗೆ ಎದುರಾದನು. ಬಾಬರನಿಗೆ ಜಯಸಿಕ್ಕಿದ್ದರಿಂದ, ದಿಲ್ಲಿಯ ಪಟ್ಟವು ಅವನಿಗೆ ಸುಲಭವಾಯಿತು. ಮುಂದೆ ಬಾಬರನು ಗ್ವಾಲೇರದ ಅರಸರನ್ನೂ, ಬಿಹಾರ ಬಂಗಾಲಗಳ ಅಮೀರರನ್ನೂ ಸದೆಬಡೆದು ತನ್ನ ಪಟ್ಟವನ್ನು ಭದ್ರಮಾಡಿಕೊಂಡನು.

ಬಾಬರನು ೧೫೩೦ ಡಿಸೆಂಬರ ೨೬ಕ್ಕೆ ಮರಣ ಹೊಂದಿದನು. ಇವನ ಮಗ ಹುಮಾಯೂನನು ಒಮ್ಮೆ ಬೇನೆ ಬಿದ್ದಾಗ ಬಾಬರನು ದೇವರಿಗೆ ಪ್ರಾರ್ಥಿಸಿ ಅವನ ಬೇನೆಯನ್ನು ತನ್ನಲ್ಲಿ ತೆಗೆದುಕೊಂಡು ಕೊನೆಗೆ ಮೃತಿ ಪಟ್ಟನೆಂಬುದಂತ ಕಥೆಯಿದೆ. ಇವನ ಅಪೇಕ್ಷೆಯಂತೆ ಮೃತ ದೇಹವು ಕಾಬೂಲಕ್ಕೆ ಒಯ್ಯಲಾಯಿತು. ಅಲ್ಲಿ ಇಂದಿಗೂ ಇವನ ಗೋರಿಯನ್ನು ಕಾಣಬಹುದು.

ಬಾಬರನು ತನ್ನ ಸ್ವಂತ ಚರಿತ್ರೆಯನ್ನು ತುರ್ಕಿ ಭಾಷೆಯಲ್ಲಿ ಬರೆದಿದ್ದಾನೆ. ಅದರಲ್ಲಿ ಭಾರತದಲ್ಲಿ ಅವನು ಕಂಡ ಪಶು ಪಕ್ಷಿ ಪ್ರಾಣಿ ವನಸ್ಪತಿ ಮನುಷ್ಯರ ವರ್ಣನೆ ಬಂದಿದೆ.

ಬಾಬರನು ಒಬ್ಬ ದೈವಬಲವಿದ್ದ ಪುಂಡನಾಗಿದ್ದನು. ಭಾರತದಲ್ಲಿ ಒಂದು ಸಾಮ್ರಾಜ್ಯದ ಸ್ಥಾಪಕನಾಗುವೆನೆಂದು ಅವನು ಎಂದೂ ಬಗೆದಿರಲಿಲ್ಲ. ಇವನು ಉತ್ಕೃಷ್ಟ ಕವಿಯೂ ಬರಹಗಾರನೂ ಆಗಿದ್ದನು. ಪಾರ್ಶಿ ಭಾಷೆಯಲ್ಲಿಯ ಇವನ ಕವಿತೆಗಳು ಶ್ಲಾಘನೀಯವಾಗಿವೆ. ತುರ್ಕಿ ಭಾಷೆಯಲ್ಲಿ ಬರೆದ ಇವನ ಕೆಲವು ಬರಹಗಳೂ ಸ್ವತಂತ್ರ ಶೈಲಿಗಳಿಂದಲೂ ಅಕೃತ್ರಿಮತೆಯಿಂದಲೂ ಕೂಡಿವೆ. ಇವನಿಗೆ ಸಂಗೀತವೂ ಇತರ ಲಲಿತ ಕಲೆಗಳೂ ಸೇರ

ದವು. ಇವನ ಕುಟುಂಬದವರಲ್ಲಿ ಯಾರೂ ಇವನಷ್ಟು ಬುದ್ಧಿವಂತರಿರಲಿಲ್ಲ. ಮತ್ತು ಆವನ ವಂಗಡಗಳಿಗೆ ಸೇರಿದವರ [illegible] ತೋರಲಿಲ್ಲ. ಇವನು ಬಹು ಶಕ್ತಿಸಂಪನ್ನನು. [illegible] ಬ್ಬರನ್ನು ಎತ್ತಿಕೊಂಡು ಗೋಡೆಯ ಮೇಲೆ [illegible] ನಂತೆ. ಚಂಗೀಜಖಾನ, ತೈಮೂರಲಂಗ [illegible] ರಿಂದ ಇವನಲ್ಲಿ ಸಾಹಸ, ಚಾತುರ್ಯ, ಧೈರ್ಯ, ಶೌರ್ಯಾದಿ ಗುಣಗಳು ತಲೆ ದೋರಿದ್ದವು.

ಹುಮಾಯೂನನು:—

ಬಾಬರನು ಕಾಲವಾದ ನಂತರ ಹುಮಾಯೂನನು ಪಟ್ಟವೇರಿದನು. ಒಳಗೆ ಇತರ ದೂರದೂರದ ಪ್ರಾಂತಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಹವ ಣಿಸಹತ್ತಿದನು ಇವನು ಮೊದಲು ಕಲಿಂಜರದ ಕೋಟೆಯ ಮೇಲೆ ಹೋ ಹೋದನು, ಮತ್ತು ಅಲ್ಲಿಯ ಅರಸನ ಕೂಡ ಒಪ್ಪಂದವಾಗಿ, ಕಲಿಂಜರದ ಅರಸನು ಹುಮಾಯೂನನ ಸರದಾರನಾದನು. ಇಂತಹ ಸಂಗತಿಗಳು ಈ ನಂತರದ ಮೊಗಲ ಸಾಮ್ರಾಜ್ಯದ ಅಡಿಗಲ್ಲಾದವೆಂದು ಬೇರೆ ಹೇಳಬೇಕಾ ಗಿಲ್ಲ.

ಏತದ್ದೇಶೀಯ ಅರಸರನ್ನು ಸನ್ಮಾನಿಸಿ ಅವರನ್ನು ತಮ್ಮ ಸರದಾರರ ನ್ನಾಗಿ ಮಾಡಿಕೊಳ್ಳುವ ಪದ್ಧತಿಯು ಮಂಗೋಲರದು. ಚೆಂಗಿಸಖಾನನ ಮುಖ್ಯ ಮಂತ್ರಿಯು ಒಬ್ಬ ಚೀನಿಯನಾಗಿದ್ದು, ಇದೊಂದು ಮಹತ್ವದ ರಾಜಕಾರಣವಷ್ಟೆ ! ಮಂಗೋಲ ಕುಲದ ರಕ್ತದವನಾದ ಹುಮಾಯೂನನಿಗೆ ಇದು ಹೊಸದೆನಿಸಲಿಲ್ಲ.

ಬಂಗಾಲದಲ್ಲಿ ಶೇರಖಾನನೆಂಬ ಅಫಗಾನ ಸರದಾರನು ದಂಗೆ ಎದ್ದು ಹುಮಾಯೂನನನ್ನು ಎದುರಿಸಲಣಿಯಾದನು. ಈ ಯುದ್ಧದಲ್ಲಿ ಹುಮಾ ಯೂನನು ಸೋಲನ್ನೊಪ್ಪಬೇಕಾಯಿತು. ಈಗ ಪದಭ್ರಷ್ಟನಾಗಿ ಸಿಂಧ ರಜ ಪುತಾನಾಗಳ ಮರುಭೂಮಿಗಳಲ್ಲಿ ಸುತ್ತಾಡಬೇಕಾಯಿತು. ಅಲ್ಲಲ್ಲಿ, ಬೇರೆ

ಪ್ರಾಂತಗಳಲ್ಲಿ ಸ್ವತಂತ್ರರಾಗಲು ಬಯಸುತ್ತಿದ್ದ ಇವನ ಬಂಧುಗಳು ಇವನಿಗೆ ಯಾವ ಸಹಾಯವನ್ನೂ ನೀಡದೆ ಹೋದರು. ಅಮರಕೋಟದಲ್ಲಿ ಇವನು ಕೆಲಕಾಲ ತಂಗಿದಾಗ ಅಕಬರನೆಂಬ ಮಗನು ಜನಿಸಿದನು. ಇವನೇ ಮುಂದೆ ಘನವಂತನಾದ ಅಕಬರನೆಂಬ ಹೆಸರಿನಿಂದ ಮೊಗಲ ಬಾದಶಹರಲ್ಲಿ ಅತಿಶ್ರೇಷ್ಠನೆನಿಸಿಕೊಂಡನು

ಹುಮಾಯೂನನು ೧೫ ವರ್ಷಗಳ ವರೆಗೆ ಪದಭ್ರಷ್ಟನಾಗಿ ಸಂಚರಿಸಬೇಕಾಯಿತು. ಕೊನೆಗೆ ಇವನು ಪರ್ಷಿಯಾದ ಅರಸನಾದ ಶಹಾ ತಾಹಾಮಾಸ್ಪ ಎಂಬವನಲ್ಲಿ ಆಶ್ರಯ ಪಡೆದನು. ಅವನ ಕೆಲವು ಕರಾರುಗಳಿಗೊಪ್ಪಿಕೊಂಡು ಹುಮಾಯೂನನು ದಂಡನ್ನು ಸಾಲವಾಗಿ ಪಡೆದನು. ಹಾದಿಯಲ್ಲಿ ತನ್ನ ತಮ್ಮನನ್ನು ಸದೆಬಡಿದು ದಿಲ್ಲಿಯ ಕಡೆಗೆ ಸಾಗಿದನು. ಕೊನೆಗೆ ೧೫೫೫ ರಲ್ಲಿ ದಿಲ್ಲಿ ಆಗ್ರಾಗಳನ್ನು ಪುನಃ ಆಕ್ರಮಿಸಿದನು. ನಂತರ ಆಡಳಿತೆಯನ್ನು ಬಿಗಿಗೊಳಿಸುತ್ತಿದ್ದಾಗ ದಿಲ್ಲಿಯಲ್ಲಿದ್ದ ತನ್ನ ಲೈಬ್ರರಿಯ ಸೋಪಾನಗಳ ಮೇಲೆ ಕಾಲು ಜಾರಿ ಕೆಳಗುರುಳಿದನು. ಇದೇ ಮುಂದೆ ಇವನ ಮರಣಕ್ಕೆ ಕಾರಣವಾಯಿತು. ಆಗ ಎರಡನೆಯ ಸಾರೆ ದಿಲ್ಲಿಯ ಪಟ್ಟ ಗಳಿಸಿ ಏಳು ತಿಂಗಳುಗಳು ಮಾತ್ರ ಸಂದಿದ್ದವು.

ಈ ಕಾಲಾವಧಿಯಲ್ಲಿ—ಹುಮಾಯೂನನು ದೇಶತ್ಯಾಗ ಮಾಡಿದಾಗ—ದಿಲ್ಲಿಯ ಪಟ್ಟವನ್ನು ಬಂಗಾಲದ ಶೇರಖಾನನು ಆಕ್ರಮಿಸಿ, 'ಶೇರಶಹ' ಎಂಬ ಹೆಸರಿಟ್ಟುಕೊಂಡು ತಾನೇ ಆಡಳಿತೆ ನಡೆಸಿದನು. ೧೫೪೦ ರಲ್ಲಿ ಪಟ್ಟಗಟ್ಟಿಕೊಂಡು ರಜಪುತಸ್ಥಾನ, ಮಾಳವಾ, ಬುಂದೇಲಖಂಡಗಳನ್ನು ಜಯಿಸಲು ಪ್ರಯತ್ನಿಸಿದನು. ಕಲಿಂಜರದ ರಣಭೂಮಿಯಲ್ಲಿ ಗಾಯಗೊಂಡು ಮರಣ ಹೊಂದಿದನು.

ಶೇರಶಹನ ಆಡಳಿತೆ:—

ಅರಸೊತ್ತಿಗೆಯ ಕೆಲವು ವರ್ಷಗಳಲ್ಲಿಯೇ ಶೇರಶಹನು ದೊರೆಯಲ್ಲಿ ಇರಬೇಕಾದ ಎಲ್ಲ ಲಕ್ಷಣಗಳನ್ನು ತೋರಿದನು. ಅಶೋಕ ಅಥವಾ ಹರ್ಷನಂತೆ ಇವನಾದರೂ ತನ್ನ ಕರ್ತವ್ಯಗಳನ್ನು ಒಳ್ಳೆ ದಕ್ಷತೆಯಿಂದ ಸಾಗಿಸಿದನು. ಇವನಲ್ಲಿ ಶಿಲ್ಪಕಲೆಯ ಒಳ್ಳೆ ಅಭಿರುಚಿಗಳು ಕಂಡುಬಂದವು. ಆಡಳಿತೆಯಲ್ಲಿ

ತಿದ್ದುಪಾಟುಗಳನ್ನು ಮಾಡಿದನಲ್ಲದೆ, ಎಷ್ಟೋ ಕಡೆಗೆ ಸುಧಾರಣೆಗಳನ್ನು ಬಳಕೆಯಲ್ಲಿ ತಂದನು. ರಾಜ್ಯದ ಶಾಂತತೆಗೆ ಸೈನ್ಯಬಲವು ಮುಖ್ಯವೆಂದು ಕಂಡುಹಿಡಿದು ೧ ಲಕ್ಷ ೫೦ ಸಾವಿರ ಸ್ವಾರರು, ೩೫ ಸಾವಿರ ಕಾಲಾಳುಗಳು, ೫೦ ಸಾವಿರ ಆನೆಗಳನ್ನು ಇವನು ಇಟ್ಟುಕೊಂಡನು. ಭೂಮಿಯನ್ನು ಮಾಪನ ಮಾಡಿ ಕಂದಾಯ ಕಟ್ಟಬೇಕೆಂಬ ಕಟ್ಟಳೆಯನ್ನು [illegible] ಮಾಡಿದನು. ನ್ಯಾಯದಾನವನ್ನು ಸ್ವತಃ ನೋಡಿದನು, ಗ್ರಾಮಸಂಚಾ ಯತಿಗಳು ಈ ಕೆಲಸವನ್ನು ಹೇಗೆ ನಡೆಸಿಕೊಳ್ಳುವರೆಂಬುದನ್ನು ತಿಳಿಯಲು, ಕೆಲವು ಕಟ್ಟಳೆಗಳನ್ನು ಮಾಡಿದನು. ೨ ಸಾವಿರ [illegible] ಅನುಕೂಲಕ್ಕೆ ಹೆದ್ದ ರಸ್ತೆಗಳನ್ನು ಮಾಡಿಸಿ, ಇವುಗಳಲ್ಲಿ ಸಾಲುಗಿಡಗಳನ್ನು ನೆಟ್ಟನು. "ಸರಾಯಿ"ಗಳೆಂಬ ಧರ್ಮಶಾಲೆಗಳೂ ಅಲ್ಲಲ್ಲಿ ಏರ್ಪಟ್ಟವು. ಬೆಳ್ಳಿಯ ನಾಣ್ಯಗಳನ್ನು ಬಳಕೆಯಲ್ಲಿ ತಂದನು. ಇಷ್ಟನ್ನೆಲ್ಲ ಅಲ್ಪಕಾಲದಲ್ಲಿ ಸಾಧಿಸಿದುದು ಸೋಜಿಗವಲ್ಲವೆ ?

ಇವನ ನಂತರ ಇವನ ಮಗನಾದ ಜಲಾಲಖಾನನು ಸಲೀಮ ಶಹನೆಂಬ ಹೆಸರಿನಿಂದ ಪಟ್ಟವೇರಿದನು. ಇವನು ಹೇಡಿಯಾಗಿದ್ದುದರಿಂದ ಪರಿವಾರದಲ್ಲಿಯ ಒಬ್ಬ ಆದಿಲ್ ಶಹನೆಂಬವನು ಪಟ್ಟವನ್ನು ದೋಚಿಕೊಂಡನು. ಇವನು ಹೀಮು ಎಂಬೊಬ್ಬ ಹಿಂದುವಿನ ಕೈಯಲ್ಲಿ ರಾಜ್ಯದ ಸೂತ್ರಗಳನ್ನು ಕೊಟ್ಟನು.

ಹೀಮೂನ ಸಂಗಡ ಅಕಬರನು ೨ನೆಯ ಪಾಣಿಪತ್ತದ ಯುದ್ಧವನ್ನು ಮಾಡಬೇಕಾಯಿತು.

ಹುಮಾಯೂನನ ತರುವಾಯದಲ್ಲಿ ಅಕಬರನು ಪಟ್ಟವೇರಿದನು.

ಅಕಬರನು:—

ಇವನು ಕ್ರಿ. ಶ. ೧೫೫೬ ರಲ್ಲಿ ಪಟ್ಟವೇರಿದನು. ಹುಮಾಯೂನನ ಮರಣದ ಕಾಲಕ್ಕೆ ಇವನು ಪಂಜಾಬದಲ್ಲಿ ದಂಗೆಯನ್ನು ಶಾಂತಮಾಡುವದರಲ್ಲಿ ತೊಡಗಿದ್ದನು. ಇವನ ಸಂಗಡ ಆಗ ಬೈರಾಮಖಾನನೆಂಬ ಒಬ್ಬ

ಸೋದರಮಾವನಿದ್ದನು. ಹುಮಾಯೂನನ ಮರಣದ ವಾರ್ತೆಯನ್ನು ಕೇಳಿದೊಡನೆ ಬೈರಾಮಖಾನನು ಪಂಜಾಬದಲ್ಲಿ ೧೪ ವರ್ಷದ ಅಕಬರನಿಗೆ ಪಟ್ಟಗಟ್ಟಿ ಹೊಸ ರಾಜನ ಹೆಸರಿನಲ್ಲಿ ಆಜ್ಞೆಗಳನ್ನು ಹೊರಡಿಸಿದನು. ಅಕಬರನು ಪಟ್ಟವೇರಿದ ನಂತರ ನಾಲ್ಕು ವರ್ಷಗಳ ತನಕ ಬೈರಾಮಖಾನನ ಅಧಿಕಾರವೇ ಹೆಚ್ಚಾಗಿ ನಡೆಯಿತು. ಈ ಕಾಲಕ್ಕೆ ಅಕಬರನು ಹೇಮೂನನ್ನು ಹಣಿಯಬೇಕಾಯಿತು. ಹೇಮೂನ ಕಡೆಯವರಿಗೂ, ಅಕಬರನ ದಂಡಿನವರಿಗೂ ಪಾನಿಪತ್ತದ ಮೈದಾನದಲ್ಲಿ ಯುದ್ಧವೆಸಗಿತು. ಅದರಲ್ಲಿ ಹೇಮೂನು ಸೋತು ಸೆರೆಯಾಳಾದನು. ನೆರೆದ ದರಬಾರದಲ್ಲಿ ಎಳೆತರಲ್ಪಟ್ಟ ಹೇಮೂನನ್ನು ಹೇಗೆ ನಡೆಯಿಸಿಕೊಳ್ಳಬೇಕೆಂಬ ಬಗ್ಗೆ ಪ್ರಶ್ನೆ ಎದ್ದು ಚರ್ಚೆ ನಡೆದಾಗ ಬೈರಾಮಖಾನನು "ಕಾಫೀರನನ್ನು ಹೀಗೆ ನಡೆಸಿಕೊಳ್ಳಬೇಕೆಂ"ದು ತುಂಬಿದ ಸಭೆಯಲ್ಲಿ ಅವನ ಚೆಂಡಾಡಿದನು. ಸರದಾರರೆಲ್ಲರು ಬಿಸುಸುಯ್ಯಲು ಅಕಬರನಿಗೆ ಬೈರಾಮನ ಕ್ರೂರತನವು ಮನವಟ್ಟಾಯಿತು. ಬೈರಾಮಖಾನನು ತನ್ನ ಅಧಿಕಾರ ನಡೆಯುವಾಗ ಜಾನಪುರ, ಗ್ವಾಲೇರಗಳನ್ನು ಮೊಗಲರ ಅಂಕಿತದಲ್ಲಿ ತಂದಿದ್ದನು. ಅಕಬರನು ದೊಡ್ಡವನಾದ ಮೇಲೆ ಪಂಜಾಬ, ಬಂಗಾಲಗಳನ್ನು ವಶಪಡಿಸಿಕೊಂಡನು. ದೀರ್ಘ ಕಾಲ ಯುದ್ಧ ನಡೆಸಿ ಮಾಳವ ಪ್ರದೇಶವನ್ನೂ ಅಂಕಿತದಲ್ಲಿ ತಂದದ್ದಾಯಿತು. ಗೊಂಡವನ, ರಣಥಂಬೂರ ಮತ್ತು ಚಿತ್ತೂರಗಳು ಒಂದರ ಹಿಂದೊಂದು ವಶವಾದವು. ಚಿತ್ತೂರದ ರಾಣಾ ಪ್ರತಾಪಸಿಂಹನು ಮಹಮ್ಮದೀಯರ ಕಡುವೈರಿಯಾಗಿದ್ದನು. ಈ ರೀತಿ, ಪಟ್ಟವೇರಿದ ಬಳಿಕ ೨೦ ವರ್ಷಗಳ ಅವಧಿಯಲ್ಲಿ ಅಕಬರನು ಮಧ್ಯ ಏಶಿಯದಿಂದ ಆಸಾಮದ ವರೆಗೆ ಹಬ್ಬಿದ ದೊಡ್ಡ ರಾಜ್ಯಕ್ಕೆ ಒಡೆಯನೆನಿಸಿದನು.

ಇಷ್ಟು ರಾಜ್ಯಕ್ಕೆ ಒಡೆಯನೆನಿಸಿದ ಬಳಿಕ ಅಕಬರನು ರಾಜಕಾರಣದ ಹೊಸ ಧೋರಣೆಯನ್ನು ಪ್ರಾರಂಭಿಸಿದನು. ತನ್ನ ೨೨ ನೆಯ ವಯಸ್ಸಿನಲ್ಲಿಯೇ ಅಕಬರನು ಅಂಬರದ ರಾಜಾ ಬಿಹಾರಿಮಲ್ಲನ ಮಗಳನ್ನು ಮದುವೆ ಮಾಡಿಕೊಂಡಿದ್ದನು. ಆದ್ದರಿಂದ ದಿಲ್ಲಿ ಸರಕಾರ ಮತ್ತು ರಜಪೂತರ ನಡುವೆ ಬೀಗತನದ ಒಕ್ಕಟ್ಟು ನೆಲೆಸಹತ್ತಿತು. ಈ ಕಾರಣಗಳಿಂದ ಮಾನ

ಸಿಂಗನಂಥವರು ದೊಡ್ಡ ಹುದ್ದೆಗೇರಿದರು. ತನ್ನ ಹಿಂದೂ ಹೆಂಡಂದಿರು ಅಂತಃಪುರದಲ್ಲಿ ತುಲಸೀಪೂಜೆ, ಗೋಪೂಜೆ, ಸೂರ್ಯನ ಆರಾಧನೆಗಳನ್ನು ನಡೆಸಬಹುದಿತ್ತಂತೆ. ಹಿಂದುಗಳ ಪ್ರೀತಿಯನ್ನು ಇನ್ನೂ ಹೆಚ್ಚಾಗಿ ಗಳಿಸಲು ಹಿಂದೂ ಯಾತ್ರಿಕರ ಮೇಲಿನ ಕರಗಳನ್ನು ಕಿತ್ತೊಗೆದನು. ಇದರ ಹಿಂದೆಯೆ ಜಿಜಿಯಾ ಕರವು ಕಿತ್ತೊಗೆಯಲ್ಪಟ್ಟಿತ್ತು.

ಅಕಬರ ಮತ್ತು ಅಂಬರದ ರಾಜನ ನಡುವಿನ ಬೀಗತನವು ರಜಪೂತರಲ್ಲಿ ಸಡಿಲನ್ನು ಹುಟ್ಟಿಸಿತು. ಮಾರವಾಡ, ಬಿಕಾನೇರ, ಬುಂದಿಗಳ ಅರಸರು ಅಂಬರದೊರೆಯನ್ನು ಅನುಸರಿಸಿ ದಿಲ್ಲಿಯ ದರಬಾರದಲ್ಲಿ ಅಧಿಕಾರಗಳನ್ನು ಪಡೆದರು. ಈ ರೀತಿ ಅಕಬರನ ಶಕ್ತಿ ಬೆಳೆಬೆಳೆದಂತೆ ರಜಪೂತರು ಇಳಿಮುಖರಾದರು. ಆದರೆ, ರಾಣಾ ಪ್ರತಾಪಸಿಂಗನು ಎಂತಹ ಕಷ್ಟಗಳನ್ನು ಭೋಗಿಸಿದರೂ ಅಕಬರನಿಗೆ ತಲೆಬಾಗಲಿಲ್ಲ.

ಅಕಬರನ ನವರತ್ನಗಳಲ್ಲಿ ೪ ಜನರು ಹಿಂದುಗಳು ೫ ಜನ ಮುಸಲ್ಮಾನರಿದ್ದರು. ಅವರೆಂದರೆ, ರಾಜಾ ಮಾನಸಿಂಗ, ರಾಜಾ ತೋಡರಮಲ್, ರಾಜಾ ಬೀರಬಲ್, ತಾನಸೇನ, ಎಂಬ ಹಿಂದುಗಳು. ಫಜಲ್, ಫೈಜಿ, ಮುಲ್ಲಾದೊಪ್ಯಾಜಾ, ಹಕಾಮುಹಕೀಮು, ಶೇಕಮುಬಾರಕ್ ಎಂಬ ಮುಹಮ್ಮದೀಯರು. ಅಕಬರನು ಪರಧರ್ಮಸಹಿಷ್ಣುವಾಗಿದ್ದನು. ಆಗಿನ ಕಾಲಕ್ಕೆ ಇವನ ಸಂಪರ್ಕಕ್ಕೆ ಬಂದ ಪಾರ್ಶಿ, ಕ್ರೈಸ್ತ, ಮುಸಲ್ಮಾನ, ಜೈನ, ಬೌದ್ಧ, ಬ್ರಾಹ್ಮಣ ಪಂಡಿತರ ಸಭೆಸೇರಿಸಿ ಆಯಾ ಧರ್ಮಗಳ ತತ್ವಗಳನ್ನು ವಿವೇಚಿಸಲು ಹಚ್ಚುತ್ತಿದ್ದನು. ಅವುಗಳನ್ನು ತಾನು ಕೇಳಿ ತಿಳಿದುಕೊಂಡನು. ದಿನಗಳು ಕಳೆಯುತ್ತಿರಲಾಗಿ ಅಕಬರನು ಮುಹಮ್ಮದೀಯ ಧರ್ಮವನ್ನು ಕಡೆಗಣಿಸಹತ್ತಿದನು. ಮುಹಮ್ಮದೀಯ ಧರ್ಮ ತತ್ವಗಳಿಗೆ ವಿರೋಧಿಯಾದ ಕೆಲವು ಕಾಯ್ದೆಗಳನ್ನು ಮಾಡಿದನು. ಬರಬರುತ್ತ ಅಕಬರನು ತನ್ನದೇ ಧರ್ಮವನ್ನು ಪ್ರಚುರಗೊಳಿಸಿದನು. ದಿನ್-ಇ-ಲಾಹಿ ಎಂಬುದು ಅದರ ಹೆಸರು. ಇದು ಅಕಬರನ ಕಾಲಾವಧಿಯಲ್ಲಿ ಕೆಲವು ಮಟ್ಟಿಗೆ ಪ್ರಸಾರಗೊಂಡಿತು.

ಕಾಬೂಲದಲ್ಲಿ ಮಹಮ್ಮದ ಹಕೀಮ ಎಂಬವನು ದೊಂಬಿಯೆದ್ದನು

ಸ್ವತಂತ್ರನಾಗಲು ಹವಣಿಸಿದಾಗ ಹಿಂದುಗಳ ಗೆಳೆತನದ ಉಪಯೋಗ ಬಹು ಮಟ್ಟಿಗೆ ಆಯಿತು. ಅಕಬರನ ಔದಾರ್ಯವು ಹಿಂದೂ ಜನರ ಮನಸ್ಸೆಳೆಯಿತು. ತಾನು ಗೆದ್ದ ರಾಜ ಮನೆತನಗಳನ್ನು ಅವನು ಎಂದೂ ನಾಶಮಾಡಲಿಲ್ಲ. ಅವರನ್ನು ಮಾಂಡಲೀಕರನ್ನಾಗಿ ಮಾಡಿಕೊಂಡು ಸಾಮ್ರಾಜ್ಯರಕ್ಷಣೆಗೆ ಅವರನ್ನು ಆಧಾರಸ್ತಂಭರನ್ನಾಗಿ ಮಾಡಿಕೊಂಡನು.

ಅಕಬರನು ಚಿಕ್ಕವನಿದ್ದಾಗ ಪ್ರಸಿದ್ಧ ಚಿತ್ರಕಾರರಿಬ್ಬರಿಂದ ಚಿತ್ರಕಲೆ ಕಲಿತನು. ಚಿತ್ರಕಲೆಯ ಎಲ್ಲ ಮಾದರಿಗಳೂ ಅವನ ಮನಸ್ಸೆಳೆದವು. ಮೇವಾಡದ ಯುದ್ಧದಲ್ಲಿ ಅತುಲ ಪರಾಕ್ರಮ ತೋರಿದ ಜೈಮಲ್ ಮತ್ತು ಪಟ್ಟಾ ಎಂಬವರ ಪುತ್ಥಳಿಗಳನ್ನು ಮಾಡಿಸಿ ಅಕಬರನು ತನ್ನ ದರಬಾರದ ಎದುರಿನಲ್ಲಿ ಇಡಿಸಿದನು. ಹಿಂದೂ ಚಿತ್ರಕಾರರಿಗೆ ಪರ್ಶಿಯಾದ ಮಾದರಿಗಳನ್ನು ಕಲಿಯಲು ಹೇಳಿ ಚಿತ್ರಕಲೆಯಲ್ಲಿ ಹೊಸ ಮಾದರಿಯನ್ನು ತೋರಿದನು. ಮೊದಮೊದಲು ಇದು ಶೋಭಿಸದಿದ್ದರೂ ಬರಬರುತ್ತ ಹಿಂದೀ ಪಾರ್ಶಿ ಮಿಶ್ರಿತವಾದ ನೂತನ ಚಿತ್ರಕಲೆಯೊಂದು ಬೆಳಕಿಗೆ ಬಂದಿತು. ಅದರಲ್ಲಿ ಬಣ್ಣದ ಹೊಳಪು ಬಹಳ. ಅಕಬರನ ಕಾಲದ ಚಿತ್ರಕಲೆಯು ಪರಂಪರೆಗೆ ಅಂಟಿಕೊಂಡದ್ದೂ, ಅಚ್ಚುಕಟ್ಟುತನವಿದ್ದುದೂ ಆಗಿತ್ತು.

ಗಾಯನ ಕಲೆಯಲ್ಲಿ ಅಕಬರನಿಗೆ ಆಸ್ಥೆ ಬಹಳ. ಇವನ ದರಬಾರದಲ್ಲಿ ತಾನಸೇನನೆಂಬ ಜಗಪ್ರಸಿದ್ಧ ಗಾಯಕನಿದ್ದನು. ಅವನು ದೀಪರಾಗವನ್ನು ಹಾಡುತ್ತಿದ್ದಾಗ ಒಮ್ಮೆ ಆಗ್ರಾದ ಅರಮನೆಯೊಳಗಿನ ದೀಪಗಳು ತಾವೇ ಹತ್ತಿದವಂತೆ.

ಅಕಬರನ ಕಾಲದ ಶಿಲ್ಪಕಲೆಯೂ ಸಹ ಹಿಂದೂ ಮುಸಲ್ಮಾನ ರೀತಿಗಳ ಸಂಕಲನವೇ ಆಗಿದೆ. ಆತನು ಕಟ್ಟಿಸಿದ ಆಗ್ರಾ ಕೋಟೆ, ಫತ್ತೇಪುರ ಸಿಕ್ರಿಯ ಅರಮನೆಗಳು ಅದ್ವಿತೀಯವಾಗಿವೆ.

ಇವನ ಕಾಲದಲ್ಲಿ ತುಳಸೀದಾಸನೆಂಬ ಹಿಂದೀ ಕವಿಯು ಜೀವಿಸಿದನು. ಇವನು ಬರೆದ ಹಿಂದೀ ರಾಮಾಯಣವು ಬಹು ಪ್ರಸಿದ್ಧವಾದ ಗ್ರಂಥವು.

ಪಾರ್ಶಿ ಭಾಷೆಯಲ್ಲಿ ಕವಿಯಾದ ಫೈಜಿಗೂ ಆ ಕಾಲದಲ್ಲಿ ಮನ್ನಣೆಯಿತ್ತು.

ಅಕಬರನು ತನ್ನ ರಾಜ್ಯವನ್ನು ೧೫ ಸುಭೆಗಳನ್ನಾಗಿ ವಿಭಾಗಿಸಿದ್ದನು. ದಂಡಿನಲ್ಲಿಯ ಮನಸಬದಾರರೆಂಬ ಸ್ವಾರರ ಮುಖ್ಯಸ್ಥರು ಇವನ ರಾಜ್ಯವನ್ನು ರಕ್ಷಿಸಿದರು.

ಭಾರತದ ಬಾದಶಹನೆನಿಸಿ ಮೂರು ಸಂಗತಿಗಳನ್ನು ಇವನು ಎತ್ತಿ ತೋರಿದಂತೆ ಕಾಣುವದು. ಅವೆಂದರೆ— (೧) ಸಾಮ್ರಾಜ್ಯ ಸ್ಥಾಪನೆ. (೨) ಅದಕ್ಕಾಗಿ ಹಿಂದುಗಳೊಡನೆ ಬಂಧುಭಾವದಿಂದಿರುವದು. (೩) ಕೊನೆಯದಾಗಿ ಭಾರತದ ಏಕೀಕರಣ. ಇವನ ನಂತರ ಬಂದ ಇಬ್ಬರು ಬಾದಶಹರು ಮೊದಲಿನ ಎರಡು ಮಾತುಗಳನ್ನು ಮನ್ನಿಸಿದರು. ಭಾರತದ ಏಕೀಕರಣಕ್ಕೆ ಹೆಣಗಿದ ಕೊನೆಯ ಮೊಗಲ ಬಾದಶಹನಾದ ಔರಂಗಜೇಬನು ಪ್ರಾಣವನ್ನೇ ಕೊಟ್ಟನು.

ಅಕಬರನು ೧೬೦೫ರಲ್ಲಿ ಮರಣ ಹೊಂದಿದನು. ನಂತರ ಅವನ ಮಗನಾದ ಸಲೀಮನು ಜಹಾಂಗೀರನೆಂಬ ಬಿರುದಿನಿಂದ ಪಟ್ಟವೇರಿದನು.

ಜಹಾಂಗೀರ (೧೬೦೫—೧೬೨೭) ಮತ್ತು ಶಹಜಹಾನ (೧೬೨೭—೧೬೫೮)

ಅಕಬರನ ನಂತರ ಜಹಾಂಗೀರನು ಪಟ್ಟವೇರಿದನು. ಜಹಂಗೀರನು ೧೬೨೭ರಲ್ಲಿ ಮಡಿಯಲು ಅವರ ಮಗನಾದ ಶಹಜಹಾನನು ಪಟ್ಟವೇರಿದನು.

ಮೊಗಲ ಮನೆತನದಲ್ಲಿ ಉಳಿದ ಅರಸರಿಗಿಂತಲೂ ಜಹಂಗೀರ ಶಹಾಜಹಾನರ ಕಾಲದಲ್ಲಿ ಶಾಂತತೆಯು ನೆಲೆಸಿದ್ದಿತು. ಈ ಅರಸರ ಕಾಲಾವಧಿಯಲ್ಲಿ ಭಾರತಕ್ಕೆ ಹೊರಗಿನಿಂದ ದಾಳಿಗಳಾಗಲಿಲ್ಲ. ಪ್ರಜೆರಿಂದ ಅರಸರ ಅಧಿಕಾರವು ಎಂದೂ ಧಿಕ್ಕರಿಸಲ್ಪಡಲಿಲ್ಲ. ಒಂದೆರಡು ಸೋಲುಗಳಾಗಿದ್ದರೂ ಅವು ಮೊಗಲ ಸಿಂಹಾಸನದ ಅಡಿಗಲ್ಲನ್ನು ಅಲ್ಲಾಡಿಸಲಿಲ್ಲ. ಆದರೆ ದಕ್ಷಿಣದಲ್ಲಿ ಮರಾಠರು ಎದ್ದು, ಬಲಗೊಂಡು, ಮೊಗಲ ಅರಸರ ಹುಳುಕು ಹುಡು-

ಕುತ್ತಿದ್ದರು. ಈ ರೀತಿ ಮೊಗಲ ಅಧಿಕಾರದ ತಳವು ಸಡಿಲಾಗಿದ್ದರೂ ಕಟ್ಟಡಕ್ಕೆ ಧಕ್ಕೆ ಹತ್ತಿರಲಿಲ್ಲ.

ಶಹಾಜಹಾನನು ಅರಸನಾದ ಬಳಿಕ ಗೋವಳಕೊಂಡವು ವಶವಾಯಿತು.

ಕಲೆಯ ದೃಷ್ಟಿಯಿಂದ ಈ ಕಾಲವು ಬಹು ಮಹತ್ವದ್ದು. ಶಿಲ್ಪಕಲೆ



ಓಲಗದಲ್ಲಿ ಕುಳಿತ ಶಹಜಹಾನನು.

ಮತ್ತಿತರ ಕಲೆಗಳಲ್ಲಿ ಉತ್ಕೃಷ್ಟತೆ ಉತ್ಕೃಷ್ಟವಾದ ಕಲಾಕೃತಿಗಳು ಬೆಳಕಿಗೆ ಬಂದವು. ಈ ಕಾಲದ ಶಿಲ್ಪದಲ್ಲಿ ಒಂದು ಪಾರಶಿ ಮಿಶ್ರಿತ ಸ್ವರೂಪವು ಕಂಡು ಬಂದಿತು. ಶಹಜಹಾನನ ಶಿಲ್ಪಕಲೆಯ ಶಿಖರವೆಂದರೆ ತಾಜಮಹಾಲ. ಇದನ್ನು ಕಟ್ಟಲಿಕ್ಕೆ ಇಪ್ಪತ್ತು ವರ್ಷಗಳು ತಗಲಿದವು. ಇದನ್ನು ಶಹಜಹಾನನು ತನ್ನ ಪ್ರೇಮದ ಮಡದಿ ಮಮತಾಜಳ ನೆನಪಿಗಾಗಿ ಕಟ್ಟಿಸಿದನು. ಇದ

ಕಷ್ಟಿ ಹೆಸರುವಾಸಿಗಳಾದ ಇನ್ನಿತರ ಕಟ್ಟಡಗಳೆಂದರೆ, ಆಗ್ರಾದ ಮೋತೀ ಮಸೀದಿ ಮತ್ತು ದಿಲ್ಲಿಯ ಜುಮ್ಮಾ ಮಸೀದಿಗಳು.

ಶಹಾಜಹಾನನ ಕಾಲದ ಚಿತ್ರಕಲೆಯಲ್ಲಿ ಪರ್ಷಿಯಾದ ವರ್ಣಚಿತ್ರಗಿಂತ ಹಿಂದೂ ವರ್ಣಚಿತ್ರ ಹೆಚ್ಚಾಗಿತ್ತು. ಈ ಕಲೆಯಲ್ಲಿ ನಿಷ್ಣಾತರಾದವರು ಇಣಾಚಿಯ ಬಾಲದ ಒಂದೇ ಕೂದಲಿನ ಕುಂಚದಿಂದ ಬಣ್ಣ ಬಳಿಯುತ್ತಿದ್ದರು. ಚಿತ್ರಗಳು ಜೀವಕಳೆಯಿಂದ ತುಂಬಿ ಚಂದಕಾಣುತ್ತಿದ್ದವು.

ಇವನು ಮಾಡಿಸಿದ ಮಯೂರಾಸನವು ಅದ್ವಿತೀಯವಾಗಿತ್ತು.

ಶಹಾಜಹಾನನೂ ಇವನ ಹಿರಿಯ ಮಗನಾದ ದಾರಾಶಿಕೋನನೂ ಹಿಂದೂ ಪಂಡಿತ ಶಾಸ್ತ್ರಿ ಪುರಾಣಿಕರಿಗೆ ಮನ್ನಣೆ ಮಾಡಿದರು. ದಾರಾಶಿಕೋನು ಉಪನಿಷತ್ತುಗಳನ್ನೂ ರಾಮಾಯಣ ಮಹಾಭಾರತಗಳನ್ನೂ ಪಾರ್ಸಿ ಅರಬಿಕ್ ಭಾಷೆಗಳಿಗೆ ಪರಿವರ್ತಿಸಿದರು.

ಹಿಂದೂ ಜನರಿಗೆ ಗುಡಿಗಳನ್ನು ಕಟ್ಟಲಿಕ್ಕೂ ವಿಧವಿಧವಾಗಿ ಅಲಂಕರಿಸಲಿಕ್ಕೂ ಅಪ್ಪಣೆಯಿತ್ತು.

ರಾಜಕಾರಣದಲ್ಲಿ ಇವನು ಹಿಂದುಗಳೊಡನೆ ಕೂಡಿ ನಡೆಯುವದೇ ಮಿಗಿಲೆಂದು ತಿಳಿದನು. ಇವನಲ್ಲಿ ಹಿಂದುಗಳು ಉಚ್ಚ ಅಧಿಕಾರಕ್ಕೆ ಮುಟ್ಟಿದವರಿದ್ದರು.

ಔರಂಗಜೇಬ:—

ಶಹಾಜಹಾನನ ಜೀವಿತಾವಧಿಯಲ್ಲಿಯೆ ಔರಂಗಜೇಬನೇ ಮೊದಲಾದ ಬಂಧುಗಳು ದಿಲ್ಲಿಯ ಪಟ್ಟಕ್ಕಾಗಿ ಹೂಡಿದ ಯುದ್ಧದ ಪರಿಣಾಮವಾಗಿ ಔರಂಗಜೇಬನು ಪಟ್ಟಕ್ಕೆ ಬಂದನು. ಆದರೆ, ಇವನು ಮಾತ್ರ ಮೊದಲಿನ ಮೊಗಲರ ಸ್ವಭಾವವನ್ನು ಹೋಲಲಿಲ್ಲ. ಸಮರ್ಥತೆಯಿಂದ ಮೊಗಲರಲ್ಲಿ ಶ್ರೇಷ್ಠನಾಗಿದ್ದರೂ ತನ್ನ ಸಾಮ್ರಾಜ್ಯಕ್ಕೆ ಮಹಮ್ಮದೀಯ ಸ್ವರೂಪ ಕೊಡಲು ತವಕಪಟ್ಟನು. ಉಪಾಯಾಂತರದಿಂದ ಕಟ್ಟಾ ಮುಸಲ್ಮಾನ ಧರ್ಮವನ್ನು

ಬೆಳಕಿಗೆ ತಂದು ಹಿಂದುಗಳಾದರೂ ಅವನ್ನು ಪಾಲಿಸುವಂತೆ ಆಗ್ರಹ ಪಡಹತ್ತಿದನು. ರಾಜ ದರಬಾರದಲ್ಲಿ ಅದ್ಭುತ ಆಡಂಬರಗಳು ಅಡಗಿದವು. ಸಂಗೀತಾದಿ ಲಲಿತ ಕಲೆಗಳು ಮಾಯವಾದವು. ಕ್ರಿ. ಶ. ೧೬೬೯ರಲ್ಲಿ ವೈದಿಕ ಪಾಠ ಶಾಲೆಗಳನ್ನೂ ದೇವಾಲಯಗಳನ್ನೂ ಔರಂಗಜೇಬನು ಹಾಳುಗೆಡಹಿದನು. ಬಳಿಕ ಕಾಶಿ ವಿಶ್ವನಾಥನ ದೇವಾಲಯ, ಮಥುರೆಯ ಕೇಶವ ದೇವಾಲಯ, ಕಾಠೆವಾಡದ ಸೋಮನಾಥ ದೇವಾಲಯಗಳು ಬಲಿಬಿದ್ದವು.

ಬರಬರುತ್ತ ಜಜಿಯಾ ಕರ ಹಿಂದಿ ಯಾತ್ರಿಕರ ಕರಗಳು ಮತ್ತೆ ಹೇರಲ್ಪಟ್ಟವು. ಮಹಮ್ಮದೀಯೇತರರು ಹೇಳಕೂಡದಷ್ಟು ಇತರ ಕರಗಳನ್ನು ತೆತ್ತಬೇಕಾಗಿದ್ದಿತು. ಇದನ್ನು ಅಮಲಿನಲ್ಲಿ ತರಲೋಸುಗ ತನ್ನ ಅಧಿಕಾರಿಗಳೂ ಚಿಕ್ಕ ಪುಟ್ಟ ನವಕರರೆಲ್ಲರೂ ಮಹಮ್ಮದೀಯರೇ ಇರಬೇಕೆಂದು ಆಶೆ ಪಟ್ಟನು. ಹೊಸ ಮಹಮ್ಮದೀಯರನ್ನು ನೇಮಕಮಾಡಿ, ಇಲ್ಲವೆ, ಇದ್ದ ಹಿಂದುಗಳನ್ನೇ ಮತಾಂತರಗೊಳಿಸಿಯಾಗಲೀ ಈ ಅಪೇಕ್ಷೆಯನ್ನು ಪೂರೈಸಿಕೊಂಡದ್ದಾಯಿತು.

ಈ ಎಲ್ಲ ಬದಲಾವಣೆಗಳಿಗೆ ಹಿಂದುಗಳು ಬಲವಾದ ವಿರೋಧ ತೋರಿದರು. ರಾಜಾ ಜಸವಂತಸಿಂಗನೆಂಬ ರಾಠೋಡ ಸರದಾರನ ಮರಣಾನಂತರ, ಅವನ ಹೆಂಡಿರು ಮಕ್ಕಳನ್ನು ಔರಂಗಜೇಬನು ಹಿಡಿಯಲು ಯತ್ನಿಸಿದನು. ಅಂದಿನಿಂದ ಮುಸಲ್ಮಾನ ರಜಪೂತರ ಐಕ್ಯವು ಇಲ್ಲದಂತಾಯಿತು. ಜಸವಂತಸಿಂಗನ ಹೆಂಡತಿಯು ಮೇವಾಡದ ರಾಜಾಸಿಂಗನ ಮೊರೆಹೊಕ್ಕಳು. ಆದ್ದರಿಂದ ಮೇವಾಡ ಮಾರವಾಡಗಳ ರಜಪೂತ ಮನೆತನಗಳ ಮತ್ತು ದಿಲ್ಲಿಯ ಸರಕಾರದ ನಡುವೆ ಯುದ್ಧವೇ ಪ್ರಾರಂಭವಾಯಿತು. ಔರಂಗಜೇಬನು ತನ್ನ ಎಲ್ಲ ಮಕ್ಕಳನ್ನು ಇದರಲ್ಲಿ ತೊಡಗಿಸಿದನು. ಇದೇ ವೇಳೆಗೆ ದಕ್ಷಿಣ ಭಾರತದಲ್ಲಿ ಮರಾಠರು ಪ್ರಬಲರಾಗಿ ಬೆಳೆಯಹತ್ತಿದ್ದರಿಂದ ಮೊಗಲ ಮನೆತನವು ಚುಕ್ಕಾಣಿಯಿಲ್ಲದ ಹಡಗದಂತಾಯಿತು.

ಔರಂಗಜೇಬನು ದಕ್ಷಿಣದಲ್ಲಿ ರಾಜಪ್ರತಿನಿಧಿಯೆಂದು ಕೆಲಸ ನೋಡುತ್ತಿರುವಾಗ ಶಿವಾಜಿಯು ಬೆಳೆದು ಪ್ರಸಿದ್ಧಿ ಪಡೆಯುತ್ತಿದ್ದನು. ದಿಲ್ಲಿಯ ಪಟ್ಟೆ

ಸೇರಿದ ಮೇಲೆ ಶಿವಾಜಿಯ ನಿಯಂತ್ರಣಕ್ಕೆ [illegible] ಖಾನನೆಂಬ ಸರದಾರನನ್ನು ಕಳಿಸಿಕೊಟ್ಟನು. ಶಿವಾಜಿಯು ಇವನ ಕಾವಲುಗಾರರನ್ನು ಚೆನ್ನಾಗಿ [illegible] ಮಾಡಿ, ರಾತ್ರಿ ವೇಳೆಯಲ್ಲಿ [illegible] ಬುಟ್ಟಿಗಳನ್ನು [illegible], [illegible] ಪಟ್ಟಣದಿಂದ ಓಡಿಹೋದನು. (ಕ್ರಿ. ಶ. ೧೬೬೬) [illegible] ಜಯಸಿಂಹನಿಂದ ಔರಂಗಜೇಬನು ಶಿವಾಜಿಯನ್ನು ದಿಲ್ಲಿಗೆ ಬರಮಾಡಿಕೊಂಡು ಅವನನ್ನು ಸೆರೆಯಲ್ಲಿಟ್ಟನು.* ಆದರೆ ಸೆರೆಮನೆಯಿಂದ ತಪ್ಪಿಸಿಕೊಂಡು, ಪಾರಾಗಿ ಮಹಾರಾಷ್ಟ್ರಕ್ಕೆ ಬಂದು ಶಿವಾಜಿಯು ಒಂದು ಛತ್ರಪತಿಯೆಂದು, ರಾಜ್ಯಾಭಿಷೇಕ ಮಾಡಿಸಿಕೊಂಡನು. ನಂತರ ದಕ್ಷಿಣದಲ್ಲಿ [illegible] ಬೇರೂರಿ ಮೊಗಲರನ್ನು ದಕ್ಷಿಣಕ್ಕೆ ಬಾರದ ಹಾಗೆ ಮಾಡಿ [illegible] ಗೆದ್ದುಕೊಂಡನು. ಆದರೆ ಕ್ರಿ. ಶ. ೧೬೮೦ರಲ್ಲಿ ಇವನು ಕಾಲವಶನಾದನು.

ಈ ನಂತರ ಔರಂಗಜೇಬನು ದಕ್ಷಿಣಕ್ಕೆ [illegible] ತಲುಪಿದನು. ಅದರಲ್ಲಿ ಮರಾಠರನ್ನು ಹಣಿಯುವದೂ ಮುಖ್ಯ ಕೆಲಸವಾಗಿತ್ತು. ಎರಡು ಸಲ ಮುತ್ತಿಗೆ ಹಾಕಿ ಬಿಜಾಪುರವನ್ನು ವಶಪಡಿಸಿಕೊಂಡದ್ದಾಯಿತು. ಕ್ರಿ. ಶ. ೧೬೮೯ರಲ್ಲಿ ಶಿವಾಜಿಯ ಮಗನಾದ ಸಂಭಾಜಿಯು ಸೆರೆಸಿಕ್ಕಿ ಕೊಲ್ಲಲ್ಪಟ್ಟನು. ಆದರೆ ಇದರಿಂದ ದಕ್ಷಿಣದಲ್ಲಿ ಶಾಂತತೆ ಹುಟ್ಟಲಿಲ್ಲ. ಇಡೀ ದೇಶವೇ ಮೊಗಲರಿಗೆ ವಿರೋಧ ತೋರಿ ಯುದ್ಧ ಹೂಡಿತು. ಔರಂಗಜೇಬನು ಆಮುಂದೆ ೨೦ ವರ್ಷಗಳ ವರೆಗೆ ಹೆಣಗಿ ಹಣ್ಣಾಗಿ ೧೭೦೬ಕ್ಕೆ ಅಹಮ್ಮದನಗರಕ್ಕೆ ಬಂದು ಬೀಡು ಬಿಟ್ಟನು. ಆ ಕಾಲಕ್ಕೆ ಇವನಿಗೆ ರೋಗವು ತಗಲಿತು. ರೋಗವು ಹಿಮ್ಮೆಟ್ಟಿದಾಗ ಇವನು ದರಬಾರ ಕೂಡಿಸಲು ಹೆಣಗುತ್ತಿದ್ದನು. ಆದರೆ ಜ್ವರ ಹೆಚ್ಚಾಗ ಹತ್ತಿತು. ನಮಾಜವನ್ನು ಮಾತ್ರ ಎಂದೂ ಬಿಡಲಿಲ್ಲ. ಕ್ರಿ. ಶ. ೧೭೦೭ ಫೆಬ್ರುವರಿ ೨೧ನೆಯ ದಿನಾಂಕ ಶುಕ್ರವಾರ ಸಂಜೆಗೆ ನಮಾಜ ಮಾಡಿ ಔರಂಗಜೇಬನು ಇಹಲೋಕದ ಯಾತ್ರೆಯನ್ನು ಮುಗಿಸಿದನು. ಮರಣ ಕಾಲಕ್ಕೆ "ನನ್ನ ಪಾಪಕ್ಕಾಗಿ ದೇವರು ನನಗೆ ಎಂಥ ನರಕವನ್ನು ಒಪ್ಪಡಿಸಿರುವನೋ ಏನೋ!" ಎಂದು ಪ್ರಾಣ ಬಿಟ್ಟನಂತೆ.

ಈ ಕಾಲಕ್ಕೆ ಪಂಜಾಬದಲ್ಲಿ ಸಿಖರು ತಲೆಯೆತ್ತಿ ಗುರು ಗೋವಿಂದ ಸಿಂಗನೆಂಬವನ ನೇತೃತ್ವದಲ್ಲಿ ಖಾಲಸಾ ಸೈನ್ಯವೆಂಬ ದೊಡ್ಡ ವಿರೋಧಿ

ಸೈನ್ಯವನ್ನು ಸಿದ್ಧಗೊಳಿಸಿದರು. ಈ ರೀತಿ ಉತ್ತರದಲ್ಲಿ ಶೀಖರು, ದಕ್ಷಿಣದಲ್ಲಿ ಮರಾಠರು ಬೆಳೆಯುತ್ತಿರಲು ರಜಪೂತರನ್ನು ರಾಜ್ಯಛತ್ರದಿಂದ ಹೊರದೂಡುವ ಅದೂರದರ್ಶಿಯಾದ ಧೋರಣವನ್ನು ತಳೆದು ಔರಂಗಜೇಬನು ಮೊಗಲ ರಾಜ್ಯದ ಗೋರಿ ಕಟ್ಟಿದನು.

ಮೊಗಲ ಕಾಲದಲ್ಲಿ ಹಿಂದೀಯರ ಸ್ಥಿತಿ:

ಮೊಗಲ ಮನೆತನದ ಎಲ್ಲ ಅರಸರ ರಾಜಕೀಯ ಧೋರಣೆಯ ತಳಹದಿಯು ರಾಜ್ಯವಿಸ್ತಾರ ಮತ್ತು ಸುಖಕರವಾದ ಆಡಳಿತೆಗಳಾಗಿದ್ದವು. ಇದನ್ನು ನಡೆಸುವದಕ್ಕೆ ಮೊಗಲ ದರಬಾರವು ಬಹು ಗಟ್ಟಿಯಾಗಿದ್ದಿತು. ಪರ್ಶಿಯಾ, ಅಫಗಾಣಿಸ್ತಾನ, ಮತ್ತು ಹಿಂದುಸ್ತಾನಗಳ ಸಂಗಡ ಹಿತವಾದ ಸಂಬಂಧಗಳನ್ನಿಟ್ಟುಕೊಳ್ಳಲು ಮೊಗಲ ಬಾದಶಹನು ತನ್ನ ಸ್ವಂತ ನೇತೃತ್ವದಲ್ಲಿ ಬುದ್ಧಿವಂತರಾದ ಮಂತ್ರಿಗಳ ಮುಖಾಂತರ ಆಡಳಿತೆ ಸಾಗಿಸುತ್ತಿದ್ದನು. ಎಲ್ಲ ಆಜ್ಞೆಗಳೂ ಆಡಳಿತೆಯ ನಿಯಮಗಳೂ ಬಾದಶಹನ ಮುದ್ರೆಯಿಂದ ಹೊರಡುತ್ತಿದ್ದವು. ತಮ್ಮ ಅಂಕಿತದಲ್ಲಿಯ ರಾಜ್ಯಗಳನ್ನು ಒಂದುಗೂಡಿಸಿ ಭಾರತಕ್ಕೆ 'ಒಂದುತನ'ವನ್ನು ದೊರಕಿಸಿ ಕೊಡಲು ಮೊಗಲ ಸಮ್ರಾಟರು ಸಹಾಯ ಮಾಡಿದರು. ಇಡಿ ಭಾರತದಲ್ಲಿ ದರಬಾರಿ ಭಾಷೆಯು—ಅದು ಪಾರ್ಶಿ ಆಗಲೊಲ್ಲದೇಕೆ— ಒಂದೇ ಆಗುವಂತೆ ಯತ್ನಿಸಿದರು. ಪಾರ್ಶಿ ಭಾಷೆಯ ಕವಿಗಳಿಗೆ ಬಹಳ ಮನ್ನಣೆ ಸಿಕ್ಕಿತು. ಆಡಳಿತೆಯ ಎಲ್ಲ ಅಧಿಕಾರದ ಸ್ಥಳಗಳು ಪಾರ್ಶಿ ಜನರಿಗೇ ಹೋಗುತ್ತಿದ್ದವು. ಈ ಬಗೆಯಿಂದ ಪಾರ್ಶಿ ಭಾಷೆಯ ಸಲುವಾಗಿ ಪಕ್ಷಪಾತವಿದ್ದಿತೆಂದರೂ ನಡೆದೀತು. ಪಾರ್ಶಿ ಭಾಷೆಯನ್ನು ಆಳವಾಗಿ ಅಭ್ಯಾಸ ಮಾಡಿದ, ಅದ್ವಿತೀಯ ಪಂಡಿತರಾದ ಹಿಂದುಗಳಿದ್ದರು. ಸಂಸ್ಕೃತವನ್ನು ಮನದಟ್ಟು ಓದಿದ ಪಾರ್ಶಿ ಜನರೂ ಇದ್ದರು.

ಮೊಗಲ ಅರಸರು ಹಿಂದುಸ್ಥಾನಕ್ಕೆ ದಂಡೆತ್ತಿ ಬಂದು, ಅದನ್ನು ಕ್ರಮವಾಗಿ ಗೆದ್ದು, ತಾವು ಆಳರಸರಾಗಿ ಇಲ್ಲಿಯೆ ನೆಲೆಸಿದರು. ಮತ್ತು ಎಲ್ಲ ಜಾತಿ, ಮತ, ಪಂಥಗಳ ಸಂಗಡ ಒಡಗೂಡಿ ನಡೆದರು. ಆದ್ದರಿಂದ ಮೊಗಲರ ಆಳಿಕೆಯು 'ಹಿಂದೀ ಸಾಮ್ರಾಜ್ಯ'ಕ್ಕೆ ಪೋಷಕವಾಯಿತೇ ವಿನಾ ವಿಘಾತುಕ

ನಾಗಲಿಲ್ಲ. ಪಾರ್ಸೀ ಜನರಿಗೆ ನೌಕರಿಗಳು ಹೆಚ್ಚು ಸಿಗುತ್ತಿದ್ದವು, ಹಿಂದೂ ಗಳು—ರಜಪೂತರು, ಬ್ರಾಹ್ಮಣರು—ಮೊಗಲರ ಜಾಗವನ್ನು ಹಿಡಿ ದರು. ಎಲ್ಲರನ್ನೂ ಒಂದೇ 'ದೃಷ್ಟಿ'ಯಿಂದ ನೋಡಿ, ಮುಸಲ್ಮಾನರೆಂಬ ಪಕ್ಷಪಾ ತವಿದ್ದಿಲ್ಲ. ನಾನಾ ಧರ್ಮಗಳೂ, ಜಾತಿ ಪಂಗಡಗಳೂ, ಭೋಜನ ಭಾಜನಾ ದಿಗಳೂ ಹಿಂದೂ ಮುಸಲ್ಮಾನರಿಗೆ ಸಮಾನವಾಗಿ ಸಲ್ಲಿದವು. ಮಸೀದಿಗ ಳನ್ನು ಕಟ್ಟಲಿಕ್ಕೆ ಆಸ್ಪದ ಕೊಟ್ಟಂತೆ ಮಂದಿರಗಳನ್ನು ಕಟ್ಟಲಿಕ್ಕೂ ಅನುಕೂಲ ವಿದ್ದಿತು.

ಮೊಗಲ ಅರಸರಲ್ಲ ಓದು ಬರಹ ಬಲ್ಲವರೂ, ಮೇಧಾಶಕ್ತಿಯಿಂದ ಕೂಡಿದವರೂ ಆಗಿದ್ದರು. ಅಕಬರನಿಗೆ ಓದು ಬರಹ ಬರುತ್ತಿದ್ದಿಲ್ಲವೆಂದು ಹೇಳಿಕೆಯಿದೆ. ಯುದ್ಧಕಲೆ, ಲಲಿತ ಕಲೆಗಳಲ್ಲಿ ಇವರು ನಿಷ್ಣಾತರಿದ್ದರು. ಔರಂಗಜೇಬನು ರಾಜಪುತ್ರನ ಶಿಕ್ಷಣ ಧೋರಣೆಯನ್ನು ಬರೆದಿಟ್ಟಿರುವನು.

ಭಾರತದ ವ್ಯಾಪಾರ ಸಂಬಂಧಗಳು ಪುರಾತನ ಕಾಲದಿಂದ ನಡೆದು ಬಂದಿದ್ದರೂ ಮೊಗಲರ ಕಾಲದಲ್ಲಿ, ಇವುಗಳಿಗೆ ಒಂದು ಹೊಸ ಪುಷ್ಟಿ ದೊರೆ ಯಿತು. ಆದ್ದರಿಂದ ಇಂದು ಕಾಣುವ ವ್ಯಾಪಾರದ ಬೆಳವಣಿಗೆಯು ಸಾಧ್ಯ ವಾಯಿತು. ಪರ್ಶಿಯಾ, ಬಸರಾ, ಮೊಂಬಾಸಾ, ಸುಮಾತ್ರಾಗಳಿಗೆ ಕಡಲ ಪಯಣ ಬೆಳೆದು ವ್ಯಾಪಾರವು ಸಾಗಿತು.

ಒಳನಾಡ ವ್ಯಾಪಾರವು ಈಗಿನಂತೆಯೆ ಮೊಗಲರ ಕಾಲದಲ್ಲಿ ಇದ್ದಿತು. ಅಂದಿನ ವಾಹನಗಳು ಇಂದಿಗೂ ನೋಡಲು ಸಿಗುವವು. ಭಾರತದ ಹಿರಿಯ ಹೋರೆಯಾದ ಸಾಗುವಳಿಯು ಅಂದಿನಿಂದಲೂ ಒಂದೇ ತೆರನಾಗಿ ಸಾಗಿ ಬಂದಿದೆ. ಅಳತೆ ತೂಕಗಳು ಮಾರ್ಪಾಟು ಹೊಂದಿದರೂ, ಈಗಿನ ಅಳತೆ ತೂಕಗಳಿಗೆ ತಳಹದಿಯಾಗಿವೆ. ಈಗಿನ ನಾಣ್ಯಗಳು ಆಗಿನವುಗಳನ್ನು ಹೋಲುವವು.

ನೆಯ್ಗೆಯ ಕೆಲಸದಲ್ಲಿ ಢಾಕಾದ 'ಮಲ್ಲು'ಗಳು ಮತ್ತು ಕಾಶ್ಮೀರದ ಜಮಖಾನೆಗಳು ಬಹಳ ಹೆಸರು ಪಡೆದವು. ಈ ಕಾಲದಲ್ಲಿ ಭಾರತದ

ಬಟ್ಟೆಯು ವಿಲಾಯತಿಗೆ ರವಾನ್ನಾಯಿತು.

ಮೊಗಲ ಅರಸರು ಆಗಿ ಹೋಗಿ ಬಹು ದಿನಗಳಾದವು. ಆದರೂ ಅವರ ಕಾಲದ ನೆನಪು ಹೆಚ್ಚಿಹೆಚ್ಚಿಗೂ ಆಗುತ್ತದೆ. ಅದೇಕೆ ! ಅಂದಿನ ಜೀವನವನ್ನೇ ನಾವು ಇಂದಿಗೂ ನಡೆಸುತ್ತೇವೆ. ಪೋಷಾಕು, ಮಾತು, ನಡತೆಗಳು, ವಿಚಾರಗಳು, ವಾಙ್ಮಯ, ಗಾಯನ, ಚಿತ್ರಕಲೆ, ಶಿಲ್ಪಶಾಸ್ತ್ರಗಳಲ್ಲಿ ಮೊಗಲ ಸ್ವರೂಪವೇ ದಿನದಿನವೂ ಕಂಡುಬರುತ್ತದೆ. ಇವೆಲ್ಲವು ಹಿಂದು ಮುಸಲ್ಮಾನರ ಮಿಶ್ರಣದ ಪರಿಣಾಮ ಅಥವಾ ದ್ಯೋತಕವಾಗಿವೆ. ಉತ್ತರದಲ್ಲಿಯ ಗಂಭೀರ ರೀತಿ, ಪೋಷಾಕಿನ ವಿವಿಧತ, ನಡತೆಯ ನಯ, ಇವೆಲ್ಲ ಮೊಗಲ ದರಬಾರದಲ್ಲಿ ಕೆಲಸಮಾಡುವವರವು.

ದಿನದಿನದ ಜೀವನದಲ್ಲಿ ಹಿಂದು ಮುಸಲ್ಮಾನರು ಕೂಡಿ ನಡೆದರು. ಆಹಾರ, ವಿನೋದ, ವಿಶ್ರಾಂತಿಗಳು ಕೂಡಿಯೆ ಸಾಗಿದವು. ಏತದ್ದೇಶೀಯ ಸಾಹಿತ್ಯಕ್ಕೆ ಮೊಗಲ ಅರಸರು ಬಹಳ ಸಹಾಯವಿತ್ತರು. ಇವೆರಡು ವಿರೋಧಿಯೆನಿಸಿದ ಮತಗಳು ಕೂಡಿ ನಡೆಯುವವೆಂದರೆ ಎಂತಹ ಮಾನೋ ಎನಿಸಿತ್ತು. ಆದರೆ, ದಿನದಿನಕ್ಕೆ ಇವೆರಡು ಮತಗಳು ಜೊತೆಜೊತೆಗೆ ನಡೆದಿರಲು ಎಷ್ಟೋ ಕಡೆಗೆ ಹೊಂದಿಕೊಂಡಿರುವವು. ಈ ಹೊಂದಿಕೆಯನ್ನು ದೃಢ ಪಡಿಸಲು ಕಬೀರ, ನಾನಕ, ಅಮೀರ ಖುಸ್ರೋ, ಅಕಬರ, ದಾರಾ ಶಿಕೋ, ಮುಂತಾದವರು ಸಹಾಯ ಮಾಡಿದರು.

ಅಭ್ಯಸನಗಳು:

೧. ಕೆಳಗೆ ಕೊಟ್ಟ ರೇಷೆಯ ಒಂದು ಮಗ್ಗಲಿಗೆ ಕೆಲವು ಇಸ್ವಿಗಳನ್ನು ಕೊಟ್ಟಿದೆ. ಆಯಾ ಇಸ್ವಿಗಳಲ್ಲಿ ಅಕಬರನ ಕಾಲಾವಧಿಯಲ್ಲಿ ನಡೆದ ಸಂಗತಿಗಳನ್ನು ತುಂಬಿರಿ.

೧೫೪೨	೧೫೫೬	೧೫೬೪	೧೫೮೨	೧೬೦೦	೧೬೦೫

೨. ಕೆಳಗೆ ಕೊಟ್ಟ ರೇಷೆಗಳಲ್ಲಿ, ಒಂದರ ಗುಂಟ ಮೊಗಲ ಅರಸರ ಹೆಸರುಗಳನ್ನೂ, ಮತ್ತೊಂದರ ಗುಂಟ ಕೆಲವು ಇಸ್ವಿಗಳನ್ನೂ ಕೊಟ್ಟಿದೆ. ಇವುಗಳ ಸಹಾಯದಿಂದ ಮೊಗಲ ಸಾಮ್ರಾಜ್ಯದ ಉನ್ನತಿ ಅವನತಿಗಳನ್ನು ತೋರಿಸುವ ರೇಖಾಚಿತ್ರವನ್ನು ರಚಿಸಿರಿ.

ಮೊಗಲ ಕೊನೆಯ ಅರಸರು

ಔರಂಗಜೇಬ

ಶಹಾಜಹಾನ

ಜಹಾಂಗೀರ

ಅಕಬರ

ಹುಮಾಯೂನ

ಬಾಬರ

೧೫೨೬ ೧೫೫೦ ೧೬೦೦ ೧೬೫೦ ೧೭೦೦ ೧೭೫೦

೩. ಕೆಳಗೆ ಕೆಲವು ಸಂಗತಿಗಳನ್ನೂ ಇಸ್ವಿಗಳನ್ನೂ ಕೊಟ್ಟಿದೆ. ಸರಿಹೋಗುವಂತೆ ಅವುಗಳನ್ನು ಹೊಂದಿಸಿರಿ.

ಅಕಬರನ ಜನ್ಮ

ಪ್ರತಾಪಸಿಂಗನ ಸಂಗಡ ಸೇಲೀಮನ ಯುದ್ಧ

ಅಹಮ್ಮದನಗರವು ಅಕಬರನಿಗೆ ಪ್ರತಿಭಟಿಸಿದ್ದು

ಜಹಂಗೀರನಿಗೆ ಪಟ್ಟ

ಶಹಾಜಹಾನನು ರಾಜನಾದದ್ದು

ಪಟ್ಟಕ್ಕಾಗಿ ಔರಂಗಜೇಬನ ಹೋರಾಟ

ಔರಂಗಜೇಬನು ದಕ್ಷಿಣಕ್ಕೆ ದಂಡೆತ್ತಿ ಬಂದದ್ದು

ಔರಂಗಜೇಬನ ಮರಣ

೧೫೪೨ ೧೬೦೫ ೧೬೨೭ ೧೬೫೮ ೧೬೮೦ ೧೫೬೬ ೧೫೭೬

೧೩. ಮರಾಠರ ಆಳಿಕೆ.

ವಂಶಾವಳಿ:

ಮುಖ್ಯ ಅರಸರು

೧.	ಛತ್ರಪತಿ ಶಿವಾಜಿ	ಕ್ರೈ. ಶ.	೧೬೪೬—೧೬೮೦
೨.	,, ಸಂಭಾಜಿ	,,	೧೬೮೦—೧೬೮೯
೩.	,, ರಾಜಾರಾಮ	,,	೧೬೮೯—೧೭೦೦
೪.	,, ೨ನೆಯ ಶಿವಾಜಿ	,,	೧೭೦೦—೧೭೦೮
೫.	,, ಶಾಹು	,,	೧೭೦೮—೧೭೪೯
೬.	,, ರಾಜಾರಾಮ	,,	೧೭೪೯—೧೭೭೭
೭.	,, ೨ನೆಯ ಶಾಹು	,,	೧೭೭೭—೧೮೦೮
೮.	,, ಪ್ರತಾಪಸಿಂಗ	,,	೧೮೦೮—೧೮೩೯
೯.	,, ಶಹಾಜಿ	,,	೧೮೩೯—೧೮೪೮

ಪೇಶ್ವೆಯರು

೧.	ಬಾಳಾಜಿ ವಿಶ್ವನಾಥ	,,	೧೭೧೩—೧೭೨೦
೨.	ಬಾಜೀರಾವ	,,	೧೭೨೦—೧೭೪೦
೩.	ನಾನಾಸಾಹೇಬ	,,	೧೭೪೦—೧೭೬೧
೪.	ಮಾಧವರಾವ	,,	೧೭೬೧—೧೭೭೨
೫.	ನಾರಾಯಣರಾವ	,,	೧೭೭೨—೧೭೭೩
೬.	ಸವಾಯಿ ಮಾಧವರಾವ	,,	೧೭೭೪—೧೭೯೫
೭.	೨ನೆಯ ಬಾಜೀರಾವ	,,	೧೭೯೬—೧೮೧೮

ಶಿವಾಜಿಗಿಂತ ಮೊದಲಿನ ಮಹಾರಾಷ್ಟ್ರವು:

ಇಂದು ಮರಾಠಿ ಭಾಷೆಯು ಪ್ರಚಲಿತವಿದ್ದ ದೇಶವು ಮಹಾರಾಷ್ಟ್ರ

ದೇಶವೆಂದು ಸಾಧಾರಣವಾಗಿ ಹೇಳಬಹುದು. ಸಹ್ಯಾದ್ರಿಯು ದಕ್ಷಿಣಕ್ಕೆ ಪಶ್ಚಿಮ ಕರಾವಳಿಯ ಗುಂಟ, ಗೋವೆಯ ಬಂದರಕ್ಕೆ [illegible] ಕಂಡುಬರುವ ಪ್ರದೇಶದಲ್ಲಿ ಸಮುದ್ರದ ಓರೆಯಿಂದ [illegible] ಇಷ್ಟು ಭಾಗಕ್ಕೆ ಕೊಂಕಣಪಟ್ಟಿಯೆಂದು, ಅಲ್ಲಿ [illegible] ವಿದ್ದ ಕಾರಣ ಅದು ಮಲೆನಾಡಿನಂತೆಯೇ [illegible]. ಅಲ್ಲಿ ಕಾಣುವ ಗುಡ್ಡಗಳ ತುದಿಗಳು [illegible] ಅವುಗಳನ್ನು ಕೆಲವು ಕಡೆಗೆ ಕೋಟೆ ಕೊತ್ತಲಗಳನ್ನು ನೋಡಬಹುದು. [illegible] ಕಡೆಗೆ ಗುಡ್ಡಗಳ ನಡುವೆ [illegible]. [illegible] ಪಶ್ಚಿಮ ಉತ್ತರಕ್ಕಿದ್ದ [illegible] ಮುಂದೆ ಇದರ [illegible]. [illegible] ಪಶ್ಚಿಮ ಕರಾವಳಿಯ ಬಂದರಗಳಲ್ಲಿ ಕಾರವಾರದ ಸಮೀಪದಿಂದ ಸೂರತದ ವರೆಗೆ ಮಹಾರಾಷ್ಟ್ರದ [illegible]. ಈ ಪ್ರದೇಶ ದಲ್ಲೆಲ್ಲ ತಾಪಿ, ಗೋದಾವರಿ, ಕೃಷ್ಣಾ, ಭೀಮಾ, [illegible] ನದಿಗಳು ಭೂಮಿಯನ್ನು ತೋಯಿಸುತ್ತವೆ. ಅಲ್ಲಿಂದ [illegible] ದೇಶದ ಪರಿ ಕಂದರಗಳಲ್ಲಿಯೂ ಬೆಳೆಗಳೂ, ಹೈನದ ಸಾಮಗ್ರಿಗಳೂ ಸಮೃದ್ಧವಾಗಿ ಸಿಗುತ್ತವೆ. ಭೂಮಿಯು ಅಷ್ಟೊಂದು ಫಲವತ್ತಾದ ಪ್ರದೇಶವೆಂದು ಹೇಳಲಿಕ್ಕೆ ಬಾರದಿದ್ದರೂ, ಜನರ ಸುಖದ ಬಾಳ್ವೆಗೆ ಯಾವ ಕೊರತೆಯೂ ಇಲ್ಲ.

ಇಲ್ಲಿ ಪೂರ್ವ ಕಾಲದಿಂದಲೂ ಮೌರ್ಯ ಅರಸರು, ಶಾಲಿವಾಹನ, ಚಾಲುಕ್ಯ, ರಾಷ್ಟ್ರಕೂಟ, ಯಾದವರೆಂಬ ಹೆಸರಾದ ಅರಸರು ಆಳಿದರು. ಇವರೆಲ್ಲರೂ ಕ್ಷತ್ರಿಯ ವಂಶಜರು. ಮಹಾರಾಷ್ಟ್ರ ದೇಶದ ಮೂಲನಿವಾಸಿಗಳ ಕೂಡ ಇವರ ಸಂಪರ್ಕವಾದದ್ದರಿಂದ, ಇಂದು ಅಲ್ಲಿ ವಾಸಿಸುವ ಜನರಲ್ಲಿ ಕುಣಬಿ ಮರಾಠಾ ಮತ್ತು ಕ್ಷತ್ರಿಯ ಮರಾಠಾ ಎಂದು ಎರಡು ಭೇದಗಳನ್ನು ಕಾಣಬಹುದು. ಇವರು ಮೊದಲು ಗ್ರಾಮಾಧಿಕಾರಿಗಳಾಗಿಯೂ, ನಂತರ ದೇಶಮುಖಿಗಳನ್ನು ಸಂಪಾದಿಸಿಯೂ, ಉಪರ ಸಿಪಾಯಿ ಪದವಿದರು. ಯಾದವರು ಆಳಿ ಹೋದ ಬಳಿಕ, ಮುಹಮ್ಮದೀಯರು ಮಹಾರಾಷ್ಟ್ರದಲ್ಲಿ ಕಾಲು ಚಾಚಿದರು. ಮರಾಠರು, ತಮ್ಮ ಈ ಹಕ್ಕು ಬಾಧ್ಯತೆ

ಗಳನ್ನು ಬಿಡದೆ ನಡೆಸಿಕೊಂಡು ಬಂದರು. ಇವರಿಗೆ ಧರ್ಮಬೋಧೆಯನ್ನೂ ರಾಮಾಯಣ ಮಹಾಭಾರತ ಕಥಾಶ್ರವಣವನ್ನೂ ಮಾಡಿಸಲು ಬ್ರಾಹ್ಮಣ ವರ್ಗವು ತಲೆದೋರಿತು. ಮಹಾರಾಷ್ಟ್ರದ ಅದರಲ್ಲಿಯೂ ಕೊಂಕಣದಲ್ಲಿಯ ಬ್ರಾಹ್ಮಣರಿಗೆ ಚಿತ್ಪಾವನರೆಂಬ ಹೆಸರು. ಮುಂದೆ ಮಹಾರಾಷ್ಟ್ರವನ್ನು ಪೇಶ್ವೆಯರೆಂಬ ಹೆಸರಿನಿಂದ ಆಳಿದವರು ಚಿತ್ಪಾವನ ಬ್ರಾಹ್ಮಣ ವರ್ಗದವರೇ.

ಗ್ರಾಮಾಧಿಕಾರ, ದೇಶಮುಖವದ, ಮತ್ತು ಜಹಗೀರದಾರ ಪದಗಳನ್ನು ಇತರ ಮರಾಠಾ ವರ್ಗದವರು ನಡೆಸಿದರಷ್ಟೆ ? ಜಹಗೀರುಗಳ ಮತ್ತು ಇತರ ಅಧಿಕಾರಿಗಳ ಮುಖ್ಯ ಕೆಲಸವು ಕಂದಾಯ ವಸೂಲಿಯಾಗಿತ್ತು. ಈ ಅಧಿಕಾರಿಗಳು ಇಲ್ಲಿಯ ವರೆಗೆ ವಿಜಾಪುರ ಅಥವಾ ಇನ್ನಿತರ ಅರಸರಿಂದ ಸಿಕ್ಕವು. ಅವು ತಂದೆಯಿಂದ ಮಗನಿಗೆ ಸಾಗಿದವು. ಈ ಪದ್ಧತಿಯಿಂದ ಮಹಾರಾಷ್ಟ್ರದ ಕಂದಾಯ ವಸೂಲಿಯು ಅಡೆತಡೆಗಳಿಲ್ಲದೆ ಸಾಗಿತು.

ಗುಡ್ಡಗಾಡು ಸೀಮೆಯಲ್ಲಿ ಹೊಟ್ಟೆಪಾಡಿಗಾಗಿ ಹೆಚ್ಚು ಶ್ರಮ ವಹಿಸಬೇಕಾದ್ದರಿಂದ ಮರಾಠಾ ಜನರು ಕಷ್ಟಸಹಿಷ್ಣುಗಳೂ, ಸತತೋದ್ಯೋಗಿಗಳೂ ಆಗುವರು. ಇವರು ಶರೀರದಿಂದ ಚಪಲರಾಗಿದ್ದು, ವ್ಯವಹಾರ ಚತುರತೆಯು ಇವರಲ್ಲಿ ಹೆಚ್ಚಾಗಿ ಕಂಡು ಬರುವದು. ಹೋರೆಗಳಲ್ಲಿ ಉಚ್ಚ ನೀಚ ಭೇದವಿಲ್ಲ. ಈ ತರದಿಂದ ಸಾಗಿರಲು ಇವರಿಗೆ ಆಡಳಿತೆಯು ಕ್ರಮವಾಗಿ ಮುಸಲ್ಮಾನರಿಂದ ಹೆಚ್ಚು ಪ್ರಮಾಣದಲ್ಲಿ ತಿಳಿದು ಬಂದಿತು.

ಬಹಮನಿ ರಾಜ್ಯದ ಅಂಗಗಳಾದ ಐದು ರಾಜ್ಯಗಳು ತಮ್ಮತಮ್ಮೊಳಗೆ ವೈರಭಾವ ತೋರಿದ್ದರಿಂದ, ದಂಡಿನಲ್ಲಿ ಮರಾಠಾ ಜನರ ಪ್ರವೇಶವಾಗಬೇಕಾಯಿತು. ಆದ್ದರಿಂದ ಶಿರ್ಕೇ, ಘಾಟಗೇ, ಘೋರಪಡೇ, ಮೋಹಿತೇ, ಮಹಾಡಿಕ್, ಮೋರೇ, ಜಾಧವ, ನಿಂಬಾಳಕರ, ಮಾನೇ, ಭೋಸಲೇ, ಮುಂತಾದ ಅಧಿಕಾರಿಗಳು ತಲೆದೋರಿದರು. ಬರಬರುತ್ತ ಇವರು ಮುಲಕಿ ಅಧಿಕಾರದಲ್ಲಿಯೂ ಕೈಹಾಕಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡರು. ಹಳೆ

ದೇಶದ ಮುಸಲ್ಮಾನರನ್ನು ಹಿಡಿತದಲ್ಲಿಟ್ಟುಕೊಳ್ಳಲು ಬಾದಶಹರಿಗೆ ಮರಾಠಾ ಜನರ ಅವಶ್ಯಕತೆಯೂ ಇದ್ದಿತು. ಆದರೆ, ಈ ಕಾಲದಲ್ಲಿ ಮರಾಠಾ ಜನರಲ್ಲಿ ಸ್ವರಾಜ್ಯದ ಕಲ್ಪನೆ ಮಾತ್ರ ಮೂಡಿರಲಿಲ್ಲ.

ಕಾಲವು ಕಳೆಯುತ್ತಿರಲು ಮಹಮ್ಮದೀಯರ ಉಪಟಳವು ದೇಶದಲ್ಲಿ ಹೆಚ್ಚಾಯಿತು. ದಕ್ಷಿಣದಲ್ಲಿ ದೊಡ್ಡ ಹಿಂದೂ ರಾಜ್ಯವೆನಿಸಿದ ವಿಜಯನಗರವು ನಾಶವಾಯಿತು. ಆದರೂ ದಾಕ್ಷಿಣಾತ್ಯರ ಹಿಂದೂ ಬುದ್ಧಿಯು ಮಾತ್ರ ಅಳಿದು ಹೋಗಲಿಲ್ಲ. ಮುಸಲ್ಮಾನ ಅರಸರ ಕಡೆಯಿಂದ ಹಿಂದು ಧರ್ಮಕ್ಕಾಗುವ ಛಲನೆಯು ಅವರಿಗೆ ತಿಳಿದು ಬರಹತ್ತಿತು. ಹಿಂದುಗಳು ಈ ಕಾರಣದಿಂದ ಧೈರ್ಯಗುಂದಿದ್ದೂ ಅಹುದು. ಎಷ್ಟೋ ಸಲ ಹಿಂದುಗಳ ಅಪಮಾನವಾಗುವ ಪ್ರಸಂಗಗಳು ಬಂದವು. ಇಂಥ ಸ್ಥಿತಿಯಲ್ಲಿ ಹಿಂದುಗಳ ಮನಸ್ಸಿನ ಕಾವು ಮೆಲ್ಲಮೆಲ್ಲನೆ ಏರತೊಡಗಿದ್ದಿತು ಆಗಿನ ಕಾಲದ ಮಹಾರಾಷ್ಟ್ರದ ಸಾಧು ಸಂತರೂ ಸ್ವಧರ್ಮ ರಕ್ಷಣೆಗೆ, ಸ್ವದೇಶ ಸೇವೆಗೆ ಜನರನ್ನು ಪ್ರೋತ್ಸಾಹಿಸಿದರು.

ಮೇಲೆ ಹೇಳಿದ ಮಹಾರಾಷ್ಟ್ರದ ಸರದಾರ ವಂಶಗಳಲ್ಲಿ ಒಂದಾದ ಭೋಸಲೇ ಮನೆತನದಲ್ಲಿ ಶಿವಾಜಿಯು ಕ್ರಿ. ಶ. ೧೬೩೦ರಲ್ಲಿ ಜನ್ಮವೆತ್ತಿದನು. ಇವನ ತಂದೆಯಾದ ಶಹಾಜಿಯು ಮೊದಲು ಅಹಮ್ಮದನಗರದ ಆಧಿಪತ್ಯದಲ್ಲಿ ಒಬ್ಬ ಜಹಗೀರದಾರನಾಗಿದ್ದನು. ಕಾರಣಾಂತರದಿಂದ ಅಹಮದನಗರಕ್ಕೂ, ಮೊಗಲ ಬಾದಶಾಹಿಗೂ, ವೈರಭಾವ ತೋರಿದ್ದರಿಂದ ಶಹಾಜಿಯು ಅಹಮ್ಮದನಗರವನ್ನು ತ್ಯಾಗ ಮಾಡಿ, ವಿಜಾಪುರದ ಅರಸರ ಆಶ್ರಯಕ್ಕೆ ಹೋದನು. ನಂತರ ವಿಜಾಪುರದ ಅರಸರ ಪತಿಯಿಂದ ಕರ್ನಾಟಕದಲ್ಲಿ ದಾಡು ಮಾಡಿ ಪರಾಕ್ರಮ ತೋರಿದ್ದರಿಂದ ಇವನಿಗೆ ಪುತ್ತೆ ಮೊದಲಿನ ಪುಣೆ ಮತ್ತು ಸುಪಾ ಪೇಠಗಳಲ್ಲದೆ, ಮತ್ತೆ ಕೆಲವು ಪ್ರದೇಶಗಳ ಜಹಗೀರು ಸಿಕ್ಕಿತು.

ಶಿವಾಜಿಯ ಬಾಲ್ಯ ಮತ್ತು ಶಿಕ್ಷಣ:

ಶಿವಾಜಿಯು ಕ್ರಿ. ಶ. ೧೬೩೦ರಲ್ಲಿ ಶಹಾಜೀ ಸರದಾರನ ಮಡದಿಯಾದ

ಜಿಜಾಬಾಯಿಯ ಹೊಟ್ಟೆಯಲ್ಲಿ ಶಿವನೇರಿ ಕೋಟೆಯಲ್ಲಿ ಜನ್ಮ ತಾಳಿದನು. ತಂದೆಯಾದ ಶಹಾಜಿಯು ಈ ವೇಳೆಗೆ ವಿಜಾಪುರ ಅರಸರ ಆಶ್ರಯಕ್ಕೆ ಸೇರಿದ್ದರಿಂದ ಬಾಲಕ ಶಿವಾಜಿಯು ಬೆಂಗಳೂರಲ್ಲಿ ಕೆಲವು ದಿನಗಳನ್ನು ಕಳೆದನು. ನಂತರ ಕ್ರಿ. ಶ. ೧೬೪೧ರ ಸುಮಾರಕ್ಕೆ ಶಿವಾಜಿಯು ತಾಯಿಯಾದ ಜಿಜಾಬಾಯಿಯೊಂದಿಗೆ ಪುಣೆ ಪ್ರಾಂತಕ್ಕೆ ಬಂದು ಅಲ್ಲಿ ವಾಸ ಮಾಡಿದನು ಆಗ ಪುಣೆ ಭಾಗದ ಶಹಾಜಿಯ ಜಹಗೀರವು ದಾದಾಜಿ ಕೊಂಡದೇವ ಮಲವಣಕರ ಎಂಬ ಕಾರಭಾರಿಯ ಕೈಯಲ್ಲಿದ್ದಿತು. ಆದ್ದರಿಂದ ಶಿವಾಜಿಯ ಜೋಪಾನ ಮತ್ತು ಶಿಕ್ಷಣಗಳ ಹೊಣೆಯು ದಾದಾಜಿ ಮತ್ತು ತಾಯಿಯಾದ ಜಿಜಾಬಾಯಿಯ ಪಾಲಿಗೆ ಬಂದಿತು. ಜಿಜಾಬಾಯಿಯು ಶಿವಾಜಿಗೆ ರಾಮಾಯಣ, ಮಹಾಭಾರತಗಳಲ್ಲಿಯ ಕ್ಷತ್ರಿಯ ಅರಸರ ಶೌರ್ಯ ಧೈರ್ಯಗಳ ಕಥೆಗಳನ್ನು ಹೇಳಿ ಪುರಾಣಕಾಲದ ವೈಭವದ ಕಲ್ಪನೆಯನ್ನು ಮಾಡಿಕೊಟ್ಟಳು. ಪುರಾಣದ ಕಥೆಗಳನ್ನು ಕೇಳಿ ಶಿವಾಜಿಯು ಹುರುಪುಗೊಂಡವನಾದನು. ಜೊತೆಗೆ ತನ್ನ ಕಾಲದಲ್ಲಿಯ ಭಾರತ ದೇಶದ ಸ್ಥಿತಿಯನ್ನೂ ಅರಿಕೆ ಮಾಡಿಕೊಂಡನು. ದಾದಾಜಿಯು ಸ್ವಾಮಿಭಕ್ತ ಮತ್ತು ಉತ್ತಮ ವ್ಯವಸ್ಥಾಪಕನಾದ್ದರಿಂದ ಕ್ಷತ್ರಿಯರಿಗೆ ತಕ್ಕಂತೆ ಶಿವಾಜಿಗೆ ಕುದುರೆ ಹತ್ತುವದು, ಮತ್ತು ಯುದ್ಧ ಕಲೆಯ ಇನ್ನಿತರ ಸಂಗತಿಗಳನ್ನು ಕಲಿಸಿದನು. ಓದು ಬರಹ, ಲೆಕ್ಕಪತ್ರಗಳ ತಿಳುವಳಿಕೆ ಮಾಡಿಕೊಂಡು ಶಿವಾಜಿಯು ಜಹಗೀರದ ಆಡಳಿತೆಯ ಅರಿಕೆ ಮಾಡಿಕೊಂಡನು. ದಾದಾಜಿಯು ಜಹಗೀರದ ಹಳ್ಳಿಗಳಲ್ಲಿ ಸುತ್ತಾಡುವಾಗ ಸಂಗಡ ಶಿವಾಜಿಯನ್ನು ಕರೆದೊಯ್ಯುತ್ತಿದ್ದದರಿಂದ ಸಾಗುವಳಿ, ಹಳ್ಳಿಯ ನ್ಯಾಯದಾನ, ವಸೂಲಿಗಳ ಮಾಹಿತಿಯನ್ನು ಶಿವಾಜಿಯು ಮಾಡಿಕೊಂಡನು. ಇವೆಲ್ಲವುಗಳ ಮೂಲಕ ಶಿವಾಜಿಗೆ ಆಡಳಿತೆಯ ಪ್ರತ್ಯಕ್ಷ ಅನುಭವವಾಯಿತಲ್ಲದೆ, ನಂತರ, ಕೂಡಲೆ ತನ್ನ ಜಹಗೀರಿನ ಆಡಳಿತೆಯನ್ನು ತಾನೆ ಸಾಗಿಸುವಂತಾಯಿತು.

ದಿನಗಳು ಕಳೆದಂತೆ ಶಿವಾಜಿಯು ಶ್ರಮಸಾಧ್ಯವಾದ ಕೆಲಸಗಳನ್ನು ಕೈಕೊಳ್ಳ ಹತ್ತಿದನು. ಕೋಟೆಗಳನ್ನು ಸುತ್ತಾಡುವದು, ಗುಡ್ಡ ಬೆಟ್ಟಗಳನ್ನು ನಡೆದು ತಲುಪುವದು, ಇವನ ದಿನದ ಕೆಲಸಗಳಾದವು. ತನ್ನ ಜಹಗೀರಿನ

ಲ್ಲಿಯ "ಮಾವಳ ಪ್ರಾಂತ"ವನ್ನು ಈ ರೀತಿ ಆಳಿ ಸಾಹಸೋದ್ಯವಾಗಿ ಶಿವಾಜಿಗೆ ಕೆಲವು ಜೀವದ ಗೆಳೆಯರು ಲಭಿಸಿದರು. ಇವರ ಸಹಾಯದಿಂದ ಇವನು ಒಂದರ ಹಿಂದೊಂದು ಮಹಾರಾಷ್ಟ್ರದಲ್ಲಿಯ ಕೋಟೆಗಳನ್ನು ಗೆಲ್ಲಲು ಪ್ರಾರಂಭಿಸಿದನು. ತೋರಣ ಕೋಟೆ ಎಂಬುದು ಇವನು ವಶಪಡಿಸಿಕೊಂಡ ಮೊದಲನೆಯ ಕೋಟೆಯು. ನಂತರ ಕೊಂಡಾಣಾ(ಸಿಂಹಗಡ), ಚಾಕಣ, ಪುರಂಧರ, ರೋಹಿಡೆ ಮುಂತಾದ ಕೋಟೆಗಳನ್ನು ಸ್ವಾಧೀನ ಮಾಡಿಕೊಂಡನು. ತೋರಣ ಕೋಟೆಯ ರಿಪೇರಿಯ ಕೆಲಸ ನಡೆದಾಗ ಶಿವಾಜಿಗೆ ಭೂಗತ ದ್ರವ್ಯವು ಸಿಕ್ಕಿತೆಂದು ಹೇಳುತ್ತಾರೆ. ಇದರ ಸಹಾಯದಿಂದ ಇವನು ಹೊಸ ಸೈನ್ಯ ಕೂಡಿಸಲು ಅನುವಾದನು. ಇದೇ ವೇಳೆಗೆ ಕಲ್ಯಾಣದ ಸುಭೇದಾರನಾದ ಮುಲ್ಲಾನಾ ಅಹಮ್ಮದ ಎಂಬುವನು ವಿಜಾಪುರದ ಅರಸನಿಗೆ ಹಣವನ್ನು ಕಳಿಸುವನೆಂಬ ಸುದ್ದಿಯನ್ನು ತಿಳಿದು, ದಾರಿಯಲ್ಲಿ ಅವರ ರಕ್ಷಕರನ್ನು ಬಡಿದು ಹಣವನ್ನು ವಶಪಡಿಸಿಕೊಂಡನು. ನಂತರ ಸ್ವತಃ ರಾಜಾಪುರದ ವರೆಗೆ ದೌಡುಮಾಡಿ ಆ ಪ್ರದೇಶವನ್ನೆಲ್ಲ ಸುಲಿದನು. ಜಂಜೀರಾದ ಸಿದ್ದಿಯೆಂಬ ಮಹಮ್ಮದೀಯ ಹಡಗುಪಡೆಯ ಅಧಿಕಾರಿಯ ಉಪಟಳವು ಹೆಚ್ಚಾದ್ದರಿಂದ ಅವನ ಮೇಲೆ ಸಹ ಹೋಗಿ ಅವನ ಪ್ರಾಂತದಲ್ಲಿಯ ಕೆಲವು ಕೋಟೆಗಳನ್ನು ವಶಮಾಡಿಕೊಂಡದ್ದಾಯಿತು. ಒಟ್ಟಿನಲ್ಲಿ ಸ್ವಲ್ಪೇ ದಿನಗಳು ಕಳೆಯುತ್ತಿರಲು ಕಲ್ಯಾಣದಿಂದ ರಾಜಾಪುರದ ವರೆಗಿರುವ ಪ್ರದೇಶಕ್ಕೆ ಶಿವಾಜಿಯು ಸ್ವಾಮಿಯೆಂದೆನಿಸಿದನು.

ಶಿವಾಜಿಯ ತಂದೆಯಾದ ಶಹಾಜಿಯು ವಿಜಾಪುರದ ಅರಸನ ದರಬಾರದಲ್ಲಿದ್ದನಷ್ಟೆ ? ಶಿವಾಜಿಯ ಉನ್ನತಿಯನ್ನು ಕಂಡು, ವಿಜಾಪುರದ ಅರಸನು, ಇವನನ್ನು ನಿಯಂತ್ರಿಸಲು ಹವಣಿಸಿ, ಶಹಾಜಿಯನ್ನು ಸೆರೆಯಲ್ಲಿಟ್ಟನು. ಕೆಲ ಕಾಲದ ನಂತರ, ದರಬಾರದವರ ಮಧ್ಯಸ್ಥಿಕೆಯಿಂದ ಕೆಲವು ಕರಾರುಗಳ ಮೇಲೆ ಅವನನ್ನು ಬಿಡುಗಡೆ ಮಾಡಿದನು. ಬಳಿಕ ಶಿವಾಜಿಯು ಚಂದ್ರರಾವ ಮೋರೇಯೆಂಬ ಜಾವಳಿಯ ಜಹಗೀರದಾರನ ಮೇಲೆ ಏರಿಹೋಗಿ ಅವನ ಪ್ರಾಂತವನ್ನು ವಶಪಡಿಸಿಕೊಂಡನು. ಇದರ ರಕ್ಷಣಾರ್ಥವಾಗಿ ಪ್ರತಾಪಗಡ ಎಂಬ ಕೋಟೆಯ ರಚನೆಯಾಯಿತು. ಇಲ್ಲಿ

ಕುಲಸ್ವಾಮಿನಿಯಾದ ಭವಾನಿಯ ಸ್ಥಾಪನೆಯಾಯಿತು.

ಕಾಲಗತಿಯಲ್ಲಿ ಶಿವಾಜಿಯು ವಿಜಾಪುರದ ಅರಸರ ರಾಜ್ಯದಲ್ಲಿ ದಾಳಿ ಮಾಡಹತ್ತಿದನು. ಇದನ್ನು ತಡೆಯುವದಕ್ಕಾಗಿ ಅಫಜಲ್ ಖಾನನೆಂಬ ಶೂರ ಸರದಾರನು ದೊಡ್ಡ ದಂಡಿನೊಡನೆ ಬಂದನು. ಶಿವಾಜಿಯು ಸಂಧಿ ಮಾಡಿಕೊಳ್ಳಲಭಿನಯಿಸಿ, ಭೆಟ್ಟಿಯ ಅಪೇಕ್ಷೆಯನ್ನು ಮಾಡಿದನು. ಅಫಜುಲ್‌ಖಾನನು ಇದಕ್ಕೆ ಒಪ್ಪಿಕೊಳ್ಳಲಾಗಿ ಭೆಟ್ಟಿಯ ದಿನವು ನಿಶ್ಚಿತವಾಯಿತು. ಪ್ರತಾಪಗಡದ ಬುಡಕ್ಕೆ ತನ್ನ ಸೈನ್ಯವನ್ನು ನಿಲ್ಲಿಸಿ, ತಾನೊಬ್ಬನೆ ಈ ವಿಶೇಷಪ್ರಸಂಗಕ್ಕಾಗಿ ರಚಿಸಿದ ಮಂಟಪದಲ್ಲಿ ಬಂದು ಮಂಡಿಸಿದನು. ಮಂಟಪದ ಹೊರಗೆ ಇವನ ಸೇನೆಯ ಭೋಯಿಗಳೂ, ಅಂಗರಕ್ಷಕರೂ ಕಾಯುತ್ತಿದ್ದರು. ಖಾನನು ತುಸು ಮುಂಗಡ ಬಂದದ್ದರಿಂದ ಶಿವಾಜಿಯು ಬರುವನ್ನು ಎದುರು ನೋಡುತ್ತ ಕುಳಿತಿದ್ದನು. ಶಿವಾಜಿಯು ಬರಲಾಗಿ, ಒಬ್ಬರೊಬ್ಬರ ಸಂದರ್ಶನವಾಯಿತು. ಮುಂದೆ ಕೆಲ ನಿಮಿಷಗಳಲ್ಲಿ ಖಾನನು ಸತ್ತೆ ಸತ್ತೆನೆಂದೊರಲಹತ್ತಿದನು. ಭೋಯಿಗಳೂ, ಅಂಗರಕ್ಷಕರೂ ಒಳ ನುಗ್ಗಿ, ಖಾನನನ್ನು ಮೇಣೆಯಲ್ಲಿ ಹಾಕಿಕೊಂಡು ಓಡಹತ್ತಿದರು. ಆಗ ಶಿವಾಜಿಯ ಕಡೆಯವರು ಅವರ ಬೆನ್ನು ಹತ್ತಿ ಅವರನ್ನು ನುಚ್ಚುನೂರಾಗಿ ಕಡಿದರು. ಇದರಿಂದ ಖಾನನ ಸೈನ್ಯದಲ್ಲಿ ಹಾಹಾಕಾರವೆದ್ದು ಕಾಲ್ತೆಗೆಯುವಂತಾಯಿತು ಬಳಿಕ ಖಾನನ ಪಕ್ಷದಲ್ಲಿದ್ದ ಪನ್ಹಾಳಗಡವನ್ನು ಮುತ್ತಿ ಶತ್ರುವಶದಿಂದ ಪಾರು ಮಾಡಿ, ವಿಶಾಲಗಡಕ್ಕೆ ಶಿವಾಜಿಯೂ ಅವನ ಕಡೆಯವರೂ ತಲುಪಿದರು. ಈ ಕಾಲಕ್ಕೆ ಶಿವಾಜಿಯ ಸ್ವಾಮಿನಿಷ್ಠನಾದ ಬಾಜಿ ಪ್ರಭು ಎಂಬವನು ನಿಕರದಿಂದ ಕಾದಿದನಲ್ಲದೆ, ಸ್ವಾಮಿಕಾರ್ಯಕ್ಕಾಗಿ ತನ್ನ ಪ್ರಾಣವನ್ನು ಕೊಟ್ಟನು.

ಶಹಾಜಿಯು ೧೬೬೪ರಲ್ಲಿ ಬೇಟೆಗೆ ಹೋದಾಗ ಮರಣ ಹೊಂದಿದನು. ನಂತರ ಶಿವಾಜಿಯು ರಾಜಾ ಎಂಬ ಬಿರುದನ್ನು ಧರಿಸಿದನು. ಮತ್ತು ತನ್ನ ಸ್ವಂತ ಹೆಸರಿನ ನಾಣ್ಯಗಳನ್ನು ಬಳಕೆಯಲ್ಲಿ ತಂದನು.

ವಿಜಾಪುರದ ಅರಸರ ಸಂಗಡ ಶಿವಾಜಿಯ ಯುದ್ಧವು ಸಾಗಿದ್ದ ಕಾಲ

ದಲ್ಲಿ ಔರಂಗಜೇಬನ ಸಮ್ಮತಿಯಿಂದ ಶಾಹಿಸ್ತಖಾನನೆಂಬವನು ಶಿವಾಜಿಯ ಮೇಲೆ ಏರಿ ಬಂದನು. ಖಾನನು ಪುಣೆಯ ಪಟ್ಟಣವನ್ನು ವಶಪಡಿಸಿಕೊಂಡು ಅಲ್ಲಿಯ ಅರಮನೆಯೊಳಗೆ ನುಗ್ಗಿ, ಅದರಲ್ಲಿ ಇರುತ್ತಿದ್ದನು. ಶಿವಾಜಿಯು ಒಂದು ದಿನ ರಾತ್ರಿ ಶಾಹಿಸ್ತಖಾನನ ಮೇಲೆ ಏರಿ ಬರಲು, ಅವನ ಮಗನು ಬಲಿ ಬಿದ್ದನು. ಶಿವಾಜಿಯು ಖಾನನನ್ನು ಪಾರುಪತ್ಯ ಮಾಡುವಷ್ಟರಲ್ಲಿ ಅವನು ಮಾಡಿಯ ಕಿಡಕಿಯೊಳಗಿಂದ ತಲೆಯುಳಿಸಿಕೊಂಡು ಹಾರಿದನು. ಈ ಗದ್ದಲದಲ್ಲಿ ಅವನ ಬೆರಳುಗಳು ಮಾತ್ರ ಕತ್ತರಿಸಿದವು. ಮುಂದೆ ಶಾಹಿಸ್ತಖಾನನು ಭೀತನಾಗಿ ದಿಲ್ಲಿಯ ದಾರಿ ಹಿಡಿದನು. ಶಾಹಿಸ್ತಖಾನನನ್ನು ಓಡಿಸಿದ್ದರಿಂದ ಶಿವಾಜಿಯ ಮಹತ್ವವು ದಿನೇ ದಿನೇ ಬೆಳೆಯುತ್ತಿತ್ತು.

ಮುಂದೆ ಶಿವಾಜಿಯು ಕ್ರಿ. ಶ. ೧೬೬೪ರಲ್ಲಿ ಸುರತವನ್ನು ಸುಲಿದನು. ಇದರಲ್ಲಿ ಶಿವಾಜಿಗೆ ಒಂದು ಕೋಟಿ ರೂಪಾಯಿಗಳ ಲಾಭವಾಯಿತು. ಇದನ್ನು ಕೇಳಿ ಮೊಗಲ ಬಾದಶಹನಾದ ಔರಂಗಜೇಬನು ಕಿಡಿಕಿಡಿಯಾದನು. ಶಿವಾಜಿಯ ಪಾರುಪತ್ಯಕ್ಕಾಗಿ ಔರಂಗಜೇಬನು ಕ್ರಿ. ಶ. ೧೬೬೫ರಲ್ಲಿ ಜಯಸಿಂಗನೆಂಬ ರಜಪೂತ ಸರದಾರನನ್ನೂ ದಿಲೇರಖಾನನೆಂಬ ಮುಸಲ್ಮಾನೀಯನನ್ನೂ ದೊಡ್ಡ ಸೈನ್ಯದೊಂದಿಗೆ ಕೊಟ್ಟು ಕಳುಹಿದನು. ಇವರಿಬ್ಬರು ಸರದಾರರು ಒಳ್ಳೇ ಶೂರರೂ, ಅನುಭವಪೂರ್ಣರೂ ಆಗಿದ್ದರು. ಜಯಸಿಂಹನು ಸಿಂಹಗಡಕ್ಕೂ, ದಿಲೇರಖಾನನು ಪುರಂದರಗಡಕ್ಕೂ ಮುತ್ತಿಗೆ ಹಾಕಿಕೊಂಡು ಕುಳಿತರು. ಶಿವಾಜಿಯು ತನ್ನ ಆಟ ಸಾಗದೆಂದು ತಿಳಿದು ಒಪ್ಪಂದಕ್ಕೆ ಸಿದ್ಧನಾದನು. ಶಿವಾಜಿಯು ಮೊಗಲರ ಮಾಂಡಲಿಕನಾಗಿ ಆಳಬೇಕೆಂದೂ, ಆದ್ದರಿಂದ ಕೇವಲ ೧೨ ಕೋಟೆಗಳನ್ನು ತನ್ನ ವಶಕ್ಕೆ ಇಟ್ಟುಕೊಂಡು, ಉಳಿದವುಗಳನ್ನು ಮೊಗಲ ಬಾದಶಹನಿಗೆ ಒಪ್ಪಿಸಬೇಕೆಂದೂ, ಶಿವಾಜಿಯ ಮಗನಾದ ಸಂಭಾಜಿಯು ಮೊಗಲ ಸೈನ್ಯದಲ್ಲಿ ಚಾಕರಿಗೆ ಸೇರಬೇಕೆಂದೂ, ಮೊಗಲರು ವಿಜಾಪುರದ ಅರಸನ ಸಂಗಡ ನಡೆಸುವ ಯುದ್ಧಗಳಲ್ಲಿ ಶಿವಾಜಿಯು ಮೊಗಲರಿಗೆ ಸಹಾಯ ಮಾಡಬೇಕೆಂದೂ ಕರಾರುಗಳಾದವು. ಇದೇ ಇತಿಹಾಸ ಪ್ರಸಿದ್ಧವಾದ ಪುರಂದರದ ಒಪ್ಪಂದವು (೧೬೬೫).

ನಂತರ ವಿಜಾಪುರದ ಕೂಡ ಮೊಗಲರು ನಡೆಸಿದ ಯುದ್ಧಗಳಲ್ಲಿ

ಶಿವಾಜಿಯು ಮಿಗಿಲಾದ ಪರಾಕ್ರಮ ತೋರಿದ್ದರಿಂದ, ಮೊಗಲ ಬಾದಶಹನಾದ ಔರಂಗಜೇಬನು ಶಿವಾಜಿಯನ್ನು ಸಂದರ್ಶಿಸಲು ಅಪೇಕ್ಷಿಸಿ, ತನ್ನ ಅಪೇಕ್ಷೆಯು ಶಿವಾಜಿಗೆ ತಲುಪುವಂತೆ ಮಾಡಿದನು. ಜಯಸಿಂಹನು ಒಳ್ಳೇ ಬುದ್ಧಿವಂತಿಕೆಯಿಂದ ಔರಂಗಜೇಬನ ಭೆಟ್ಟಿಗೆ ಹೋಗಲು ಶಿವಾಜಿಯ ಮನವೊಲಿಸಿದನು. ಅದರಂತೆ ಕ್ರಿ. ಶ. ೧೬೬೬ರಲ್ಲಿ ಶಿವಾಜಿಯು ಆಗ್ರಾಪಟ್ಟಣಕ್ಕೆ ಹೋದದ್ದಾಯಿತು. ಸಂಗಡ ಮಗನಾದ ಸಂಭಾಜಿಯೂ ಇದ್ದನು. ಔರಂಗಜೇಬನು ತನ್ನ ೫೦ನೆಯ ವರ್ಧಂತ್ಯುತ್ಸವದ ದಿವಸ ಶಿವಾಜಿಯ ಭೆಟ್ಟಿಯನ್ನು ತಕ್ಕೊಂಡನು. ಆಗ ಇವನಿಗೆ ದರಬಾರದಲ್ಲಿ ಅಪಮಾನವಾಯಿತು. ಔರಂಗಜೇಬನು ಇವನನ್ನು ಆಗ್ರಾ ಕಿಲ್ಲೆಯಲ್ಲಿ ನಜರಬಂದಿಯನ್ನಾಗಿ ಇಟ್ಟನು. ಮುಂದೆ ಶಿವಾಜಿಯು ಒಂದು ಯುಕ್ತಿಯನ್ನು ಹೂಡಿ, ಬಂದಿವಾಸದಿಂದ ಪಾರಾಗಿ ಬಂದನು. ಉತ್ತರ ಹಿಂದುಸ್ತಾನದಲ್ಲಿ ಎರಡು ವರ್ಷಗಳ ಪರ್ಯಂತ ಬೈರಾಗಿಗಳ ವೇಷದಲ್ಲಿ ಸುತ್ತಾಡಿ ನಂತರ ಎಲ್ಲರೂ ಸುರಕ್ಷಿತವಾಗಿ ಮಹಾರಾಷ್ಟ್ರಕ್ಕೆ ಬಂದು ತಲುಪಿದರು.

ಪಾರಾಗಿ ಬಂದನಂತರ ಶಿವಾಜಿಯು ಮೊಗಲರ ಕೂಡ ಮತ್ತೆ ಯುದ್ಧ ಹೂಡಿದನು. ಈ ಅವಧಿಯಲ್ಲಿ ಜಯಸಿಂಹನು ಮರಣ ಹೊಂದಿದ್ದರಿಂದ ಮೊಗಲರಿಗೆ ಯುದ್ಧವು ಜಡವಾಯಿತು. ಆದ್ದರಿಂದ ಅವರು ಶಿವಾಜಿಯ ಕೂಡ ಒಪ್ಪಂದ ಮಾಡಿಕೊಂಡು ಶಿವಾಜಿಗೆ 'ರಾಜಾ' ಎಂಬ ಬಿರುದನ್ನು ಕೊಟ್ಟರು. ನಂತರ ವಿಜಾಪುರದ ಅರಸರೂ ಶಿವಾಜಿಯ ಕೂಡ ಒಪ್ಪಂದ ಮಾಡಿಕೊಂಡರು. ಆದರೆ, ಈ ಒಪ್ಪಂದದಲ್ಲಿ ಸಿಂಹಗಡವು ಶಿವಾಜಿಗೆ ಸಿಗದೇ ಹೋಯಿತು. ಆದ್ದರಿಂದ ಶಿವಾಜಿಯು ಈ ಕೋಟೆಯನ್ನು ವಶಪಡಿಸಿಕೊಳ್ಳಲು ತಾನಾಜಿ ಮಾಲಸುರೆಯೆಂಬ ವೀರ ಸರದಾರನಿಗೆ ಅಪ್ಪಣೆ ಕೊಟ್ಟನು. ಈ ಯುದ್ಧದಲ್ಲಿ ತಾನಾಜಿಯು ಮರಣ ಹೊಂದಿದರೂ ಸಿಂಹಗಡವು ಮಾತ್ರ ಶಿವಾಜಿಯ ವಶವಾಯಿತು.

ಈ ಸಂದರ್ಭದಲ್ಲಿ ಮೊಗಲರ ವತಿಯಿಂದ ಶಿವಾಜಿಯ ಮೇಲೆ ಸಾಗಿಬರುತ್ತಿದ್ದ ಸರದಾರರ ಪರಾಭವವಾಯಿತು. ಆದ್ದರಿಂದ ಮೊಗಲರು ಶಿವಾಜಿಯನ್ನು ಸ್ವತಂತ್ರ ಅರಸನೆಂದು ಒಪ್ಪಿಕೊಂಡರು. ಮತ್ತು ಸಂಭಾಜಿಯು

ಮೊಗಲರ ಸೈನ್ಯದಲ್ಲಿ ಐದುಸಾವಿರ ಕುದುರೆಗಳ ದಳನಾಯಕನಾಗಿ [illegible] ಕಪಡೆದಿದ್ದನು. ಮೊಗಲರನ್ನು ಗೆಲ್ಲುವುದು [illegible] ಯು ಬಿಜಾಪುರದತ್ತ ತನ್ನ ಲಕ್ಷ್ಯವನ್ನು ಹರಿಸಿದನು. [illegible] ಹೊಕ್ಕು ಹುಬ್ಬಳ್ಳಿಯನ್ನು ಸುಲಿದನು. (೧೬೭೩) [illegible] ತ್ತು ಬಿಜಾಪುರದ ಅರಸನು [illegible]

ಈ ರೀತಿ ಅದುವರೆಗೆ [illegible] ಮರಾಠಾ ಜನರಲ್ಲಿ ಆತ್ಮಗೌರವ [illegible] ಅದೆ ಒಂದು ಸ್ವತಂತ್ರ ರಾಜ್ಯ [illegible] ಇದ್ದಲ್ಲದೆ [illegible] ದಿಸುವವರು [illegible] ಪೇಶ್ವೆ [illegible] ಊನೆಯ [illegible] ಕಾಶೀಕ್ಷೇತ್ರದ ಪಂಡಿತ ಗಾಗಾಭಟ್ಟ [illegible] ದನು. ಆಗಿನ ಕಾಲಕ್ಕೆ [illegible] ಸಮಾರಂಭಕ್ಕೆ ಬಂದು [illegible] ಬ್ರಾಹ್ಮಣ [illegible] ಹೋಮ ಹವನ ಸಂಪನ್ನ [illegible] ಧರಿಸಿದ್ದಲ್ಲದೆ [illegible] ಶಿವಾಜಿ ಮಹಾರಾಜನೆಂದು ಘೋಷಿಸಿಕೊಂಡನು. [illegible] ಸೂತ್ರಗಳನ್ನು ನಡೆಸುವುದಕ್ಕೆ ಅಷ್ಟ ಪ್ರಧಾನ ಮಂಡಲವನ್ನು [illegible]

ಸ್ವತಂತ್ರ ಮರಾಠಾ ರಾಜ್ಯ ಸ್ಥಾಪಿಸಿ, ಶಿವಾಜಿಯು ಸಿಂಹಾಸನವನ್ನು ಏರು ಯುತ್ತಿರಲು ಕರ್ನಾಟಕದ ಮೇಲೆ ದಾಳಿ ಮಾಡಬೇಕೆಂಬ ಹಂಬಲವು ಹುಟ್ಟಿತು. ತೀರ ದಕ್ಷಿಣಕ್ಕಿದ್ದ ತಂಜಾವರದಲ್ಲಿ ಶಿವಾಜಿಯ ಮಲಸಹೋದರನಾದ ವೆಂಕೋಜಿಯು ರಾಜ್ಯಭಾರ ನಡೆಸುತ್ತಿದ್ದನು. ಶಿವಾಜಿಯು ಸ್ವತಂತ್ರ ರಾಜ್ಯ ಸ್ಥಾಪಿಸಿದ್ದನ್ನು ಕಂಡು, ಇವನನ್ನು ಹುರಿದುಂಬಿಸಲು, ಕೈ ಕೆಳಗಿನವರು ಹವಣಿಸಿದರು. ಆದರೆ ಅದಕ್ಕೆ ಯಶಸ್ಸಾಗಲಿಲ್ಲ. ವೆಂಕೋಜಿಯು ಬಿಜಾಪುರದ ಅರಸರ ಆಶ್ರಯವನ್ನು ಬಿಡದಾದನು. ಇದನ್ನು ಕಂಡು, ವೆಂಕೋಜಿಯ ಸರದಾರರು ಶಿವಾಜಿಯನ್ನು ಬಿನ್ನವಿಸಿಕೊಂಡರು. ಕ್ರಿ. ಶ. ೧೬೭೬ ರಲ್ಲಿ

ಶಿವಾಜಿಯು ದಕ್ಷಿಣಕ್ಕೆ ದಾಡು ಮಾಡಲು ಅನುವಾದನು. ಮೊದಲು ಗೋವಳಕೊಂಡದ ಅರಸನಿಂದ ಕಪ್ಪಸ್ವಿತ್ತಿ, ಜಿಂಜಿ ಮತ್ತು ವೆಲ್ಲೋರ ಕೋಟೆಗಳನ್ನು ವಶಪಡಿಸಿಕೊಂಡನು. ಈ ಸಂಗತಿಗಳು ನಡೆದು ಹೋದ ಬಳಿಕ, ತನಗೆ ತನ್ನ ಪಿತ್ರಾರ್ಜಿತ ರಾಜ್ಯದಲ್ಲಿ ಬರಬೇಕಾದ ಅರ್ಧ ಭಾಗವನ್ನು ಸಲ್ಲಿಸಬೇಕೆಂದು ಶಿವಾಜಿಯು ಮಲತಮ್ಮನಾದ ವೆಂಕೋಜಿಯನ್ನು ಕೇಳ ಹತ್ತಿದನು. ನಂತರ ಅಣ್ಣ ತಮ್ಮಂದಿರಲ್ಲಿ ಒಪ್ಪಂದವಾಗಲು, ಶಿವಾಜಿಯು ೧೬೭೮ರಲ್ಲಿ ರಾಯಗಡಕ್ಕೆ ಮರಳಿ ಬಂದನು. ಈ ವೇಳೆಗೆ ಮೊಗಲರು ವಿಜಾಪುರವನ್ನು ಮುತ್ತಿ ವಶಪಡಿಸಿಕೊಳ್ಳಲು ಇಚ್ಛಿಸುತ್ತಿದ್ದುದರಿಂದ ಶಿವಾಜಿಯು ವಿಜಾಪುರದ ಅರಸರಿಗೆ ಸಹಾಯ ಮಾಡಿದನು. ಈ ಎಲ್ಲ ಯುದ್ಧಗಳಲ್ಲಿ ಅವನ ಪ್ರಕೃತಿಯು ಕೆಡಹತ್ತಿತು ಕ್ರಿ. ಶ. ೧೬೮೦ರಲ್ಲಿ ಕಾಲಿಗೆ ಮಂಡಿಯಾದ ನೆವವಾಗಿ ಶಿವಾಜಿಯು ಇಹಲೋಕ ಯಾತ್ರೆಯನ್ನು ಮುಗಿಸಿದನು. ಆ ವೇಳೆಗೆ ಅವನು ೫೦ ವರ್ಷದವನಿದ್ದನು.

ಶಿವಾಜಿಯ ಆಡಳಿತೆಯ ಕ್ರಮ:

ಇವನ ರಾಜ್ಯದಲ್ಲಿ ಒಟ್ಟಾರೆ ೧೪ ಸುಭೆಗಳಿದ್ದವು. ನೆರೆಹೊರೆಯ ಪ್ರದೇಶಗಳಲ್ಲಿ ರಾಜ್ಯ ನಡೆಸುತ್ತಿದ್ದ ಮೊಗಲ ಮುಂತಾದವರು ಇವನಿಗೆ ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಸುಭೆಗಳು ಮಹಲುಗಳಿಂದ ಕೂಡಿದ್ದವು. ಗ್ರಾಮಗಳಲ್ಲಿ ಪಂಚಾಯತಿಗಳಿದ್ದು, ನ್ಯಾಯದಾನವು ಅವುಗಳ ಮುಖ್ಯ ಕೆಲಸವಾಗಿದ್ದಿತು. ಕಂದಾಯ ವಸೂಲಿಯು ಸಂಬಳದ ಅಧಿಕಾರಿಗಳ ಶ್ರೇಣಿಯೊಂದರಿಂದ ನಡೆಯಿತು. ಆಡಳಿತೆಯ ಅಧಿಕಾರಿಗಳ ಶ್ರೇಣಿಯಲ್ಲಿ ಎಲ್ಲಕ್ಕೂ ಉಚ್ಚ ಮಟ್ಟದಲ್ಲಿ ಅಷ್ಟಪ್ರಧಾನರಿರುತ್ತಿದ್ದರು. ಇವರು ಅರಸನಿಂದ ನೇಮಕ ಹೊಂದಿದರು. ಇವರೆಲ್ಲರೂ ಸಂಬಳದ ಅಧಿಕಾರಿಗಳೇ ಇದ್ದರು. ಒಬ್ಬೊಬ್ಬ ಮಂತ್ರಿಗೆ ಮುತಾಲಿಕರಿದ್ದರು. ಮುತಾಲಿಕರು ಮಂತ್ರಿಯ ಗೈರಹಾಜರಿಯಲ್ಲಿ ಎಲ್ಲ ಕೆಲಸಗಳನ್ನು ತಾವೇ ನೋಡಿಕೊಂಡರು. ರಾಜ್ಯದ ಆಡಳಿತೆಯ ವಿಷಯವಾಗಿ ಮಂತ್ರಿಗಳೆಲ್ಲರೂ ರಾಜನಿಗೆ ಹೊಣೆಗಾರರಾಗಿದ್ದರು. ಈ ರೀತಿ, ಶಿವಾಜಿಯು ಒಂದು ಬಗೆಯ ನಿಯಂತ್ರಿತ ರಾಜಸತ್ತೆಯನ್ನು ಬಳಕೆಯಲ್ಲಿ ತಂದನೆಂದು ಹೇಳಬಹುದು. ಪಂತ ಪ್ರಧಾನ(ಪೇಶ್ವೆ)

ಪಂತ ಅಮಾತ್ಯ, ಪಂತ ಸಚಿವ, ಮಂತ್ರಿ, ಸೇನಾಪತಿ, ದಬೀರ, ನ್ಯಾಯಾಧೀಶ, ಪಂಡಿತ ಮುಂತಾದವರು ಅಷ್ಟಪ್ರಧಾನ ಮಂಡಲವೆನಿಸಿದರು. ಶಿವಾಜಿಯ ಕಾಲದಲ್ಲಿ ಮೇಲೆ ಹೇಳಿದ ಪದಗಳನ್ನು ಅನುಕ್ರಮವಾಗಿ, ಮೋರೋ ತ್ರಿಯಂಬಕ ಪಿಂಗಳೇ, ನೀಲೋ ಸೋನದೇವ, ಅಣ್ಣಾಜಿ ದತ್ತೋ, ದತ್ತಾಜಿ ಬೋಕಿಲ, ಹಂಬೀರರಾವ ಮೋಹಿತೇ, ಸುಮಂತರಾವ, ನಿರಾಜಿ ರಾವಜಿ, ಮತ್ತು ರಘುನಾಥಪಂತ, ಎಂಬ ಮಹನೀಯರು ಅಲಂಕರಿಸಿದರು.

ಶಿವಾಜಿಯ ಸೈನ್ಯದಲ್ಲಿ ಕಾಲಾಳುಗಳು, ಕುದುರೆಯ ಸ್ವಾರರೆಂಬ ಭೇದಗಳಿದ್ದವು. ಕಾಲಾಳುಗಳಲ್ಲಿ ನಾಯಕ, ಹವಾಲದಾರ, ಜುಮಲೇದಾರ ಮುಂತಾದ ಅಧಿಕಾರಿಗಳಿದ್ದರು. ಸೇನಾಪತಿ ಅಥವಾ ಸರನೌಬತ ಎಂಬುವನು ಸೈನ್ಯದಲ್ಲಿ ಎಲ್ಲಕ್ಕೂ ಮೇಲಿನ ಅಧಿಕಾರಿಯೆಂಬುದನ್ನು ಹೇಳಬೇಕಾಗಿಲ್ಲ. ಸ್ವಾರರಲ್ಲಿ ಬಾರಗೀರರೆಂದೂ, ಶಿಲೇದಾರರೆಂದೂ ಭೇದಗಳಿದ್ದವು. ಬಾರಗೀರರು ಸಂಬಳದ ಮೇಲೆ ದುಡಿಯುವವರು. ಇವರು ಸರಕಾರದ ಕುದುರೆ ಮತ್ತು ಆಯುಧಗಳನ್ನು ಉಪಯೋಗಿಸುವರು. ಶಿಲೇದಾರರು ಸರಕಾರದಿಂದ ನೇಮಣೂಕವನ್ನು ಮಾತ್ರ ಪಡೆಯುತ್ತಿದ್ದರು. ಸ್ವಂತ ಕುದುರೆಗಳನ್ನೂ ಆಯುಧಗಳನ್ನೂ ಇವರು ಉಪಯೋಗಿಸುವರು. ಶಿವಾಜಿಯ ಹತ್ತರ ಒಂದು ಲಕ್ಷ ಕಾಲಾಳುಗಳೂ, ಐವತ್ತು ಸಾವಿರ ಕುದುರೆ ಸ್ವಾರರೂ ಇದ್ದರು.

ಶಿವಾಜಿಯ ಹಡಗುಪಡೆ:

ಪಶ್ಚಿಮ ಕರಾವಳಿಗೆ ಹೊಂದಿಕೊಂಡ ಸಮುದ್ರ ತೀರದಲ್ಲಿ ಸಿದ್ದಿ ಮಕ್ಕಾ ಯಾತ್ರಿಕರನ್ನು ಸುಲಿದುಕೊಳ್ಳುವ ಕ್ರಮದಲ್ಲಿ ಶಿವಾಜಿಯ ಕಲ್ಪನೆಯಲ್ಲಿ ಹಡಗುಪಡೆಯು ಒಡಮೂಡಿತೆಂದು ಹೇಳಬಹುದು. ಈಗಿನ ಮುಂಬಯಿ ಪಟ್ಟಣಕ್ಕೆ ಸಮೀಪದಲ್ಲಿ ಆಗಿನ ಕಾಲದಲ್ಲಿ ದಂಡರಾಜಪುರಿ, ಜಂಜೀರಾ ಎಂಬ ಮಿಗಿಲಾದ ಬಂದರಗಳಿದ್ದವು. ಶಿವಾಜಿಯ ಕಾಲಕ್ಕಿಂತ ಪೂರ್ವದಲ್ಲಿ ಅವುಗಳನ್ನು ನೋಡಿಕೊಳ್ಳಲಿಕ್ಕೆ ಯಾಕೂಬಖಾನನೆಂಬವನು ಮೊಗಲರಿಂದ ನೇಮಕ ಹೊಂದಿದ್ದನು. ಆವನು ಮಕ್ಕಾ ಯಾತ್ರಿಕರ ಅನುಕೂಲತೆ,

ಪರದೇಶ ವ್ಯಾಪಾರಗಳ ಮೇಲ್ವಿಚಾರಣೆಗಳಿಗಾಗಿ ಚಿಕ್ಕದೊಂದು ಹಡಗುಗಳ ಗುಂಪನ್ನು ರೂಪಿಸಿದನು. ಶಿವಾಜಿಯ ಕಾಲಕ್ಕೆ ಫತ್ತೇಖಾನನೆಂಬವನು ಇದರ ಮೇಲಧಿಕಾರಿಯಾಗಿದ್ದನು. ಇವನು ಮರಾಠರ ವೈರಿಯಾಗಿದ್ದನು. ಇವನನ್ನು ಹಣಿಯುವ ಉಪಕ್ರಮದಲ್ಲಿ ಶಿವಾಜಿಯು ನೌಕಾಬಲದ ಮಹತ್ವವನ್ನು ಕಂಡುಹಿಡಿದನು. ೫೦೦ ಹೊಸ ಹಡಗುಗಳನ್ನು ನಿರ್ಮಿಸಿ, ಅವುಗಳನ್ನು ಕುಲಾಬಾ ಎಂಬಲ್ಲಿ ಕೇಂದ್ರೀಕರಿಸಿ ಇಟ್ಟದ್ದಾಯಿತು. ಇದರಿಂದ, ಹೊಸತಾಗಿ ಭಾರತದಲ್ಲಿ ನೆಲೆಸಿದ ಇಂಗ್ಲಿಷರಿಗೂ ಪೋರ್ತುಗೀಜರಿಗೂ ಶಿವಾಜಿಯ ಅಂಜಿಕೆ ಹುಟ್ಟಿತು. ಕಾಲಗತಿಯಲ್ಲಿ ಶಿವಾಜಿಯು ದಾಭೋಳ, ಜಿಂಜೀರಾ ಮುಂತಾದ ಬಂದರಗಳನ್ನು ಕೈವಶ ಮಾಡಿಕೊಂಡು, ಅಲ್ಲಿ ಹಡಗುಗಳನ್ನಿಟ್ಟನು. ಹಡಗುಪಡೆಯಲ್ಲಿ ಐದು ಸಾವಿರಕ್ಕೆ ಮೇಲ್ಪಟ್ಟು ನೌಕರರಿದ್ದರು.

ಶಿವಾಜಿಯ ಯೋಗ್ಯತೆ:

ಕಾಣಲಿಕ್ಕೆ ಶಿವಾಜಿಯು ಗಿಡ್ಡನೂ, ತೆಳ್ಳನ್ನ ಗಟ್ಟಿ ದೇಹವುಳ್ಳವನೂ ಆಗಿದ್ದನು. ಆತನ ಮುಖಲಕ್ಷಣವು ಎರಡನೆಯವರನ್ನು ಆಕರ್ಷಿಸದೆ ಬಿಡುತ್ತಿದ್ದಿಲ್ಲ. ಇವನು ಬಹು ತೀವ್ರವಾಗಿ ಓಡುತ್ತಿದ್ದನು. ಒಮ್ಮೊಮ್ಮೆ ಬಹು ಬಿಕ್ಕಟ್ಟಿನ ಪ್ರಸಂಗಗಳಲ್ಲಿ ಹೊಸ ಹಾದಿಯನ್ನು ಹುಡುಕಿ ತೆಗೆಯುತ್ತಿದ್ದನು. ಶಿವಾಜಿಯ ದಿನಚರಿಯು ಬಹು ಸಾದಾ ತರಹದ್ದಿದ್ದಿತು. ಎಷ್ಟೋ ಕಷ್ಟನಷ್ಟಗಳನ್ನು ಇವನು ಅನುಭೋಗಿಸಿದ್ದದರಿಂದ ಇವನಿಗೆ ಜಗತ್ತಿನ ಅನುಭವವು ಚೆನ್ನಾಗಿದ್ದಿತು. ತಾನು ಮಾಡಿಟ್ಟುಕೊಂಡ ನಿಯಮವನ್ನು ಎಷ್ಟು ಕಷ್ಟಪಟ್ಟಾದರೂ ಪಾಲಿಸುತ್ತಿದ್ದನು. ಮತ್ತು ಇತರರು ನಿಯಮಗಳನ್ನು ಪಾಲಿಸುವರೋ ಇಲ್ಲವೋ ಎಂಬುದನ್ನು ಲಕ್ಷ್ಯವಿಟ್ಟು ನೋಡುತ್ತಿದ್ದನು. ನಿಯಮವನ್ನು ಮುರಿದವರಿಗೆ ಉಗ್ರ ಶಾಸನ ಮಾಡಲೂ ಇವನು ಹಿಂಪೆ ಮುಂದೆ ನೋಡಲಿಲ್ಲ. ಸ್ವಧರ್ಮದ ಬಗ್ಗೆ ಇವನಲ್ಲಿ ಅಭಿಮಾನವು ತುಂಬಿಕೊಂಡಿದ್ದರೂ, ಪರಧರ್ಮ ಸಹಿಷ್ಣುತೆಯೂ ಇವನಲ್ಲಿ ನೆಲೆಸಿದ್ದಿತು. ಎಷ್ಟೋ ಜನ ಮುಸಲ್ಮಾನರನ್ನು ತನ್ನಲ್ಲಿ ಇವನು ನೌಕರಿಗೆ ಇಟ್ಟುಕೊಂಡಿದ್ದನು. ಕಾಝಿ ಹೈದರನೆಂಬ ಹೆಸರಿನ ಮುಸಲ್ಮಾನನು ಇವನ ಖಾಸಗಿ ಚಿಟಣೀಸನಾಗಿದ್ದನು. ಬಾವಾ ಯಾಕೂಬ ಎಂಬ ಮುಸಲ್ಮಾನ ಫಕೀರನಿಗೆ ಇವನು

ಇನಾಮು ಹಾಕಿಕೊಟ್ಟಿದ್ದುಂಟು. ಶಿವಾಜಿಯ ಆಚರಣೆಯು ಪವಿತ್ರವಾಗಿದ್ದಿತು. ಅವನಿಗೆ ಓದಲೂ ಬರೆಯಲೂ ಬರುತ್ತಿದ್ದವು. ವಿದ್ವಾಂಸರ ವಾದ ವಿವಾದಗಳು ಇವನ ಮೆಚ್ಚಿಗೆಯ ವಿಷಯಗಳಾಗಿದ್ದವು.

ಮುತ್ಸದ್ದಿತನದಲ್ಲಿ ಇವನು ಯಾರಿಗೂ ಸೋಲಲಿಲ್ಲ. ಸಂಕಟದ ಪ್ರಸಂಗಗಳು ಒದಗಿದಾಗ ಇವನು ಬಹಳ ಕುಶಲತೆಯಿಂದ ಪಾರಾಗುತ್ತಿದ್ದನು. ಹಿಂದುಗಳಲ್ಲಿ ನವಚೈತನ್ಯವನ್ನು ಹುಟ್ಟಿಸಿ ಹಿಂದೂ ರಾಜ್ಯ ಸ್ಥಾಪನೆಮಾಡಿದ್ದು ಇವನ ಮಹತ್ತರ ಕೆಲಸವಾಗಿದೆ. ಈ ಕಾರ್ಯದಲ್ಲಿ ತಾಯಿ ಜೀಜಾಬಾಯಿಯೂ ಗುರು ರಾಮದಾಸಸ್ವಾಮಿಗಳೂ ಇವನಿಗೆ ನೆರವಾದರು. ಎಲ್ಲ ದೃಷ್ಟಿಯಿಂದಲೂ ಛತ್ರಪತಿ ಶ್ರೀಶಿವಾಜಿ ಮಹಾರಾಜರು ಒಬ್ಬ ಲೋಕೋತ್ತರವಾದ ವ್ಯಕ್ತಿಯೆಂಬುದರಲ್ಲಿ ಸಂದೇಹವಿಲ್ಲ.

ಸಂಭಾಜಿಯು:

ಶಿವಾಜಿಯನಂತರ ಸಂಭಾಜಿಯು ಪಟ್ಟವೇರಿದನು. ಶಿವಾಜಿಯ ಮರಣಕಾಲಕ್ಕೆ ಸಂಭಾಜಿಯು ತಂದೆಯಾದ ಶಿವಾಜಿಯಿಂದ ಪನ್ಹಾಳಗಡದಲ್ಲಿ ನಜರಬಂದಿಯಲ್ಲಿಡಲ್ಪಟ್ಟಿದ್ದನು. ತಂದೆ ತೀರಿದ ನಂತರ ಮಲತಮ್ಮನಾದ ರಾಜಾರಾಮನಿಗೆ ಪಟ್ಟಗಟ್ಟುವ ಹೊಂಚು ನಡೆದಿದೆಯೆಂದು ಕೇಳಿ ಬಂಧನದಿಂದ ಮುಕ್ತನಾಗಿ ಹೊಂಚುಗಾರರನ್ನು ಬಂದಿಯಲ್ಲಿರಿಸಿ ಸ್ವತಃ ತಾನೇ ರಾಜ್ಯಾಭಿಷೇಕ ಮಾಡಿಸಿಕೊಂಡನು. ತಂದೆಯಂತೆ ಇವನು ಶೂರನೂ ಸಾಹಸಿಯೂ ಆಗಿದ್ದನು. ಆದರೆ ಮದ್ಯಪಾನದಿಂದ ವ್ಯಸನಾಧೀನನಾಗಿದ್ದನು. ಇವನಿಗೆ ಓದು ಬರಹವೂ ಬರುತ್ತಿದ್ದವು. ತನ್ನನ್ನು ಪದಭ್ರಷ್ಟಮಾಡಲು ಹೊಂಚುಹಾಕಿದವರ ಮೇಲೆ ಸಂಭಾಜಿಯು ಸಿಡಿಸಿಡಿಯಾಗಿ ಅವರನ್ನು ಮನಬಂದಂತೆ ಮರಣ ದಂಡನೆಗೆ ಈಡುಮಾಡಿದನು. ಕೊನೆಗೆ ಕಲುಷ ಎಂಬೋರ್ವ ಕನೋಜ ಬ್ರಾಹ್ಮಣನ ಸಹಾಯದಿಂದ ರಾಜ್ಯಭಾರ ನಡೆಸಹತ್ತಿದನು.

ಈ ವೇಳೆಗೆ ಮೊಗಲ ಬಾದಶಹನಾದ ಔರಂಗಜೇಬನು ದಂಡೆತ್ತಿ ಬಂದಿದ್ದನು. ದಕ್ಷಿಣದ ರಾಜರನ್ನು—ಅದರಲ್ಲಿಯೂ ಮರಾಠರನ್ನು—ಸದೆಬಡೆ

ಯುವದು ಅವನ ಮೂಲ ಉದ್ದೇಶವಾಗಿದ್ದಿತು. ಅದರಂತೆ, ಅವನು ವಿಜಾಪುರ, ಗೋವಳಕೊಂಡಗಳನ್ನು ಮುರಿದು, ಮರಾಠರ ಬೆನ್ನು ಹತ್ತಿದನು. ಇತ್ತ ಸಂಭಾಜಿಯು ಏನನ್ನೂ ಲಕ್ಷಿಸದೆ, ವಿಲಾಸದಲ್ಲಿ ಮಗ್ನನಾಗಿರುತ್ತಿದ್ದನು. ಕೊನೆಗೆ ಸಂಗಮೇಶ್ವರದ ಹತ್ತರ ಸಂಭಾಜಿಯೂ, ಕಲುಷನೂ ಮೊಗಲರಿಂದ ಸೆರೆಹಿಡಿಯಲ್ಪಟ್ಟರು. ನಂತರ ಇಬ್ಬರೂ ಔರಂಗಜೇಬನ ಕಡೆಗೆ ಒಯ್ಯಲ್ಪಟ್ಟರು. ಮುಸಲ್ಮಾನನಾದರೆ ಕ್ಷಮೆ ತೋರಿಸಿ ಬಿಟ್ಟುಬಿಡುವೆನೆಂದು ಔರಂಗಜೇಬನು ಹೇಳಲಾಗಿ, "ನಿನ್ನ ಮಗಳನ್ನು ಮದುವೆ ಮಾಡಿಕೊಟ್ಟರೆ ಮುಸಲ್ಮಾನನಾಗುವೆನೆ"ಂದು ಸಂಭಾಜಿಯು ಉತ್ತರವಿತ್ತನು. ಇದನ್ನು ಕೇಳಿ ಕ್ರುದ್ಧನಾದ ಔರಂಗಜೇಬನು ಸಂಭಾಜಿಗೆ ಮರಣ ದಂಡನೆಯನ್ನು ವಿಧಿಸಿದನು. ನಂತರ ತುಳಜಾಪುರದ ಹತ್ತಿರ ಇವನ ತಲೆ ಹೊಡೆಯಲಾಯಿತು (ಕ್ರಿ. ಶ. ೧೬೮೯) ಕಲೂಷನಿಗೂ ಇದೇ ಗತಿಯಾಯಿತು. ಸಂಭಾಜಿಯ ಕೊಲೆಯಿಂದ ಮನನೊಂದ ಮರಾಠಾ ವೀರರು ಇದರ ಸೇಡು ತೀರಿಸಿ ಕೊಳ್ಳಲು ಉದ್ಯುಕ್ತರಾದರು. ಈ ನಂತರ ಮರಾಠರು ಮೊಗಲರ ಸಂಗಡ ಮೂವತ್ತು ವರ್ಷ ಕಾಲ ಕಾಳಗದಲ್ಲಿ ತೊಡಗಿದರು.

ಸಂಭಾಜಿಯ ಕೊಲೆಯ ವಾರ್ತೆ ತಿಳಿದಾಗ ರಾಯಗಡದಲ್ಲಿ ಸಂಭಾಜಿಯ ಹೆಂಡತಿ ಏಸೂಬಾಯಿ; ಮಗ, ಶಾಹೂ, ಮಲತಮ್ಮನಾದ ರಾಜಾರಾಮ ಇವರೆಲ್ಲರೂ ಕೂಡಿಯೆ ಇದ್ದರು. ಇನ್ನು ಮೊಗಲ ಸರದಾರರು ಸಂಭಾಜಿಯ ಹೆಂಡರು ಮಕ್ಕಳನ್ನು ಸೆರೆಹಿಡಿಯಲು ಪ್ರಯತ್ನಿಸಬಹುದೆಂಬ ಭೀತಿಯಿಂದ ರಾಜಾರಾಮನು ರಾಯಗಡದಿಂದ ಹೊರಬಿದ್ದು ಜಿಂಜಿಯ ಕಡೆಗೆ ಸಾಗಿದನು. ಅಲ್ಲಿಂದ ಆಡಳಿತೆಯ ಕ್ರಮವನ್ನೆಲ್ಲ ಗೊತ್ತುಪಡಿಸಿ ತಾನು ರಾಜ್ಯ ಸೂತ್ರಗಳನ್ನು ನಡೆಸಹತ್ತಿದನು. ಇತ್ತ ಮೊಗಲ ಸೈನಿಕರು ಮರಾಠರ ಕೆಲ್ಲೆಗಳನ್ನು ಒಂದೊಂದಾಗಿ ಆಕ್ರಮಿಸಿ ವಶಪಡಿಸಿಕೊಳ್ಳಹತ್ತಿದರು. ಬಲಾಢ್ಯ ಮೊಗಲ ಸೈನ್ಯದಿದುರು ಮರಾಠರಿಗೆ ಕೈಗೆ ಕೈ ಹತ್ತಿ ಯುದ್ಧ ಮಾಡುವದು ಶಕ್ಯವಿಲ್ಲದ್ದರಿಂದ ಅವರು ಗತ್ತಿನ ಯುದ್ಧವನ್ನು ಕೈಕೊಂಡರು. ಚಪಲರಾದ ಮರಾಠ ಸೈನಿಕರು ಗಿಡ್ಡ ಕುದುರೆಗಳನ್ನು ಏರಿಕೊಂಡು ಮೊಗಲಸೈನ್ಯದ ಮೇಲೆ ಒಮ್ಮಿಂದೊಮ್ಮೆ ಬೀಳುತ್ತಿದ್ದರು. ಮತ್ತು ಅವರನ್ನು ನುಚ್ಚು ನೂರಾಗಿ ಕಡಿಯುತ್ತಿ

ದ್ದರು. ಕಡೆಗೆ ಔರಂಗಜೇಬನು ಬೇಸತ್ತು ಕ್ರಿ. ಶ. ೧೬೯೮ರಲ್ಲಿ ಝುಲ್ಫಿಕರಖಾನನೆಂಬ ಸರದಾರನನ್ನು ದೊಡ್ಡ ದಂಡಿನೊಡನೆ ಜಿಂಜಿಯ ಕೋಟೆಯನ್ನು ಮುತ್ತಲು ಕಳುಹಿದನು. ಮುತ್ತಿಗೆಯು ಏಳು ವರ್ಷ ನಡೆದು, ಕಡೆಗೆ ಔರಂಗಜೇಬನೇ ವಿಜಯಶಾಲಿಯಾದನು.

ಇತ್ತ ರಾಜಾರಾಮನು ಸಾತಾರೆಗೆ ಬಂದು, ಹೊಸ ಮಂತ್ರಿಗಳನ್ನು ನೇಮಿಸಿ, ರಾಜ್ಯಭಾರ ಪ್ರಾರಂಭಿಸಿದನು. ಜೊತೆಗೆ ಪರರಾಯರ ರಾಜ್ಯಗಳಲ್ಲಿ ಚೌಥಾಯಿ ಸರದೇಶಮುಖಿಗಳ ವಸೂಲಿಯು ಸಾಗಿತು. ಈ ರೀತಿ ಉತ್ತರದಲ್ಲಿಯ ಹಾಳಿ ಪ್ರಾಂತಗಳನ್ನು ವಶಪಡಿಸಿಕೊಂಡನು. ಈ ಎಲ್ಲ ಉಪಕ್ರಮಗಳಲ್ಲಿ ಅವನಿಗೆ ಶರೀರಾಯಾಸವು ಹೆಚ್ಚಾಯಿತು. ಮರಳಿ ಸಿಂಹಗಡಕ್ಕೆ ಬಂದ ನಂತರ ಕ್ರಿ. ಶ. ೧೭೦೦ರಲ್ಲಿ ಮರಣ ಹೊಂದಿದನು. ಮರಾಠಾ ರಾಜ್ಯದ ಮೇಲೆ ಮಹಾಸಂಕಟ ಬಂದಾಗ, ರಾಜಾರಾಮನು ಒಳ್ಳೆ ಚಾಣಾಕ್ಷತನದಿಂದ ರಾಜ್ಯವನ್ನು ಬದುಕಿಸಿದನು. ಇವನಿಗೆ ಇಬ್ಬರು ಹೆಂಡಿರೂ ಇಬ್ಬರು ಮಕ್ಕಳೂ ಇದ್ದರು. ಹಿರಿಯ ಹೆಂಡತಿಯಾದ ತಾರಾಬಾಯಿಯು ಕಾಲಗತಿಯಲ್ಲಿ ಕೊಲ್ಹಾಪುರದಲ್ಲಿ ಬೇರೊಂದು ರಾಜ್ಯವನ್ನು ಸ್ಥಾಪಿಸಿದಳು.

ರಾಜಾರಾಮನ ಮರಣದ ನಂತರ ಅವನ ಮಗನಾದ ಎನೆಯ ಶಿವಾಜಿಯು ಸಾತಾರೆಯಲ್ಲಿ ಪಟ್ಟವೇರಿದನು. ಇದು ರಾಜಾರಾಮನ ಹಿರಿಯ ಹೆಂಡತಿಯಾದ ತಾರಾಬಾಯಿಯ ಅಪೇಕ್ಷೆಗೆ ಅನುಕೂಲವಾಗಿತ್ತು. ಮೊಗಲರ ಕೂಡ ಮರಾಠರ ಹೋರಾಟವು ಸತತವಾಗಿ ಸಾಗಿತ್ತು. ಮೊಗಲರು ಒಂದು ಕೋಟೆಯನ್ನು ಗೆದ್ದು ಅಲ್ಲಿ ಕಾಲೂರುವಷ್ಟರಲ್ಲಿ ಮರಾಠರು ಅದನ್ನು ಮರಳಿ ಗೆದ್ದುಕೊಂಡರು. ಹೀಗೆ ಮರಾಠರು ಏಳು ಕೆರೆಯ ನೀರು ಕುಡಿಸಿದರೆಂದರೂ ಸಾಗುವದು. ಎಷ್ಟು ಕಷ್ಟಬಟ್ಟರೂ ಕೈಸಾಗದೆ, ಔರಂಗಜೇಬನು ಅಹಮ್ಮದನಗರಕ್ಕೆ ಬಂದನು. ಅಲ್ಲಿಯೆ ಕ್ರಿ. ಶ. ೧೭೦೭ರಲ್ಲಿ ತೀರಿಕೊಂಡನೆಂಬುದನ್ನು ನಾವು ಅರಿತಿದ್ದೇವೆ.

ಔರಂಗಜೇಬನ ಮರಣದ ನಂತರ ಸಂಭಾಜಿಯ ಮಗನಾದ ಶಾಹೂನ ಬಿಡುಗಡೆಯಾಯಿತು. ನಂತರ ಅವನು ದಕ್ಷಿಣದ ಕಡೆಗೆ ಬಂದು ತನ್ನ

ರಾಜ್ಯವನ್ನು ಕೈಯಲ್ಲಿ ತೆಗೆದುಕೊಳ್ಳಲು ಅಪೇಕ್ಷೆಪಟ್ಟನು. ಅದರಂತೆ ತಾರಾಬಾಯಿಗೆ ಒಂದು ಪತ್ರವನ್ನು ಬರೆದನು. ಈ ಮಾತು ತಾರಾಬಾಯಿಯ ಮನಸ್ಸಿಗೆ ಬರಲಿಲ್ಲ. ಅವಳು ದೊಡ್ಡ ಸೈನ್ಯವನ್ನು ಕಳುಹಿ ಶಾಹೂನ ಬರುವಿಕೆಯನ್ನು ತಡೆಯಲು ಆಜ್ಞಾಪಿಸಿದಳು. ಆದರೆ, ತಾರಾಬಾಯಿಯ ಸೈನ್ಯವು ಸೋತದ್ದರಿಂದ ಶಾಹೂನು ಸಾತಾರೆಯಲ್ಲಿ ಪಟ್ಟಕ್ಕೆ ಕುಳಿತನು (ಕ್ರಿ. ಶ. ೧೭೦೮). ಆದರೆ, ತಾರಾಬಾಯಿಯ ಕಡೆಯವರು ತೀವ್ರವಾಗಿ ವಿರೋಧಿಸ ಹತ್ತಿದ್ದರಿಂದ, ಜನರೊಳಗೆ ಯಾದವೀ ಕಲಹವೇ ಪ್ರಾರಂಭವಾಯಿತೆನ್ನಬಹುದು. ಕಡೆಗೆ ತಾರಾಬಾಯಿಯು ಕೊಲ್ಹಾಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಳು. ಈ ಯುದ್ಧಗಳಲ್ಲಿ ಶಾಹೂನಿಗೆ ಬಾಳಾಜಿ ವಿಶ್ವನಾಥ ಭಟ್ಟ ಎಂಬವನಿಂದ ಬಹಳ ಸಹಾಯ ಸಿಕ್ಕಿತು.

ಬಾಳಾಜಿ ವಿಶ್ವನಾಥ ಭಟ್ಟ:

ಕೊಂಕಣದಲ್ಲಿಯ ಶ್ರೀವರ್ಧನ ಗ್ರಾಮದ ದೇಶಮುಖ ಮನೆತನದಲ್ಲಿ ಇವನು ಜನ್ಮಿಸಿದನು. ಕೆಲ ಕಾರಣಗಳಿಂದ ದೇಶಮುಖಿಯ ಹಕ್ಕು ನಿಂತು ಹೋದಮೇಲೆ ಬಾಳಾಜಿ ವಿಶ್ವನಾಥ ಭಟ್ಟನು ಘಟ್ಟದ ಮೇಲೆ ಬಂದು ನೌಕರಿ ಪತ್ಕರಿಸಿದನು. ಸ್ವಂತ ಗುಣಗಳಿಂದ ಮೇಲಕ್ಕೇರುತ್ತ ಸಾಗಿ, ಪುಣೆ ಮತ್ತು ದೌಲತ್ತಾಬಾದಗಳ ನಡುವಿನ ಪ್ರದೇಶದ ದೇಶಮುಖಿಯನ್ನು ಸಂಪಾದಿಸಿದನು. ಬರಬರುತ್ತ ಅವನಿಗೆ ಮೇಲ್ತರಗತಿಯ ಸರದಾರರ ಪರಿಚಯವಾಯಿತು.

ಕ್ರಿ. ಶ. ೧೭೦೮ರಲ್ಲಿ ಧನಾಜಿ ಜಾಧವ ಎಂಬ ಸರದಾರನು ಮರಣ ಹೊಂದಲು ಅವನ ಜಹಗೀರಿನ ಮೇಲ್ವಿಚಾರಣೆಯ ಕೆಲಸವನ್ನು ಸಾತಾರೆಯ ರಾಜನಾದ ಶಾಹೂನು, ಬಾಳಾಜಿ ವಿಶ್ವನಾಥ ಭಟ್ಟನಿಗೆ ಕೊಟ್ಟನು. ಇದು ಧನಾಜಿಯ ಮಗನಿಗೆ ಸರಿಬರದ್ದರಿಂದ ಅವನು, ತಾರಾಬಾಯಿಯನ್ನು ಕೂಡಿಕೊಂಡನು. ಈ ತರನಾಗಿ ಬಂದ ಬಿಕ್ಕಟ್ಟನ್ನು ಚತುರೋಪಾಯಗಳಿಂದ ದೂರ ಮಾಡಿ ಶಾಹೂನ ಪಕ್ಷವನ್ನು ಬಲಗೊಳಿಸಿದ್ದರಿಂದ ಮತ್ತು ಕಾನ್ಹೋಜಿ ಆಂಗ್ರೆ ಎಂಬ ಹಡಗುಪಡೆಯ ಮುಖ್ಯಸ್ಥನು ಹೂಡಿದ ಬಂಡನ್ನು ಮುರಿದದ್ದ

ದಿಂದ ಶಾಹೂನು ಇವನನ್ನು ಪೇಷ್ವೆ ಅಥವಾ ಮಂತ್ರಿ ಪ್ರಧಾನನನ್ನಾಗಿ ಮಾಡಿ ದನು. (೧೭೧೩)

ಈ ಕಾಲಕ್ಕೆ ಕೊಲ್ಹಾಪುರದಲ್ಲಿಯ [illegible] ಸಂಗ ರಾಮದ ವಿನಾಯಕನನ್ನು [illegible] ಹೆಂಡತಿಯು ದಕ್ಷಿಣದ [illegible] ದಿವಾನಗಿರಿಯು ಮಾಡಿದನು. ಆಗ [illegible] ಬಾಯಿಗೆ [illegible] ಮರಣ ಹೊಂದಿದನು. [illegible] ಯು ಕೊಲ್ಹಾಪುರದ [illegible] ಯವರನರು [illegible] ಯನೆಂದು ಗೊತ್ತಾಯಿತು.

ಕ್ರಿ. ಶ. ೧೭೧೯ರಲ್ಲಿ ಬಾಲಾಜಿ ವಿಶ್ವನಾಥ ಭಟ್ಟನು ದಿಲ್ಲಿಯ ವರೆಗೆ ಹೋಗಿ, ಮೊಗಲ ದರಬಾರದಲ್ಲಿ ಮರಾಠರ ಪರಿಯಿಂದ ಕೆಲವು ಹಕ್ಕುಬಾಬು ಗಳನ್ನು ಸಂಪಾದಿಸಿದನು. ಆಗ ಮೊಗಲ ಬಾದಶಹರು ಮತ್ತು ಸೈಯ್ಯದ ಬಂಧುಗಳೆಂಬವರಲ್ಲಿ ತಂಟಗಳಿದ್ದು, ಮೊಗಲ ಪಟ್ಟವು ತತ್ತರಿಸುವ ಸ್ಥಿತಿಯಲ್ಲಿ ದ್ದಿತು. ಆಗ ಬಾಳಾಜಿಯು ದೊಡ್ಡ ಸೈನ್ಯದೊಂದಿಗೆ ದಿಲ್ಲಿಗೆ ಹೋಗಿ ಸಯ್ಯದ ಬಂಧುಗಳಿಗೆ ಸಹಾಯ ಮಾಡಿದನು. ಪ್ರತ್ಯುಪಕಾರವೆಂದು ಸ್ವರಾಜ್ಯ, ಸರದೇಶಮುಖಿ ಮತ್ತು ಚೌಥಾಯಿಗಳ ಹಕ್ಕುಗಳನ್ನು ಸಯ್ಯದ ಬಂಧುಗಳು ಕೊಡಮಾಡಿದರು. ಈ ಕಾರಣಗಳಿಂದ ಬಾಳಾಜಿಯು ಮರಾಠಾ ರಾಜ್ಯ ದಲ್ಲಿ ಆಳವಾಗಿ ಬೇರುಬಿಟ್ಟನು. ರಾಜಾರಾಮನು ಕೆಲ ಮಟ್ಟಿಗೆ ಕಾರ್ಯ ರೂಪದಲ್ಲಿ ತಂದ ಮರಾಠಾ ಸರಂಜಾಮಿ ಪದ್ಧತಿಯನ್ನು ಬಾಳಾಜಿಯು ಕ್ರಮಬದ್ಧವಾಗಿ ಹಬ್ಬಿಸಿದನು. ಎಷ್ಟೋ ಜನರು ಜಹಗೀರುಗಳನ್ನು ಪಡೆದು ಮರಾಠಾ ರಾಜ್ಯದ ರಕ್ಷಣೆಗೆ ಕಂಕಣಬದ್ಧರಾಗಲು ಬಾಳಾಜಿಯು ವ್ಯವಸ್ಥೆ ಯನ್ನು ಚನ್ನಾಗಿ ಮಾಡಿದನು. ಬಾಳಾಜಿಯು ಬುದ್ಧಿವಂತನೂ ಉತ್ತಮ ಸೇನಾಪತಿಯೂ ಆಹುದು.

ಮೊದಲನೆಯ ಬಾಜೀರಾಯನು: (೧೭೨೦—೧೭೪೦)

ತಂದೆ ತೀರಿದಾಗ ಇವನು ಕೇವಲ ೨೦ ವರ್ಷದ ಪ್ರಾಯದವನಿದ್ದರೂ ಇವನಿಗೆ ಪೇಶ್ವೆಪದವಿಯು ಸಲ್ಲಿತು. ಇವನು ಚಿಕ್ಕಂದಿನಲ್ಲಿಯೇ ಚೆನ್ನಾಗಿ ಶಿಕ್ಷಣ ಪಡೆದಿದ್ದನಾದ್ದರಿಂದ, ಶೂರನೂ, ಧೈರ್ಯಶಾಲಿಯೂ, ಬುದ್ಧಿವಂತನೂ ಆಗಿದ್ದನು. ಇವನಿಗೆ ದೇಶದಲ್ಲಿಯ ಸಾಮಾನ್ಯ ಜನರ ಪರಿಸ್ಥಿತಿ, ನೆರೆಯ ರಾಜರ ಪರಿಸ್ಥಿತಿಗಳು ಚೆನ್ನಾಗಿ ಅರಿಕೆಯಾಗಿದ್ದರಿಂದ, ಮೊಗಲರು ಕ್ಷೀಣವಾಗಹತ್ತಿದ್ದನ್ನು ಕಂಡು, ಅವರನ್ನು ಸಮೂಲ ನಾಶಮಾಡಬೇಕೆಂದು ಯೋಚನೆ ಮಾಡಿದನು. ಮೇಲಾಗಿ, ಒಳನಾಡುಗಳಲ್ಲಿ ಮತ್ತು ಹೊರನಾಡುಗಳಲ್ಲಿ ಇವನ ಶತ್ರುಗಳು ತುಂಬಿಕೊಂಡಿದ್ದರು. ದಕ್ಷಿಣ ಹೈದರಾಬಾದದ ಅರಸನಾದ ನಿಜಾಮು—ಉಲ್—ಮುಲ್ಕನು ಇವನ ಕಡುವೈರಿಯಾಗಿದ್ದನು. ಇವರೆಲ್ಲರನ್ನು ಹಣಿಯುವದು ಇವನ ಆದ್ಯ ಕರ್ತವ್ಯವಾಗಿತ್ತು.

ನಿಜಾಮು—ಉಲ್-ಮುಲ್ಕ ಎಂಬವನು ಕ್ರಿ. ಶ. ೧೭೧೩ರಲ್ಲಿ ಮೊಗಲ ಬಾದಶಹನಿಂದ ದಕ್ಷಿಣದ ಸುಭೆಯ ಸುಭೇದಾರನಾಗಿ ಬಂದನು. ಕ್ರಿ. ಶ. ೧೭೨೪ರಲ್ಲಿ ಔರಂಗಾಬಾದವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ತಾನು ಸ್ವತಂತ್ರನೆಂದು ಸಾರಿದನು ಮೊಗಲ ಬಾದಶಹನಿಂದ ಬಾಳಾಜಿಯು ಚೌಥಾಯಿ ಮತ್ತು ಸರದೇಶಮುಖಿಗಳ ಹಕ್ಕುಗಳನ್ನು ಪಡೆದನೆಂಬ ಮಾತು ಇವನಿಗೆ ಸರಿಬೀಳಲಿಲ್ಲ. ಆದ್ದರಿಂದ ಇವನು ಮರಾಠರನ್ನು ದ್ವೇಷಿಸಹತ್ತಿದನು. ಔರಂಗಾಬಾದದಲ್ಲಿ ತಾನು ಕಾಲೂರುವ ತನಕ ಪೇಶ್ವೆಯರ ಕೂಡ ಗೆಳೆತನದಿಂದ ನಡೆದು ನಂತರ ಮರಾಠರ ಹಕ್ಕುಬಾಧ್ಯತೆಗಳಿಗೆ ಅಡ್ಡಿಯನ್ನೊಡ್ಡಹತ್ತಿದನು. ಮರಾಠರಲ್ಲಿಯ—ಕೊಲ್ಹಾಪುರ, ಸಾತಾರೆಗಳಲ್ಲಿಯ—ತಂಟೆಗಳು ನಿಂದದ ವಿನಾ ಚೌಥಾಯಿಯನ್ನು ವಸೂಲ ಮಾಡಲು ಬರಲಾರದೆಂದು ಸಾರಿದನು,

ಈ ರೀತಿ ಪೇಶ್ವೆ ಮತ್ತು ನಿಜಾಮರ ನಡುವೆ ಕಿಡಿಗಳೇಳಹತ್ತಿದವು. ಕಾಲಗತಿಯಲ್ಲಿ ಪಾಲಖೇಡ ಎಂಬಲ್ಲಿ ಕ್ರಿ. ಶ. ೧೭೨೮ರಲ್ಲಿ ಯುದ್ಧವೆಸಗಿ

ನಿಜಾಮನು ಸೋತು ಒಪ್ಪಂದ ಮಾಡಿಕೊಂಡನು. ಈ ಯುದ್ಧದಲ್ಲಿ ವಿಜಯ ಸಂಪಾದನೆ ಮಾಡಿದ್ದಕ್ಕಾಗಿ ಬಾಜೀರಾಯನ ಕೀರ್ತಿಯು ಎಲ್ಲ ಕಡೆಗೂ ಹಬ್ಬಹತ್ತಿತು.

ಮುಂದೆ ಕೆಲಕಾಲದ ಮೇಲೆ ಬಾಜೀರಾಯನು ಗುಜರಾಥ, ಮಾಳವಗಳ ಮೇಲೆ ದಂಡೆತ್ತಿ ಚೌಥಾಯಿಯನ್ನು ವಸೂಲಿಮಾಡಿದನು. ಬುಂದೇಲಖಂಡದ ಅರಸನಾದ ಛತ್ರಸಾಲನ ಮೇಲೆ ಅಲಹಾಬಾದದ ಸುಭೇದಾರನು ಸಾಗಿ ಬರಲು, ಛತ್ರಸಾಲನು ಬಾಜೀರಾಯನ ಕಡೆಗೆ ಸಹಾಯ ಯಾಚನೆ ಮಾಡಿದನು. ಕೂಡಲೆ ಬಾಜೀರಾಯನು ಧಾವಿಸಿ ಛತ್ರಸಾಲನ ಪಕ್ಷದಿಂದ ಸುಭೇದಾರ ಮಹಮ್ಮದಖಾನನ ಕೂಡ ಹೋರಾಡಿ ಅವನನ್ನು ಹಣಿದನು. ಇದರಿಂದ ಸಂತುಷ್ಟನಾದ ಛತ್ರಸಾಲನು ಒಟ್ಟಾರೆ ೩೩ ಲಕ್ಷ ರೂಪಾಯಿಗಳ ಆದಾಯದ ಜಹಗೀರವನ್ನು ಬಾಜೀರಾಯನಿಗೆ ಕೊಡಮಾಡಿದನು. ಇದೇ ಮೇರೆಗೆ ಜಂಜೀರಾದ ಸಿದ್ದಿಯೂ ಯುದ್ಧದಲ್ಲಿ ಸೋತು ಮರಾಠರ ಮಾಂಡಲಿಕತ್ವವನ್ನು ಒಪ್ಪಿಕೊಳ್ಳಬೇಕಾಯಿತು. ಕ್ರಿ. ಶ. ೧೭೩೭ರಲ್ಲಿ ಬಾಜೀರಾಯನು ಮಾಳವಾ ಪ್ರಾಂತಕ್ಕೆ ಚೌಥಾಯಿಯ ವಸೂಲಿಗಾಗಿ ಹೋದಾಗ ದಿಲ್ಲಿಯ ಬಾದಶಹನು ಎದುರಿಸಲಿಕ್ಕೆ ಪ್ರಯತ್ನಿಸುತ್ತಿರುವನೆಂದು ಇವನಿಗೆ ತಿಳಿಯಿತು. ಆಗ ತಾನೇ ದಿಲ್ಲಿಯ ಮೇಲೆ ಸಾರಿ ಹೋದನು. ಇದನ್ನು ಕಂಡು ಮೊಗಲ ಬಾದಶಹನು ಎಲ್ಲ ಮೊಗಲ ಸರದಾರರನ್ನು ಬರಮಾಡಿಕೊಂಡನು. ಬಾಜೀರಾಯನು ಈ ಕಾರ್ಯಕ್ಕೆ ಇನ್ನೊಂದು ಉಪಾಯವನ್ನು ಹುಡುಕಬೇಕೆಂದು ಆಲೋಚಿಸಿ, ದಕ್ಷಿಣಕ್ಕೆ ಹೊರಳಿದನು. ಈ ಕಾಲಕ್ಕೆ ಗೋವೆ ಪ್ರಾಂತದಲ್ಲಿ ಬಂದು ನೆಲಸಿದ ಪೋರ್ತುಗೀಜರು ಬಾಜೀರಾಯನ ಧರ್ಮಯುದ್ಧಕ್ಕೆ ಕಾರಣರಾದರು. ಅಲ್ಲಿ ಆಳರಸರಾದ ಪೋರ್ತುಗೀಜರು ಹಿಂದುಗಳನ್ನು ಬಹಳವಾಗಿ ಪೀಡಿಸಿದರು. ಮತ್ತು ಕ್ರೈಸ್ತ ಧರ್ಮಕ್ಕೆ ಅವರು ಮತಾಂತರ ಹೊಂದುವಂತೆ ಒತ್ತಾಯ ಪಡಿಸಹತ್ತಿದರು. ಆದ್ದರಿಂದ ಬಾಜೀರಾಯನು ಚಿಮಣಾಜಿಯನ್ನು ದೊಡ್ಡ ಸೈನ್ಯದೊಡನೆ ಪೋರ್ತುಗೀಜರ ಮೇಲೆ ಕಳುಹಿದನು. ಚಿಮಣಾಜಿಯು ಗೋವೆ ಪ್ರಾಂತದ ಡಹಾಣೂ, ತಾರಾಪೂರ, ಮತ್ತು ವಸಯಿ ಮುಂತಾದ ಕೋಟೆಗಳನ್ನು ಹಿಡಿದುಕೊಂಡನು.

ಕ್ರಿ. ಶ. ೧೭೩೯ರಲ್ಲಿ ನಾದಿರಶಹನು ಭಾರತಕ್ಕೆ ದಾಳಿಯಿಟ್ಟಾಗ ತನ್ನ ದೇಶಗಳ ರಕ್ಷಣೆಗೆಂದು ಬಾಜೀರಾಯನು ಉತ್ತರಕ್ಕೆ ಸಾಗಿದನು. ಒಂದು ದಿನ ನರ್ಮದಾ ನದಿ ದಂಡೆಯ ಮೇಲೆ ಬೇನೆ ಬಿದ್ದು ಮರಣ ಹೊಂದಿದನು. ಇವನ ಕಾಲದಲ್ಲಿ ಶಿಂಧೆ, ಹೋಳಕರ, ಪವಾರ, ಗಾಯಕವಾಡ, ಮುಂದಾದ ಸರದಾರ ಮನೆತನಗಳು ತಲೆಯೆತ್ತಿದವು.

ಬಾಳಾಜಿ ಬಾಜೀರಾವ(ನಾನಾಸಾಹೇಬ)

೧ನೆಯ ಬಾಜೀರಾಯನ ಮರಣದ ನಂತರ ಶಾಹು ಮಹಾರಾಜನು, ಅವನ ಹಿರಿಯ ಮಗನಾದ ಬಾಳಾಜಿ ಉರ್ಫ ನಾನಾಸಾಹೇಬ ಎಂಬವನಿಗೆ ಪೇಶ್ವೆ ಉಡುಗರೆಗಳನ್ನು ದಯಪಾಲಿಸಿದನು. ಆಗ ನಾನಾಸಾಹೇಬನ ವಯಸ್ಸು ೧೯ ಮಾತ್ರ. ಇವನು ಕುಶಲನೂ, ಮುಂಧೋರಣೆಯವನೂ, ಧೈರ್ಯವಂತನೂ, ಪರಾಕ್ರಮಿಯೂ ಆಗಿದ್ದನು. ಇವನ ಕಾಲದಲ್ಲಿ ಮೊಗಲ ಮನೆತನವು ಕಳೆಗುಂದ ಹತ್ತಿದ್ದಿತು. ಆದ್ದರಿಂದ ಉಳಿದೆಲ್ಲ ರಾಜರಂತೆ ಇವನಾದರೂ ಹಿಂದೂ ಪದ ಪಾದಶಾಹಿಯನ್ನು ಸ್ಥಾಪಿಸಲೆತ್ನಿಸಿದನು. ಇವನ ಕಾಲದಲ್ಲಿ ನಾಗಪೂರದ ರಘೂಜಿ ಭೋಸಲೇ ಎಂಬ ಸರದಾರನು ಬೆಳಕಿಗೆ ಬಂದು, ಅಲಹಾಬಾದ, ಬಂಗಾಲ, ಉತ್ಕಲ, ಕರ್ನಾಟಕಗಳಲ್ಲಿ ತನ್ನ ಪ್ರಭಾವವನ್ನು ಬೀರಿದನು. ಇವನು ಒಮ್ಮೆ ತ್ರಿಚನಾಪಳ್ಳಿಗೆ ದಾಳಿಯಿಟ್ಟು, ಆಗಿನ ಕಾಲಕ್ಕೆ ಕರ್ನಾಟಕವೆಂದು ಕರೆಯಲ್ಪಡುತ್ತಿದ್ದ ಪ್ರದೇಶದ ನವಾಬನಾದ ದೋಸ್ತ ಮುಹಮ್ಮದ ಎಂಬವನನ್ನು ಯುದ್ಧದಲ್ಲಿ ಕೊಂದನು. ಇವನ ಅಳಿಯನಾದ ಚಂದಾಸಾಹೇಬನು ಕೆಲವು ಕಾಲ ನಾನಾಸಾಹೇಬನ ಕೈದಿಯಾಗಿರಬೇಕಾಯಿತು. ರಘೂಜಿ ಭೋಸಲೆಯು ಮರಾಠಾ ಸರದಾರನಾಗಿದ್ದರೂ ಸಾತಾರೆಯ ಶಾಹೂನನ್ನು ಒಮ್ಮೊಮ್ಮೆ ಧಿಕ್ಕರಿಸಿ ನಡೆದನು. ಆದ್ದರಿಂದ, ಇವನನ್ನು ಮಣಿಸುವದೂ ನಾನಾಸಾಹೇಬನ ಆದ್ಯ ಕರ್ತವ್ಯವಾಗಿದ್ದಿತು. ಸಂಧಿ ಸಾಧಿಸಿ, ನಾನಾಸಾಹೇಬನು ರಘೂಜಿಯ ಬೆನ್ನು ಹತ್ತಿದನು. ಇವರಿಬ್ಬರ ನಡುವೆ ಇಬ್ಬಣವಿರಬಾರದೆಂದು ತಿಳಿಯ ಹೇಳಿ, ಶಾಹೂನಿಗೂ ಇವನಿಗೂ ನಡುವೆ ಒಮ್ಮತ ಮಾಡಿಸಿದನು. ಅದರ ಪ್ರಕಾರ ಇವರ ಕಪ್ಪುಕಾಣಿ

ಕೆಗಳನ್ನೆತ್ತುವ ಪ್ರದೇಶಗಳು ಬೇರೆ ಬೇರೆಯಾದವು.

[illegible] ಹೀಗೆ [illegible] ನಡೆದ ತಿಕ್ಕಾಟದಲ್ಲಿಯೂ ಕೆಲವು ಘಟನೆಗಳಿಂದ ಉತ್ತರದಲ್ಲಿಯೂ [illegible] ಕೆಲ ಮಟ್ಟಿಗೆ [illegible] ಮೇಲೆ ಕೆರಳಿದರು.

ಕ್ರಿ. ಶ. ೧೭೪೯ರಲ್ಲಿ ಸಾತಾರೆಯಲ್ಲಿ ಆಳುತ್ತಿದ್ದ ಶಾಹೂ ಮಹಾರಾಜನು ಸತ್ತನು. ಇವನು ಅಲ್ಪಸ್ವಭಾವನೂ, ಸುಖಾಭಿಲಾಷಿಗಳಿಗೆ ಮನ ಸೋತವನೂ ಆಗಿದ್ದನು. [illegible] ಇವನ ಬಾಲ್ಯದಲ್ಲಿ [illegible] ಸಿಕ್ಕಿ [illegible]. [illegible] ಇವನ [illegible] [illegible]. ಇವನು [illegible] ಸುಖಿತನದ [illegible] [illegible] ಬಿದ್ದನು. ಆದರೆ ಇವನು ತನು [illegible] ಸಂತತಿ [illegible] ರಾಮನನ್ನು [illegible] [illegible]. ಮತ್ತು [illegible] ಕೊನೆಯ [illegible] ಪ್ರಕಾರ ಎಲ್ಲ ಅಧಿಕಾರವನ್ನು ತನ್ನ ಕೈಯಲ್ಲಿ ತೆಕ್ಕೊಂಡನು. [illegible] ರಾಜಾರಾಮನು ರಾಜ್ಯವಾಳಲು ಅಸಮರ್ಥನೆಂದು ತಿಳಿದು [illegible] ಸ್ವಾಮಿತ್ವ ಹೆಚ್ಚುತ್ತ ನಡೆಯಿತು. ಆಗಿನ ರಾಜಪತ್ರದ [illegible] ಸರದಾರರಲ್ಲಿ [illegible] ಎಣಿಕೆಯಾಗಿ, ಇವನ ಆಜ್ಞೆಗಳನ್ನು [illegible] ಸರದಾರರು ಮನ್ನಿಸುವಂತಾಯಿತು. ಶಾಹೂನ ಮರಣದ ನಂತರ ಪೇಶ್ವೆಯು ತನ್ನ ಖಾಸ್ತ ನಿವಾಸವನ್ನು ಪುಣೆಯಲ್ಲಿಯೇ ಮಾಡಿದ್ದರಿಂದ, ಎಲ್ಲ ರಾಜದರಬಾರಗಳು ಪುಣೆಯಲ್ಲಿಯೇ ನಡೆಯ ಹತ್ತಿದವು. ಇದರಿಂದ ಸಾತಾರಾ ರಾಜಧಾನಿಗೂ, ಸಾತಾರೆಯ ರಾಜವಂಶಕ್ಕೂ ಕತ್ತಲೆ ಮುಸುಕಹತ್ತಿತು. ಕೊಲ್ಹಾಪುರದ ತಾರಾಬಾಯಿಯು ರಾಜಾರಾಮನ ದೌರ್ಬಲ್ಯವನ್ನು ಕಂಡು, ಗಾಯಕವಾಡನಿಗೆ ಅವನ ಮೇಲೆ ಏರಿ ಹೋಗಲು ಹೇಳಿದಳು. ಅವನು ಸಾತಾರೆಗೆ ಬರಲು ಪೇಶ್ವೆಯು ಅವನನ್ನು ಸೆರೆಯಲ್ಲಿಟ್ಟನು.

ನಂತರ ಪೇಶ್ವೆಯು ನಿಜಾಮನ ಕಡೆಗೆ ದೃಷ್ಟಿಯನ್ನು ಹೊರಳಿಸಿ, ಅವನನ್ನು ಉದಗಿರಿ ಎಂಬಲ್ಲಿ ಕ್ರಿ. ಶ. ೧೭೬೦ರಲ್ಲಿ ಎದುರಿಸಿದನು. ಅಲ್ಲಿ ಜರುಗಿದ ತುಮುಲ ಯುದ್ಧದಲ್ಲಿ ನಿಜಾಮನು ಸಂಪೂರ್ಣವಾಗಿ ಸೋತು, ಪೇಶ್ವೆಯರಿಗೆ ಎಷ್ಟೋ ಪಟ್ಟಣಗಳನ್ನೂ, ಕೋಟೆಗಳನ್ನೂ ಬಿಟ್ಟುಕೊಡಬೇಕಾಯಿತು.

ಕ್ರಿ. ಶ. ೧೭೫೬ ರಲ್ಲಿ ಪೇಶ್ವೆಯರು ಕರ್ನಾಟಕದತ್ತ ಹೊರಳಿ ಸವಣೂರ ಪ್ರಾಂತವನ್ನು ನುಗ್ಗಿದರು. ಮುಂದೆ, ತುಂಗಭದ್ರೆಯವರೆಗಿನ ಪ್ರದೇಶವನ್ನು ಗೆದ್ದುಕೊಂಡರು. ಇಷ್ಟಕ್ಕೆ ನಿಲ್ಲದೆ, ಮೈಸೂರು ಪ್ರಾಂತದಲ್ಲಿ ನುಗ್ಗಿ ಶ್ರೀರಂಗಪಟ್ಟಣವನ್ನು ಮುತ್ತಿದ್ದಾಯಿತು. ಆಗ ಮೈಸೂರಿನಲ್ಲಿ ಆಳುತ್ತಿದ್ದ ನಂದರಾಜನೆಂಬವನು ಶರಣು ಬಂದು ಕಪ್ಪವನ್ನು ಕೊಡಲೊಪ್ಪಿದನು. ಇದೇ ಕಾಲಕ್ಕೆ ಪಶ್ಚಿಮ ಕರಾವಳಿಯಲ್ಲಿ ಹಡಗುಪಡೆಯ ಮುಖ್ಯಸ್ಥನಾದ ಆಂಗ್ರೆ ಮನೆತನದವನು ಒಳ್ಳೆ ಪ್ರಸಿದ್ಧಿಗೆ ಬಂದು, ನಾನಾಸಾಹೇಬನನ್ನು ಕೆಣಕಿದನು. ಆದ್ದರಿಂದ ನಾನಾಸಾಹೇಬನು ಪೂರ್ವಕರಾವಳಿಯ ಮದ್ರಾಸ ಮುಂತಾದ ಪ್ರದೇಶಗಳಲ್ಲಿ ಆಗ ಕಾಲೂರುತ್ತಿದ್ದ ಇಂಗ್ಲಿಷರ ಸಹಾಯದಿಂದ ಆಂಗ್ರೆಯನ್ನು ಮುರಿಬಡಿದನು. ಆಂಗ್ರೆಯನ ಹಡಗುಪಡೆಯೂ ನಷ್ಟವಾದ್ದಾಯಿತು. ಒಂದು ದೃಷ್ಟಿಯಿಂದ, ಹಡಗುಪಡೆಯು ನಾಶವಾದ್ದರಿಂದ, ಇಂಗ್ಲಿಷರ ಬೆಳವಣಿಗೆಗೆ ಪುಷ್ಟಿ ಕೊಟ್ಟಂತೆ ಆಯಿತು. ಹೀಗಾಗಿ ಮರಾಠರ ಬಲವೂ ಇಳಿಯಿತು. ಬಂಗಾಲ ಪ್ರಾಂತದ ಅಲಿವರ್ದಿಖಾನನೆಂಬವನು ಪೇಶ್ವೆಯರ ಸಂಗಡ ಒಪ್ಪಂದ ಮಾಡಿಕೊಂಡ. ಚೌಥಾಯಿಯ ಬದಲು ಹನ್ನೆರಡು ಲಕ್ಷ ರೂಪಾಯಿಗಳನ್ನು ಪ್ರತಿವರ್ಷ ಕೊಡಲು ಒಪ್ಪಿಕೊಂಡನು. ಉತ್ತರದ ಭಾರತದ ರಾಜಕಾರಣದಲ್ಲಿ ಪೇಶ್ವೆಯರು ಬಹಳ ಹಿಂದಿನ ಕಾಲದಿಂದಲೂ ಕೈಹಾಕಿದರಷ್ಟೆ! ಆ ಧೋರಣೆಯನ್ನು ಮುಂದುವರಿಸಿ ಈ ಕಾಲದಲ್ಲಿಯೂ ಅಂದರೆ, ಕ್ರಿ. ಶ. ೧೭೫೦ ರ ಸುಮಾರಕ್ಕೆ ಒಂದು ಒಪ್ಪಂದವಾಗಿ ದಿಲ್ಲಿಯ ಬಾದಶಹನನ್ನು ತಮ್ಮ ರಕ್ಷಣೆಯ ಕೆಳಗೆ ಪೇಶ್ವೆಯರು ತಕ್ಕೊಂಡರು. ಈ ಕಾಲಕ್ಕೆ ಅಫಗಾಣಿಸ್ಥಾನದಲ್ಲಿ ಆಳುತ್ತಿದ್ದ ಅಹಮ್ಮದಶಹ ಅಬ್ದಾಲಿಯು ಉತ್ತರದ ಕೆಲವು ರಾಜರಿಗೆ ಮುಳುವಾಗಿದ್ದನು.

ಅವನು ಭಾರತಕ್ಕೆ ಕ್ರಿ. ಶ. ೧೭೫೬ ರಲ್ಲಿ ದಾಳಿಯಿಟ್ಟು ಮುಲ್ತಾನ, ಲಾಹೋರ ಪ್ರಾಂತಗಳನ್ನು ಕೈವಶಮಾಡಿಕೊಂಡನು. ದಿಲ್ಲಿಯ ಬಾದಶಾಹಿಯ ಸಂರಕ್ಷಣೆಯ ಹೊಣೆಹೊತ್ತುಕೊಂಡ ಪೇಶ್ವೆಯರಿಗೆ ಇದು ಸಹನವಾಗಲಿಲ್ಲ. ಆದ್ದರಿಂದ ದಿಲ್ಲಿಯ ಪಟ್ಟದ ರಕ್ಷಣೆಗಾಗಿ ನಾನಾಸಾಹೇಬನು ರಘುನಾಥರಾಯನೆಂಬ ತನ್ನ ತಮ್ಮನನ್ನು ಕಳುಹಿಕೊಟ್ಟನು. ಅವನು ಅಹಮದಾಬಾದವನ್ನು ಗೆದ್ದುಕೊಂಡು, ಜಾಟರನ್ನು ಸದೆಬಡಿದನು. ಜಾಟರ ಅರಸನಾದ ಸುರಜಮಲ್ಲ ಎಂಬಾತನು ರಘುನಾಥರಾಯನ ಸಂಗಡ ಒಪ್ಪಂದ ಮಾಡಿಕೊಂಡನು. ಮುಂದೆ, ಮಥುರಾ, ವೃಂದಾವನ ಪ್ರಾಂತಗಳನ್ನು ಕೈವಶ ಮಾಡಿಕೊಂಡು, ರೋಹಿಲಖಂಡದಲ್ಲಿ ಮತ್ತು ಗಂಗಾ ಯಮುನಾ ನದಿಗಳ ನಡುವಿನಪ್ರದೇಶಗಳಲ್ಲಿ, ಪೇಶ್ವೆಯರ ಸತ್ತೆಯನ್ನು ನೆಲೆಸಿದನು. ಬಳಿಕ ರಘುನಾಥರಾಯನು ದಕ್ಷಿಣಕ್ಕೆ ಮರಳಿದನು.

ಇತ್ತ ಅಹಮ್ಮದಶಹಾ ಅಬ್ದಾಲಿಯು, ಕ್ರಿ. ಶ. ೧೭೫೬ ರಲ್ಲಿ ಭಾರತಕ್ಕೆ ಮೂರನೆಯ ಸಾರಿ ದಾಳಿಯಿಟ್ಟನು. ಈ ಸಾರಿ ಅವನು ನೇರವಾಗಿ ದಿಲ್ಲಿಯ ಒಳಕ್ಕೆ ನುಗ್ಗಿದನು. ನಂತರ ಮಥುರಾ ವೃಂದಾವನಗಳನ್ನು ಸುಲಿದು, ಜನರನ್ನು ಪೀಡಿಸಿದನು. ಮರಳುವಾಗ ತನ್ನ ಮಗ ತೈಮೂರ ಶಹನನ್ನು ಪಂಜಾಬದಲ್ಲಿ ನೇಮಿಸಿದನು. ಇದನ್ನು ನೀಗಿಸುವದಕ್ಕೆ ರಘುನಾಥರಾಯನು ಸೈನ್ಯ ಉತ್ತರಕ್ಕೆ ನಡೆಸಿದನು. ಈ ಸಾರಿ ದಿಲ್ಲಿ ಪ್ರಾಂತವನ್ನು ನುಗ್ಗಿ ಪಟ್ಟಣವನ್ನು ಆಕ್ರಮಿಸಿದನು. ನಂತರ ಪಂಜಾಬಕ್ಕೆ ಸಾಗಿ, ತೈಮೂರ ಶಹನನ್ನು ಬೆನ್ನಟ್ಟಿದನು. ಅಟಕ ನಗರಕ್ಕೆ ದೂರವಾಗಿ ಅವನನ್ನು ಓಡಿಸಿ, ಪಂಜಾಬ ಪ್ರಾಂತದಲ್ಲಿ ದತ್ತಾಜಿ ಸಿಂಧೆಯನ್ನು ನೇಮಿಸಿ ತಾನು ದಕ್ಷಿಣಕ್ಕೆ ಮರಳಿದನು.

ರೋಹಿಲರ ಆಮಂತ್ರಣದ ಮೇರೆಗೆ ಅಹಮದ ಶಹ ಅಬ್ದಾಲಿಯು ನಾಲ್ಕನೆಯ ಸಲ ಭಾರತಕ್ಕೆ ದಾಳಿಇಟ್ಟನು (೧೭೫೯). ಪಂಜಾಬದಲ್ಲಿ ರಘುನಾಥರಾಯನ ಪರಿಯಿಂದ ಕಾರಭಾರ ನಡೆಸುತ್ತಿದ್ದ ದತ್ತಾಜಿ ಶಿಂಧೆಯು ಇವನಿಗೆ ಮೊದಲಿನ ತುತ್ತಾದನು. (೧೭೬೦) ಈ ಸುದ್ದಿಯನ್ನು ಪುಣೆಯಲ್ಲಿ

ಆಕ್ರಮಿಸಿದ್ದ ನಾನಾಸಾಹೇಬನು ಕೇಳಿದೊಡನೆಯೆ, ಸದಾಶಿವರಾಯನೆಂಬ ನಾಮಾಂಕಿತ ಸೇನಾಪತಿಯನ್ನು ೫೦ ಸಾವಿರ ಸೈನ್ಯದೊಂದಿಗೆ ಅಬ್ದಾಲಿಯ ಸೊಕ್ಕು ಮುರಿಯಲು ಕಳುಹಿದನು. ಸದಾಶಿವ ರಾಯನು, ಒಳ್ಳೆ ವ್ಯವಹಾರ ಚತುರನೂ, ನಿರ್ಣಯಾತ್ಮಕ ಮನಸ್ಸುಳ್ಳವನೂ, ಧೈರ್ಯವಂತನೂ ಗಂಭೀರನೂ ಆಗಿದ್ದನು. ಇವನ ಸಂಗಡ, ವಿಶ್ವಾಸರಾವ, ಇಬ್ರಾಹಿಮಖಾನ ಗಾರ್ದಿ, ಬಳವಂತರಾವ ಮೆಹಂದಳೆ, ವಿಠ್ಠಲ ಸದಾಶಿವ ವಿಂಚೂರಕರ, ಸಮಶೇರ ಬಹದ್ದೂರ, ಭಾಮಾಜಿ ಗಾಯಕವಾಡ, ಯಶವಂತರಾವ ಪವಾರ ಮುಂತಾದ ಹೆಸರು ಪಡೆದ ಸರದಾರರಿದ್ದರು.

ಪಾನಿಪತದ ಮೂರನೆಯ ಯುದ್ಧ:—

ಸದಾಶಿವರಾಯನು ಪುಣೆಯಿಂದ ನೇರವಾಗಿ ಹೋಗಿ ದಿಲ್ಲಿಯನ್ನು ಆಕ್ರಮಿಸಿಕೊಂಡನು. ಆಗ ಅಬ್ದಾಲಿಯು ದಿಲ್ಲಿಯ ಉತ್ತರಕ್ಕಿದ್ದ ಕುಂಜಪುರ ಎಂಬಲ್ಲಿ ತಳವೂರಿದ್ದನು. ಸದಾಶಿವರಾಯನು ಅತ್ತಲೂ ಹೊರಡಲುದ್ಯುಕ್ತನಾದದ್ದನ್ನು ಕಂಡು ಅಬ್ದಾಲಿಯು ಸೆರಿಯಲ್ಲಿದ್ದ ಭಾಗಪತ ಎಂಬಲ್ಲಿ ಬೀಡು ಬಿಟ್ಟನು. ನಂತರ ಕೆಲವು ವ್ಯೂಹಗಳು ನಡೆದು ಹೋಗಲಾಗಿ ಭಾವು ಮತ್ತು ಅಬ್ದಾಲಿಯ ಸೈನ್ಯಗಳು ಪಾಣಿಪತ ಬಯಲಿನಲ್ಲಿ ತೀರ ಸ್ವಲ್ಪ ಅಂತರದಲ್ಲಿ ಬಂದು ನಿಂತವು. ಈ ಕಾಲದಲ್ಲಿ ಉತ್ತರದಲ್ಲಿಯ ನಾನಾ ಸರದಾರರ — ಮುಖ್ಯವಾಗಿ ರಜಪೂತರ ನಾನಾ ಮುಂದಾಳುಗಳ— ನೆರವನ್ನು ಸದಾಶಿವರಾಯನು ಅಪೇಕ್ಷಿಸುತ್ತಿದ್ದನು. ಇವರು ನೆರವು ನೀಡುವುದರ ಬದಲು, ಅಬದಾಲಿಗೆ ಸದಾಶಿವ ರಾಯನ ಹುಳುಕುಗಳನ್ನು ಎತ್ತಿ ತೋರಿಸುತ್ತಿದ್ದರು. ಮೊದಮೊದಲು ಮಹದಾಜಿ ಸಿಂಧೆಯು ದಂಡಿನವರು, ಅಬದಾಲಿಯ ದಂಡಿನ ಮೇಲೆ ಚಿಕ್ಕಪುಟ್ಟ ದಾಳಿ ಮಾಡಿ ಅವರನ್ನು ಹಣ್ಣಿಗೆ ತಂದರು. ಯುದ್ಧ ಸಮಯದಲ್ಲಿ ಮರಾಠಾ ಸರದಾರರಾರು, ಹೋಳಕರ ಶಿಂಧೆ ಗಾಯಕವಾಡ ಮುಂತಾದವರು ಒಂದು ಕೇಂದ್ರ ಅಧಿಕಾರವನ್ನು—ಪೇಶ್ವೆಯರನ್ನು ಮನ್ನಿಸದೆ ಇದ್ದದ್ದು, ಒಂದು ಜೀವದಾಯಕ ಸಂಗತಿಯು. ಇವರೆಲ್ಲರೂ ತಮ್ಮದೇ ಆದ ಯುದ್ಧ ನೀತಿಯನ್ನೂ, ಯುದ್ಧ ಕ್ರಮವನ್ನೂ ಮುಂದುವರಿಸಿ, ಅದೇ ಶ್ರೇಷ್ಠ ಮತ್ತು ಸರ್ವಸಾಮಾನ್ಯವಾದ ಮಾರ್ಗವೆಂದು ಸಾಧಿಸುತ್ತಿದ್ದರು.

ಇದರಿಂದ [illegible] ಬಿಗುಪ್ಪ ಸಡಿಲವಾಯಿತು. [illegible] [illegible] ದನು. [illegible] [illegible] [illegible] ಸಿಗದಂತೆ ಮಾಡಿದ್ದನು. ಅದ್ದರಿಂದ ಇವರ ಪಾಳೆಯದಲ್ಲಿ ಸಂಗ್ರಹಿಸಿದ್ದ ಅನ್ನವು ತೀರಿಹೋಗುವ ಭಯವಿತ್ತು.

ಆ ದಿನ [illegible] [illegible] [illegible] ದಿಂದ [illegible]. [illegible] ಇವರನ್ನು ಉದ್ದೇಶಿಸಿ ಹೇಳುತ್ತಿದ್ದಂತೆ, "ಭಟರೇ! ನಿಮ್ಮ ದೇಶವು ಬಹಳ ದೂರದಲ್ಲಿದೆ. ನೀವು ಓಡಿಹೋಗಿ ಅದನ್ನು ಮುಟ್ಟಲಾರಿರಿ. ಓಡಿಹೋಗಿ [illegible]ಳ್ಳುವಿರಿ? ಯುದ್ಧ ಮಾಡಿ ವೀರರೆನಿಸಿಕೊಳ್ಳಿರಿ." ಓಡಿ ಹೋಗುವವರನ್ನೆಲ್ಲ ತುಂಡರಿಸಿಹಾಕಿರೆಂದು ತನ್ನ ಸೈನ್ಯಕ್ಕೆ ಆಜ್ಞಾಪಿಸಿದನು. ಇಷ್ಟರಲ್ಲಿಗೆ ಮಧ್ಯಾಹ್ನ

ತಿರುಗಿತು. ಅಬ್ದಾಲಿಯ ಗ್ರಹಗಳೂ ತಿರುಗಿದವು. ಉನ್ನತವಾದ ಕುದುರೆಗಳನ್ನು ಏರಿದ ಸ್ವಾರರ ಪಡೆಯೊಂದನ್ನು ಅಬ್ದಾಲಿಯು ಕಾಯ್ದಿಟ್ಟಿದ್ದನು. ಸುಮಾರು ಮಧ್ಯಾಹ್ನ ೧–೨ ಗಂಟೆಗಳ ನಡುವೆ ಅಬ್ದಾಲಿಯು ಕಾಯ್ದಿಟ್ಟ ಸೈನ್ಯವನ್ನು ಬಹು ರಭಸದಿಂದ ಏರಿಹೋಗುವಂತೆ ಮರಾಠರ ಮೇಲೆ ಬಿಟ್ಟನು. ಕೆಲಕಾಲದಲ್ಲಿ ಆನೆಯ ಮೇಲಂಬಾರಿಯಲ್ಲಿ ವಿರಾಜಮಾನನಾದ ವಿಶ್ವಾಸರಾಯನು ಗುಂಡುತಾಗಿ ನೆಲಕ್ಕುರುಳಿದನು.

ಇದನ್ನು ಕಂಡು ಸದಾಶಿವರಾಯನು ಆವೇಶದಿಂದ ಶತ್ರುಪಕ್ಷದಲ್ಲಿ ಮುನ್ನುಗ್ಗಿ ಕಾಣದಾದನು. ಸುಮಾರು ೧೦ ಚೌ. ಮೈಲುಗಳ ಅಂಗಣದಲ್ಲಿ ಇಡೀ ದಿನ ನಡೆದ ಕಾಳಗದ ಪರಿಣಾಮವಾಗಿ ಎದ್ದ ಕೆಂಧೂಳಿಯು ದಟ್ಟವಾಗಿ ಕವಿದು ಯಾರು ಎಲ್ಲಿ ಏನು ಮಾಡುತ್ತಿರುವರೆಂಬುದನ್ನು ತಿಳಿಯಗೊಡದಾಯಿತು. ಈ ರೀತಿ ನಿರ್ದಯವಾಗಿ ನಡೆದ ಕಾದಾಟದ ನಂತರ ಲಕ್ಷಾಂತರ ಹೆಣಗಳು ಆ ಬಯಲಲ್ಲಿ ಹರಡಿಕೊಂಡವು. ರಕ್ತದ ಕಾಲುವೆಯು ಹರಿಯಿತು. ಮರಾಠರ ಭಾಗ್ಯಶ್ರೀಯು ಮುಗ್ಗರಿಸಿ ನೆಲಕ್ಕುರುಳಿದಳು. ಅಬ್ದಾಲಿಯು ಮರಾಠರ ಬೀಡನ್ನು ನುಗ್ಗಿ ಲೂಟಿ ಮಾಡಿ ಹೇರಳ ದ್ರವ್ಯವನ್ನು ದೋಚಿಕೊಂಡನು.

ಈ ಯುದ್ಧದ ಪರಿಣಾಮದಿಂದ ಮರಾಠರ ಕೀರ್ತಿ ಕಿರಣವು ಮಲಿನವಾಯಿತು. ಹಿಂದುಸ್ತಾನದ ಸಾರ್ವಭೌಮತ್ವದ ಒಂದು ಸೀಳಿಗೆಯು ಕತ್ತರಿಸಿ ಹೋಯಿತು. ಉತ್ತರ ಭಾರತದಲ್ಲಿಯ ಮರಾಠರ ಪ್ರಗತಿಗೆ ಬಾಧೆ ಬಂದಿತು. ಈ ಪರಾಭವದಿಂದ ಇಂಗ್ಲಿಷ ಹೈದರ, ನಿಜಾಮ ಮುಂತಾದವರಿಗೆ ಏಳ್ಗೆ ಹೊಂದಲು ಅನುಕೂಲವಾಯಿತು.

ನಾನಾಸಾಹೇಬನು ಸಹಾಯವನ್ನು ತೆಗೆದುಕೊಂಡು ಹೊರಟಾಗ ದಾರಿಯಲ್ಲಿ ಈ ಪರಾಭವದ ಸುದ್ದಿ ಅವನಿಗೆ ತಿಳಿಯಿತು. ಕೂಡಲೆ ಚಿತ್ತ ಭ್ರಮಣವಾದಂತಾಗಿ, ಪುಣೆಗೆ ಮರಳಿದನು. ಮುಂದೆ(ಕ್ರಿ. ಶ. ೧೭೬೧ರಲ್ಲಿಯೆ) ಕೆಲ ತಿಂಗಳಲ್ಲಿಯೆ ಇವನು ಗತಿಸಿ ಹೋದನು. ಇವನು ಒಳ್ಳೆ ಕರ್ತೃತ್ವಶಾಲಿಯೂ, ವಿಚಾರಿಯೂ, ಶಾಂತವೃತ್ತಿಯವನೂ ಆಗಿದ್ದನು. ನ್ಯಾಯದಾನ

ಕಂಪಾಯ ಮುಂತಾದ ವಿಷಯಗಳಲ್ಲಿ ಇವನು ಹೊಸ ರೀತಿಗಳನ್ನು ಮಾಡಿದನು. ಇವನಿಗೆ ಮೂರು ಜನ ಗಂಡುಮಕ್ಕಳು — ವಿಶ್ವಾಸರಾಯ, ಮಾಧವರಾಯ, ನಾರಾಯಣರಾಯ. ಇವರಲ್ಲಿ ವಿಶ್ವಾಸರಾಯನು ಪಾಣಿಪತ್ತುದಲ್ಲಿ ಮಡಿದದ್ದರಿಂದ, ಇವನ ನಂತರ ಮಾಧವರಾಯನಿಗೆ ಪೇಶ್ವೆ ಪದವು ಸಿಕ್ಕಿತು.

ಮಾಧವರಾಯನು (ಕ್ರಿ. ಶ. ೧೭೬೧—೧೭೭೨):—

ಮಾಧವರಾಯನು ಪೇಶ್ವೆಪದವನ್ನು ವಹಿಸಿಕೊಂಡಾಗ ಮರಾಠಾ ಶಕ್ತಿದ ರಾಜಕೀಯ ಪರಿಸ್ಥಿತಿಯು ಬಹು ಬಿಕ್ಕಟ್ಟಿನದಾಗಿತ್ತು. ಪಟ್ಟದರಾಜರಲ್ಲಿ ಪೇಶ್ವೆಯವರ ಮನೆತನನ್ನು [illegible] ಅಷ್ಟು [illegible] ವನು ಸಕಲ ಅಧಿಕಾರವನ್ನು [illegible]. [illegible] ಇದೇ ಸಮಯವನ್ನು [illegible] ಅವರ [illegible] ದ ಬಯಸಿಕೊಂಡರು. [illegible] ಸಂಧಿನಿಯಮ [illegible] ದನು. [illegible] ರಾಜ ನನ್ನು [illegible] ಮರಾಠಾರಾಜ್ಯದಲ್ಲಿ [illegible] ಹಾಗೆ ಪ್ರದೇಶ [illegible] ಪಕ್ಷ ಬಿಡುವುದಿಲ್ಲವು. [illegible] ಭಾರತದಲ್ಲಿ ಕಾಲೂರಿತ್ತಿದ್ದ ಇಂಗ್ಲೀಷರು ಪ್ಲಾಸಿ ಮತ್ತು [illegible] ಗಳನ್ನು ಗೆದ್ದದರಿಂದ ಬಂಗಾಲ ಮತ್ತು ([illegible]) ಕರ್ನಾಟಕದಲ್ಲಿ ಬೇರೂರತೊಡಗಿದ್ದರು.

ಪೇಶ್ವೆಪದವನ್ನು ವಹಿಸಿದಾಗ ಮಾಧವರಾಯನು ಕಿರಿಯವನಾಗಿದ್ದುದರಿಂದ(೧೭ ವರ್ಷದವ) ಆತನ ಚಿಕ್ಕಪ್ಪನಾದ ರಘುನಾಥರಾಯನು (ರಾಘೋಬಾ) ಇವನನ್ನು ಕಾರಭಾರ ನಡೆಸಿ ನೋಡಿಕೊಂಡನು. ಅಧಿಕಾರ ದುರ್ಬಲತೆಯನ್ನು ಪ್ರತ್ಯಕ್ಷವಾಗಿ ನಡೆಸುತ್ತಿದ್ದ ರಘೋಬಾ ಹಣಕ್ಕೆ [illegible]. [illegible] ಸ್ಥಿತಿಯಿಂದ ಹಿರಿಯನಾದ್ದರಿಂದ ತನಗೇ ಪೇಶ್ವೆಪದವನ್ನು ಕೊಡಬೇಕೆಂದು ರಾಮರಾಜನೆದುರು ರಘೋಬನು ತುಸು ಹಟಹಿಡಿದದ್ದೂ ಇದೆ.

ಮಾಧವರಾಯನ ಅಲ್ಪವಯಿ ಸಂರಕ್ಷಣದಾರನೆಂದು ರಾಘೋಬನು ಕೆಲಸ ನಡೆಸುತ್ತಿರಲು, ಇವನು ಅಷ್ಟೊಂದು ಯೋಗ್ಯತೆಯುವನಲ್ಲವೆಂದು ತಿಳಿದು ಬಂದಿತು. ತುಸು ಮರುಳು ಸ್ವಭಾವದವನೂ, ಚಂಚಲ ಮತ್ತು ಲಹರಿ ವ ನಸ್ಸಿನವನಿದ್ದುದರಿಂದ ಇವನ ಆಡಳಿತೆಯು ಅತ್ಯಂತ ಸಡಿಲೆನಿಸಿತು. ಸಖಾರಾಮಬಾಪೂ ಮತ್ತು ಬೋಕಿಲ ಎಂಬ ಸಲ್ಲಾಗಾರರು ಇವನಿಗೆ ಸಲಹೆ ನೀಡುತ್ತಿದ್ದರು. ಇಂಥ ಅಸ್ಥಿರ ಪ್ರಸಂಗಗಳಲ್ಲಿ ನಿಜಾಮನು ಮರಾಠರ ಮೇಲೆ ಏರಿಬಂದನು. ಪಾಣಿಪತ್ತದ ಸೋಲಿನಿಂದ ಹುಣ್ಣುಹಣ್ಣಾದ ಮರಾಠರನ್ನು ತಾನು ಲೀಲಾಮಾತ್ರದಿಂದ ಸೋಲಿಸಬಲ್ಲೆನೆಂದು ಜಂಭಕೊಂಡ ನಿಜಾಮನು ಪುಣೆಯ ಹತ್ತರ ಬಂದು ಠಾಣೆ ಹಾಕಿದನು. ಮತ್ತು ಅಲ್ಲಲ್ಲಿ ಸುಲಿಗೆ ಮಾಡಹತ್ತಿದನು. ಇದನ್ನು ಕೇಳಿ ಮಾಧವರಾಯನೂ, ರಾಘೋಬನೂ ಮರಾಠಾ ಸೈನ್ಯವನ್ನು ಕೂಡಿಸಿ, ನಿಜಾಮನನ್ನು ಎದುರಾದರು. ಮರಾಠರ ಆವೇಶಕ್ಕೆ ನಿಲ್ಲಲಾರದೆ, ನಿಜಾಮನು ಸೋಲನ್ನೊಪ್ಪಿ, ಒಪ್ಪಂದ ಮಾಡಿಕೊಂಡನು. ಒಪ್ಪಂದದ ಕರಾರುಗಳನ್ನು ರಚಿಸುವಾಗ ರಾಘೋಬನು ನಿಜಾಮನನ್ನು ಎತ್ತಿಹಿಡಿದದ್ದರಿಂದ, ಮರಾಠರು ರಾಘೋಬನ ಮೇಲೆ ತುಸು ಕೋಪಿಸಿಕೊಂಡರು. ಬರಬರುತ್ತ ಮರಾಠಾ ದರಬಾರದಲ್ಲಿ ರಾಘೋಬನ ಪಕ್ಷ, ಮತ್ತು ಪೇಶ್ವೆಯರ ಪಕ್ಷ, ಎಂದು ಎರಡು ಪಕ್ಷಗಳು ತಲೆದೋರಿದವು. ಈ ಪಕ್ಷಗಳ ವಾದವು ಜಗಳದಲ್ಲಿ ಪರಿಣಮಿಸಿ ದ್ವೇಷದಲ್ಲಿ ಕೊನೆಗಂಡಿತು. ಕಾಲಗತಿಯಲ್ಲಿ ರಾಘೋಬನೂ, ಅವನ ಸಂಗಡಿಗರೂ, ಪುಣೆ ಬಿಟ್ಟು ಹೋಗಿ ಅಹಮ್ಮದನಗರದಲ್ಲಿ ಸೈನ್ಯ ಕೂಡಿಸಹತ್ತಿದರು. ಈ ರೀತಿ ಪುಣೆಯ ಮೇಲೆ ಸಾಗಿ ಹೋಗಿ, ತನ್ನ ಮತ್ತು ಪೇಶ್ವೆಯರ ನಡುವಿನ ವಾದವನ್ನು ಬಗೆಹರಿಸಿ ಕೊಳ್ಳಬೇಕೆಂದು ರಾಘೋಬನು ಆಶಿಸಿದನು. ಇತ್ತ ಮಾಧವರಾಯನೂ ರಾಘೋಬನನ್ನು ಎದುರಿಸುವ ಸಾಹಸ ನಡೆಸಿದನು. ಎರಡೂ ಸೈನ್ಯಗಳು ಎದುರಾಗಿ ಕೆಲವು ಚಿಕ್ಕ ಕದನಗಳು ಎಸಗಿದುದೂ ಆಹುದು. ಈ ತಿಕ್ಕಾಟದಲ್ಲಿ ರಾಘೋಬನಿಗೆ ಗೆಲುವು ಬಂದದ್ದರಿಂದ, ಅವನು ಮರಾಠಾ ರಾಜ್ಯದ ಸರ್ವಾಧಿಕಾರವು ತನ್ನ ಕೈಯ್ಯಲ್ಲಿರುವಂತೆ, ಮಾಧವರಾಯನಿಂದ ಒಪ್ಪಿಗೆ ಪಡೆದನು. ಇದರಿಂದ ಸಂತೋಷಬಟ್ಟ ರಾಘೋಬನು ತನ್ನ ಪಕ್ಷದವರಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನೂ ದಯಪಾಲಿಸಿದನು. ಹೀಗೆ ಅಸಂತುಷ್ಟ

ಆಗ ಎಷ್ಟೋ ಮರಾಠಾ ಸರದಾರರು ನಿಜಾಮನ ಕಡೆಗೆ ಬಿದ್ದರು. ಮರಾಠಾ ಸರದಾರರ ಸಹಾಯದಿಂದ ನಿಜಾಮನು ಪೇಶ್ವೆಯವನ್ನು ಮತ್ತೆ ಕೆಡೆಬಡಿಸಲು ಯತ್ನಿಸಿದನು. ಆದರೆ, ಮಾಧವರಾಯನು ಒತ್ತಿ ಘೋರಣೆಯಿಂದ ಮರಾಠಾ ಸರದಾರರನ್ನು ಒಳಮಾಡಿಕೊಂಡನು. ಮುಂದೆ ಬಲವಾದ ಸೈನ್ಯದೊಡನೆ ಸಾಗಿ ಹೋಗಿ ನಿಜಾಮನನ್ನು ಎದುರಿಸಿದನು. ಮರಾಠರು ಗಟ್ಟಿಯ ಯುದ್ಧವನ್ನು ನಡಿಸಿ ನಿಜಾಮನನ್ನು ಹದ್ದಿಗೆ ತಂದರು. ಕ್ರಿ. ಶ. ೧೭೬೩ರಲ್ಲಿ ಗೋದಾವರಿಯ ದಂಡೆಯ ಮೇಲೆ ರಾಕ್ಷಸಭುವನವೆಂಬಲ್ಲಿ ದೊಡ್ಡ ಯುದ್ಧ ನಡೆಯಿತು. ಅದರಲ್ಲಿ ನಿಜಾಮನು ಸಂಪೂರ್ಣವಾಗಿ ಸೋತದ್ದರಿಂದ ೮೨ ಲಕ್ಷ ರೂಪಾಯಿ ಉತ್ಪನ್ನದ ರಾಜ್ಯವನ್ನು ಮರಾಠರಿಗೆ ಬಿಟ್ಟುಕೊಡಬೇಕಾಯಿತು. ಮಾಧವರಾಯನ ಪ್ರಭಾವವು ಈಗ ಬೆಳಕಿಗೆ ಬಂದದ್ದರಿಂದ, ಈ ನಂತರದ ದಿನಗಳಲ್ಲಿ ಅವನು ಸ್ವತಂತ್ರನಾಗಿ ರಾಜ್ಯವನ್ನು ನಡೆಸಹತ್ತಿದನು.

ಮೈಸೂರಿನ ಹೈದರಅಲಿಯು ಮರಾಠಾ ರಾಜ್ಯದಲ್ಲಿ ಸುಲಿಗೆ ನಡಿಸಿದ್ದನೆಂಬುದನ್ನು ನಾವು ಓದಿದೆವಷ್ಟೆ? ಇವನ ಪಾರುಪತ್ಯಕ್ಕಾಗಿ ಮಾಧವರಾಯನು ಕ್ರಿ. ಶ. ೧೭೬೪ರಲ್ಲಿ ಇವನ ಮೇಲೆ ಏರಿ ಹೋದನು. ಕೈಗೆ ಕೈ ಯುದ್ಧದಲ್ಲಿ ತಾನು ಮರಾಠರ ಎದುರು ತಡೆಯಲಾರೆನೆಂದು ತಿಳಿದದ್ದರಿಂದ, ಹೈದರನು ಗುಡ್ಡಗಳನ್ನು ಸೇರಿದನು. ಅವನನ್ನು ಬೆನ್ನಟ್ಟಿ ಹೋಗಿ ಮಾಧವರಾಯನು, ಆನವಟ್ಟಿ ಮತ್ತು ರಟ್ಟೆಹಳ್ಳಿಗಳ ಅಡವಿಗಳಲ್ಲಿ ಅವನನ್ನು ಸದೆಬಡೆದನು. ಇದರಿಂದ ಅವನು ಸರಿಯುಬಂದ ಒಪ್ಪಂದವನ್ನು ಮಾಡಿಕೊಂಡನು. ಇದರ ಕರಾರುಗಳನ್ನು ಹೈದರನೇ ಮುರಿಯಹತ್ತಿದ್ದರಿಂದ ಮಾಧವರಾಯನು ಕ್ರಿ. ಶ. ೧೭೬೮ರಲ್ಲಿ ಮತ್ತೊಮ್ಮೆ ಅವನ ಮೇಲೆ ಏರಿ ಹೋದನು. ಆಗ ಹೈದರನು ೩೨ ಲಕ್ಷ ರೂಪಾಯಿಗಳನ್ನೂ, ಎಷ್ಟೋ ಭೂಮಿಯನ್ನೂ ಕೊಟ್ಟು ಒಪ್ಪಂದ ಮಾಡಿಕೊಂಡನು.

ಕ್ರಿ. ಶ. ೧೭೬೮ರಲ್ಲಿ ರಾಘೋಬಾ ಇವನು ತನಗೂ ಪೇಶ್ವೆಯರ ರಾಜ್ಯದಲ್ಲಿ ಪಾಲು ಸಿಗಬೇಕೆಂಬ ಹಟ ಹಿಡಿದನು. ಆದ್ದರಿಂದ ಅವನ ಚಟುವಟಿಕೆಗಳನ್ನು ತಡೆಯಲು ಅವನನ್ನು ಮಾಧವರಾಯನು ಸೆರೆಹಿಡಿದು ಪುಣೆಯ

ಶನಿವಾರವಾಡೆಯಲ್ಲಿ ತಂದು ಸೆರೆಯಲ್ಲಿಟ್ಟನು. ಬಳಿಕ ಮಾಧವರಾಯನ ಆಡಳಿತೆಯು ಅಡೆತಡೆಗಳಿಲ್ಲದೆ ಸಾಗಹತ್ತಿತು. ಈ ಕಾಲಕ್ಕೆ ಮರಾಠಾ ಸರದಾರರಾದ ಜಾನೋಜಿ ಭೋಸಲೆಯೆಂಬವನೂ ಗೋವಿಂದರಾವ ಗಾಯಕವಾಡ ಎಂಬವನೂ ಮಾಧವರಾಯನ ಅಂಕಿತದಲ್ಲಿ ಬಂದರು. ನಂತರ, ಮೈಸೂರಿನ ಎರಡನೆಯ ದಾಳಿ ನಡೆಯಿತು. ಯಾಕಂದರೆ, ಹೈದರಅಲ್ಲಿಯು ಈ ಮೊದಲೆ ಆದ ಒಪ್ಪಂದದ ಕರಾರುಗಳನ್ನು ಮುರಿದಿದ್ದನಲ್ಲದೆ, ಮರಾಠರ ರಾಜ್ಯದಲ್ಲಿ ಸುಲಿಗೆ ನಡೆಸಿದ್ದನು. ಆದ್ದರಿಂದ ಮಾಧವರಾಯನು ದೊಡ್ಡ ಸೈನ್ಯದೊಂದಿಗೆ ಹೈದರನ ಮೇಲೆ ಏರಿಹೋದನು. ಆದರೆ, ಅವನು ಎದುರಾಗಿ ಯುದ್ಧಮಾಡದಾದನು. ಆದರೂ, ಹೈದರನ ಕೆಲವು ಪ್ರದೇಶಗಳನ್ನು ಪೇಶ್ವೆಯರು ಗೆದ್ದುಕೊಂಡರು. ಈ ಯುದ್ಧಗಳಲ್ಲಿ ಆದ ದೇಹಶ್ರಮದಿಂದ ಮತ್ತು ಮಾನಸಿಕ ವ್ಯಥೆಯಿಂದ ಮಾಧವರಾಯನ ದೇಹವು ದಿನಕ್ರಮೇಣ ಕೆಡಹತ್ತಿತು. ಹೈದರನನ್ನು ಒಳ್ಳೇ ಆಪತ್ತಿನಲ್ಲಿ ತಂದು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆಯಿಟ್ಟು, ಅವನು ಶರಣು ಬರುವಂತೆ ಒತ್ತಾಯಮಾಡಿದ್ದಾಯಿತು. ಬಳಿಕ ಉತ್ತರದ ದಿಲ್ಲಿ ಮುಂತಾದ ರಾಜಧಾನಿಗಳಲ್ಲಿ ಮರಾಠರ ಪ್ರಭಾವವನ್ನು ಪುನಃ ಸ್ಥಾಪಿಸಲೆಳಸಿ ಅಲ್ಲಿಯ ಮೊಗಲ ಅರಸನು ಮತ್ತು ಇವರ ಸರದಾರರಿಂದ ಮೊದಲಿನ ಕರಾರುಗಳನ್ನು ಬಳಕೆಯಲ್ಲಿ ತರಲು ಮಾಧವರಾಯನು ಇಚ್ಛಿಸಿದನು. ಇದನ್ನು ನೆರವೇರಿಸಲು ಹಲವು ಸರದಾರರು ಮುಂದೆ ಬಂದರು. ಮೊದಲು ರಜಪೂತರನ್ನು ನಂತರ ಜಾಟರನ್ನು ಸದೆಬಡಿದಾಯಿತು. ನಂತರ ಮರಾಠರು ನಜೀಬಖಾನನ ಮೇಲೆ ಸಾಗಿ ಹೋದರು. ಅವನ ಶರಣಾಗತಿಯ ನಂತರ ಮರಾಠರು ದಿಲ್ಲಿಯಲ್ಲಿ ಮೊಗಲ ಬಾದಶಹನಿಗೆ ಪಟ್ಟಗಟ್ಟಿದರು(೧೭೭೧). ಅವನು ಮರಾಠರಿಗೆ ಮೊದಲಿನ ಎಲ್ಲ ಕರಾರುಗಳನ್ನು ನಡೆಸಿಕೊಟ್ಟನು. ನಂತರ ಕೆಲವೇ ದಿನಗಳಲ್ಲಿ ನಜೀಬಖಾನನು ಸಾವಿಗೀಡಾಗಿ, ಅವನ ಮಗ ಜಾಬೇತಖಾನನೆಂಬವನು ಮರಾಠರ ಮೇಲೆ ಸಾಗಿ ಬಂದನು. ಆಗ ಮಹಾದಾಜಿ ಸಿಂಧೆಯು ಅವನನ್ನು ಎದುರಿಸಿ, ಸಂಪೂರ್ಣ ಪರಾಜಯಗೊಳಿಸಿದನು. ಇದರಿಂದ ಪಾಣಿಪತ್ತದಲ್ಲಿ ಮರಾಠರಿಗಾದ ಅಪಜಯದ ಕಲಂಕವು ತೊಳೆದು ಹೋಯಿತು. ಈ ವಿಜಯದ ನಂತರ ಮರಾಠರು ಛತ್ರಗಡವನ್ನು ಗೆದ್ದುಕೊಂಡರು. ಅದರಲ್ಲಿ ಪಾಣಿಪತ್ತದಲ್ಲಿ ಆದ

ಅಪಾರ ಲೂಟಿಯ ಸಂಪತ್ತಿ ಸಂಗ್ರಹವಿದ್ದಿತು. ಇದು ಮರಾಠರ ಸ್ವವಶವಾಯಿತು. ಇದೇ ಕಾಲಕ್ಕೆ ಮರಾಠರು ರೋಹಿಲ ಖಂಡವನ್ನು ಸೂಲಿಗೆ ಮಾಡಿದರು. ಪಾನಿಪತ್ತದ ಪರಾಭವದಿಂದ ಬಂದ ಕಲಂಕವನ್ನು ಅಳಿಸಿ ಮರಾಠರು ಈ ರೀತಿ ತಮ್ಮ ಪ್ರತಿಷ್ಠೆಯನ್ನು ಪುನಃ ಸ್ಥಾಪಿಸಿದರು.

ಇಷ್ಟೆಲ್ಲ ಮಾಡುವಾಗ ಮಾಧವರಾಯನ ದೇಹಕ್ಕೆ ಶ್ರಮವಾಗಿ, ಕ್ಷಯದ ಬಾಧೆಯಾಯಿತು. ಕ್ರಿ. ಶ. ೧೭೭೨ರಲ್ಲಿ ತನ್ನ ವಯಸ್ಸಿನ ೨೮ನೆಯ ವರ್ಷದಲ್ಲಿ ಮಾಧವರಾಯನ ಅಂತ್ಯವಾಯಿತು. ಇವನು ಶೂರನೂ, ನ್ಯಾಯಿಯೂ ನಿಷ್ಪಕ್ಷಪಾತಿಯೂ ಬುದ್ಧಿವಂತನೂ ತೇಜಸ್ವಿಯೂ ಆಗಿದ್ದನು. ಅವನಿಗೆ ಅಕಾಲ ಮೃತ್ಯುವಾದದ್ದರಿಂದ ಮಹಾರಾಷ್ಟ್ರಕ್ಕೆ ಆಗಿನ ಕಾಲದಲ್ಲಿ ತುಂಬಿಬಾರದ ಹಾನಿಯಾಯಿತು. ಇವನ ಕಾಲದ ಮಹತ್ವದ ವ್ಯಕ್ತಿಗಳೆಂದರೆ ರಾಮಶಾಸ್ತ್ರಿ ಪ್ರಭುಣೆ, ಸಖಾರಾಮ ಬಾಪೂ, ವಿಸಾಜಿ ಕೃಷ್ಣ ಬಿನಿವಾಲೆ, ಪಟವರ್ಧನ, ರಾಮಚಂದ್ರ ಗಣೇಶ ಕಾನಡೆ, ಹರಿಪಂತ ಫಡಕೆ ಮುಂತಾದವರಾಗಿದ್ದರು.

ನಾರಾಯಣರಾಯನು:— (೧೭೭೨–೧೭೭೩)

ಮಾಧವರಾಯನ ನಂತರ, ಅವನ ಚಿಕ್ಕ ತಮ್ಮನಾದ ನಾರಾಯಣರಾಯನಿಗೆ ಪೇಶ್ವೆಪದವು ಸಿಕ್ಕಿತು. ರಾಘೋಬನು ಸ್ವತಃ ಈ ಕೆಲಸವನ್ನು ನಡೆಯಿಸಿಕೊಟ್ಟನು. ಕಾಲಗತಿಯಲ್ಲಿ ನಾರಾಯಣರಾಯನಿಗೂ ರಾಘೋಬನಿಗೂ ಸರಿಹೋಗದ್ದರಿಂದ ನಾರಾಯಣರಾಯನು ರಾಘೋಬನನ್ನು ಸೆರೆಮನೆಯಲ್ಲಿಟ್ಟನು. ಇವನು ತನ್ನ ಕೈಗೆ ಪೇಶ್ವೆಪದ ಬರುವ ಹಂಚಿಕೆಯನ್ನು ಸೆರೆಮನೆಯಲ್ಲಿದ್ದಾಗ ಒಳಸಂಚಿನಿಂದ ರಚಿಸಿಕೊಳ್ಳುತ್ತಿದ್ದನು. ಒಳಸಂಚಿನಲ್ಲಿ ರಾಘೋಬನು ನಾರಾಯಣರಾಯನ ಅರಮನೆಯೆನಿಸಿದ ಶನಿವಾರವಾಡೆದಲ್ಲಿ ಚಾಕರಿಗಿದ್ದ ಆರಬ, ಗಾರದಿ ಮುಂತಾದ ಜನರನ್ನು ಬರಮಾಡಿಕೊಂಡನು. ಆದ್ದರಿಂದ ಖರಗಸಿಂಗ, ಸುಮೇರಸಿಂಗ, ಮಹಮ್ಮದ ಯುಸುಫ, ಮುಂತಾದವರ ಸಹಾಯದಿಂದ ನಾರಾಯಣರಾಯನ ಕೊಲೆಯ ಪ್ರಯತ್ನವು ನಡೆಯಿತು. ೧೭೭೩ನೆಯ ಆಗಸ್ಟ ೩೦ನೆಯ ತಾರೀಖಿನ ದಿನ ನಾರಾಯಣ

ರಾಯನು ಮೇಜವಾನಿಯ ಊಟವನ್ನುಂಡು, ಪವಡಿಸಿದ್ದನು. ಆಗ ನೂರಾರು ಜನ ಗಾರ್ದೀಜನರು ಒಳಹೊಕ್ಕು ತಮ್ಮ ಪಗಾರ ಕೊಡಬೇಕೆಂದು ಬಲವಂತ ಪಡಿಸಹತ್ತಿದರು. ಮಾತಿಗೆ ಮಾತು ಬೆಳೆದು, ಕೈಗೆ ಕೈಹತ್ತಿ ನಾರಾಯಣರಾಯನ ವಧೆಯಾಯಿತು. ಈ ಕೆಲಸ ಪೂರೈಸಿಕೊಟ್ಟಿದ್ದಕ್ಕೆ ರಾಘೋಬನು ಗಾರ್ದಿಗೆ ೫ ಲಕ್ಷ ರೂಪಾಯಿಗಳನ್ನು ಬಕ್ಷೀಸಕೊಟ್ಟನು. ಬಳಿಕ ರಘುನಾಥರಾಯನಿಗೆ ಪೇಶ್ವಪದವು ಸಿಕ್ಕಿತು. ೨–೩ ತಿಂಗಳುಗಳ ವರೆಗೆ ಅಧಿಕಾರವನ್ನು ನಡೆಸುತ್ತಿಲು, ನಾರಾಯಣರಾಯನ ಕೊಲೆಯ ತೀರ್ಪಿನಲ್ಲಿ ರಾಘೋಬನಿಗೆ ದೇಹಾಂತ ಶಿಕ್ಷೆಯನ್ನು, ಆಗಿನ ಪ್ರಸಿದ್ಧ ನ್ಯಾಯಾಧೀಶನಾದ ರಾಮಶಾಸ್ತ್ರಿ ಪ್ರಭುಣೆ ಎಂಬವನು ಕೊಟ್ಟನು.

ಈ ಒಳಗಾಗಿ ತನ್ನ ವರ್ಚಸ್ಸನ್ನು ಹರಡಲು ರಾಘೋಬನು ನೆರೆಯ ರಾಜರ ಕೂಡ ಯುದ್ಧ ಹೂಡಿದನು. ಹೈದರನ ಕೂಡ ಯುದ್ಧ ನಡೆದಾಗ, ರಾಜಧಾನಿಯಾದ ಪುಣೆಯಲ್ಲಿಯ ಪ್ರಕ್ಷುಬ್ಧ ವಾತಾವರಣವನ್ನು ಮನದಂದು, ಪುಣೆಗೆ ಮರಳಿದನು. ಈ ವೇಳೆಗೆ ಪುಣೆಯಲ್ಲಿ "ಬಾರಾ ಭಾಯಿ ಕಾರಸ್ಥಾನ"ವು ನಡೆದಿತ್ತು. ಸಖಾರಾಮ ಬಾಪೂ, ನಾನಾ ಫಡಣೀಸ, ಹರಿಪಂತ ಫಡಕೇ, ಮುಂತಾದ ಪೇಶ್ವೆಯರ ಪಕ್ಷದ ಹನ್ನೆರಡು ಜನ ಮುತ್ಸದ್ದಿಗಳು ಈ ಸಂಚಿನಲ್ಲಿದ್ದರು. ಇದರ ಮುಖ್ಯ ಗುರಿಯು, ರಾಘೋಬನನ್ನು ಪೇಶ್ವಪದದಿಂದ ಕಿತ್ತೊಗೆಯುವದಾಗಿದ್ದಿತು. ಮತ್ತು ನಾರಾಯಣರಾಯನ ಮಡದಿ ಗಂಗಾಬಾಯಿಯು (ಆಗ ಬಸರಿದ್ದಳು.) ಹೆತ್ತ ಗಂಡು ಮಗುವಿನ ಹೆಸರಿನಿಂದ ರಾಜ್ಯಭಾರ ನಡೆಯಿಸಬೇಕೆಂದು ಬಾರಾಭಾಯಿಗಳು ನೆನೆದ ಎರಡನೆಯ ಮಾತು.

ಇದನ್ನೆಲ್ಲ ಕೇಳಿ ತಿಳಿದು ರಾಘೋಬನು ಪುಣೆಗೆ ತೀವ್ರ ಗತಿಯಿಂದ ಮರಳಿದನು. ಹಾದಿಯಲ್ಲಿದ್ದಾಗಲೇ, ಪುಣೆಯ ಬಾರಾಭಾಯಿಗಳು ಇವನ ಮೇಲೆ ಏರಿ ಹೋಗಿ ಇವನನ್ನು ಹಣಿದರು. ಆಶ್ರಯವನ್ನು ಹುಡುಕುತ್ತಾ ರಾಘೋಬನು ಕೊನೆಗೆ ಸುರತದಲ್ಲಿದ್ದ ಇಂಗ್ಲಿಷರ ನೆರವಿಗೆ ಹೋದನು. ಅವರು ಅವನನ್ನು ಒಳ್ಳೆ ಆದರದಿಂದ ಬರಮಾಡಿಕೊಂಡು, ಅವನೊಡನೆ ಒಪ್ಪಂದ ಮಾಡಿಕೊಂಡರು.

ಈ ಸಂಗತಿಗಳು ನಡೆದಾಗ ಪುರಂಧರದಲ್ಲಿ ನಾರಾಯಣರಾಯನ ಹೆಂಡತಿ ಗಂಗಾಬಾಯಿಯು ಗಂಡು ಮಗುವಿಗೆ ಜನ್ಮವಿತ್ತಳು. ಚಿಕ್ಕ ಮಗುವಿಗೆ ಪೇಶ್ವೆಪದವನ್ನು ಸಾತಾರೆಯ ರಾಜನಿಂದ ಕೊಡಿಸಿ, ರಾಜ್ಯ ನಡೆಸಿದ್ದಾಯಿತು. ಇದೇ ಸಮಯಕ್ಕೆ ರಾಘೋಬನಿಗೆ ಬಾಜೀರಾಯನೆಂಬ ಒಂದು ಮಗು ಹುಟ್ಟಿತು.

ನಾರಾಯಣರಾಯನ ಮಗನಾದ ಸವಾಯಿ ಮಾಧವರಾಯನು ತೀರ ಚಿಕ್ಕವನಿದ್ದ ಮೂಲಕ ರಾಜ್ಯಭಾರವನ್ನೆಲ್ಲ ನಾನಾ ಫಡಣವೀಸನೇ ನೋಡುತ್ತಿದ್ದನು. ಅಷ್ಟೇಕೆ ! ಸವಾಯಿ ಮಾಧವರಾಯನ ಕಾಲವೆಂದರೆ, ನಾನಾ ಫಡಣವೀಸನ ಅಧಿಕಾರ ಕಾಲವೆಂದೇ ಹೇಳಬಹುದು.

ಸೋಗುಗಾರರ ಗಲಾಟೆ.

[illegible] ಗಳು [illegible] ! [illegible] ನಂತರ ಅನೇಕ [illegible] ಕಾಲದ [illegible] ವಂತರಾವ [illegible] ನ ಸೋಗಿನ [illegible] ಇವನು [illegible] ರಾಯನೆಂದು ಕರೆಸಿಕೊಳ್ಳುತ್ತಿದ್ದನು. [illegible] ಜನರು ಬೆಂಬಲ ಕೊಟ್ಟರು. [illegible] ಇವನು ಸೋಗುಗಾರನೆಂದು ಕಂಡು ಹಿಡಿದು ಅವನನ್ನು [illegible] ಸದಾಶಿವರಾಯನ ಹೆಂಡತಿ ಪಾರ್ವತಿಬಾಯಿಗೆ ಇವನು ಸೋಗುಗಾರನಲ್ಲವೆಂದು

ಭಾಸವಾಗಹತ್ತಿತು. ಇದನ್ನು ನಾನಾಫಡಣೀಸನು ಯುಕ್ತಿಯಿಂದ ಹೋಗಲಾಡಿಸಿದನು. ಸದಾಶಿವರಾಯನ ಕಿವಿಯ ಆಭರಣಗಳನ್ನು ಸೋಗುಗಾರನಿಗೆ ಇಟ್ಟುಕೊಳ್ಳಲಿಕ್ಕೆ ಕೊಟ್ಟಾಗ ಇವನ ಕಿವಿಗಳಲ್ಲಿ ರಂಧ್ರಗಳಿದ್ದಿಲ್ಲ. ಇದರಿಂದ ಇನ್ನಿತರ ಲಕ್ಷಣಗಳಿಂದ ಇವನು ಸೋಗುಗಾರನೆಂದು ಕಂಡುಹಿಡಿಯಲಾಯಿತು. ಸೋಗುಗಾರನು ನರಿಮನೆಯಿಂದ ಪಾರಾಗಿ ಮರಾಠಾ ರಾಜ್ಯದಲ್ಲಿ ಸುಲಿಗೆ ಮಾಡಹತ್ತಿದನು. ನಿಜಾಮ, ಹೈದರ, ಇಂಗ್ಲೀಷರ ಗುಪ್ತ ಸಹಾಯವಿದ್ದಿತು. ಕೊನೆಗೆ ನಾನಾಫಡಣೀಸನು ಒಳ್ಳೇ ಯುಕ್ತಿ ಮತ್ತು ಸಾಹಸಗಳಿಂದ ಇವನನ್ನು ಹಿಡಿದನು. ಸೋಗುಗಾರನನ್ನು ವಿಚಾರಣೆಗೆ ಗುರಿಮಾಡಲಾಗಿ, ರಾಮಶಾಸ್ತ್ರಿಯು ಇವನಿಗೆ ಮರಣ ದಂಡನೆಯನ್ನು ವಿಧಿಸಿದನು.

ಕ್ರಿ. ಶ. ೧೭೭೭ರಲ್ಲಿ ಸಾತಾರೆಯ ಅರಸನಾದ ರಾಮರಾಜನು ಮರಣಹೊಂದಲಾಗಿ, ಅವನಿಗೆ ಮೂರು ಜನ ಹೆಣ್ಣುಮಕ್ಕಳಿದ್ದು ಗಂಡು ಸಂತಾನವಿರಲಿಲ್ಲ. ಆದ್ದರಿಂದ ಇವನು ಒಬ್ಬ ದತ್ತಕ ಪುತ್ರನನ್ನು ಮಾಡಿಕೊಂಡನು. ದತ್ತಕ ಪುತ್ರನು ಸಾತಾರೆಯಲ್ಲಿ ಪಟ್ಟವೇರಿದನು. ಇವನಾದರೂ ದತ್ತಕ ತಂದೆ ರಾಮರಾಜನಂತೆ ಹೆಸರಿಗೆ ಮಾತ್ರ ರಾಜನಾಗಿದ್ದನು.

ಸವಾಯಿ ಮಾಧವರಾಯನು:

ಈ ಮೊದಲೆ ಹೇಳಿದಂತೆ, ರಾಘೋಬನು ಓಡಿ ಹೋಗಿ ಸೂರತದಲ್ಲಿಯ ಇಂಗ್ಲಿಷರನ್ನು ಕೂಡಿಕೊಂಡಿದ್ದನಷ್ಟೆ ? ಅಲ್ಲಿ ಅವನು ಇಂಗ್ಲಿಷರೊಡನೆ ಒಪ್ಪಂದ ಮಾಡಿಕೊಂಡದ್ದೂ ಆಯಿತು. ಒಪ್ಪಂದದಲ್ಲಿ ಮುಖ್ಯವಾಗಿ (೧) ಇಂಗ್ಲಿಷರು ರಾಘೋಬನ ಸಹಾಯಕ್ಕೆ ೩೦೦೦ ಸೈನ್ಯವನ್ನು ಕೊಡಬೇಕು. (೨) ದಂಡಿನ ವೆಚ್ಚಕ್ಕಾಗಿ ರಾಘೋಬನು ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡಬೇಕು. (೩) ಸಾಷ್ಟಿ ವಸಯಿ ಮುಂತಾದ ೧೯ ಲಕ್ಷ ರೂಪಾಯಿಗಳ ಉತ್ಪನ್ನದ ಭೂಮಿಯನ್ನು ಇಂಗ್ಲಿಷರಿಗೆ ರಾಘೋಬನು ಕೊಡಬೇಕು. ಎಂಬ ಕರಾರುಗಳಿದ್ದವು. ಈ ಕರಾರುಗಳನ್ನು ರಾಘೋಬನು ಮಾನ್ಯ ಮಾಡಿದನು. ಬಳಿಕ ಇಂಗ್ಲಿಷರ ಸೈನ್ಯವು ರಾಘೋಬನ ಸಹಾಯಕ್ಕೆ ಹೊರಹೊರಟಿತು. ಆದರೆ, ನಡುದಾರಿಯಲ್ಲಿ ಹರಿಪಂತ ಫಡಕೆಯು ಇದಕ್ಕೆ ಎದು

ರಾಗಿ ಹಣ ಕೆಡಹಿದನು.

ಸುರತದ ಅಧಿಕಾರಿಯು ರಾಘೋಬನ ಸಂಗಡ ಮಾಡಿಕೊಂಡ ಒಪ್ಪಂದವು ಇಂಗ್ಲಿಷರ ಮೇಲಧಿಕಾರಿಯಾದ ವಾರನ್ ಹೇಸ್ಟಿಂಗ್ಸನಿಗೆ ಸರಿಹೋಗಲಿಲ್ಲ. ಆದ್ದರಿಂದ ಅವನು ಸುರತ ಒಪ್ಪಂದವನ್ನು ರದ್ದುಗೊಳಿಸಿ ಹೊಸದೊಂದು ಒಪ್ಪಂದವನ್ನು ಮಾಡಿಕೊಳ್ಳಲು ವಕೀಲನನ್ನು ಪುಣೆ ದರಬಾರಕ್ಕೆ ಕಳಿಸಿದನು. ಇವನು ಪೇಶ್ವೆಯರ ಕೂಡ ಪುರಂಧರದಲ್ಲಿ ಒಪ್ಪಂದ ಮಾಡಿಕೊಂಡನು. ಅದರಲ್ಲಿ (೧)ಇಂಗ್ಲೀಷರು ರಾಘೋಬನಿಗೆ ಸಹಾಯ ಮಾಡಬಾರದು. (೨) ರಾಘೋಬನು ಜಹಗೀರ ಪಡೆದುಕೊಂಡು ಸ್ವಸ್ಥನಾಗಿರಬೇಕು. (೩) ಪೇಶ್ವೆಯರು ಇಂಗ್ಲೀಷರಿಗೆ ಸಿಷ್ಟಿ ಮುಂತಾದ ೧೨ ಲಕ್ಷ ಉತ್ಪನ್ನದ ಭೂಮಿಯನ್ನು ಕೊಡಬೇಕು. ಮುಂತಾದ ಕಲಮುಗಳಿದ್ದವು. ಇದು ಸುರತದ ಅಧಿಕಾರಿಯ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಅವನು ವಿಲಾಯತಿಯಲ್ಲಿಯ ಡಾಯರೆಕ್ಟರರ ಮುಂದಲಿಕ್ಕೆ ಮನ್ನಿಸಿಕೊಂಡನು. ಅವರು ಇ. ಸ. ೧೭೭೮ರಲ್ಲಿ ಸುರತದ ಒಪ್ಪಂದವನ್ನೇ ಎತ್ತಿ ಹಿಡಿದರು. ಆದ್ದರಿಂದ ಇಂಗ್ಲೀಷರು ಮರಾಠರ ಕೂಡ ಯುದ್ಧಕ್ಕೆ ಅಣಿಯಾಗಬೇಕಾಯಿತು. ಹೀಗಾಗಿ ಇಂಗ್ಲೀಷರು ಸೋಗುಗಾರರಿಗೆ ಆಶ್ರಯ ಕೊಟ್ಟಿದ್ದು, ಮರಾಠರು ಫ್ರೆಂಚರಿಗೆ ಆಶ್ರಯವಿತ್ತದ್ದು ಮುಂತಾದ ಕಾರಣಗಳಿದ್ದವು. ಯುದ್ಧವು ಅನಿವಾರ್ಯವಾಗಿ, ಮುಂಬಯಿ, ಕಲಕತ್ತೆಗಳಿಂದ ಮರಾಠರ ಮೇಲೆ ಸೈನ್ಯಗಳು ಸಾಗಿದವು. ಕಾರ್ಲೆ ಹತ್ತಿರ ಚಿಕ್ಕ ಯುದ್ಧವೆಸಗಿ ಇಂಗ್ಲಿಷರು ಸೋಲನ್ನೊಪ್ಪಿಕೊಂಡರು. ಮಹದಾಜಿಯ ಮಧ್ಯಸ್ಥಿಕೆಯಿಂದ ಇಂಗ್ಲಿಷ ಮರಾಠೆಯವರ ನಡುವೆ ಒಪ್ಪಂದವಾಯಿತು. ಅದರಲ್ಲಿ (೧) ಇಂಗ್ಲಿಷರು ರಾಘೋಬನನ್ನು ಶಿಂಧೆಗೆ ಒಪ್ಪಿಸಬೇಕು. (೨) ಇಂಗ್ಲಿಷರು ತಾವು ಗೆದ್ದ ರಾಜ್ಯವನ್ನು ಪೇಶ್ವೆಯರಿಗೆ ಮರಳಿ ಕೊಡಬೇಕು. ಮುಂತಾದ ಕರಾರುಗಳಿದ್ದವು.

ಶಿಂಧೆಯ ಕೈಯಿಂದ ಪಾರಾಗಿ ಬಂದು ರಾಘೋಬನು ಮತ್ತೆ ಸುರತದ ಇಂಗ್ಲಿಷರ ಮೊರೆಹೊಕ್ಕನು. ಮತ್ತು ಅವರ ಸಹಾಯದಿಂದ ಮೊದಲು ಅಹಮದಾಬಾದ, ಆ ಮೇಲೆ ಬರಬರುತ್ತ ಇಡೀ ಗುಜರಾಥವನ್ನೇ ತನ್ನ

ವಶಕ್ಕೆ ತೆಗೆದುಕೊಂಡನು. ಆದ್ದರಿಂದ ಮರಾಠರು ಮತ್ತೆ ರಣರಂಗಕ್ಕಿಳಿಯ ಬೇಕಾಯಿತು. ಇಂಗ್ಲಿಷರನ್ನು ಹಣ್ಣಿಗೆ ತರಲು ನಾನಾ ಫಡಣವೀಸನು ಬೇರೊಂದು ಯುಕ್ತಿಯನ್ನು ಹೂಡಿದನು. ಅದೆಂದರೆ, ನಾಗಪುರದ ಭೋ—ಸಲೆ, ಮೈಸೂರಿನ ಹೈದರ ಅಲ್ಲಿ ಮತ್ತು ಹೈದರಾಬಾದದ ನಿಜಾಮನೂ, ಮತ್ತು ಪುಣೆಯ ಪೇಶ್ವೆಯರೂ, ಒಂದೇ ವೇಳೆಗೆ ಇಂಗ್ಲಿಷರ ಮೇಲೆ ಸಾಗಿ ಹೋಗಬೇಕೆಂಬುದು. ಅದರಂತೆ ಹೈದರನು ಮದ್ರಾಸದ ಮೇಲೆ ಸಾಗಿ ಹೋಗಿ ಇಂಗ್ಲಿಷರನ್ನು ಬಲವಾಗಿ ಹಣಿದನು. ಪೇಶ್ವೆಯರು ಮುಂಬಯಿಯ ಮೇಲೆ ಏರಿ ಹೋಗಿ ಇಂಗ್ಲಿಷರನ್ನು ಹಣ್ಣು ಹಣ್ಣು ಮಾಡಿದರು. ಆದ್ದರಿಂದ ಇಂಗ್ಲಿಷರು ಒಪ್ಪಂದಕ್ಕೆ ತಯಾರಾದರು. ಇದು ಸಾಲ್ಬಾಯಿಯ ಒಪ್ಪಂದ ವೆಂದು ಹೆಸರಾಗಿದೆ. ಇಂಗ್ಲಿಷರು ರಾಘೋಬನ ಪಕ್ಷ ಬಿಡಬೇಕೆಂದೂ, ಅವನು ಪೆನ್‌ಶನ್ ಪಡೆದು ಸ್ವಸ್ಥ ಇರಬೇಕೆಂದೂ, ಸಾಷ್ಟಿಯು ಇಂಗ್ಲಿಷರಿಗೆ ಸಲ್ಲತಕ್ಕದ್ದೆಂದೂ, ಇನ್ನೂ ಅನೇಕ ಮಹತ್ವದ ಕರಾರುಗಳು ಇದರಲ್ಲಿ ಇದ್ದವು.

ಕ್ರಿ. ಶ. ೧೭೮೨ರಲ್ಲಿ ಮೈಸೂರ ಅರಸನಾದ ಹೈದರನು ಮರಣ ಹೊಂದಲು, ಅವನ ಮಗನಾದ ಟೀಪು ಎಂಬವನು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ರಾಜ್ಯಭಾರ ಸಾಗಿಸಿದನು. ಇವ ನಿಗೂ ಪೇಶ್ವೆಯರಿಗೂ ವೈರವು ತಲೆದೋರಿತು. ಹರಿಪಂತ ಫಡಕೆ, ತುಕೋಜಿ ಹೋಳಕರ ಎಂಬ ಮರಾಠಾ ಸರದಾರರು ಇವನ ಮೇಲೆ ಏರಿ ಹೋಗಲು, ಟೀಪುವು ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದಿಂದ ಟೀಪುವು ಕಿತ್ತೂರ, ಬಾದಾಮಿ, ನರಗುಂದ ಪ್ರಾಂತಗಳನ್ನೂ, ೪೫ ಲಕ್ಷ ರೂಪಾಯಿಗಳನ್ನೂ, ಮರಾಠರಿಗೆ ಕೊಡಬೇಕಾಯಿತು. ಮುಂದೆ ೧೭೯೨ರಲ್ಲಿ ಟೀಪುವಿನ ವಿರುದ್ಧ ಮರಾಠಾ, ನಿಜಾಮ, ಮತ್ತು ಇಂಗ್ಲಿಷರು ಕೂಡಿ, ಯುದ್ಧ ನಡೆಸಿದರು. ಅದರಲ್ಲಿ ಸೋತದ್ದರಿಂದ ಟೀಪುವು ಶ್ರೀರಂಗಪಟ್ಟಣದಲ್ಲಿ ಒಡಂಬಡಿಕೆ ಮಾಡಿ ಕೊಂಡನು. ಇದರಿಂದ ಮರಾಠರಿಗೆ ೧ ಕೋಟಿ ರೂಪಾಯಿಗಳೂ ಸವಣೂರ ಪ್ರಾಂತವೂ ಸಿಕ್ಕವು.

ಮಹದಾಜಿ ಶಿಂಧೆ:

ಈ ಕಾಲದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದ ವ್ಯಕ್ತಿಯೆಂದರೆ, ಮಹ

ದಾಜಿ ಶಿಂಧೆಯು. ಇವನು ರಾಣೋಜಿ ಶಿಂಧೆ ಎಂಬ ಮರಾಠಾ ವೀರನ ಮಗನು. ರಾಣೋಜಿಯು ಪೇಶ್ವೆಯರಲ್ಲಿ ಚಾಕರಿಗನಿದ್ದನು. ಮಹದಾಜಿಯು ಪಾಣಿಪತ್ತಿನ ಯುದ್ಧದಲ್ಲಿ ಕಲಿತನದಿಂದ ಕಾದಾಡಿ, ಜೀವವುಳಿಸಿಕೊಂಡು, ಓಡಿಬಂದವರಲ್ಲಿ ಒಬ್ಬನು. ತಂದೆಯ ನಂತರ ಮಹದಾಜಿಯು ದೇಸಾಯಿ ವೀರ ಸರದಾರರಲ್ಲಿ ಎಣಿಕೆಯಾಗಹತ್ತಿತು. ಬ್ರಿಟಿಶ ಸೈನಿಕರ ಯುದ್ಧ ಕ್ರಮವನ್ನೂ ಶಿಸ್ತನ್ನೂ ಕಂಡು ಅವರೊಂದಿಗೆ ಗೆಳೆತನದಿಂದಿರಬೇಕೆಂದು ಮಹದಾಜಿಯು ಬಗೆದನು. ಆದ್ದರಿಂದ ಇವನು ಹೇಸ್ಟಿಂಗ್ಸನ ಕೂಡ ಒಪ್ಪಂದ ಮಾಡಿಕೊಂಡನು. ವಡಗಾಂವ ಸಲಬಾಯಿಗಳ ಒಡಂಬಡಿಕೆಗಳು ಇವನ ಪ್ರಯತ್ನದಿಂದಲೇ ನಡೆದವು. ಕ್ರಿ. ಶ. ೧೭೮೦ ರ ನಂತರ ದಿಲ್ಲಿಯ ದರಬಾರದಲ್ಲಿ ಗೊಂದಲಮಯವಾದ ಪರಿಸ್ಥಿತಿಯಿದ್ದಾಗ, ಮಹದಾಜಿಯು, ಬಾದಶಹನ ಆಮಂತ್ರಣದ ಮೇರೆಗೆ ಅಲ್ಲಿಗೆ ಹೋಗಿ ರಾಜ್ಯ ಸೂತ್ರಗಳನ್ನು ಸಂಘಟಿಸಿಬಿಟ್ಟನು. ಸಂತೋಷಪಟ್ಟ ಬಾದಶಹನು ಪೇಶ್ವೆಯರಿಗೆ "ವಕೀಲ ಇ - ಮುತ್ಲಕ್" ಎಂಬ ಬಿರುದನ್ನು ದಯಪಾಲಿಸಿ, ಮಹದಾಜಿಯನ್ನು ಈ ಅಧಿಕಾರದಲ್ಲಿ ನೇಮಿಸಿದನು. ಮಹದಾಜಿಯ ಈ ಉತ್ಕರ್ಷವನ್ನು ಕಂಡು ರಜಪೂತರೂ, ಇತರ ಮುಸಲ್ಮಾನರೂ ಅಸೂಯೆಪಟ್ಟರು. ಒಂದೆರಡು ಸಲ ಇವನು ಸೋಲನ್ನೊಪ್ಪಿಕೊಂಡರೂ, ದಿಲ್ಲಿಯಲ್ಲಿ ಮರಾಠರ ಪ್ರಭಾವವನ್ನು ನೆಲೆಸಿದನು. ದಿಲ್ಲಿಯ ಬಾದಶಹನು ದಯಪಾಲಿಸಿದ ಬಿರುದನ್ನೂ, ವಸ್ತ್ರಗಳನ್ನೂ ಇವನು ಪೇಶ್ವೆಯರಿಗೆ ತಂದೊಪ್ಪಿಸಿದನು. ಮುಂದೆ ಕ್ರಿ. ಶ. ೧೭೯೪ ರಲ್ಲಿ ಇವನು ಮರಣ ಹೊಂದಿದನು.

ಪೇಶ್ವೆಯರ ಕಾಲಾವಧಿಯ ಉತ್ತರಾರ್ಧದಲ್ಲಿ ಮಹದಾಜಿಯು ಅತ್ಯಂತ ಧೋರಣೆ, ಮುತ್ಸದ್ಧಿ ಮತ್ತು ಕರ್ತೃತ್ವಶಕ್ತಿಯುಳ್ಳವನೆನಿಸಿಕೊಂಡನು. ಇಂಗ್ಲೀಷ ಪದ್ಧತಿಯ ಪ್ರಕಾರ ತನ್ನ ಸೈನ್ಯವನ್ನು ತರಬೇತುಗೊಳಿಸಿದನು. ಮತ್ತು ಮೊಗಲ ದರಬಾರದಲ್ಲಿ ಕಾರಭಾರವನ್ನು ಕೈಗೆ ತಕ್ಕೊಂಡು, ಮರಾಠರ ಪ್ರಭಾವವನ್ನು ಚನ್ನಾಗಿ ಬೀರಿದನು. ಆಗಿನ ಕಾಲದ ಇನ್ನೊಬ್ಬ ಶ್ರೇಷ್ಠ ಮುತ್ಸದ್ದಿಯಾದ ನಾನಾಫಡಣವೀಸನಿಗೂ ಇವನಿಗೂ ಒಮ್ಮೊಮ್ಮೆ ಒಳ್ಳೆ ತುರುಸಿನ ವಾದವು ಏಳುತ್ತಿತ್ತು. ಮಹದಾಜಿಗೆ ಗಂಡು ಮಕ್ಕಳಿರಲಿಲ್ಲ. ಅದ್ದ

ಶಿಂದ ಮರಣದ ನಂತರ, ಇವನ ಮೊಮ್ಮಗನಾದ ದೌಲತ್ತರಾವ ಶಿಂಧೆಯು ಇವನ ಪದವನ್ನು ಅಲಂಕರಿಸಿದನು

ಖರ್ಡ್ಡ ಕಾಳಗ:—

ಹಿಂದಕ್ಕೆ ರಾಕ್ಷಸ ಭುವನದ ಕಾಳಗದಲ್ಲಿ ಸೋತು, ಮರಾಠರಿಗೆ ಕೊಡತಕ್ಕ ಭೂಮಿಯನ್ನು ನಿಜಾಮನು ಕೊಟ್ಟಿದ್ದಿಲ್ಲ. ಅಲ್ಲದೆ, ತಮ್ಮ ಚೌಧಾಯಿ ಮತ್ತು ಸರದೇಶಮುಖಿಗಳನ್ನೂ ಪೇಶ್ವೆಯರು ಬೇಡಹತ್ತಿದರು. ಇವುಗಳನ್ನು ನಿಜಾಮನು ಅಲ್ಲಗಳೆದದ್ದರಿಂದ ಯುದ್ಧವು ಮೊದಲಾಯಿತು. ಎಲ್ಲ ಮರಾಠಾ ಸರದಾರರು ಕೂಡಿಕೊಂಡು ನಡೆಸಿದ ಈ ಯುದ್ಧದಲ್ಲಿ ನಿಜಾಮನಿಗೆ ಅಪಜಯವುಂಟಾಯಿತು. ಮೊದಲಿನಿಂದ ನಿಂತ ಬಾಕಿ ಹಣವನ್ನು ತೆತ್ತಬೇಕಾಯಿತಲ್ಲದೆ ನಿಜಾಮನು, ಆಗ ನಡೆದ ಕಾಳಗದ ವೆಚ್ಚವನ್ನು ಸಲ್ಲಿಸಬೇಕಾಯಿತು. ಆದ್ದರಿಂದ ೩ ಕೋಟಿ [illegible] ರೂ. ಗಳನ್ನು, ಗಡಿನಾಡಿನಲ್ಲಿ ೩೫ ಲಕ್ಷ ರೂ. ಗಳ ಉತ್ಪನ್ನದ ಭೂಮಿಯನ್ನೂ ಮತ್ತು ದೌಲತಾಬಾದದ ಕೋಟೆಯನ್ನೂ ಕೊಡಬೇಕಾಯಿತು.

ಕ್ರಿ. ಶ. ೧೭೯೫ ರಲ್ಲಿ ಸವಾಯಿ ಮಾಧವರಾಯನು ಮಡಿದನು. ಕೊನೆಕೊನೆಗೆ ಅವನಿಗೆ ಕೆಲಮಟ್ಟಿಗೆ ಮತಿ ಭ್ರಮಣವಾದಂತೆ ತೋರುತ್ತದೆ. ಒಮ್ಮೆ ಜ್ವರ ಬಂದು ಮಲಗಿದಾಗ, ಪುಣೆಯ ಶನಿವಾರವಾಡೆಯಲ್ಲಿಯ ಒಂದು ಕಾರಂಜಿಯ ಮೇಲೆ ಹಾರಿಕೊಂಡು ಇವನು ಪ್ರಾಣಕ್ಕೆ ಎರವಾದನು.

೨ ನೆಯ ಬಾಜೀರಾಯನು:—

ಸವಾಯಿ ಮಾಧವರಾಯನ ಮರಣದ ನಂತರ ೨ ನೆಯ ಬಾಜೀರಾಯನು ಪೇಶ್ವೆಪದವನ್ನು ಅಲಂಕರಿಸಿದನು. ಇವನಿಗೂ ನಾನಾಫಡಣೀಸನಿಗೂ ಸರಿಹೋಗದ್ದರಿಂದ ಇವನು ನಾನಾಫಡಣವೀಸನನ್ನು ತುರಂಗದಲ್ಲಿ ಒಗೆದನು. ಮುಂದೆ ಕೆಲದಿನಗಳಲ್ಲಿಯೇ ಇವನ ಬಿಡುಗಡೆಯಾಯಿತು. ಆದರೆ, ಮರಣವು ಹೊಂಚುಹಾಕಿಕುಳಿತದ್ದರಿಂದ ಕ್ರಿ. ಶ. ೧೮೦೦ ರಲ್ಲಿ

ನಾನಾಫಡಣವೀಸನು ತನ್ನ ಸ್ವಂತ ಮಹಲಿನಲ್ಲಿ ಅಸುನೀಗಿದನು. ಇವನ ಮರಣದಿಂದ ಮರಾಠಾ ರಾಜ್ಯಕ್ಕೆ ತುಂಬಿ ಬರಲಾರದಷ್ಟು ಹಾನಿಯಾಯಿತು.

ನಾನಾಫಡಣವೀಸನ ಚರಿತ್ರೆ ಮತ್ತು ಯೋಗ್ಯತೆ: —

ನಾನಾಫಡಣವೀಸನು ಕ್ರಿ. ಶ. ೧೭೪೨ ರಲ್ಲಿ ಜನ್ಮವೆತ್ತಿದನು. ಚಿಕ್ಕಂದಿನಲ್ಲಿ ಉದಾತ್ತತನದಿಂದ ನಾಲಕಳೆಯುತ್ತಿದ್ದುದನ್ನು ಕಂಡು, ವಿಶ್ವಾಸರಾವ ಮತ್ತು ಮಾಧವರಾಯನೊಡನೆ ವಿದ್ಯಾಭ್ಯಾಸಕ್ಕೆ ತೊಡಗಿಸಿದರು. ಆಗಿನ ಪದ್ಧತಿಯಂತೆ, ವೇದಮಂತ್ರಗಳು, ಓದು, ಬರಹ, ಗಣಿತ ಏರು ಪೇರು, ಶಸ್ತ್ರ ಧಾಟಿ ತಿರುವುದು, ಮುಂತಾದವುಗಳನ್ನು ಕಲಿತನು. ಕ್ರಿ. ಶ. ೧೭೬೧ರಲ್ಲಿ ಆದ ಮೂರನೆಯ ಪಾಣಿಪತ ಯುದ್ಧದಲ್ಲಿ ನಾನಾನು ಸೈನ್ಯದ ಜೊತೆಗೆ ಉತ್ತರಕ್ಕೆ ಹೋಗಿದ್ದನು. ಅಲ್ಲಿ ಪೇಶ್ವೆಯರು ಸೋತ ಕೂಡಲೆ ನಾನಾನು ಬೈರಾಗಿಯ ಸೋಗುಹಾಕಿಕೊಂಡು ದಕ್ಷಿಣಕ್ಕೆ ಓಡಿಬಂದಿದ್ದನು. ಇವನು ಎರಡನೆಯ ಸಲ ಫಡಣೀಸನ ಕೆಲಸಕ್ಕೆ ನೇಮಕ ಹೊಂದಿದಾಗ ಇವನ ಪ್ರತಿಷ್ಠೆಯು ಬಹಳಷ್ಟು ಬೆಳೆಯಿತು. ಮುಂದೆ ಕೆಲವು ದಿನಗಳಲ್ಲಿಯೇ ನಾರಾಯಣರಾಯನ ಕೊಲೆಯಾದ್ದರಿಂದ ನಾನಾನು ಮನಮುಟ್ಟಿ ಪ್ರಯತ್ನಮಾಡಿ, ನಾರಾಯಣರಾಯನ ಸಂತತಿಗೆ ಪೇಶ್ವೆಪದವನ್ನು ಕೊಡಿಸಿದನು. ಪುರಂಧರದ ಒಪ್ಪಂದ ಮತ್ತು ಸಾಲಬಾಯಿ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಇವನು ಮಿಗಿಲಾದ ಬುದ್ಧಿವಂತಿಕೆಯನ್ನು ತೋರಿಸಿದನು. ಹೆಚ್ಚೇನು ! ಸವಾಯಿ ಮಾಧವರಾಯನ ಮರಣದ ವರೆಗೆ ಪೇಶ್ವೆಯರ ಇತಿಹಾಸವೆಂದರೆ, ನಾನಾನ ಚರಿತ್ರೆಯೆನ್ನಬಹುದು.

ನಾನಾನು ಸ್ವಭಾವದಿಂದ ಅಂಜುಗುಳಿಯಾಗಿದ್ದನು. ಗುಂಡಿನ ಸಪ್ಪಳ ಕೇಳಿದ ಕೂಡಲೆ ಇವನ ಬುದ್ಧಿ ಮಸಣುತ್ತಿತ್ತು. ರಾಜತಂತ್ರಗಳಲ್ಲಿ ಮತ್ತು ಮನುಷ್ಯನ ಸ್ವಭಾವ ಪರೀಕ್ಷೆಗಳಲ್ಲಿ ಇವನದು ಎತ್ತಿದ ಕೈ. ಮಿತಭಾಷಣ, ಸತತೋದ್ಯೋಗ, ನಿಯಮಿತತನಗಳು ಇವನ ಚರಿತ್ರೆಯ ಹೆಗ್ಗುರುತುಗಳು. ಒಣ ಹರಟೆ, ಹಾಳು ಚೇಷ್ಟೆಗಳು ಇವನಿಗೆ ಸೇರುತ್ತಿದ್ದಿಲ್ಲ. ಹೆಚ್ಚು ಕಲಿತವ

ನಾಗದಿದ್ದರೂ ಇವನು ಬಹುಶ್ರುತನಾಗಿದ್ದನು. ದೇವಬ್ರಾಹ್ಮಣರಲ್ಲಿ ನಂಬಿಕೆಯಿಟ್ಟವನಾದರೂ ವಿಷಯವಾಸನೆಗೊಳಗಾಗಿದ್ದನು. ಫಲಜ್ಯೋತಿಷದಲ್ಲಿ ಇವನ ನಂಬಿಕೆ ಬಹಳ. ದ್ರವ್ಯಸಂಗ್ರಹಕ್ಕೆ ಮೆಚ್ಚಿದವನಾದ್ದರಿಂದ ಆಗಿನ ಕಾಲಕ್ಕೆ ನವಕೋಟಿನಾರಾಯಣನೆಂಬ ಬಿರುದನ್ನು ಪಡೆದಿದ್ದನು. ಇವನ ದ್ರವ್ಯವೆಲ್ಲ ಒತ್ತಟ್ಟಿಗೆ ಸಂಗ್ರಹವಾಗಿರದೆ ನಂಬಿಗಸ್ಥ ಬೇರೆ ಬೇರೆ ಸಾಹುಕಾರರಲ್ಲಿದ್ದಿತು. ಆದ್ದರಿಂದ ಸೆರೆಸಿಕ್ಕಾಗ ಇಲ್ಲವೆ ಸತ್ತಾಗ ಶಿಂಧೆ ಪೇಶ್ವೆಯರಿಗೆ ಇವನ ಮನೆಯಲ್ಲಿ ಒಂದು ಕಾಸಾದರೂ ಸಿಗಲಿಲ್ಲ. ಇವನಿಗೆ ಒಟ್ಟಿಗೆ ಒಂಬತ್ತು ಜನ ಹೆಂಡಂದಿರು. ಅವರಲ್ಲಿ ಏಳುಜನ ಇವನಿರುವಾಗಲೇ ಗತಿಸಿಹೋಗಿದ್ದರು. ಇವರಲ್ಲಿ ಮೂರು ಜನರಿಗೆ ಮಾತ್ರ ಮಕ್ಕಳಾಗಿದ್ದವು. ಕೂಸುಗಳು ಚಿಕ್ಕಂದಿನಲ್ಲಿಯೇ ಸತ್ತವು. ಆದ್ದರಿಂದ ಇವನಿಗೆ ಗೃಹಸೌಖ್ಯವು ಏನೂ ಇದ್ದಿಲ್ಲವೆನ್ನಬಹುದು. ಕೆಲವು ಲೋಪದೋಷಗಳ ವಿನಾ ಇವನೊಬ್ಬ ಶ್ರೇಷ್ಠತರಗತಿಯ ರಾಜಕಾರಣಿಯೆನ್ನಲು ಆತಂಕವಿಲ್ಲ. ಸ್ವಕೀಯರನ್ನು ಹಿಡಿತದಲ್ಲಿಟ್ಟುಕೊಳ್ಳುವದೂ, ಪರಕೀಯರ ಚಂಚುಪ್ರವೇಶವು ಆಗದಂತೆ ರಾಜ್ಯನಡೆಸುವದೂ ಇವನಿಗೆ ಸಾಧಿಸಿದ ವಿಷಯಗಳಾಗಿದ್ದವು. ಭೂಕಂದಾಯ ಮತ್ತು ಅದರ ಲೆಕ್ಕಪತ್ರಗಳ ಸಂಬಂಧ 'ನಾನಾ'ನು ಯೋಗ್ಯವ್ಯವಸ್ಥೆ ಮಾಡಿದ್ದನು. ಇವನ ಮರಣದಿಂದ ಮರಾಠರಲ್ಲಿಯ ಧೋರಣೆ, ವಿಚಾರಶಕ್ತಿ, ಸಯಮಿತತನ, ಸುವ್ಯವಸ್ಥಿತತನಗಳು ಮಾಯವಾದವೆಂದು ಇಂಗ್ಲಿಷರು ಅನ್ನಹತ್ತಿದ್ದರು. ಪ್ರತಿಪಕ್ಷಿಯರ ಆಟತಿಳಿದುಕೊಳ್ಳುವಿಕೆ ಮತ್ತು ಆಟಕ್ಕೆ ಪ್ರತಿಆಟ ಹೂಡುವಿಕೆಗಳು ಇವನಿಗೆ ಬಹುಸಾಧಿಸಿದ್ದವು. ಇವನ ಮರಣವು ಮರಾಠರ ಅವನತಿಯನ್ನು ಸೂಚಿಸಿತು.

ಕ್ರಿ. ಶ. ೧೮೦೩ರಲ್ಲಿ ಪೇಶ್ವೆಯರ ಸೇನಾಪತಿಯಾದ ಪರಶುರಾಮಭಾವು ಪಟವರ್ಧನನು ಮರಣಹೊಂದಲಾಗಿ ಬಾಪೂ ಗೋಖಲೆ ಎಂಬ ಸರದಾರನು ಸೇನಾಪತಿ ಪದವನ್ನು ಸ್ವೀಕರಿಸಿದನು. ಇತರ ಮರಾಠಾ ಸರದಾರರಾದ ಹೋಳಕರ ಸಿಂಧೆ ಇವರಲ್ಲಿ ಒಡಕು ಹುಟ್ಟಿದ್ದರಿಂದ ಅವರು ತಮ್ಮ ತಮ್ಮೊಳಗೆ ಹೋರಾಡಹತ್ತಿದರು, ಇದಕ್ಕೆ ಪೇಶ್ವೆ ೨ನೆಯ ಬಾಜೀರಾಯನೂ ಸಂಬಂಧಪಟ್ಟಿದ್ದರಿಂದ ಒಮ್ಮೆ ಇತರ ಮರಾಠಾ ಸರದಾರರು ಪುಣೆಪಟ್ಟಣದಲ್ಲಿ ನುಗ್ಗಿ

ಅದನ್ನು ಸುಟ್ಟರು. ಆಗ ಎರಡನೆಯ ಬಾಜೀರಾಯನು [illegible]ನಾಗಿ ವಸ ಯಿಯಲ್ಲಿ [illegible] ಇಂಗ್ಲೀಷರ ಸೈನ್ಯವನ್ನು ಕೋರಿ ಅಲ್ಲಿಗೆ ಓಡಿಹೋದನು. ಪೇಶ್ವೆಪದವು ಅಮೃತರಾವ ಎಂಬ ಎರಡನೆ ಬಾಜೀರಾಯನ (ರಾಘೋಬನ ದತ್ತಕಮಗ) ಕಡೆಗೆ ಹೋಯಿತು. ಬಾಜೀರಾಯನು ವಸಯಿಯಲ್ಲಿ ಇಂಗ್ಲೀಷರ ಕೂಡ ಒಪ್ಪಂದವನ್ನು ಮಾಡಿಕೊಂಡನು. ಅದರಲ್ಲಿ ಮುಖ್ಯಾಂಶಗಳು ಮೂರಿದ್ದವು. (೧) ಇಂಗ್ಲೀಷರು [illegible] ಸೈನ್ಯವನ್ನು [illegible]. (೨) [illegible] ಇಂಗ್ಲೀಷರ [illegible] (೩) [illegible] [illegible] [illegible] ತಮ್ಮ ಸ್ವಾತಂತ್ರ್ಯವನ್ನು [illegible]. [illegible] ಇಂಗ್ಲೀಷರ [illegible] ಗತಿಯಲ್ಲಿ [illegible] ದನು. [illegible] ಯಿ [illegible] ರದ ಒಪ್ಪಿಗೆಯಿಲ್ಲ [illegible] ಇಂಗ್ಲೀಷರು ಹೋರಾಡಬೇಕಾ ಯಿತು. ಹೋರಾಟ ಶಿಂಧ್ಯನ ಸಂಗಡ ನಂತರ ಭೋಸಲೆಯ [illegible] ಪ್ರಾರಂಭವಾಯಿತು. [illegible] ಶಿಂಧೆ ಮತ್ತು ಭೋಸಲೆಯವರ ಸಂಗಡ ಗೆಲುವಿನಿಂದ [illegible] ಕೊಂಡರು. [illegible] ಇಂಗ್ಲೀಷರಿಗೆ ಒಪ್ಪಿಸ ದ ಮರಾಠರು ತಮ್ಮ [illegible] ಕೊಂಡರು. ಇದೇ ಇತಿಹಾಸ ಪ್ರಸಿದ್ಧವಾದ ಮರಾಠರ ಎರಡನೆಯ ಯುದ್ಧ.

ಇನ್ನೊಬ್ಬ ಮರಾಠಾ ಸರದಾರನಾದ ಹೋಳಕರನು ವಸಯಿ ಒಪ್ಪಂದವನ್ನು ಮನ್ನಿಸದ್ದರಿಂದ, ಮತ್ತು ತಾನು ಸ್ವತಂತ್ರನೆಂದು ಸಾರಿ, ರಜಪೂತಸ್ಥಾನದಲ್ಲಿ ಸುಲಿಗೆ ನಡಿಸಿದ್ದರಿಂದ, ಇಂಗ್ಲಿಷರು ಇವನ ಮೇಲೆ ಏರಿ ಹೋದರು. ಇದೇ ಮರಾಠರ ೩ನೆಯ ಯುದ್ಧವು (೧೮೦೫). ಇದರಲ್ಲಿ ಹೋಳಕರನು ಸೋತು ಶರಣು ಬಂದನು. ಆದರೆ ಇಂಗ್ಲಿಷರು ಇವನೊಡನೆ ಮಿತ್ರತ್ವದ ಒಪ್ಪಂದ ಮಾಡಿಕೊಂಡರು. ಮುಂದೆ ಹೋಳಕರನು ಕ್ರಿ. ಶ. ೧೮೧೧ರಲ್ಲಿ ಮರುಳು ಹಚ್ಚಿ ಮಡಿದನು.

ಕ್ರಿ. ಶ ೧೮೦೮ರಲ್ಲಿ ಸಾತಾರೆಯ ನಾಮಮಾತ್ರ ಅರಸನಾದ ಶಾಹೂ ಮಹಾರಾಜನು ಸ್ವರ್ಗಸ್ಥನಾದನು. ಈತನಿಗೆ ಔರ್ಸದ ಮಕ್ಕಳಿದ್ದು, ಹಿರಿಯ ಮಗನಾದ ಪ್ರತಾಪಸಿಂಹನೆಂಬವನು ಶಾಹೂನ ನಂತರ ಸತಾರೆಯ ಪಟ್ಟವೇರಿದನು. ಆದರೆ ಇವನಿಗೂ ೨ ನೆಯ ಬಾಜೀರಾಯನಿಗೂ ಸೆಟ್ಟಿಗಿದ್ದಿಲ್ಲವಾದ್ದರಿಂದ, ದೂರದರ್ಶಿಗಳಾದ ಇಂಗ್ಲೀಷರು ಇವರಿಬ್ಬರಲ್ಲಿ ಒಡಕು ತಲೆಯೆತ್ತುವ ಹೊತ್ತು ಕಾಯುತ್ತ, ಹೊಂಚಿಸಿ ಕುಳಿತಿದ್ದರು. ಬಾಜೀರಾಯನು ಇದನ್ನು ಗುರುತಿಸಿ ಒಳ್ಳೆ ಜಾಗರೂಕತೆಯಿಂದ ಕೆಲಸ ಸಾಗಿಸಿದ್ದನು.

ಇಂಗ್ಲೀಷರ ಕೂಡ ಬಾಜಿರಾಯನು ಮಾಡಿದ ವಸಯಿ ಒಪ್ಪಂದದಿಂದ ಅವನಿಗೆ ಪೇಶ್ವೆ ಪದವು ಪುನಃ ಸಿಕ್ಕಿತಲ್ಲದೆ, ಈತನ ರಕ್ಷಣಾರ್ಥ ಇಂಗ್ಲೀಷ ಸೈನವು ಈತನ ಕಡೆಗೆ ಬಂದಿತಷ್ಟೆ ! ಅದರ ಬಲದಿಂದ ಬಾಜೀರಾಯನು ಮನಬಂದಂತೆ ಆಡಳಿತೆ ನಡೆಸಹತ್ತಿದನು. ಕೆಲ ಜನ ಸರದಾರರ ಜಹಗೀರವನ್ನು ಈತನು ಬಂದುಮಾಡಿದ್ದರಿಂದ ಅವರಲ್ಲಿ ಅಸಂತೋಷವು ಬೆಳೆಯಿತು. ಸದಾಶಿವ ಮಾಣಕೇಶ್ವರ ಎಂಬೋರ್ವ ಕ್ಷುದ್ರ ಮನುಷ್ಯನಿಗೆ ಈತನು ಕಾರಭಾರವನ್ನೊಪ್ಪಿಸಿದನು. ಇನ್ನಿತರ ಅಸಮರ್ಥ ಜನರು ಆಡಳಿತೆಯಲ್ಲಿ ಕೈ ಹಾಕಿದ್ದರಿಂದ ರಾಜ್ಯಭಾರದಲ್ಲಿ ಸಡಿಲು ಹುಟ್ಟಿತು. ಸ್ವತಃ ಬಾಜೀರಾಯನಲ್ಲಿಯೂ ಕೆಲವು ಲೋಪದೋಷಗಳಿದ್ದರಿಂದ ರಾಜ್ಯದ ಮೇಲೆಯೂ, ಬಾಜೀರಾಯನ ಮೇಲೆಯೂ ಅನೇಕ ಪ್ರಕಾರದ ತೊಂದರೆಗಳು ಮೇಲಿಂದ ಮೇಲೆ

ಬರುತ್ತಿದ್ದವು. ಇದಕ್ಕೆ ಬಾಜೀರಾಯನ ಸ್ವಾರ್ಥ, [illegible] ಕಾರಣವಾಗಿದ್ದವು.

ಈ ಸಮಯಕ್ಕೆ ಬಾಜೀರಾಯನು [illegible] ಕೊಡತಕ್ಕ ಬಾಕಿ ಹಣವನ್ನು ಸಲ್ಲಿಸಬೇಕೆಂಬ [illegible] ಬರಹತ್ತಿತು. ಇದರ ಸಲುವಾಗಿ ಬಾಜೀರಾಯ [illegible] ನಡುವೆ ಅನೇಕ ದಿನಗಳಿಂದ ತಂಟೆ ನಡೆಯುತ್ತ [illegible] ವಾಡನು ಹಣದ ಸಾಲಿಗಾಗಿ ಗಂಗಾಧರ [illegible] ಬಾಜೀರಾಯನ ಕಡೆಗೆ ಕಳಿಸಿದನು. [illegible] ಕೊಟ್ಟಿದ್ದನು.

ಬಾಜೀರಾಯನು ಗಂಗಾಧರ ಶಾಸ್ತ್ರಿಯನ್ನು [illegible] ದಿಕೊಂಡು ಆದರಿಸಿದನು. ಅತಿ ಸ್ವಲ್ಪ ಕಾಲದಲ್ಲಿ [illegible] ದಲ್ಲಿ ಈ ಮಾತುಕತೆಗಳು ನಿರ್ಧಾರವಾಗುವುದಿಲ್ಲ [illegible] ತ್ತಾಯಿತು. ಮತ್ತು ತದನಂತರ ಗಂಗಾಧರ [illegible] ಕಡೆಗೆ ಸಾಗಿದನು. ಆದರೆ, ಅಲ್ಲಿಯ [illegible] ಮುಂದೆ, ಗಂಗಾಧರ ಶಾಸ್ತ್ರಿಯ [illegible] ಬಾಜೀರಾಯನು ಶಾಸ್ತ್ರಿಯ ಜೊತೆಗೆ [illegible] ದ್ದನು.

ಗಂಗಾಧರ ಶಾಸ್ತ್ರಿಯ ಕೊಲೆಯು [illegible] ಈ ಕೊಲೆಯು [illegible] ಬಾಜೀರಾಯನು [illegible] ಯನ್ನು [illegible] ಟಿತು. ಆದ್ದರಿಂದ ತ್ರಿಯಂಬಕಜಿಯನ್ನು ತನ್ನ [illegible] ಇಂಗ್ಲೀಷರು ಬಾಜೀರಾಯನನ್ನು ಒತ್ತಾಯ ಮಾಡಿದರು. [illegible] ಮೋಸ ಮಾಡಿ ಬಾಜೀರಾಯನು ತ್ರಿಯಂಬಕಜಿಯನ್ನು [illegible]

ಒಪ್ಪಿಸಲಾಗಿ ಅವರು ಅವನನ್ನು [illegible] ತ[illegible]ಗದ್ದಿ[illegible]ದರು. [illegible]
ಜಿಯು ಅಲ್ಲಿಂದ ಓಡಿಹೋಗಿ ನಾಸಿಕ ಸಂಗಮನೇರಗಳಲ್ಲಿ ಸುಲಿಗೆ ನಡೆಸಿ
ಇದಕ್ಕೆಲ್ಲ ಬಾಜೀರಾಯನ ಸ್ನೇಹಿತನ್ನು [illegible]
ವರು. ಇವೆಲ್ಲ ಕಾರಣಗಳನ್ನು [illegible]
ಬನು ಬಾಜೀರಾಯನ ಕಡೆ [illegible]
ವನ್ನು [illegible]
ಭೋಸಲೆಯ[illegible]
ರಾಯನ ವಿರುದ್ಧ [illegible]

ಈ ಎಲ್ಲ ಕಾರಣಗಳಿಂದ [illegible]
ವಿರುದ್ಧ ಯುದ್ಧ [illegible]
ದ್ದಿತು. ಯುದ್ಧದ ಸಿದ್ಧತೆಗಳು [illegible]
ಬಾಜೀರಾಯನ [illegible]
ದಾಳಿ [illegible]
ರಾಯನು [illegible]
ಓಡಿಹೋಗಬೇಕಾಯಿತು. [illegible]
ಮತ್ತು [illegible] ಈ
ಸಂಪೂರ್ಣ ಪರಾಜಯಗೊಂಡ (೧೭೫೧) [illegible]
ಥೋರಾತನು [illegible] ಉತ್ತರಕ್ಕೆ ಓಡಿಹೋಗಿ [illegible]
ರಂದೇಶ. [illegible] ಇಂಗ್ಲಿಷರ [illegible] ತಾರಾಬಾಯಿ [illegible]
[illegible]
ಬಾಜೀರಾಯನನ್ನು ಪ್ರತಿಭಟಿ[illegible]
ಕಾಪಟ್ಯದ ಬಲೆಯಲ್ಲಿ ಬಿದ್ದ[illegible] ಎಂದು ತಿ
ಳ್ಳರು. [illegible] ಬಾಜೀರಾಯನಿಗೆ [illegible]
ಉತ್ತರ[illegible] ಭೂಮಿಯ[illegible]. ಬಾಜೀರಾಯನು ತನ್ನ
ಒಡನೆಯ [illegible] ಬ್ರಾಹ್ಮಣ[illegible] ಪಂಡಿತ[illegible]ನು
ಸಾಯುವ ಮುನ್ನ ಇವನು ನಾನಾಸಾಹೇಬ ಎಂಬುವನನ್ನು ದತ್ತ

ಕೊಂಡಿದ್ದನು. ಈತನು ಇಂಗ್ಲೀಷರ ಜೊತೆಯಲ್ಲಿ ಸೇರಿ [illegible] ಹೋಗಿ ಕಲ್ಲಿಯೆ ಮಡಿದನು. ಬಾಜೀರಾಯನ ಮತ್ತೊಬ್ಬ ದತ್ತಕ ಮಗನಾದ ಬಾಳಾಸಾಹೇಬ ಎಂಬವನು ಇಂಗ್ಲೀಷರ ಜೊತೆಯಲ್ಲಿ ಮರಣ ಹೊಂದಿದನು. ಬಾಜೀರಾಯನ ಮೂರನೆಯ ದತ್ತಕ ಮಗನಾದ ಸದಾಶಿವ ಎಂಬವನ ಮಗ ರಾವಸಾಹೇಬ ಎಂಬವನು ಇಂಗ್ಲೀಷರ ಜೊತೆಯಲ್ಲಿ ಸೇರಿದ್ದರಿಂದ, ಇಂಗ್ಲೀಷರು ಆತನನ್ನು ಹಿಡಿದು ಗಲ್ಲಿಗೇರಿಸಿದರು (೧೮೬೨). ಬಾಜೀರಾಯನಿಗೆ [illegible] ಸ್ಥರದಲ್ಲಿ [illegible] ವನಿಗೆ [illegible] ಕಾಶಿಯಲ್ಲಿ [illegible]. ಬಾಜೀರಾಯನ [illegible] ಚಿಮನಾಜಿ ಮತ್ತು [illegible] ಎಂಬವರು ಕಾಶಿಯಲ್ಲಿ [illegible] ತಿಸಿ ಹೋದರು. [illegible] ಅನ್ನತರ [illegible] ವಾಸಿಸಿದನು. ಇವನ ದತ್ತಕ ಸಂತತಿಯು ಬಹಳಷ್ಟು [illegible] ಸನಾಗಿದ್ದಾರೆ.

ಇತ್ತ ಪ್ರತಾಪಸಿಂಹನು ಸಾತಾರೆಯಲ್ಲಿದ್ದನಷ್ಟೆ? ಆತನಲ್ಲಿ ರೆಸಿಡೆಂಟನಾಗಿ ಗ್ರಾಂಟ ಡಫ್ ಎಂಬ ಇಂಗ್ಲಿಷ ಅಧಿಕಾರಿಯು ನೇಮಕ ಹೊಂದಿ ಬಂದನು. ಆತನು ಪ್ರತಾಪಸಿಂಹನನ್ನು ಒಳ್ಳೇ ಪ್ರೇಮದಿಂದ ನೋಡಿಕೊಂಡನು. ಆತನ ನಂತರ ಬಂದ ರೆಸಿಡೆಂಟರು ಪ್ರತಾಪಸಿಂಹನನ್ನು ಪೀಡಿಸಹತ್ತಿದರು. ಕೊನೆಗೆ ಇಂಗ್ಲೀಷರು ಪ್ರತಾಪಸಿಂಹನ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಹೊರಿಸಿ, ಆತನನ್ನು ಪದಚ್ಯುತ ಮಾಡಿ, ಆತನ ತಮ್ಮನನ್ನು ಪಟ್ಟಕ್ಕೆ ಕೂಡ್ರಿಸಿದರು. ಇತ್ತ ಪ್ರತಾಪಸಿಂಹನು ಕಾಶಿಯಲ್ಲಿ ವಾಸ ಮಾಡಹತ್ತಿದನು. ಮತ್ತು ಅಲ್ಲಿಯೇ ಕ್ರಿ. ಶ. ೧೮೪೭ರಲ್ಲಿ ಮರಣಹೊಂದಿದನು. ಸಾತಾರೆಯಲ್ಲಿ ಪಟ್ಟಕ್ಕೆ ಕುಳಿತ ಅಪ್ಪಾಸಾಹೇಬ ಉರ್ಫ ಶಹಾಜಿಯು ನಿಪುತ್ರಿಕನಾಗಲು, ಆತನ ದತ್ತಕ ಮಗನನ್ನು ಡಾಲ್ಹೌಸಿಯು ಮನ್ನಿಸಲಿಲ್ಲ. ಮತ್ತು ಸಾತಾರಾ ರಾಜ್ಯವನ್ನು ಬ್ರಿಟಿಶ ರಾಜ್ಯಕ್ಕೆ ಕೂಡಿಸಿದನು. ಮುಂದೆ ೧೯೩೫ರ ವರೆಗೂ ಈ ವಂಶದವರು ದತ್ತಕ ಮುಂತಾದ ರೀತಿಗಳಿಂದ ತಮ್ಮ ವಂಶವನ್ನು ಸಾಗಿಸಿಕೊಂಡುಬಂದರು. ಇಂದಿಗೂ ಶಿವಾ

ಟಿಂಯ. ವಂಶದವರಿಂದ ಹೇಳಿಸಲ್ಪಡುವ ಒಂದು ಸಣ್ಣ ಜಹಗೀರು ಸತಾರ ಜಿಲ್ಲೆಯಲ್ಲಿದೆ. ಸಂಭಾಜಿಯು [illegible] ಬಂದ [illegible] ರಾಜಾರಾಮನ [illegible] ಕಟ್ಟಿಕೊಂಡದ್ದನ್ನು ನಾವು [illegible] ಒಂದು [illegible] ಭಾರತದಲ್ಲಿ [illegible] ಕಾಮೆಯೂ [illegible]

ಮರಾಠರ ಕಾಲದಲ್ಲಿಯ ಆದಳಿತೆ:—

[illegible] ಕಾಲದಲ್ಲಿದ್ದ [illegible] ಸರ ಕಾಲದಲ್ಲಿ ಉಳಿಯಲಿಲ್ಲ. [illegible] ವಾಗ, ಸರದಾರರು [illegible] ಹೇಕ್ಕೆಯರು [illegible] ರನ್ನು ಹಿಡಿತದಲ್ಲಿಟ್ಟುಕೊಂಡು [illegible] ಕೊಡುವದು [illegible] ಸರದಾರರು ತಮ್ಮ [illegible] ದರು. [illegible] ನಡೆಯಿತೆಂದು [illegible] ಕಾದಿದವರ [illegible] ಲನ್ನು [illegible] ರಾಜ್ಯದ [illegible] ಮಾಡಿಕೊಟ್ಟಿತೆಂದು [illegible]

[illegible] ರಾಜ್ಯದಲ್ಲಿ [illegible] ಗಳಲ್ಲಿ ಈ ಜಹಗೀರುದಾರರು ಸರ್ವತಂತ್ರ ಸ್ವತಂತ್ರರು. ಆದರೆ, [illegible]

ಕೆಲವೊಂದು ವರ್ಷಾಶನವನ್ನು ಸಲ್ಲಿಸಿದರೆ ಸಾಕು. ಕಾಲಗತಿಯಲ್ಲಿ ಇದು ಒಂದು ಸಂಘ ರಾಜ್ಯವಾಗಿ ಪರಿಣಮಿಸಿತು. ಇದರಲ್ಲಿ ಅಂಗರಾಜ್ಯಗಳು ಉದಾತ್ತ ಹೇತುಪುರಸ್ಸರವಾಗಿ ರಾಜ್ಯ ಕಟ್ಟಿಕೊಳ್ಳಲಿಲ್ಲ. ಆದರೆ, ಸ್ವಾರ್ಥವೇ ಈ ಸಂಘ ರಾಜ್ಯದ ತಳಹದಿಯಾಯಿತು. ಮೊದಮೊದಲು ಅಂಗರಾಜ್ಯಗಳು ಛತ್ರಪತಿಗೆ ಸಮ್ಮನಿಸಿಷ್ಠವಾಗಿದ್ದವು. ಬರಬರುತ್ತ ಅಗ್ರಸ್ಥಾನದಲ್ಲಿ ಬಂದ ಪೇಶ್ವೆಯರಾಗಲಿ (ಮಾಧವರಾಯನ ನಂತರ ರಾಜ್ಯಸೂತ್ರಗಳನ್ನು ಹಿಡಿದ ನಾನಾಫಡಣೀಸನಾಗಲಿ) ಇವರು ನಿಷ್ಠೆಯನ್ನು ತೋರಲಿಲ್ಲ. ಆದ್ದರಿಂದ ಅಂಗರಾಜ್ಯಗಳು ವಿಕೇಂದ್ರವಾಗಿದ್ದವೆಂಬುದು ಸ್ಪಷ್ಟವಿದೆ. ಸಾಮುದಾಯಿಕ ಹಿತಚಿಂತನೆಯೂ ಇವರಲ್ಲಿದ್ದಿಲ್ಲ. ಪೇಶ್ವೆ, ಶಿಂಧೆ, ಹೋಳಕರ, ಭೋಸಲೆ, ಗಾಯಕವಾಡ, ಪವಾರ, ಪಟವರ್ಧನ ಮುಂತಾದ ಸರದಾರರು ಮರಾಠಾ ರಾಜ್ಯದ ಅಂಗರಾಜ್ಯಗಳೆನಿಸಿದರು. ಇವರಲ್ಲಿ, ಮಧ್ಯವರ್ತಿ ಸರಕಾರವು [illegible]. ಇವರಲ್ಲಿ ರಾಷ್ಟ್ರಪ್ರೇಮವಿದ್ದುದಕ್ಕಿಂತ [illegible]. ಇವರ ಸ್ವಾರ್ಥಪ್ರಿಯರಾದುದರಿಂದ ಮರಾಠಾ ರಾಜ್ಯಸೂತ್ರ [illegible] ಬಲಪಡದೇ ಹೋಯಿತು. ಭೂಕಂದಾಯವೇ ರಾಜ್ಯದ ಮುಖ್ಯ ಆದಾಯವಾಗಿತ್ತು. ಮೊಗಲರ ತೋಡರಮಲ್ಲನ ಪದ್ಧತಿಯನ್ನು ಅನುಸರಿಸಿ, ಭೂಮಿಯ ಅಳತೆಮಾಡಿಸಿ, ಶಿವಾಜಿಯು ಕಂದಾಯ ಕಟ್ಟಿದನು. ಜಮೀನುಗಳನ್ನು ಉತ್ತಮ, ಮಧ್ಯಮ, ಕನಿಷ್ಟವೆಂಬ ಭಾಗಗಳನ್ನು ಮಾಡಿ, ಯೋಗ್ಯತೆಯ ಪ್ರಕಾರ ಕಂದಾಯ ಕಟ್ಟುವದರಲ್ಲಿ ಬಂದಿತು. ಕಂದಾಯವನ್ನು ಪಾಟೀಲ ಕುಲಕರ್ಣಿಯವರ ಕಡೆಯಿಂದ ಹಳ್ಳಿಯಲ್ಲಿ ವಸೂಲ ಮಾಡಿಸುತ್ತಿದ್ದರು. ಇವರು ವತನದಾರರಿರುತ್ತಿದ್ದರು. ಇವರು ತರಫದಾರನೆಂಬ ಅಧಿಕಾರಿಯಲ್ಲಿ ಹಣವನ್ನು ಭರತಿ ಮಾಡಿದರು. ತರಫದಾರನು ಮಾಮಲೇದಾರನ ಕಡೆಗೂ, ಅವನು ಸರಕಾರದ ಕಡೆಗೂ ಸಲ್ಲಿಸಿದರು. ಮಾಮಲೇದಾರನೂ ಸಂಬಳ ಅಧಿಕಾರಿಯಾಗಿದ್ದನು. (ವರ್ಷಕ್ಕೆ ಆಜಮಾಸು ೫೦೦೦ ರು.) ರಾಜ್ಯದಲ್ಲಿ ಇನ್ನಿತರ ವಸೂಲಿಯ ಅಧಿಕಾರಿಗಳೆಂದರೆ ದೇಶಪಾಂಡೆಯರು ದೇಸಾಯರು. ಕಾಲಗತಿಯಲ್ಲಿ ಇವರಿಂದ ವಸೂಲಿಯ ಅಧಿಕಾರವನ್ನು ಕಿತ್ತುಕೊಳ್ಳಲಾಯಿತು. ಮರಾಠಾ ರಾಜ್ಯದ ವಸೂಲಿಯು ೧೦ ಕೋಟಿ ರೂ. ಇದ್ದಿತು. ಅದರಲ್ಲಿ ೭॥ ಕೋಟಿ ರೂ. ಗಳ

ಉತ್ಪನ್ನವು ದಿಟವಾಗಿ ಸಲ್ಲಿಕೆಂದು ಅಂದಾಜು ಮಾಡಲಾಗುವದು. ಸ್ವಸ್ಥದಲ್ಲಿ ಕಾಲಾಳು, ಸ್ವಾರರು, ಹತಗುಪಡೆಯವರೆಂಬ ಭೇದಗಳಿದ್ದೆ. ಕಾಲಾಳುಗಳಿಗೆ ಈಗಿನಂತೆ ಕವಾಯಿತು ಇಲ್ಲ. ಸೈನಿಗಾಳನ್ನು ಅವರು ಮನೆಯಲ್ಲಿ ಕಳೆಯುತ್ತಿದ್ದಂತೆ ಕಾಣುವದು. ಇತರ ವೇಳೆಗಳು ಅವರು ಯುದ್ಧಕ್ಕೆ ಹೋಗುತ್ತಿದ್ದರು. [illegible]

[illegible]

[illegible] ತೀರ್ಮಾನವು ನಡೆಯುತ್ತಿರುವಾಗಿತ್ತು. ಸ್ಮೃತಿಗ್ರಂಥ, ಧರ್ಮ್ಯದ ಆಧಾರ, ಲೋಕಾಚಾರ್ಯ ಆಚಾರಗಳ ಆದ ನ್ಯಾಯದಾನದ ಮುಖ್ಯ ತಳಹದಿಗಳು

ಸಿದವು. ದೊಡ್ಡ ಖಟ್ಲೆಗಳಲ್ಲಿ ಸ್ವತಃ ಪೇಶ್ವೆಯವರ ತನಿಕೆಯೂ ಆಪೀಲು ಇದ್ದಿತು.

ಪೇಶ್ವೆಯ ಹಣಕಾಸಿನ ಬಾಬತ್ತಿನಲ್ಲಿ ಪ್ರತಿವರ್ಷದ ಅಂದಾಜುಪತ್ರಿಕೆಯೆಂಬುದು ಇದ್ದಿಲ್ಲ. ಆದ್ದರಿಂದ ವೆಚ್ಚದ ಪರಿಮಾಣವು ತಿಳಿಯುವದೇ ಮೋಸಯಿತು. ದಿವಾಣದ ವೆಚ್ಚದಲ್ಲಿ ದರಬಾರದ ವೆಚ್ಚ ಮತ್ತು ಸ್ವಂತ ವೆಚ್ಚವೆಂಬ ಭೇದವಿದ್ದಿಲ್ಲ. ಆದ್ದರಿಂದ ವೆಚ್ಚ ಜಾಸ್ತಿಯಾಗಿ ಸಾಲವು ಬೆಳೆಯುತ್ತ ಹೋಯಿತು. ನಗಾರಿ ಸಿಬ್ಬಂದಿಗೆ, ಬ್ರಾಹ್ಮಣರ [illegible], [illegible]ಗಳಲ್ಲಿ [illegible] ನಡೆಸಲಾಗುವ [illegible] ಕೆಲಸಗಳು [illegible] ಸಾಲಕ್ಕೆ ಕಾರಣವಾದವು.

ತೆರಿಗೆ ಸಿಕ್ಕಬೇಕೆಂದು [illegible] ಕೊಡಲಾಗುತ್ತಿತ್ತು. ಸ್ತ್ರೀಯರಿಗೂ ಬಂದಿವಾಸವು ತಪ್ಪುತ್ತಿದ್ದಿಲ್ಲ. ರಾಜದ್ರೋಹದ ಕೈದಿಗಳನ್ನು ಆನೆಯ ಕಾಲಿಂದ ತುಳಿಸಿ ಕೊಲ್ಲುತ್ತಿದ್ದರು. [illegible] ಹೆಚ್ಚಾಗಿ [illegible]ಹುತ್ತಿತ್ತು. ಪದೇ ಪದೇ [illegible] ಹಿಡಿಯುತ್ತಿದ್ದರು. ಅಪರಾಧಿ ತನ್ನ ತಪ್ಪು [illegible] ಭೋಗಿಸಬೇಕಾಗುತ್ತಿತ್ತು. [illegible], ತಪ್ಪಿತಸ್ಥರ [illegible] ಹಿಡಿಯುವದು, ಕುಸಿಯಲ್ಲಿ ಕಾದ ಬಂಗಾರವನ್ನು [illegible] ಯುವದು, ಇವು ನ್ಯಾಯದಾನದಲ್ಲಿ ಸತ್ಯಮಾರ್ಗಗಳು [illegible].

ಮರಾಠರ ಕಾಲದಲ್ಲಿ ಪೋಲೀಸಖಾತೆಯು ಇಷ್ಟೊಂದು [illegible]. ಕ್ರಿ. ಶ. ೧೭೬೪ರಲ್ಲಿ ಮಾಧವರಾಯನು ಇದನ್ನು ಹೊಸದಾಗಿ ಹುಟ್ಟಿಸಿದನು. ಪುಣೆಯಲ್ಲಿಯ ಬಂದೋಬಸ್ತು ಕಾಯುವದು ಇದರ ಮುಖ್ಯ ಕೆಲಸವಾಗಿದ್ದಿತು. ಇದರಲ್ಲಿ ಕೊತವಾಲ ನಾಯಿಕ ಮುಂತಾದ ಅಧಿಕಾರಿಗಳಿದ್ದರು. ಪೂನಾದಲ್ಲಿ ೧೦೦ ರಿಂದ ೨೫೦ ರ ವರೆಗೆ ಪೋಲೀಸರಿದ್ದಂತೆ ತೋರುತ್ತದೆ. ಜನಗಣತಿ, ದಸ್ತೈಬಂದೋಬಸ್ತು ಮುಂತಾದ ಕಾರ್ಯಗಳನ್ನು ಇವರು ಮಾಡುತಿದ್ದರು.

ಮರಾಠರ ಕಾಲದಲ್ಲಿ ಬಿಟ್ಟಿ ಹಿಡಿಯುವ ಕೆಲಸವು ಹೆಚ್ಚು ಇದ್ದಂತೆ ತೋರುತ್ತದೆ. ಇದರಲ್ಲಿ ಮನುಷ್ಯರು, ಚಕ್ಕಡಿ, ಎತ್ತು ಮುಂತಾದ ಎಲ್ಲ ವಾಹನಗಳ ಅಥವಾ ಸೌಕರ್ಯಗಳ ಸಮಾವೇಶವಾಗುತ್ತಿತ್ತು. ಸರಕಾರಿ

ಕೆಲಸಕ್ಕಾಗಿ "ಬಿಟ್ಟಿ ಹಿಡಿಯುವುದು" ಸಹಿಸಲಿ [illegible] ಪರಾಯಿಸು ಜನನ್ನು [illegible] ಯೂ, ಗುಲಾಮರನ್ನು [illegible] [illegible] ದು ಇದರಿಂದ ಮುಕ್ತರಾಗಿದ್ದರು.

[illegible] ಕೊಂಡು ಹೋದರು. [illegible] ತ್ತಿತ್ತು. [illegible] ಆಲಂಗಿರಿ [illegible] ನ್ನು ತೆಂದೊಡ್ಡಿತು.

[illegible] ಉತ್ಪತ್ತಿಗಳಿದ್ದವು. [illegible] ಗಾಗಿ ಅಂಚೆಯವನ್ನು [illegible]

ಜನಜೀವನ:

ಬಯಾರರ [illegible] ಸುರಪುರದ ನಡೆಯುತ್ತಿತ್ತು [illegible]

ರಿಂದ ಅವರ ರಾಜ್ಯದಲ್ಲಿ ಆರ್ಯರ ವರ್ಣಾಶ್ರಮ ವ್ಯವಸ್ಥೆಯು ಸ್ಪಷ್ಟವಾಗಿ ಕಂಡುಬಂದಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರರುಗಳು ತಮ್ಮ ತಮ್ಮೊಳಗೆ ಮತ್ಸರ ಭಾವನೆಯನ್ನು ತಾಳದೆ, ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗುತ್ತಿದ್ದರು. ಆದ್ದರಿಂದ ಧರ್ಮಬುದ್ಧಿಯೂ ಸ್ನೇಹಪ್ರೇಮಗಳೂ ಬೆಳೆದದ್ದು ಕಂಡುಬರುತ್ತದೆ. ಕಾರಣಾಂತರದಿಂದ ನ್ಯಾಯವು [illegible]ದಲ್ಲಿ ಧರ್ಮಶಾಸ್ತ್ರಗಳ ಆಧಾರಗಳಿಂದ ಅದನ್ನು ಸಂಪಾದಿಸಲಾಗುತ್ತಿತ್ತು. [illegible] ವರ್ತನೆಯೂ, [illegible] [illegible]. ಹೀಗೆ ಮಾಡುವವರು [illegible] [illegible]. ಧರ್ಮದ ಪ್ರವೃತ್ತಿಯನ್ನು ನಿರ್ಮಿಸುವಾಗ ಸ್ಥಳಿಕ [illegible] [illegible]ತೆ.

ಮರಾಠರ ರಾಜ್ಯದಲ್ಲಿ ಸಾಮಾಜಿಕ ವ್ಯವಸ್ಥೆಯು ಮೇಲಿಂದ ಮೇಲೆ ಭಂಗವಾಗುತ್ತಿದ್ದುದರಿಂದ [illegible], ಸುಲಿಗೆ, ಕೊಲೆಗಳು [illegible] ಮೇಲಿಂದ ಮೇಲೆ ನಡೆಯುತ್ತಿದ್ದವು. ಮರಾಠರೇ ತಮ್ಮ ಬಂಧುಗಳ ಮೇಲೆ ಬಿದ್ದು ಸ್ವತ್ತುಗಳನ್ನು ತಂದುಕೊಳ್ಳುತ್ತಿದ್ದರು. ಆದ್ದರಿಂದ ರಕ್ಷಣಾರ್ಥವಾಗಿ ದೊಡ್ಡ ದೊಡ್ಡ ಅವಿಭಕ್ತ ಕುಟುಂಬಗಳು ಆಗ ಕಣ್ಣಿಗೆ ಬಿದ್ದವು. [illegible] ಜನರು ಒಂದೆಡೆ ಇರುವ ಕುಟುಂಬಗಳು ಆಗ ಸಾಮಾನ್ಯವಾಗಿ ಕಾಣುತ್ತಿದ್ದವು. ಕುಟುಂಬದ ಮುಖ್ಯಸ್ಥನಿಗೆ ಸಮಾಜದಲ್ಲಿ ಬಹಳ ಮಾನ ಸಿಕ್ಕಿತು. ಅವನ ಮಾತನ್ನು ಕುಟುಂಬದಲ್ಲಿ ಯಾರೂ ಮೀರುವಂತಿಲ್ಲ.

ಮರಾಠರ ರಾಜ್ಯದಲ್ಲಿ ದೊಡ್ಡ ಪಟ್ಟಣಗಳು ಬೆರಳ ಮೇಲೆ ಎಣಿಸುವಷ್ಟು ಇದ್ದವು. ಆದರೆ, ಇದ್ದ ಪಟ್ಟಣಗಳು ಸೌಂದರ್ಯದಿಂದ ಕೂಡಿರುತ್ತಿದ್ದವು. ಅವು ಶ್ರೀಮಂತರ ಮನೆಗಳು [illegible] [illegible]ಗಳಿಂದ [illegible]ರುತ್ತಿದ್ದವು. ಅಲ್ಲಿಗೆ ಸುತ್ತಲಿನ ಊರುಗಳಿಂದ [illegible] [illegible]. ಅಂಥ ಮನೆಗಳಲ್ಲಿ ಕಾರಂಜಿ, ನೀರಿನ [illegible] [illegible]ಗಳು ಇದ್ದವು. ಅಲ್ಲದೆ, ಆನೆ ಒಂಟೆಗಳನ್ನು [illegible] [illegible]! ಪಟ್ಟಣಗಳು ಕಿರಿದಾದ ಬೀದಿಗಳಿಂದ ಕೂಡಿದ್ದವು. [illegible], [illegible] [illegible] ಬೆಲೆ ಬಾಳುವ ಒಡವೆಗಳನ್ನು ಪಾರಮಾಡಲಿಕ್ಕೆ ಪ್ರಸಂಗದಲ್ಲಿ ಪರಸ್ಪರ ಸಹಾಯಕ್ಕೆ ಮನೆಗಳು ಹತ್ತಿಕೊಂಡಿದ್ದವು. ಸಂಪತ್ತಿಯನ್ನು ಹುಗಿಡುವ ಧಂ

ಪಾಠವೂ ಆಗಿನ ಕಾಲದಲ್ಲಿತ್ತು. ಪಟ್ಟಣದಲ್ಲಿ ದಂಗ[illegible] ವಿಜಯಾ ದಶಮಿ, ಗಣೇಶೋತ್ಸವಗಳು ಬಹಳ ವೈಭವದಿಂದ ನಡೆಯುತ್ತಿದ್ದವು. ಈ ಹಬ್ಬಗಳಲ್ಲಿ ಜನರು ಬೆಲೆಬಾಳುವ ವಸ್ತ್ರಗಳನ್ನು [illegible]ಗಿ ಮೆರೆಯುತ್ತಿದ್ದರು. ಶ್ರೀಮಂತರು ಮನೆಗ[illegible] ದ್ದರು.

ಕೆಳಜಾತಿಯ ಮನುಷ್ಯನನ್ನು ಸ್ತ್ರೀಯರನ್ನು [illegible] ಕಾಲಕ್ಕೆ ಇದ್ದಂತೆ ತೋರುವದು. [illegible] ಹೇಳಲು ಬರುವಂತಿಲ್ಲ. ಆದರೆ, [illegible] ರತಿ, ಮತ್ತು ಬಹುಶ್ರುತತನಗ[illegible]

ಮರಾಠಾ ರಾಜ್ಯದಲ್ಲಿಯ ಗ್ರಾಮ[illegible] ಯು ಸಾಗಿ ಬಂದಿತು. ಗ್ರಾಮಕ್ಕೆ ಪಾಟೀಲನೇ [illegible] ಗಿನ ಮತ್ತು ಹೊರಗಿನ ಶತ್ರುಗಳಿಂದ ಗ್ರಾಮವನ್ನು [illegible] ಕರ್ಣಿಯು ಇವನಿಗೆ ಸಹಾಯ ಸಲ್ಲಿಸುತ್ತಿದ್ದನು. [illegible] ರಿಗಳು ವತನದಾರರು! ಇವರಲ್ಲಿಯೆ [illegible] ಎಷ್ಟೋ ಕೆಲಸಗಳನ್ನು [illegible] ಯವರೂ ಹಳ್ಳಿಗಳಲ್ಲಿ ನೆಲೆಸಿದ್ದರು. [illegible] ರಿಗೆ ಸರಕಾರಿ ಕೆಲಸದಲ್ಲಿ ಸಹಾಯ ಮಾಡುತ್ತಿದ್ದರು. [illegible] ಗಳಲ್ಲಿ ವಾಸವಾಗಿದ್ದರು. ಗ್ರಾಮಸ್ಥರ ಮನೆಗಳು ಮಾತ್ರ ಅಂದಗೆ[illegible] ಹವಿರುತ್ತಿದ್ದವು. ಪರದಾಳಿಗಳಿಂದ ರಕ್ಷಿಸಿಕೊಳ್ಳಲು [illegible] ಗೋಡೆ ಇದ್ದಂತೆ ತೋರುವದು. ಆಗಸೆ ಬಾಗಿಲವನ್ನು ರಾತ್ರಿ [illegible] ಬಂದು ಮಾಡಿ, ಅದನ್ನು ಕಾವಲುಗಾರರು ಕಾಯುತ್ತಿದ್ದರು. [illegible] ಮುಂತಾದವುಗಳು ಆಹಾರ ಧಾನ್ಯಗಳೆನಿಸಿದವು. [illegible] ಮುಂತಾದವುಗಳು ರೈತರ ಆಹಾರಕ್ಕೆ [illegible] ಟ್ಟವು.

ಹಳ್ಳಿಗಳಲ್ಲಿ ಅಪರಾಧಗಳು ಕಡಿಮೆಯಾದರೂ ನಡೆಯುವವು.

ಊರೂರಿನ ಸಾರಿಗೆ ಮಾರ್ಗಗಳು ಆಗಿನ ಕಾಲದಲ್ಲಿ ಉತ್ತಮ ಸ್ಥಿತಿಯಲ್ಲಿದ್ದವು. ಎತ್ತು ಕತ್ತೆಗಳ ಮೇಲೆಯೂ ಚಕ್ಕಡಿಯ ಮೇಲೆಯೂ ಸರಕುಗಳು ಒಂದರಿಂದ ಇನ್ನೊಂದು ಸ್ಥಳಕ್ಕೆ ಸಾರಿಗೆಯಾದವು. ಒಮ್ಮೊಮ್ಮೆ ಒಂಟೆಗಳೂ ಅನೇಗಳೂ ಸಾರಿಗೆಯ ಸಾಧನಗಳಾಗುತ್ತಿದ್ದವು. ಹಾದಿ ಹಿಡಿಯುವುದು ಕಠಿನ. ಠಗ್ಗರ ಉಪಟಳವಿದ್ದಾಗ ಸುಲಿಗೆ ನಡೆಯುತ್ತಿತ್ತು. ಜನರು ಕಾಲುನಡಿಗೆಯಿಂದಲೇ ಪ್ರವಾಸ ಮಾಡುತ್ತಿದ್ದರು. ಆದರೂ, ಕುದುರೆ, ಆನೆ, ರಥ, ಎತ್ತಿನ ಗಾಡಿ, ಡೋಲಿ, ಪಾಲಕಿ, ಮೇಣೆ ಮುಂತಾದವುಗಳು ಅಪರೂಪವಲ್ಲ.

ಮಹೇಶ್ವರ, ನಾಗಪುರ, ಪೈಠಣ, ಸೊಲ್ಲಾಪೂರ ಅಷ್ಟಿ ಮುಂತಾದಲ್ಲಿ ಬಟ್ಟೆ ನೆಯ್ಗೆಯ ಕೆಲಸವು ನಡೆಯುತ್ತಿತ್ತು. ಪರದೇಶದ ವ್ಯಾಪಾರವು ಇಂಗ್ರಜರ ಕೈಯಲ್ಲಿತ್ತು. ಇವರು ನೀಲಿಬಟ್ಟೆ, ಕಸೂತಿ, ಆನೆಕೋರೆ ಕೆಲಸ, ತಂಬಾಕಿನ ಸಾಮಾನು, ಚಹ, ಗಂಧಸಾರ, ಮರ್ಕ್ಯುರಿ, ಅತ್ತರ ಧರ್ಮಾಮೀಟರ ಮುಂತಾದ ಪದಾರ್ಥಗಳನ್ನು ಮಹಾರಾಷ್ಟ್ರದಲ್ಲಿ ಮಾರುತ್ತಿದ್ದರು. ಗಸಿಯ ಬಾಜೀರಾಯನು ಗಡಿಯಾರವನ್ನು ಉಪಯೋಗಿಸುತ್ತಿದ್ದಂತೆ ತೋರುತ್ತದೆ.

ಆಗಿನ ಬ್ರಾಹ್ಮಣ ಗಂಡಸರು ಧೋತರವನ್ನುಟ್ಟು ಮೈಗೆ, ತಲೆಗೆ ಶಾಲನ್ನು ಸುತ್ತಿಕೊಳ್ಳುತ್ತಿದ್ದರು. ಒಮ್ಮೊಮ್ಮೆ ತಲೆಯ ಮೇಲೆ ಪಾಗೋಟೆಯೂ ಕಾಣಬರುತ್ತಿತ್ತು. ಇನ್ನುಳಿದವರಲ್ಲಿ ಶ್ರೀಮಂತರಿದ್ದವರು ತಲೆಗೆ ಜರತಾರಿಯ ಟೊಪ್ಪಿಗೆಯನ್ನು ಹಾಕಿಕೊಂಡು ಮೈಗೆ ಸ್ವೆಟರ ಅಥವಾ ಅಂಗಿಯನ್ನು ತೊಟ್ಟುಕೊಳ್ಳುತ್ತಿದ್ದರು. ಹೆಂಗಸರು ಹೊಲಿಯದೆ ಇದ್ದ ವಸ್ತ್ರಗಳನ್ನುಡುತ್ತಿದ್ದರು. ಕೆಳವರ್ಗದ ಗಂಡಸರು ಒಂದು ಲಂಗೋಟಿಯ ಮೇಲೆಯೇ ತಮ್ಮ ದಿನವನ್ನು ನೂಕುತ್ತಿದ್ದರು. ಲಷ್ಕರದವರು ಮೈಗೆ ಚಿಲಖತ್ತನ್ನು ತೊಟ್ಟುಕೊಳ್ಳುತ್ತಿದ್ದರು.

ಜನರು ಆಹಾರಕ್ಕಾಗಿ ಮಾಂಸವನ್ನೂ ಶಾಕಾಹಾರವನ್ನೂ ಬಳಸಿದರು. ಬ್ರಾಹ್ಮಣ ಮುಂತಾದವರು ಕೇವಲ ಶಾಕಾಹಾರಿಗಳಾಗಿರುತ್ತಿದ್ದರು. ಅನ್ನ

ತುಪ್ಪ, ಹೋಳಿಗೆ, ಉಂಡಿ, ಶ್ರೀಖಂಡ ಮತ್ತು ಬಾಸುಂದಿಗಳು ಆಗಿನ ಶ್ರೇಷ್ಠ ವರ್ಗದವರ ಆಹಾರಗಳಾಗಿದ್ದವು. ಸಾಮಾನ್ಯ ಮನುಷ್ಯನು ಕಿಜ್ಜಿಯ ಇಲ್ಲವೆ, ಜೋಳದ ರೊಟ್ಟಿ ಮತ್ತು ಅನ್ನಗಳನ್ನು ತಿಂದನು. ಆಗಿನ ಕಾಲದವರಲ್ಲಿ ತಾಂಬೂಲ ಸೇವನೆಯು ಹೆಚ್ಚು ಇದ್ದಂತೆ ತೋರುವದು. ಇಂಗ್ಲೀಷರು ಬಂದದ್ದರಿಂದ ಚಹದ ಪಾನವು ಅಲ್ಲಲ್ಲಿ ಜೇದಾರಿತ್ತು (ಸವಾಯಿಮಾಧವರಾವನು ಚಹ ಕುಡಿಯುತ್ತಿದ್ದನು). ಹೊಸ ಆಹಾರಪದಾರ್ಥಗಳನ್ನು ರಚಿಸುವದರ ಸಲುವಾಗಿ ಪೇಶ್ವೆಯರ ಕಾಲವು ಒಳ್ಳೆ ಹೆಸರಾಗಿದ್ದಿತು.

ಪೇಶ್ವೆಯರ ವಿದ್ಯಾಭಿವೃದ್ಧಿಗೆ ಹೆಚ್ಚು ಸಹಾಯ ಮಾಡಿದಂತೆ ತೋರುವದಿಲ್ಲ. ಪೂರ್ವದಿಂದ ನಡೆದು ಬಂದ [illegible] ಯಲ್ಲಿದ್ದರೆ, ಗುರುಗಳಲ್ಲಿಯೇ ವೇದಶಾಲೆಗಳೂ ಪಾಠಶಾಲೆಗಳೂ ತೋರಿಕೊಂಡವು. ಇವು ಶಾಸ್ತ್ರಿ ಪಂಡಿತರಿಂದ ನಡೆಸಲ್ಪಟ್ಟು ಯಾವ ಶುಲ್ಕವೂ ಇಲ್ಲದೆ, ಇಲ್ಲಿ ವಿದ್ಯಾವ್ಯಾಸಂಗವು ನಡೆಯಿತು. ಶಾಸ್ತ್ರಿ ಪಂಡಿತರಿಗೆ ರಾಜಾಶ್ರಯವಿರುತ್ತಿದ್ದು, ಒಮ್ಮೊಮ್ಮೆ ದೊಡ್ಡ ಉತ್ಪನ್ನಗಳು ಇವರಿಗೆ ಸಲ್ಲುತ್ತಿದ್ದಂತೆ ಕಾಣುವದು.

ಛತ್ರಪತಿ ಶಿವಾಜಿಯ ಕಾಲದಿಂದಲೂ ಮಹಾರಾಷ್ಟ್ರದಲ್ಲಿ ಸಂತ ಜನರು ಜನತೆಗೆ ಬೋಧೆನಡೆಸಿದ್ದು ಕಂಡುಬರುವದಷ್ಟೆ ? ಶಿವಾಜಿಯ ಕಾಲದಲ್ಲಿ ರಾಮದಾಸ ತುಕಾರಾಮ ಮುಂತಾದವರು ಜನ್ಮಿಸಿದರೆ ಪೇಶ್ವೆಯರ ಕಾಲದಲ್ಲಿ ಬ್ರಹ್ಮೇಂದ್ರಸ್ವಾಮಿ ಧಾವಡಶಿಕರ ಎಂಬವರು ಜನತೆಗೆ ಬೋಧೆಮಾಡಿದರು. ಇವರ ಕಾಲದಲ್ಲಿ ಅಮೃತರಾವ ಮತ್ತು ರಘುನಾಥಪಂತರೆಂಬ ಕವಿಗಳೂ ತಲೆದೋರಿದರು.

ಮನರಂಜನೆಗಾಗಿ ಮರಾಠಾ ಜನರು ಅನೇಕ ಆಟಪಾಟಗಳನ್ನು ಹೂಡಿದರು. ಮಹಾರಾಜ ಮತ್ತು ಸರದಾರರಂತಹ ಮೇಲಿನ ವರ್ಗದವರಿಗೆ ಮೃಗಯಾ ಅಥವಾ ಬೇಟೆಯಾಡೋಣವಂತೂ ಇದ್ದದ್ದೆ. ಇದರ ಹೊರತಾಗಿ ಕೈಕೋಟೆ ಸಾಕುಪ್ರಾಣಿಗಳು ಜನರ ಚಿತ್ತವನ್ನು ರಂಜನೆಮಾಡಿದವು. ಗಂಜೀಫಿ, ಚದುರಂಗ, ಪಗಡೆಯ ಆಟಗಳಲ್ಲಿ ಜನರು ಆಗಾಗ ತಲ್ಲೀನರಾಗುತ್ತಿದ್ದರು. ಶರೀರಬಲ ಇದ್ದವರಿಗೆ ಕುಸ್ತಿಆಟಗಳು ಬಹಳ ಸೇರಿದವು. [illegible]

ಉತ್ಸವಗಳು ಜನರ ಮನರಂಜನೆಯ ಮಹತ್ವದ ಪ್ರಸಂಗಗಳಾಗಿದ್ದವು-ಹುಂಜದ ಕಾದಾಟ, ಹೋತಗಳ ದಂದ್ವಗಳು ಕೆಳದರ್ಜೆಯ ಜನರ ಮೆಚ್ಚಿಗೆಯ ಆಟಗಳು. ಒಮ್ಮೊಮ್ಮೆ ಒಂಟೆಗಳ ಕಾದಾಟ, ಮದ್ದಾನೆ ಮನುಷ್ಯರೆ ಹೋರಾಟಗಳು (ಸಾಟಮಾರಿ) ತುರುಸಿನ ಮನರಂಜನೆಗಳಾಗಿ ಪರಿಣಮಿಸಿದವು. ನಾಚು, ತಮಾಷೆಯೆಂಬ ಒಂದು ವಿಶಿಷ್ಟಆಟವೂ ಜನರಲ್ಲಿ ವಿಶೇಷವಾಗಿ ಪ್ರಚಾರದಲ್ಲಿದ್ದವು. ಗಾಯನ, ನರ್ತನ ಮುಂತಾದವೂ ಜನರ ಮನಸ್ಸನ್ನು ಹಿಡಿದವು. ಅಲ್ಲಲ್ಲಿ ಉತ್ತಮ ಕಲಾಕೃತಿಗಳ ಪ್ರದರ್ಶನ ನಡೆಸದ್ದೂ ಉಂಟು. ಹಬ್ಬಹುಣ್ಣಿಮೆ ಜಾತ್ರೆಗಳಲ್ಲಿ ಜನರು ಬಹುಪ್ರಮಾಣದಲ್ಲಿ ಭಾಗವಹಿಸುತ್ತಿದ್ದರು. ನಾಗಪಂಚಮಿ, ಗಣೇಶಚತುರ್ಥಿ, ವಿಜಯಾದಶಮಿ, ದೀಪಾವಳಿ, ರಂಗಪಂಚಮಿಗಳಲ್ಲಿ ಆಬಾಲವೃದ್ಧರು ಆನಂದಸಾಗರದಲ್ಲಿ ತೇಲಾಡುತ್ತಿದ್ದರು. ವಿಜಯಾದಶಮಿಯು ವಿಜಯನಗರದ ಕಾಲದಿಂದ ಇಂದಿನ ವರೆಗೆ ಕನ್ನಡಿಗರ ನಾಡಹಬ್ಬವಾಗಿದೆ. ಪಿಶಾಚಿಬಾಧೆಯಲ್ಲಿ, ಅದನ್ನು ದೂರ ಮಾಡುವ ಮಂತ್ರಗಾರನಲ್ಲಿ, ಜನರ ವಿಶ್ವಾಸ ಬಹಳ. ಗ್ರಹ ಬಾಧೆಯನ್ನು ತಪ್ಪಿಸಿಕೊಳ್ಳುವದರ ಸಲುವಾಗಿ ವ್ರತೋಪವಾಸ ದಾನಧರ್ಮ ಅನುಷ್ಠಾನಗಳನ್ನು ನಡೆಸಿದರು. ಆದ ಕಾರಣ ಪುರೋಹಿತರಿಗೂ, ಮಂತ್ರಗಾರರಿಗೂ, ವಿಶೇಷ ಆದಾಯವಿತ್ತೆನ್ನಬಹುದು. ಅದರಂತೆ ಮನುಷ್ಯರು ಹೊಸ-ದಾಗಿ ಕೊಂಡುಕೊಂಡ ಕುದುರೆ ಮುಂತಾದ ಪ್ರಾಣಿಗಳ ಮೊದಲು ಬರುವಿಕೆ-ಯಲ್ಲಿ ಕಂಡುಬರುವ ಕಾಲಗುಣವು ಜನರನ್ನು ವಿಚಾರಕ್ಕೆ ಹಚ್ಚಿತು. ಗ್ರಹ-ಣವು ಒಂದು ಅನಿಷ್ಟವೆಂದು ತಿಳಿಯಲಾಯಿತು. ಅದರ ನಿವಾರಣೆಗಾಗಿ ಜಪತಪ ಅನುಷ್ಠಾನಗಳನ್ನು ಜನರು ಮಾಡಿದ್ದು ಕಂಡು ಬರುತ್ತದೆ. ಒಟ್ಟಿನಲ್ಲಿ ಸತ್ಯಾಸತ್ಯಗಳ ತಿಳುವಳಿಕೆ ಕೊಡುವ ಸಮ್ಯಗ್ ಜ್ಞಾನವು ಆಗಿನ ಸಾಮಾನ್ಯ ಮನುಷ್ಯನಿಗೆ ಮುಟ್ಟದ್ದರಿಂದ ಅವನು ಅಜ್ಞಾನ, ಅಂಧಾನುಕರಣ, ಅಂಧಶ್ರದ್ಧೆಗಳಲ್ಲಿ ಕಾಲಕಳೆದನೆಂದು ಹೇಳಬಹುದು. ಫಲಜ್ಯೋತಿಷ್ಯದಲ್ಲಿ ಜನರ ನಂಬಿಗೆ ಹೆಚ್ಚು. ಪ್ರವಾಸ ಮತ್ತು ಇತರ ಮಹತ್ವದ ಕಾರ್ಯಗಳನ್ನು ಕೈಕೊಳ್ಳುವಾಗ ಜನರು ಮುಹೂರ್ತವನ್ನು ನೋಡುತ್ತಿದ್ದರು.

[illegible] ಅರಸರು ಹಿಂದೂಗಳಾದ್ದರಿಂದ, ಹಿಂದೂ ಧರ್ಮದ ತತ್ವ-

ಗಳನ್ನು ಪುರಸ್ಕರಿಸಿದರೆಂದು ಬೇರೆ ಹೇಳಬೇಕಾಗಿಲ್ಲ. ಮುಂದೆ ಪೇಶ್ವೆಯರು ಈ ಪುರಸ್ಕಾರಕ್ಕೆ ಇನ್ನೂ ಪುಷ್ಟಿಯನ್ನು ಕೊಟ್ಟರು. ಶ್ರೀಮಚ್ಛಂಕರಾಚಾರ್ಯರು ಹಿಂದೂ ಧರ್ಮದವರ ಮುಖ್ಯ ಗುರುಗಳೆಂದು ತಿಳಿಯಲ್ಪಟ್ಟಿತು. ಪೇಶ್ವೆಯರು ಇದಕ್ಕೆ ಒಪ್ಪಿಗೆಯನ್ನಿತ್ತದ್ದುಂಟು. ತಮ್ಮ ಕಾಲಾವಧಿಯಲ್ಲಿ ಜೀವಿಸಿದ ಅನೇಕ ಸಾಧು ಸಂತರಿಗೆ ಪೇಶ್ವೆಯರು ಮನ್ನಣೆಯಿತ್ತರು. ಅಲ್ಲಲ್ಲಿ ದೇವತಾಪ್ರೀತ್ಯರ್ಥವಾಗಿ ಯಜ್ಞಯಾಗಾದಿಗಳು ನಡೆಯುತ್ತಿದ್ದವು. ಹಿರಿಯ ಬಾಜೀರಾಯನ ಕಾಲದಲ್ಲಿ ಶ್ರೀ ಚಿದಂಬರ ದೀಕ್ಷಿತರೆಂಬುವರು ಗೋಕಾಕ ನಗರದಲ್ಲಿ ಒಂದು ಯಜ್ಞವನ್ನು ಮಾಡಿದರು. ಆ ಕಾಲಕ್ಕೆ ಬಾಜೀರಾಯನು ಸ್ವಹಸ್ತದಿಂದ ಸೇವೆ ಸಲ್ಲಿಸಿದನೆಂದು ಹೇಳಲಾಗುತ್ತದೆ. ಅನ್ಯಧರ್ಮ ಸ್ವೀಕಾರ ಮಾಡಿದವರನ್ನು [illegible] ಪ್ರಾಯಶ್ಚಿತ್ತವು [illegible]. ಮತಾಂತರ ಹೊಂದಿದವರನ್ನು ಶುದ್ಧ ಮಾಡಿಕೊಳ್ಳುವ ಪದ್ಧತಿ ಆ ಕಾಲದಲ್ಲಿ ಇತ್ತೆಂದು ತೋರುವದು. ಹಿಂದೂ ಮುಸಲ್ಮಾನರು ತಮ್ಮ ತಮ್ಮ ಧರ್ಮಗಳಂತೆ ನಡೆದು, ತಮ್ಮತಮ್ಮೊಳಗೆ ಸ್ನೇಹಭಾವದಿಂದಿದ್ದರು. ಅನ್ಯಧರ್ಮೀಯರನ್ನು ಪ್ರೇಮದಿಂದ ಗೆಲ್ಲಬೇಕೆಂಬ ಧೋರಣೆಯನ್ನು ಪೇಶ್ವೆಯರು ಇಟ್ಟುಕೊಂಡದ್ದರಿಂದ ಮುಸಲ್ಮಾನ ಮತ್ತು ಕ್ರೈಸ್ತರನ್ನು ಅವರು ತಮ್ಮ ಚಾಕರಿಯಲ್ಲಿಟ್ಟುಕೊಂಡರು. ಮುಸಲ್ಮಾನರ ಮಸೀದೆಗಳಿಗೆ ಉಂಬಳಿಗಳನ್ನು ಹಾಕಿಕೊಟ್ಟರು ಮತ್ತು ನಡೆಸಿದರು. ಸಾಮಾನ್ಯ ಜನರಾದರೂ ಒಬ್ಬರು ಇನ್ನೊಬ್ಬರ ಉತ್ಸವಗಳಲ್ಲಿ ಭಾಗ ವಹಿಸಿ ಆನಂದಬಟ್ಟರು.

ಅಭ್ಯಸನಗಳು:


೧. ಬಿಟ್ಟದ್ದು ತುಂಬಿರಿ:

(೧) ಮರಾಠಾರಾಜ್ಯದ ಸರದಾರರಲ್ಲಿ .... ಗಳೆಂಬ ಭೇದಗಳಿವೆ.

(೨) ಮರಾಠಾ ಜನರಲ್ಲಿ .... ಮುಂತಾದ ಪದ್ಧತಿಗಳು ಕಂಡುಬರುತ್ತವೆ.

(೩) ಶಿವಾಜಿಯು ...... ಹೊಟ್ಟೆಯಲ್ಲಿ .... ನೆಯ ಇಸ್ವಿಯಲ್ಲಿ ಹುಟ್ಟಿದನು.

(೪) ಶಿವಾಜಿಗಿಂತ ಮೊದಲಿನ ಮಹಾರಾಷ್ಟ್ರದಲ್ಲಿ .... [illegible]



(ಈ) ಹದಿನೆಂಟನೆ ಶತಕದ ಆದಿಯಲ್ಲಿ ದಕ್ಷಿಣದಲ್ಲಿ ರಾಜ್ಯಗಳಿದ್ದವು.

೨. ಶಿವಾಜಿಯ ಜೀವಿತಾವಧಿಯನ್ನು ತೋರಿಸುವ ರೇಖೆಯನ್ನು ಕೆಳಗೆ ಕೊಟ್ಟಿದೆ. ಶಿವಾಜಿಯ ಜನನ, ಕೋಟೆಗಳನ್ನು ಗೆದ್ದದ್ದು, ವಿಜಾಪುರದ ದಿಲ್ಲಿ ಅರಸರನ್ನು ಎದುರಿಸಿದ್ದು, ಆಗ್ರಾದಿಂದ ಪಾರಾಗಿ ಬಂದದ್ದು, ರಾಜ್ಯಾಭಿಷೇಕ, ಮುಂತಾದ ಎಲ್ಲ ಸಂಗತಿಗಳನ್ನು ರೇಖೆಯ ಮೇಲೆ ಗುರುತಿಸಿ ಇಸ್ವಿಗಳ ಸಹಿತ ತೋರಿಸಿ.

೧೬೩೦	೧೬೮೦

೩. ಕೆಳಗಿನ ವಾಕ್ಯಗಳಿಗೆ ಐತಿಹಾಸಿಕ ಕಾರಣ ಕೊಡಿರಿ:

(ಅ) ಶಿವಾಜಿಯನ್ನು ಜನರ [illegible] ಕ್ರಮವನ್ನು [illegible] ಮನಸ್ಸಿಗೆ [illegible].

(ಆ) ಸಂಭಾಜಿಯ ಕೊಲೆಯಿಂದ ಮೊಗಲರು ಮರಾಠರ ನಡುವೆ ಬಹು ಕಾಲದ ಯುದ್ಧಗಳೆದ್ದವು.

(ಇ) ಶಾಹು ಛತ್ರಪತಿಯು ಬಾಳಾಜಿ ವಿಶ್ವನಾಥ ಭಟ್ಟನಿಗೆ ಆಡಳಿತೆ ನಡೆಸಲು ಅನುಮತಿ ಕೊಟ್ಟನು.

(ಈ) [illegible]ನೆಯ ಬಾಜೀರಾಯನ ಕಾಲದಿಂದ ಪೇಶ್ವೆ [illegible] ನಡುವೆ ಬಹಳ ಕಾಳಗಗಳಾದವು.

(ಉ) ನಾರಾಯಣರಾಯನ ಕೊಲೆಯು ಸರಕಾರದವರಲ್ಲಿ ಪೇಶ್ವೆಯನ್ನು ಇಳಿಸುವಂತೆ ಮಾಡಿತು.

೪. (ಅ) ನಾನಾ ಫಡನವೀಸ ಮತ್ತು ಮಹದಾಜಿ ಶಿಂಧೆ ಇವರ ಬಗ್ಗೆ ಒಂದೊಂದು ಪರಿಚ್ಛೇದವನ್ನು ಬರೆಯಿರಿ.

(ಆ) ಪುರಂಧರದ ಒಪ್ಪಂದ, ಸುರತದ ಒಪ್ಪಂದ, ವಸಯಿ ಒಪ್ಪಂದಗಳ ಮಹತ್ವವನ್ನು ಬರೆಯಿರಿ.

೫. ಪೇಶ್ವೆಯರ ಕಾಲದ ಜನಜೀವನವನ್ನು ಕೆಳಗೆ ಬರೆದ ಮುಖ್ಯಾಂಶಗಳಲ್ಲಿ ವಿಭಾಗಿಸಿರಿ.

ಊಟ, ಬಟ್ಟೆ, ವಸತಿ, ಮನರಂಜನೆ.

([illegible]ಯ ಭಾಗವು ಮುಗಿದುದು.)

ಇದೇ ಲೇಖಕರ ಬೇರೆ ಪುಸ್ತಕಗಳು.

೧ ಇತಿಹಾಸ ಕೈಪಿಡಿ ೧ನೆಯ ಭಾಗ ೧—೪—೦

೨ ,, ೨ನೆಯ ಭಾಗ ೧—೪—೦

೩ ಭೂಗೋಲ ಕೈಪಿಡಿ ೧—೦—೦

೪ ಶಿಕ್ಷಣ ಕೈಪಿಡಿ ೧—೦—೦

೫ ಭಾರತೀಯ ಇತಿಹಾಸ ದರ್ಶನ ೨ನೆಯ ಭಾಗ (ಅಚ್ಚಿನಲ್ಲಿದೆ)

ಸಿಗುವ ಸ್ಥಳ:

ಎಚ್. ಎಸ್. ದೊಡಿಹಳ್ಳಿ

ಉಪರ ನಿವಾಸ, ಸ್ಟೇಶನ್ ರೋಡ.

ಧಾರವಾಡ.

ಮುದ್ರಕರು:-- ಶ್ರೀ. ಎಸ್. ಕೆ. ಹಂಪಿಹೊಳಿ, ಬಿ. ಎ.
ತ್ರ್ಯಂಬಕ ಮುದ್ರಣಾಲಯ, ಜವಳ ಪೇಟೆ, ಧಾರವಾಡ
ಪ್ರಕಾಶಕರು--ಶ್ರೀ. ಎಚ್. ಎಸ್. ದೊಡಿಹಳ್ಳಿ
ಸ್ಟೇಶನ್ ರೋಡ, ಧಾರವಾಡ.